
ಪ್ರಚೋದನೆ

ಲಂಕೇಶ್

ಅಣುಸ್ಥಾವರ ವಿರೋಧಿಸಿದರೆ **ಜೋಕೆ!**

ಜನವರಿ 11, 2012 ಪುಟ 20 ರೂ. 14/-



ುಡ್ ಬೈ
ಬಂ'

ೋಭಾ, ಲಿಂಬಾವಳಿ, ನಂದೀಶ್ ರೆಡ್ಡಿ ಜಂಟಿ ಲೂಟಿ
೦೦ ಎಕರೆ ಗುಳುಂ!

ಮಂಗಳೂರು ಪೋಲೀಸ್ ಅಂಡರ್‌ವರ್ಲ್ಡ್

ನಡುಮನೆಯಿಂದ ನ್ಯಾಯಾಲಯಕ್ಕೆ

• ಸುಕನ್ಯಾ ಕನಾರಳ್ಳಿ

> ಭಾರತ ಮತ್ತು ಇತರೆ ದೇಶಗಳ ಹತ್ತಾರು ಮಹಿಳೆಯರ ಆತ್ಮಕಥನಗಳನ್ನು ಸುಕನ್ಯಾ ಕನಾರಳ್ಳಿ ಅವರು ಸಂಗ್ರಹಿಸಿ ಕನ್ನಡಕ್ಕೆ ಅನುವಾದಿಸುತ್ತಿದ್ದಾರೆ. ಈ ಪುಸ್ತಕವನ್ನು 'ಲಂಕೇಶ್ ಪ್ರಕಾಶನ' ಸದ್ಯದಲ್ಲೇ ಬಿಡುಗಡೆ ಮಾಡಲಿದೆ. ಅದರಲ್ಲಿ ಇರಾನಿನ ಶಿರೀನ್ ಇಬಾದಿ ಎಂಬ ವಕೀಲೆಯ ಬದುಕಿನ ಬಗ್ಗೆಯೂ ಇದೆ. 2003 ರ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆ ಶಿರೀನ್ ಇಬಾದಿ ವಕೀಲೆಯಾಗಿ, ಮಾನವ ಹಕ್ಕುಗಳ ಕಾರ್ಯಕರ್ತೆಯಾಗಿ ಮಾಡಿರುವ ಸಾಧನೆ ಅಪೂರ್ವ. ತಲ್ಲಣದ ಗಳಿಗೆಗಳಲ್ಲಿ ಧೈರ್ಯವಾಗಿ ನಿಂತು ಕೊಲೆಯ ಬೆದರಿಕೆಗಳ ನಡುವೆಯೂ ತನ್ನ ವೃತ್ತಿಯಲ್ಲಿ ಸೋಲೊಪ್ಪಿಕೊಳ್ಳದ ಇಬಾದಿ ಅವರ ಆತ್ಮಕಥನ "Iran Awakening: A Memoir of Revolution and Hope" ಒಂದು ರಾಷ್ಟ್ರದ ಕಥೆಯನ್ನೂ ಯಶಸ್ವಿಯಾಗಿ ಹೇಳುತ್ತದೆ. ಆ ಆತ್ಮಕಥನದ ಒಂದು ಭಾಗ ಇಲ್ಲಿದೆ.

1997 ರ ಬೇಸಿಗೆಯ ಒಂದು ಬೆಳಗ್ಗೆಯಲ್ಲಿ ವಾರ್ತಾ ಪತ್ರಿಕೆಯನ್ನು ತಿರುವಿ ಹಾಕುತ್ತಿದ್ದಾಗ, ಹೊದಿಕೆ ಬದಿತಕ್ಕೆ ತುತ್ತಾದ ಮಗುವೊಂದು ತಲೆಗೆ ಬಿದ್ದ ತೀವ್ರ ಸ್ವರೂಪದ ಪೆಟ್ಟಿನಿಂದ ಸ್ಥಳೀಯ ಆಸ್ಪತ್ರೆಯಲ್ಲಿ ಮೃತಳಾಗಿದ್ದರ ಬಗ್ಗೆ ವರದಿಯೊಂದನ್ನು ನೋಡಿದೆ. ಜೊತೆಗೆ ಸಿಗರೇಟನಿಂದ ಸುಟ್ಟ ಕಲೆಗಳಿಂದ ತುಂಬಿದ್ದ ಬಾಗಿದ ಕೃಶದೇಹಿ ಬಾಲೆಯೊಬ್ಬಳ ಭಾವಚಿತ್ರವೂ ಇತ್ತು, ನೋಡಲು ಮನಸ್ಸಿಗೆ ಎಷ್ಟು ವೇದನೆಯಾಯಿತೆಂದರೆ ಥಟ್ಟನೆ ಭಾವಚಿತ್ರವನ್ನು ಸರಿಸಿ, ವರದಿಯ ಕಡೆ ಗಮನ ಹರಿಸಿದೆ. ಬಾಲೆಯ ಹೆಸರು ಆರಿಯಾನ್ ಗೋಲ್ಷಾನಿ. ಆವಳ ತಂದೆ ತಾಯಂದಿರ ವಿಚ್ಛೇದನದ ನಂತರ ನ್ಯಾಯಾಲಯ ಆವಳ ಸುಪರ್ದಿಯನ್ನು ಮೋಸ, ವಂಚನೆ ಮತ್ತು ಮಾದಕ ದ್ರವ್ಯ ಸೇವನೆಗೆ ಪೊಲೀಸ್ ದಾಖಲೆಗಳಲ್ಲಿ ಸೇರಿದ್ದ ಆವಳ ಕ್ರೂರ ತಂದೆಗೆ ಒಪ್ಪಿಸಿತು. ನೆರೆಹೊರೆಯವರ ಹೇಳಿಕೆಯ ಪ್ರಕಾರ ಈ ತಂದೆ ಆರಿಯಾನಳನ್ನು ಕತ್ತಲು ಕೋಣೆಯೊಂದರಲ್ಲಿ ಕೂಡಿ ಹಾಕಿದ್ದ. ಒಂಬತ್ತು ವರ್ಷದ ಈ ಬಾಲೆಯ ತೂಕ ಕೇವಲ ಮೂವತ್ತೂರು ಪೌಂಡುಗಳು. ಆವಳ ತೋಳುಗಳನ್ನು ಹಲವು ಬಾರಿ ತಿರುಚಲಾಗಿದ್ದು ಹಲವೊಮ್ಮೆ ಒರಟಾದ ಪ್ಲಾಸ್ಟರುಗಳಿಂದ ಕಟ್ಟಲ್ಪಟ್ಟಿರುತ್ತಿದ್ದವು. ಆವಳ ದೇಹದ ಮೇಲೆಲ್ಲ ಇದ್ದ ಸಿಗರೇಟನಿಂದ ಸುಟ್ಟ ಗಾಯಗಳ ಬಗ್ಗೆ ಆವಳ ಶಾಲೆಯ ಉಪಾಧ್ಯಾಯಿನಿ ಕುಟುಂಬದವರನ್ನು ವಿಚಾರಿಸಿದಾಗ ಶಾಲೆಗೂ ಕಳುಹಿಸದೇ ಮನೆಯಲ್ಲಿ ಆವಳನ್ನು ತಿಂಗಳುಗಟ್ಟಲೆ ಕೂಡಿ ಹಾಕಲಾಗಿತ್ತು. ಆರಿಯಾನಳ ತಾಯಿ ತನ್ನ ಹಳೆಯ ಗಂಡ ಎಂತಹ ದುರ್ಮಾರ್ಗಿ ಎನ್ನುವುದನ್ನು ವಿವರಿಸಿ ಮಗಳ ಜವಾಬ್ದಾರಿಯನ್ನು ತನಗೆ ವಹಿಸಬೇಕೆಂದು ಇನ್ನಿಲ್ಲದಂತೆ ನ್ಯಾಯಾಲಯವನ್ನು ಬೇಡಿಕೊಂಡರು. ಆದರೆ ನ್ಯಾಯಾಲಯ ನಿರ್ಭಾವದಿಂದ ಅವರ ಮನವಿಯನ್ನು ತಳ್ಳಿ ಹಾಕಿತು.

ಸುಟ್ಟ ಬಾಲೆಯ ಆ ಮುಗ್ಧ ಮುಖ ಆ ದಿನ ಪೂರ್ತಿ ನನ್ನ ಮನಸ್ಸನ್ನು ಗಾಢವಾಗಿ ಕಾಡಿತು. ಏನಾದರೂ ಮಾಡಲೇಬೇಕಿತ್ತು, ಆದರೆ ಹೇಗೆ? ಎರಡು ಗಂಟೆಗಳ ನಂತರ ಫೋನ್ ರಿಂಗಣಿಸಿತು. ನನ್ನ ಛಾಯಾಗ್ರಾಹಕಿ ಸ್ನೇಹಿತೆಯೊಬ್ಬಳೂ ಸಹ ಇದನ್ನು ಓದಿದ್ದಳಂತೆ. "ಶಿರೀನ್, ನಾವು ಇದಕ್ಕೇನಾದರೂ ಮಾಡಲೇಬೇಕು" ಎಂದಳು. "ಹೌದು, ಏನಾದರೂ ಮಾಡಲೇಬೇಕು, ಅದನ್ನೇ ಯೋಚಿಸುತ್ತಿದ್ದೇನೆ" ಎಂದೆ. ಆ ದಿನ ಮಧ್ಯಾಹ್ನ ಮಕ್ಕಳ ಹಕ್ಕುಗಳ ಸಂಘದ ಕೆಲವು ಮಿತ್ರರನ್ನು ಕರೆದು ಸಭೆ ಸೇರಿದೆವು. ಕೊನೆಯಲ್ಲಿ ಒಂದು ಉಪಾಯಕ್ಕೆ ಒಟ್ಟಾಗಿ ನಿರ್ಧರಿಸಿದೆವು. ಮೇಲ್ನೋಟಕ್ಕೆ ಈ ಬಾಲೆಯ ಮರಣಕ್ಕೆ ಸಂತಾಪಸೂಚಕ ಸಭೆಯೊಂದನ್ನು ಸೇರಿಸಬೇಕು, ಆದರೆ ಆದರ ಉದ್ದೇಶ ಇಂತಹ ಅವಘಡಕ್ಕೆ ಕಾರಣವಾದ ನಾಗರಿಕ ಮಸೂದೆಯ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸುವುದಾಗಿರಬೇಕು. ಟೆಹರಾನಿನ ಮಧ್ಯ ಭಾಗದಲ್ಲಿದ್ದ ಅಲ್-ಘದೀರ್ ಎಂಬ ಬೃಹತ್ ಮಸೀದಿಯಲ್ಲಿ ಈ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಏರ್ಪಡಿಸಿದೆವು. ಆರಿಯಾನ್ ಗೋಲ್ಷಾನಿಯ ಸಾವಿನ ಬಗ್ಗೆ ವಾರ್ತಾಪತ್ರಿಕೆಗಳಿಗೆ ಜಾಹಿರಾತು ನೀಡಿ ಈ ಬಾಲೆಯ ಗೌರವಾರ್ಥ ಸಂತಾಪಸೂಚಕ ಸಭೆಯೊಂದನ್ನು ಏರ್ಪಡಿಸಲಾಗಿದೆ ಎನ್ನುವ ಸುದ್ದಿಯನ್ನೂ ಪ್ರಕಟಿಸಿದೆವು. ನನ್ನ ಗಂಡ ಜಾವದ್ ಅವರ ಸಂಬಂಧಿಯಾಗಿದ್ದ ಧಾರ್ಮಿಕ ಗುರುವೊಬ್ಬರನ್ನು ಆಹ್ವಾನಿಸಿ ಮಕ್ಕಳ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ಮತ್ತು ಆರಿಯಾನಳ ಘೋರ ಬದುಕಿನ ಬಗ್ಗೆ ಕೆಲವು ಮಾತುಗಳನ್ನಾಡಬೇಕೆಂದು ಕೇಳಿಕೊಂಡೆ.

ಇಸ್ಲಾಮಿಕ್ ಕ್ರಾಂತಿಯ ನಂತರ ಮುಸ್ಲಿಮ್ ಕುಟುಂಬದ ಪರಿಕಲ್ಪನೆ ರಾಷ್ಟ್ರೀಯ ಸಿದ್ಧಾಂತದಲ್ಲಿ ಅತಿಮುಖ್ಯ ಸ್ಥಾನವನ್ನು ಅಲಂಕರಿಸಿತ್ತು, ಸಂಪ್ರದಾಯಶೀಲ ಮೌಲ್ಯಗಳನ್ನು ಪುನಶ್ಚೇತನಗೊಳಿಸಬೇಕೆಂದರೆ ಕುಟುಂಬಕ್ಕೆ ತನ್ನ ಬದುಕನ್ನು ಮೀಸಲಾಗಿರಿಸಿ, ಸಂತತಿಯನ್ನು ಬೆಳೆಸುವುದರಲ್ಲಿ ತನ್ನೆಲ್ಲ ವೇಳೆಯನ್ನು ವಿನಿಯೋಗಿಸುವ ಮುಸ್ಲಿಮ್ ತಾಯಿಯ ಸ್ಥಾನ ಅತ್ಯಂತ ಮಹತ್ವವುಳ್ಳದ್ದು ಎಂದು ಕ್ರಾಂತಿಕಾರಿಗಳು ಭಾವಿಸಿದ್ದರು. ಆದರೂ ಸಹ ವಿಚ್ಛೇದನದ ಸಮಯದಲ್ಲಿ ಮಕ್ಕಳನ್ನು ತಾಯಿಯಿಂದ ಬೇರ್ಪಡಿಸುವ, ಅಥವಾ ಬಹುಪತ್ನಿತ್ವವನ್ನು ಎರಡನೆಯ ಅಡವಾನದಷ್ಟೇ ಅನುಕೂಲಕರವಾಗಿ ಮಾಡುವ ಕೌಟುಂಬಿಕ ಕಾಯಿದೆ ತಮ್ಮ ಆಶಯಗಳಿಗೆ ವ್ಯತಿರಿಕ್ತವಾದದ್ದು ಎಂಬ ಅಂಶ ಈ ಕ್ರಾಂತಿಕಾರಿಗಳಿಗೆ ಹೊಳೆಯದಿದ್ದದ್ದು ಒಂದು ವಿಪರ್ಯಾಸವೇ ಸರಿ. ಮಕ್ಕಳ ಜವಾಬ್ದಾರಿಯನ್ನು ಜೊತೆಗೆ ಒಪ್ಪಿಸಬೇಕು ಎಂಬ ಕ್ರೂರ ನನ್ನನ್ನು ಹಲವಾರು ವರ್ಷಗಳಿಂದ ಎಡಬಿಡದೇ ಕಾಡುತ್ತಿತ್ತು, ಮಕ್ಕಳನ್ನು ಕಳೆದುಕೊಳ್ಳುವ ಭಯದಿಂದ ತನ್ನ ಅಹಿತ ಮದುವೆಯಲ್ಲಿ ಅನಿವಾರ್ಯವಾಗಿ ಉಳಿದ ನನ್ನ ಅಕ್ಕ ಅನುಭವಿಸುತ್ತಿದ್ದ ಬವಣೆಯನ್ನು ನೋಡಿದ್ದೆನಲ್ಲ! ಈ ವ್ಯವಸ್ಥೆಯ ಅತ್ಯಂತ ಘೋರ ಕಾಯಿದೆಗಳಲ್ಲಿ ಕೌಟುಂಬಿಕ ಕಾಯಿದೆಯೂ ಒಂದಾಗಿತ್ತು, ಮಕ್ಕಳ ಸುಪರ್ದಿ ಕಾಯಿದೆಯ ವಿರುದ್ಧ ಪ್ರತಿ ವರ್ಷ ಲೇಖನಗಳ, ಪ್ರತಿಭಟನೆಗಳ ಮಹಾಪೂರವೇ ಹರಿಯುತ್ತಿತ್ತು.

1997 ರ ಚಳಿಗಾಲದ ಒಂದು ದಿನ ಸಂತಾಪಸೂಚಕ ಸಭೆ ನಡೆಯಲಿದ್ದ ಸಭಾಂಗಣವನ್ನು ಹೂವಿನಿಂದ ಸಿಂಗರಿಸಿ ಪ್ರವೇಶಿಸಿದ ತಕ್ಷಣ ಸಿಗುವ ಮೇಜಿನ ಮೇಲೆ ಖರ್ಜೂರದಿಂದ ತುಂಬಿದ ಹರಿವಾಣವನ್ನೊಂದಿಟ್ಟೆವು. ಸಭೆ ಪ್ರಾರಂಭವಾಗುವ ಸ್ವಲ್ಪ ಮುನ್ನ ದಿಗ್ಭ್ರಮೆಯ ಮುಖ ಹೊತ್ತ ಹಲವಾರು ಹೆಂಗಸರು ಕಣ್ಣೀರು ಕೆನ್ನೆ ಮೇಲೆ ಇಳಿಯುತ್ತಿರುವಂತೆಯೇ ಸಭಾಂಗಣವನ್ನು ಪ್ರವೇಶಿಸಿದರು. ಅವರೆಲ್ಲರೂ ಆರಿಯಾನಳ ಸಂಬಂಧಿಗಳಂತೆ. ಅದರಲ್ಲಿ ಆರಿಯಾನಳ ತಾಯಿ ಸಹ ಇದ್ದರು. ಗೊಂದಲ ತುಂಬಿದ ಕಣ್ಣುಗಳಿಂದ ನನ್ನ ಮುಖವನ್ನು ಆಳೆಯುತ್ತಾ "ನನ್ನ ಮಗಳಿಗೆ ಇಷ್ಟು ಜನ ಹಿತೈಷಿಗಳಿದ್ದರೆಂದು ನನಗೆ ಗೊತ್ತಿರಲಿಲ್ಲ" ಎಂದು ಆಕೆ ಗದ್ಗದಿತರಾಗಿ ಹೇಳಿದರು. "ಇಷ್ಟೆಲ್ಲಾ ಜನರಿದ್ದೂ ಅವಳು ಯಾರ ಸಹಾಯವೂ ಇಲ್ಲದೆ ಅಸಹಾಯಕತೆಯಿಂದ ಒಂಟಿಯಾಗಿ ಸತ್ತಳಲ್ಲ?'' ಏನೂ ಹೇಳಲು ತೋಚದೆ ನಾನು ಉಗುಳು ನುಂಗಿ ಆಕೆಯನ್ನು ಹತ್ತಿರದ ಕೂರುವ ಸ್ಥಳವೊಂದಕ್ಕೆ ಕರೆದೊಯ್ದೆ.

ಜಾವದನ ಆಹ್ವಾನಿತ ಸಂಬಂಧಿ ಒಬ್ಬ ಅದ್ಭುತ ವಾಗ್ಮಿ. ಭಾಷಣದ ಮೊದಲಿಂದಲೂ ಕೇಳುಗರ ಮನ ಸೆರೆಹಿಡಿಯುವುದರಲ್ಲಿ ಆತ ಯಶಸ್ವಿಯಾದರು. ಮಧ್ಯೆ ಅಲಾವಿ ಎಂಬ ಹೆಸರಿನ ವ್ಯಕ್ತಿಯೊಬ್ಬರು ಒಂದು ಮಗುವಿನ ಕೈ ಹಿಡಿದು ಅವರಲ್ಲಿಗೆ ನಡೆಸಿಕೊಂಡು ಬಂದು "ನೋಡಿ, ಇಲ್ಲಿ ಇನ್ನೊಬ್ಬ ಆರಿಯಾನ್ ಇದ್ದಾನೆ" ಎಂದು ತೋರಿಸಿ ಆ ಹುಡುಗನ ಕಥೆಯನ್ನು ಹೇಳಿದರು. ವಿಚ್ಛೇದನದ ನಂತರ ಈ ಬಾಲಕನ ಸುಪರ್ದಿಯನ್ನು ತಂದೆಗೆ ಒಪ್ಪಿಸಲಾಗಿತ್ತು, ಆದರೆ ತಾಯಿಯನ್ನು ಬಿಟ್ಟಿರಲಾರೆನೆಂಬ ಒಂದೇ ಗೋಳು ಹುಡುಗನದು. ಆ ಬಾಲಕನನ್ನು ಮೇಲೆತ್ತಿ ತೋರಿಸಿದ ಅಲಾವಿ ಎಂಬ ಈ ವ್ಯಕ್ತಿ "ನಾವೆಲ್ಲ ಸೇರಿ ಈ ಅಸಹಾಯಕ ಮಕ್ಕಳಿಗೋಸ್ಕರ ಏನಾದರೂ ಮಾಡುವ ಅವಶ್ಯಕತೆಯಿದೆ. ದಯವಿಟ್ಟು ಏನಾದರೂ ಮಾಡಿ" ಎಂದು ಸಭಿಕರಲ್ಲಿ ಬೇಡಿಕೊಂಡರು. ಏನಾಯಿತೋ, ಥಟ್ಟನೆ ಭಾವಾವೇಶದಿಂದ ಗದ್ಗದಿತರಾದ ಸಭಿಕರೆಲ್ಲರೂ ಅಳಹತ್ತಿದರು. ಹೆಂಗಸರ ವಿಭಾಗದಲ್ಲಿದ್ದ ಮೈಕ್ರೋಫೋನಿನಲ್ಲಿ ನಾನು "ಉಳಿದ ಆರಿಯಾನರ ಹಕ್ಕುಗಳನ್ನು ರಕ್ಷಿಸುವುದಕ್ಕೋಸ್ಕರವೇ ನಾವಿಲ್ಲಿ ನೆರೆದಿದ್ದೇವೆ. ಆ ಬಾಲೆಯ ಸಾವಿಗೆ ಕಾರಣವಾದ ಕಾಯಿದೆಯನ್ನು ಬದಲಾಯಿಸಲೇಬೇಕು" ಎಂದು ಹೇಳಿದೆ. ಎಲ್ಲಾ ಕಡೆಯಿಂದ ಘೋಷಣೆಗಳು ಕೇಳಿಬಂದವು. ತಾವು ಮನೆಗೆ ಹೋಗುವ ಹಾದಿಯುದ್ದಕ್ಕೂ ಈ ಹುಡುಗಿಯ ನೆನಪಲ್ಲಿ ಹೂವುಗಳನ್ನು ಚೆಲ್ಲಲು ಕೇಳಿಕೊಂಡೆವು. "ಕಾಯಿದೆಯನ್ನು ಬದಲಾಯಿಸಲೇಬೇಕು'' ಎಂಬ ಘೋಷಣೆಗಳೊಂದಿಗೆ ಇಡೀ ಸಭೆ ಬಾಗಿಲಿನತ್ತ ಧಾವಿಸಿ ಹೂವಿನ ಎಸಳುಗಳನ್ನು ಬೊಗಸೆ ಬೊಗಸೆಯಲ್ಲಿ ಹಿಡಿದು ಹೊರಗೆ ಧಾವಿಸಿತು.

ಮುಂದಿನ ಅರ್ಧ ಗಂಟೆಯೊಳಗೆ ಮಸೀದಿಯ ಸುತ್ತಮುತ್ತ ಇದ್ದ ಬೀದಿಗಳೆಲ್ಲ ಬಿಳಿಯ ಹೂವಿನ ಎಸಳುಗಳಿಂದ ತುಂಬಿದ್ದವು. ಸುತ್ತ ಮುತ್ತಲಿನ ಜನಸಂದಣಿ, ವಾಹನ ಚಾಲಕರು ಎಲ್ಲರೂ ಮಸೀದಿಯ ಕಡೆಗೆ ತಿರುಗಿ ನೋಡುತ್ತಿದ್ದರು. ವಾರ್ತಾಪತ್ರಿಕೆಗಳಲ್ಲಿ ಇದೇ ಸುದ್ದಿ, ವಿಶ್ವವಿದ್ಯಾಲಯಗಳು ಮಕ್ಕಳ ಮೇಲೆ ನಡೆಯುತ್ತಿದ್ದ ದೌರ್ಜನ್ಯದ ಬಗ್ಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸಲು ಪ್ರಾರಂಭಿಸಿದ್ದವು. ಹಠಾತ್ತಾಗಿ ಸಾರ್ವಜನಿಕ ಪ್ರಜ್ಞೆಯ ಕೇಂದ್ರದಲ್ಲಿ ಹೆಣ್ಣಿಗೆ ಸಿಗಬೇಕಾದ ಮಕ್ಕಳ ಸುಪರ್ದಿಯ ಹಕ್ಕು ಮಹತ್ತರವಾದ ಸ್ಥಾನವನ್ನು ಪಡೆದುಕೊಂಡಿತ್ತು, ಲೇಲಾಳ ಪ್ರಕರಣದ ನಂತರ ಹೆಚ್ಚುಹೆಚ್ಚಾಗಿ ರಿಂಗಣಿಸುತ್ತಿದ್ದ ನನ್ನ ಆಫೀಸಿನ ಫೋನಿಗೆ ಈಗಂತು ಬಿಡುವೇ ಇರುತ್ತಿರಲಿಲ್ಲ, ಕೇಸುಗಳನ್ನು ಕೈಗೆತ್ತಿಕೊಳ್ಳಿ ಎಂಬ ಕಕ್ಷಿದಾರರ ಮನವಿಗಳಷ್ಟೇ ಅಲ್ಲ, ಹಲವಾರು ಪತ್ರಕರ್ತರು ಮತ್ತು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳ ಕಾರ್ಯಕರ್ತರು ವ್ಯವಸ್ಥೆಯ ಬಗ್ಗೆ ಇನ್ನೂ ಅಷ್ಟಾಗಿ ಸಂಘಟಿತರಾಗಿದ್ದ ಹೆಂಗಸರು ತಮ್ಮ ಹಕ್ಕುಗಳನ್ನು ಪಡೆಯಲು ನಡೆಸುತ್ತಿರುವ ಹೋರಾಟದ ಬಗ್ಗೆ ವಿವರಗಳನ್ನು ಪಡೆಯಲು ಕರೆಗಳನ್ನು ಮಾಡಲಾರಂಭಿಸಿದ್ದರು.

ಆರಿಯಾನಳ ಪ್ರಕರಣದ ವಿಚಾರಣೆ ಪ್ರಾರಂಭವಾಯಿತು. ಆರಿಯಾನಳ ತಾಯಿಯ ಪರವಾಗಿ ವಾದ ಮಾಡಿದ ನಾನು ಆ ಬಾಲೆಯ ತಂದೆಯ ವಿರುದ್ಧ ಕೊಲೆ ಮತ್ತು ಆಕೆಯ ಮಲ ಅಣ್ಣನ ವಿರುದ್ಧ ಚಿತ್ರಹಿಂಸೆಯ ಆರೋಪ ಮಾಡಿ ವಿಚಾರಣೆಯನ್ನು ನಡೆಸಿದೆ. ಸುದ್ದಿ ಮಾಧ್ಯಮಗಳ ಬಾತ್ಮೀದಾರರಿಂದ ಮತ್ತು ಪತ್ರಕರ್ತರಿಂದ ನ್ಯಾಯಾಲಯ ಕಿಕ್ಕಿರಿದು ತುಂಬಿರುತ್ತಿತ್ತು, ವಿಚಾರಣೆಯು ಪ್ರಾರಂಭವಾದ ತಕ್ಷಣವೇ ಎರಡನೆಯ ಸಾಲಿನಿಂದ "ಇರಾನಿ ಮಕ್ಕಳ ಪರವಾಗಿ ಕಾನೂನಿನಲ್ಲಿ ತಕ್ಕ ಬದಲಾವಣೆಗಳನ್ನು ಮಾಡುವುದೊಂದೇ ಆರಿಯನ್ನಳ ಸಾವಿಗೆ ಸೂಕ್ತ ಪ್ರತಿಕ್ರಿಯೆ" ಎಂಬ ಫಲಕವೊಂದು ರಾರಾಜಿಸಿತು. ಈ ಪ್ರಕರಣ ಸಾಕಷ್ಟು ಪ್ರಚಾರವನ್ನು ಪಡೆದಿದ್ದರಿಂದ ನ್ಯಾಯಾಲಯದ ಧಾರ್ಮಿಕ ಗುರುವೊಬ್ಬರು ಇದರ ಮುಖ್ಯಸ್ಥಿಕೆ ವಹಿಸಿದ್ದರು.

ನನ್ನ ವಾದಗಳಿಗೆ ಹೆಚ್ಚಿನ ಸಮರ್ಥನೆಯ ಆಗತ್ಯವಿರಲಿಲ್ಲ, ಆರಿಯಾನಳ ಘೋರ ದುರಂತ ಎಲ್ಲರ ಕಣ್ಣಿಗೆ ಹೊಡೆಯುವಂತಿತ್ತು, ಸರಿಯಾದ ಆಹಾರವಿಲ್ಲದೆ ಆ ಬಾಲೆ ಹೇಗೆ ಸೊರಗಿದ್ದಳು, ವಾರಗಟ್ಟಲೆ ಆಕೆಯನ್ನು ಹೇಗೆ ಚಿತ್ರಹಿಂಸೆಗೆ ಗುರಿಪಡಿಸಲಾಗಿತ್ತು, ಆಕೆ ತನ್ನ ದೇಹವನ್ನು ಸ್ಪರ್ಶಿಸಿಕೊಳ್ಳುತ್ತಿದ್ದಾಗೆಲ್ಲ ಆಕೆಯ ಮಲಸಹೋದರ ಹೇಗೆ ಆಕೆಯನ್ನು ಬಲವಾಗಿ ಒದೆಯುತ್ತಿದ್ದ, ಅವಳ ಪುಟ್ಟ ಕೈ ತನ್ನ ಕಾಲುಗಳ ನಡುವೆ ಹೋದದ್ದು ಕಂಡಾಗೆಲ್ಲ ಬೀಸಿ ಆಕೆಯನ್ನು ಒದೆಯುತ್ತಿದ್ದ ರಭಸಕ್ಕೆ ಆಕೆಯ ಕೃಶದೇಹ ಹೇಗೆ ರಪ್ಪನೆ ಇಲ್ಲಿಂದ ಅಲ್ಲಿಗೆ ಒಗೆಯಲ್ಪಡುತ್ತಿತ್ತು, ಎಲ್ಲವನ್ನೂ ವಿವರಿಸಿದೆ. ಒಂದು ಸಲ ಒದೆತದ ರಭಸ ಆಕೆಯ ತಲೆಯನ್ನು ಗೋಡೆಗೆ ಅಪ್ಪಳಿಸಿ ಸ್ವಲ್ಪ ಹೊತ್ತಿನ ನಂತರ ಆಕೆಯ ಸಾವಿನಲ್ಲಿ ಹೇಗೆ ಕೊನೆಗೊಂಡಿತು ಎನ್ನುವುದನ್ನು ಸ್ಪಷ್ಟಪಡಿಸಿದೆ. ಆರಿಯಾನ್ ಅನುಭವಿಸಿದ ಚಿತ್ರಹಿಂಸೆಯ ಬಗೆಗಷ್ಟೇ ಅಲ್ಲ, ಅಸ್ತಿತ್ವದಲ್ಲಿರುವ ಕಾನೂನುಗಳ ಬಗ್ಗೆ ಹೆಚ್ಚು ವಿವರವಾಗಿ ನನ್ನ ವಾದವನ್ನು ಮಂಡಿಸಿದೆ. ನನ್ನ ಚಪ್ಪಲಿಗಳ ಶಬ್ದದೊಂದಿಗೆ ನ್ಯಾಯಾಲಯದಲ್ಲಿ ಅತ್ತಿಂದಿತ್ತ ಓಡಾಡುತ್ತ ಘಟನೆಯ ವಿವರಗಳಿಗಿಂತ ಹೆಚ್ಚಾಗಿ ಕಾನೂನುಗಳ ಮೇಲೆ, ಅವುಗಳ ವಿಮರ್ಶೆಯ ಮೇಲೆ ನನ್ನ ವಾದವನ್ನು ಕೇಂದ್ರೀಕರಿಸಿ ನನ್ನ ಸ್ಪಷ್ಟನೆಯನ್ನು ನೀಡಿದೆ. ಕಾನೂನನ್ನು ವಿಚಾರಣೆಗೆ ಗುರಿಪಡಿಸುವುದು ನನ್ನ ಮುಖ್ಯ ಉದ್ದೇಶವಾಗಿತ್ತು.

ನನ್ನ ವಾದ ಮುಗಿದ ನಂತರ ನ್ಯಾಯಾಲಯದ ಮುಖ್ಯಸ್ಥರು ನನ್ನಿಂದ ಮೈಕ್ರೋಫೋನ್ ತೆಗೆದುಕೊಂಡು ಗಂಭೀರ ಧ್ವನಿಯಲ್ಲಿ "ಇಸ್ಲಾಮ್ ಸಮಾನತೆಯನ್ನು ಎತ್ತಿ ಹಿಡಿಯುವ ಒಂದು ಧರ್ಮ. ಆದರೆ ಖುರಾನ್ ಹೆಣ್ಣಿನ ಜೀವಕ್ಕೆ ಬರೀ ಅರ್ಧದಷ್ಟೇ ಬೆಲೆ ಎಂದು ಹೇಳುತ್ತದೆ" ಎಂದು ನುಡಿದರು.

ಎಂತಹ ಅಸಂಬದ್ಧ! ಜೀವದ ಬೆಲೆ ಎಷ್ಟು ಎನ್ನುವುದರ ಬಗ್ಗೆ ನಾವು ವಾದವನ್ನು ಹೂಡಿರಲಿಲ್ಲ! ನಾನು ಧರ್ಮಕ್ಕೆ ಅಪಚಾರ ಮಾಡುತ್ತಿದ್ದೇನೆ ಎಂದು ಆಪಾದಿಸಲು ಈ ನೆಪ!

ಮಾತಾಡಲು ನಾನು ನ್ಯಾಯಾಲಯದ ಮುಖ್ಯಸ್ಥರ ಅನುಮತಿ ಕೋರಿದೆ. "ನಾನು ಇಸ್ಲಾಮ್ ಧರ್ಮವನ್ನು ಇಲ್ಲಿ ಟೀಕಿಸುತ್ತಿಲ್ಲ" ಸ್ಪಷ್ಟ ಮಾತುಗಳಲ್ಲಿ ಉತ್ತರವಿತ್ತೆ. "ಟೀಕಿಸಿದವರ ನಾಲಿಗೆ ಕತ್ತರಿಸಿ ಬೀಳಲಿ! ಇರಾನಿ ಪಾರ್ಲಿಮೆಂಟ್ ಜಾರಿ ಮಾಡಿರುವ ಕಾನೂನೊಂದನ್ನು ನಾನಿಲ್ಲಿ ಟೀಕಿಸುತ್ತಿದ್ದೇನೆ." ನ್ಯಾಯಾಲಯದ ಪ್ರೇಕ್ಷಕರ ಕಡೆಗೆ ತಿರುಗಿ ಕೇಳಿದೆ: "ತಂದೆಯೊಬ್ಬನಿಂದ ಈ ರೀತಿಯ ಕ್ರೂರ ಚಿತ್ರಹಿಂಸೆಗೆ ಮಗುವೊಂದು ಬಲಿಯಾಗುವುದರಲ್ಲಿ ನ್ಯಾಯವಿದೆಯೆ? ತಾಯಿಗೆ ಆ ಮಗುವಿನ ಸುಪರ್ದಿಯನ್ನು ಒಪ್ಪಿಸಲು ನಿರಾಕರಿಸಿದ ನ್ಯಾಯಾಲಯದ ಕ್ರಮದಲ್ಲಿ ನ್ಯಾಯವಿದೆಯೆ? ಈಗ ಅಪರಾಧಿಗಳಿಗೆ ಶಿಕ್ಷೆಯಾಗಬೇಕೆಂದರೆ ಆ ಮಗುವಿನ ತಾಯಿಯೇ ಆದರ ಖರ್ಚನ್ನು ಭರಿಸಬೇಕು ಎನ್ನುವ ನೀತಿಯಲ್ಲಿ ನ್ಯಾಯವಿದೆಯೆ?"

"ಆದರ ಬಗ್ಗೆ ಚಿಂತೆ ಬೇಕಿಲ್ಲ" ಸಾರ್ವಜನಿಕ ನಿಧಿಯಿಂದ 'ನೆತ್ತರು ಧನ' ವನ್ನು ಪಡೆಯಲಾಗುವುದು ಎಂಬ ಆಶ್ವಾಸನೆಯನ್ನು ಮುಖ್ಯಸ್ಥರು ನೀಡಿದರು.

"ನಮ್ಮ ತೆರಿಗೆ ಹಣ ಈ ಕೊಲೆಗಡುಕರಿಗೆ ಖರ್ಚಾಗುವುದು ನಮಗೆ ಇಷ್ಟವಿಲ್ಲ." ಆಯಾಸದಿಂದ ಹೇಳಿದೆ.

ಆರಿಯಾನಳ ಮಲ ಸಹೋದರನಿಗೆ ಮರಣ ಶಿಕ್ಷೆ ನೀಡಿ, ಅವಳ ತಂದೆ ಮತ್ತು ಮಲ ತಾಯಿಯನ್ನು ಒಂದು ವರ್ಷದ ಸೆರೆಮನೆ ವಾಸಕ್ಕೆ ತಳ್ಳಲಾಯಿತು. ಆ ಮಲ ಸಹೋದರನ ಮರಣ ಶಿಕ್ಷೆಯನ್ನು ತಡೆಹಿಡಿಯುವಂತೆ ಆರಿಯಾನಳ ತಾಯಿ ವಿನಂತಿಸಿಕೊಂಡರು. ಆಕೆಯ ವಿವೇಕ, ಜೀವಪರ ಸಹಾನುಭೂತಿ ಅದ್ಭುತವೆನ್ನಿಸಿತು. ಆ ಮಲ ಸಹೋದರ ತನ್ನ ತಂದೆಯ ಎರಡನೆಯ ಮದುವೆಯಿಂದ ಹುಟ್ಟಿದವನು. ಆ ಮದುವೆ ಕುಸಿದು ಬಿದ್ದಾಗ ತನ್ನ ತಾಯಿಯಿಂದ ಆತ ದೂರಾಗಬೇಕಾಯಿತು. ಆತನ ಅಪರಾಧ ಘೋರವಾಗಿದ್ದರೂ ಸಹ ಅದೇ ವ್ಯವಸ್ಥೆಯ ಬಲಿಪಶುವೂ ಆತ ಆಗಿದ್ದ ಎನ್ನುವುದೂ ಸತ್ಯವೇ.

ಈ ವಿಚಾರಣೆ ಪ್ರಪಂಚದೆಲ್ಲೆಡೆಯಲ್ಲಿ ಸುದ್ದಿ ಮಾಡಿತು. ಸಿಎನ್ಎನ್ ಬಾತ್ಮೀದಾರರಾದ ಕ್ರಿಸ್ಟೀನ್ ಅಮನ್ಪೂರ್ ಆರಿಯಾನಳ ತಾಯಿಯೊಂದಿಗೆ ನನ್ನ ಸಂದರ್ಶನ ಮಾಡಿದರು. ಮನೆಯಲ್ಲಿ ಕೂತು ಟೆಲಿವಿಷನ್ನಿನಲ್ಲಿ ಆಕೆಯ ಕ್ಷೋಭೆಗೊಂಡ




▶7

ಯಡ್ಡಿಯ ಆರ್ಭಟ, ಹಜಾರೆಯ ಪೀಕಲಾಟ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ಕುರ್ಚಿ ಗೆ ಬಿಜೆಪಿಯ ಹೈಕಮಾಂಡ್ ತಣ್ಣೀರೆರಚಿದೆ. ಅದೂ ದೆಂಬಂತೆ ಸದಾನಂದ ಗೌಡರೇ ಉಳಿಕೆ ಅವಧಿಯಲ್ಲಿ ಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಸೂಚಿ ಸಹಜವಾಗಿಯೇ ಇದರಿಂದ ಯಡ್ಡಿ ಮತ್ತು ಆತನ ರುವ ಪಡೆಗೆ ನಿರಾಶೆಯಾಗಿದೆ.

ಈಗ ಹೇಗಿದ್ದರೂ ಧನುರ್ಮಾಸ. ಯಡ್ಡಿಯ ಪ್ರಕಾರ



ನ್ನ ಮಾಡಲೂ ಇದು ಒಳ್ಳೆಯ ಸಮಯವಲ್ಲ, ಆದ್ದರಿಂದ ಜನವರಿ 14ರಂದು ಈ ಧನುರ್ಮಾಸ ಅಂತ್ಯಗೊಳ್ಳುವ ಕಾಯಲು ತನ್ನ ಹಿಂಬಾಲಕರಿಗೆ ಹೇಳಿದ್ದಾರೆ. ಆದರೆ ತರ ಯಡ್ಡಿ ಏನು ಮಾಡುತ್ತಾರೆ? ಬಿಜೆಪಿಯನ್ನೇ ಯುತ್ತಾರೋ, ಹೊಸ ಪಕ್ಷವನ್ನು ಕಟ್ಟುತ್ತಾರೋ ಎಂಬ ತೂಹಲವಂತೂ ಎಲ್ಲರಲ್ಲಿದೆ.


ಶಾಸ್ತ್ರ್ತಾರು ತರಹದ ಮೌಢ್ಯಗಳನ್ನು ನಂಬುವ ಯಡ್ಡಿಗೆ ರೋ ಬರುವ ಜನವರಿ ಆರನೇ ತಾರೀಖು ಅವರಿಗೆ ದಿನವಾಗಲಿದೆ ಎಂದಿದ್ದಾರಂತೆ. ಅವತ್ತು ಅವರನ್ನು ತ್ತಿರುವ ಎಲ್ಲ ಕೋರ್ಟು ಕೇಸುಗಳಿಂದ ಮುಕ್ತಿ ತ್ತದಂತೆ, ಅದೇ ಹೊತ್ತಿಗೆ ರಾಜ್ಯಪಾಲರು ಅವರ ವಿರುದ್ಧ ವ ದಾಖಲಿಸಲು ಕೊಟ್ಟ ಅನುಮತಿಯನ್ನೂ ಬಾಲಯ ರದ್ದು ಮಾಡುತ್ತದಂತೆ, ಹೇಗಿದ್ದರೂ ಈಗ ಗೆ ಎಲ್ಲ ಕೇಸುಗಳಲ್ಲಿ ಜಾಮೀನು ಸಿಕ್ಕಿರುವುದರಿಂದ ು ಮತ್ತೆ ಜೈಲು ಮುಖ ನೋಡಲು ಬಹಳಷ್ಟು ಗಳೇ ಬೇಕಂತೆ. ಈಗ ಯಡ್ಡಿಯಂತೆಯೇ ಭ್ರಷ್ಟಾಚಾರದ ೋಪವನ್ನು ಹೊತ್ತಿರುವ ತಮಿಳುನಾಡಿನ ಮುಖ್ಯಮಂತ್ರಿ ಲಲಿತಾ ಮತ್ತು ಬಿಹಾರದ ಮಾಜಿ ಮುಖ್ಯಮಂತ್ರಿ ೂ ಪ್ರಸಾದ್ ಯಾದವ್ ಅವರು ಇವತ್ತಿಗೂ ಕೋರ್ಟ್‌ಗೆ ಮುತ್ತಿದ್ದಾರಲ್ಲ, ಹಾಗೆ ಯಡ್ಡಿಯೂ ಕೋರ್ಟ್‌ಗೆ ಅಲೆ ತ್ತಾರೆಯೇ ಹೊರತು ಈ ಎಲ್ಲ ಪ್ರಕರಣಗಳ ವಿಚಾರಣೆ ಿ, ಅದಕ್ಕೆಲ್ಲ ಸುಪ್ರೀಂಕೋರ್ಟ್ ತೀರ್ಪು ನೀಡುವ ತ್ತಿಗೆ ಅದೆಷ್ಟು ವರ್ಷಗಳು ಬೇಕೋ. ಅಲ್ಲಿಯವರೆಗೆ ಕಿದ್ದರೆ ನೋಡಿಕೊಂಡರಾಯಿತು ಎಂಬ ತರ್ಕ ಯದ್ದು. ಸದ್ಯಕ್ಕೆ ಜೈಲು ಶಿಕ್ಷೆ ಎಂಬುದು ದೂರದ ಾಗಿರುವುದರಿಂದ ಆತ ಮತ್ತೊಮ್ಮೆ ಮುಖ್ಯಮಂತ್ರಿ ವ ಉತ್ಸಾಹದಲ್ಲಿದ್ದಾರೆ.

ಆದರೆ ಅದ್ಯಾಕೋ ಬಿಜೆಪಿಯ ಹೈಕಮಾಂಡ್ ಯಡ್ಡಿಯ ುನ್ನು ಅರ್ಥಮಾಡಿಕೊಳ್ಳುತ್ತಿಲ್ಲ, ಆತನ ಹುಕುಮ್‌ಗಳಿಗೆ ತ್ತಿಲ್ಲ, ಬೆದರಿಕೆಗಳಿಗೆ ಕೇರ್ ಮಾಡುತ್ತಿಲ್ಲ... ಆದರೆ ಯಡ್ಡಿ ನೆ ಕೂರುವ ಜಾಯಮಾನದವನಲ್ಲ, ತನಗೆ ಅಧಿಕಾರ ದ್ದರೆ ಆತ ಬಿಜೆಪಿಯನ್ನೇ ಅಧಿಕಾರದಿಂದ ಉರುಳಿಸ ದು ಎಂಬ ಆತಂಕವಂತೂ ಬಿಜೆಪಿ ಹೈಕಮಾಂಡಿಗೆ ಆದ್ದರಿಂದ ಯಡ್ಡಿಯ ಗೇಮ್ ಪ್ಲಾನ್ ಎಂತಹ ಹುದು ಎಂಬ ಲೆಕ್ಕಾಚಾರಗಳು ಈಗ ಬಿಜೆಪಿಯ ಕರ ಮುಂದಿದೆ.

ಅಕ್ರಮ ಗಣಿ ಲೂಟಿ ಕುರಿತಂತೆ ಅಂದಿನ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಅವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದಾಗ ಬಿಜೆಪಿ ಮತ್ತು ಯಡ್ಡಿಗೆ ಬೇರೆ ದಾರಿ ಇರಲಿಲ್ಲ, ಯಡ್ಡಿ ಅವತ್ತು ಅದೆಷ್ಟೇ ಕೊಸರಿಕೊಳ್ಳಲು ಯತ್ನಿಸಿದ್ದರೂ ಆತ ರಾಜ್ಯಪಾಲರಿಗೆ ರಾಜೀನಾಮೆಯನ್ನು ಸಲ್ಲಿಸುವಂತೆ ಮಾಡಲಾಗಿತ್ತು. ಯಡ್ಡಿ ಓರ್ವ ಕಳ್ಳ, ಭ್ರಷ್ಟ ಎಂದು ಲೋಕಾಯುಕ್ತರು ತಮ್ಮ ವರದಿಯಲ್ಲಿ ಹೇಳಿದ್ದರೂ, ಅವತ್ತು ಯಡ್ಡಿ ಯಾವುದೋ ಧರ್ಮಯುದ್ಧದಲ್ಲಿ ಗೆದ್ದ ಯೋಧನಂತೆ ತನ್ನ ಸರ್ಕಾರಿ ಮನೆಯಿಂದ ರಾಜಭವನಕ್ಕೆ ಪಾದಯಾತ್ರೆಯಲ್ಲಿ ಹೋಗಿದ್ದ. ಅವತ್ತು ಯಡ್ಡಿಯ ಬೆನ್ನಿಗೆ ಇದ್ದ ಬಿಜೆಪಿ ಶಾಸಕರ ಸಂಖ್ಯೆ ಸುಮಾರು 70 ಆಗಿತ್ತು.

ಆದರೆ ಇವತ್ತೂ ಯಡ್ಡಿಯ ಹಿಂದೆ ಆ ಎಲ್ಲಾ 70 ಶಾಸಕರೂ ಇದ್ದಾರೆಯೇ? ಬಿಜೆಪಿಯ ಹೈಕಮಾಂಡಿನ ಲೆಕ್ಕಾಚಾರದ ಪ್ರಕಾರ ಇವತ್ತು ಯಡ್ಡಿಯ ಬೆನ್ನಿಗೆ ಕೇವಲ 25ರಿಂದ 30 ಶಾಸಕರಿದ್ದಾರೆ. ಆದರೆ ಸದಾನಂದ ಗೌಡನ ಸರ್ಕಾರವನ್ನು ಉರುಳಿಸಲು ಅಷ್ಟು ಸಂಖ್ಯೆ ಸಾಕೆಂಬ ಅರಿವೂ ಹಿರಿಯ ಚೆಡ್ಡಿಗಳಿಗೆ ಇದೆ. ಹಾಗೊಮ್ಮೆ ಯಡ್ಡಿಯನ್ನು ಮತ್ತೆ ಮುಖ್ಯಮಂತ್ರಿಯನ್ನಾಗಿ ಮಾಡದಿದ್ದರೆ ಆತ ತನ್ನ ಹಿಂಬಾಲಕರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಿಸಿದರೆ ಡಿವಿಎಸ್ ಕುರ್ಚಿಯಿಂದ ಮುಗ್ಗರಿಸುವುದು ಗ್ಯಾರಂಟಿ. ಅಂತಹ ಸಾಹಸಕ್ಕೆ ಯಡ್ಡಿ ಕೈಹಾಕುತ್ತಾನೆಯೇ?

ಹಾಗೆ ಮಾಡಿದ ಎಂದೇ ಇಟ್ಟುಕೊಂಡರೆ ಮುಂದೇನು ಎಂಬ ಯೋಚನೆ ಬಿಜೆಪಿಯ ಹೈಕಮಾಂಡಿನದ್ದು. ಬಿಜೆಪಿಗೆ ಸದಾನಂದ ಗೌಡರ ನೇತೃತ್ವದಲ್ಲಿ ಚುನಾವಣೆಗಳನ್ನು ಎದುರಿಸುವ ಧೈರ್ಯವಿಲ್ಲ. ಜಗದೀಶ್ ಶೆಟ್ಟರ್ ಮುಖ ನೋಡಿ ಲಿಂಗಾಯತರು ಬಿಜೆಪಿಗೆ ಓಟು ಹಾಕುತ್ತಾರೆಂಬ ನಂಬಿಕೆ ಇಲ್ಲ. ಈಶ್ವರಪ್ಪನನ್ನು ಮುಂದಿಟ್ಟುಕೊಂಡು ಹೋದರೆ ಕುರುಬರ ಓಟುಗಳಾದರೂ ಸಿಗುತ್ತವೆಂಬ ಗ್ಯಾರಂಟಿ ಇಲ್ಲ. ಯಡ್ಡಿಯ ಹೊರತಾಗಿ ಬಿಜೆಪಿಯಲ್ಲಿ ಬೇರೆ ನಾಯಕನಿಲ್ಲ... ಆದರೆ ಯಡ್ಡಿಯನ್ನು ಮುಖ್ಯಮಂತ್ರಿ ಅಥವಾ ರಾಜ್ಯಾಧ್ಯಕ್ಷನ ಕುರ್ಚಿಯಲ್ಲಿ ಕೂರಿಸಿ ಜನರ ಮೂದಲಿಕೆಗೆ ಗುರಿಯಾಗುವ ಉಸಾಬರಿಯೂ ಬೇಡವಾಗಿದೆ...



ಬಿಜೆಪಿ ಹೈಕಮಾಂಡ್ ಹೀಗೆಲ್ಲ ಲೆಕ್ಕಹಾಕುತ್ತಿದ್ದರೆ ಯಡ್ಡಿಯ ವಲಯ ಇನ್ನೊಂದು ತರಹದ ಲೆಕ್ಕಾಚಾರದಲ್ಲಿ ತೊಡಗಿದೆ. ಹಲವರ ಪ್ರಕಾರ ಯಡ್ಡಿ ಹೊಸ ಪಕ್ಷವನ್ನು ಸ್ಥಾಪಿಸಲಿದ್ದಾನೆ. ಬಿಜೆಪಿ ಸರ್ಕಾರವನ್ನು ಉರುಳಿಸಿದ ನಂತರ ಎದುರಾಗಲಿರುವ ಚುನಾವಣೆಯಲ್ಲಿ ಯಡ್ಡಿಯ ಹೊಸ ಪಕ್ಷದೊಂದಿಗೆ ಶ್ರೀರಾಮುಲು ಸ್ಥಾಪಿಸಲಿರುವ ಬಿಎಸ್‌ಆರ್ ಪಕ್ಷ ಕೂಡ ಕೈಜೋಡಿಸಲಿದೆ. ಅಷ್ಟೇ ಅಲ್ಲ, ಎಚ್.ಡಿ. ಕುಮಾರಸ್ವಾಮಿಯ ಜೆಡಿಎಸ್ ಕೂಡ ನೆರವಿನ ಹಸ್ತವನ್ನು ಚಾಚಲಿದೆ. ಇಂತಹ ಒಂದು ಸಮಾಗಮ ಸಾಧ್ಯವಾದರೆ, ಯಡ್ಡಿಯ ಬೆಂಬಲಕ್ಕೆ ಲಿಂಗಾಯತರು, ಕುಮಾರಸ್ವಾಮಿಯ ಬೆನ್ನಿಗೆ ಒಕ್ಕಲಿಗರು, ಶ್ರೀರಾಮುಲು ಪರವಾಗಿ ಹಿಂದುಳಿದ ವರ್ಗಗಳು ನಿಂತು ಈ ಮೂರು ಪಕ್ಷಗಳ ಮೈತ್ರಿಕೂಟ ಅಧಿಕಾರ ಹಿಡಿಯುವುದನ್ನು ಯಾರಿಂದಲೂ ತಪ್ಪಿಸಲಾಗುವುದಿಲ್ಲ...

ಇದೆಲ್ಲದರ ಮಧ್ಯೆ ಬಿಜೆಪಿಗೆ ನಿಷ್ಠಾವಂತರಾಗಿರುವ ಶಾಸಕರ ತಲೆಯನ್ನು ಹೊಸ ಸಮಸ್ಯೆಯೊಂದು ತಿನ್ನುತ್ತಿದೆ. ಅದೇನೆಂದರೆ ಮುಂದಿನ ಚುನಾವಣೆಗಳನ್ನು ಎದುರಿಸಲು ಅವರೆಲ್ಲರಿಗೆ ಕೋಟ್ಯಂತರ ರೂಪಾಯಿಗಳ ಅಗತ್ಯವಿದೆ.

ಅದನ್ನು ಕೊಡುವವರು ಯಾರು? ಖಂಡಿತವಾಗಿಯೂ ಬಿಜೆಪಿ ಅಷ್ಟೊಂದು ಹಣವನ್ನು ಕೊಡುವುದಿಲ್ಲ. ಆದರೆ ಯಡ್ಡಿ ತನ್ನ ಪರ ನಿಲ್ಲುವ ಮಂದಿಯ ಗೆಲುವಿಗೆ ಹಣದ ಹೊಳೆಯನ್ನು ಹರಿಸಲು ಸಜ್ಜಾಗಿದ್ದಾನೆ. ಅತ್ತ ಹಣವಿಲ್ಲ ಆದರೆ ಆರೆಸ್ಸೆಸ್ ಸಂಘಟನೆಯ ಸಹಕಾರ ಇರುತ್ತದೆ. ಇತ್ತ ಹಣವಿದ್ದರೂ ಚೆಡ್ಡಿಗಳ ನೆರವಿರುವುದಿಲ್ಲ. ಇಂತಹ ಬಿಕ್ಕಟ್ಟಿನಲ್ಲಿರುವ ಶಾಸಕರು ಕೊನೆಗೆ ಯಾವ ಗುಂಪನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬ ಆತಂಕ ಬಿಜೆಪಿ ಹೈಕಮಾಂಡನ್ನೂ ಮತ್ತು ಯಡ್ಡಿ ಬಳಗವನ್ನೂ ಕಾಡುತ್ತಿದೆ...

ಯಡ್ಡಿಯ ಆರ್ಭಟ, ಹೈಕಮಾಂಡಿನ ಘಟ್ಟಾಟ ಮತ್ತು ಚೆಡ್ಡಿ ಶಾಸಕರ ಪೀಕಲಾಟ.. ಇವೆಲ್ಲವೂ ಕರ್ನಾಟಕಕ್ಕೆ ಇನ್ನೆಷ್ಟು ಸಮಸ್ಯೆಗಳನ್ನು ತಂದಿಡಲಿವೆಯೋ...

* * * * * *

ಅಣ್ಣಾ ಹಜಾರೆ ಅವರು ಒಂದೂವರೆ ದಿನಗಳೊಳಗೆ ತಮ್ಮ ಮೂರು ದಿನಗಳ ಉಪವಾಸ ನಿರಶನವನ್ನು ಕೈಬಿಟ್ಟು ತಮ್ಮ ಹಳ್ಳಿಯಾದ ರಾಲೆಗಾಂವ್ ಸಿದ್ಧಿಗೆ ವಾಪಸ್ ಹೋಗಿದ್ದಾರೆ. ಕಳೆದ ಬಾರಿ ಅವರು ದೆಹಲಿಯ ರಾಮಲೀಲಾ ಮೈದಾನದಲ್ಲಿ ಉಪವಾಸ ಕೂತಾಗ ಸಾವಿರಾರು ಜನ ಮೈದಾನಕ್ಕೆ ಬಂದು ಬೆಂಬಲ ಸೂಚಿಸಿದ್ದರು, ಮಾಧ್ಯಮಗಳು ಪ್ರತಿದಿನ 24 ಗಂಟೆಗಳ ಕಾಲ ಅದನ್ನು ಬಿತ್ತರಿಸಿದ್ದವು, ಕೇಂದ್ರ ಸರ್ಕಾರ ತರಗುಟ್ಟಿತ್ತು, ಸಂಸತ್ತು ಲೋಕಪಾಲ ಮಸೂದೆಯನ್ನು ತರುವುದಾಗಿ ಭರವಸೆ ಕೊಟ್ಟಿತ್ತು.

ಆದರೀಗ ಯಾಕೆ ಎಲ್ಲವೂ ಉಲ್ಟಾ ಆಗಿ ಹಜಾರೆ ಅರ್ಧಕ್ಕೇ ಮುಂಬೈನ ಎಮ್‌ಎಮ್‌ಆರ್‌ಡಿಎ ಮೈದಾನದಿಂದ ಎದ್ದು ಹೋಗಿದ್ದಾರೆ? ಯಾಕೆ ಅವರು ತಮ್ಮ 'ಜೈಲ್ ಭರೋ' ಆಂದೋಲನವನ್ನು ಅನಿರ್ದಿಷ್ಟ ಕಾಲ ಮುಂದೂಡಿದ್ದಾರೆ?

ಕೆಲವು ಮಾಧ್ಯಮಗಳ ಪ್ರಕಾರ ಮುಂಬೈ ಜನರು ಅಣ್ಣಾ ಹಜಾರೆಯವರ ನಿರಶನಕ್ಕೆ ಸ್ಪಂದಿಸದಿದ್ದದ್ದು, ಮಾಧ್ಯಮಗಳು ಸಾಕಷ್ಟು ಪ್ರಚಾರ ನೀಡದಿದ್ದದ್ದು ಇದಕ್ಕೆ ಕಾರಣವಂತೆ. ಅದು ನಿಜವೂ ಇರಬಹುದು. ಯಾಕೆಂದರೆ ಅಣ್ಣಾ ಅವರನ್ನು ಬೆಂಬಲಿಸಿ ಮುಂಬೈನ ಮೈದಾನಕ್ಕೆ ಮೂರು ಸಾವಿರಕ್ಕಿಂತಲೂ ಹೆಚ್ಚು ಜನ ಬರಲಿಲ್ಲ. ಮಾಧ್ಯಮಗಳೂ ಅದಕ್ಕೆ ಮೊದಲಿನಷ್ಟು ಪ್ರಾಮುಖ್ಯತೆ ಕೊಡಲಿಲ್ಲ. ಇನ್ನು ರಾಜಕಾರಣಿಗಳು ಲೋಕಪಾಲ್ ಮಸೂದೆ ಬಗ್ಗೆ ಸಂಸತ್ತಿನಲ್ಲಿ ಕಿತ್ತಾಡುವುದರಲ್ಲೇ ಮುಳುಗಿದ್ದು ಅಣ್ಣಾರತ್ತ ಕಣ್ಣೆತ್ತಿ ನೋಡುವುದಕ್ಕೂ ಅವರಿಗೆ ಪುರಸೊತ್ತು ಇರಲಿಲ್ಲ.

ಆದರೆ ಉತ್ತರ ಇಷ್ಟು ಸರಳವೇ?

ವಾಸ್ತವವಾಗಿ ಭ್ರಷ್ಟಾಚಾರದ ವಿರುದ್ಧದ ಅಣ್ಣಾ ಹಜಾರೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಅವರ ಹೋರಾಟಕ್ಕೆ ದೊಡ್ಡ ಪ್ರಮಾಣದಲ್ಲಿ ಸ್ಪಂದಿಸಿದ್ದು ಭಾರತದ ಮಧ್ಯಮ ವರ್ಗ. ಆದರೆ ದೆಹಲಿ ಮೈದಾನದಲ್ಲಿ ನಡೆದ 'ಶೋ' ನಂತರ ಅಣ್ಣಾ ತಂಡದ ಕೆಲ ಸದಸ್ಯರ ಮುಖವಾಡಗಳು ಕಳಚಿ ಬಿದ್ದು ಅವರ ಅಸಲೀಯತ್ತು ಜನರಿಗೆ ಗೊತ್ತಾಗಿತ್ತು. ಜೊತೆಗೆ ಅಣ್ಣಾ ತಂಡದಲ್ಲಿ ಭಿನ್ನಾಭಿಪ್ರಾಯಗಳು ಮೂಡಿದ್ದು ಹಲವರು ಆ ತಂಡದಿಂದಲೇ ಹೊರಬಿದ್ದಿದ್ದರು. ಇದೆಲ್ಲದರ ಮಧ್ಯೆ ಅಣ್ಣಾ ತಂಡದ ಮುಖ್ಯ ಸದಸ್ಯನಾಗಿರುವ ಕೇಜ್ರಿವಾಲ್ ಹಿಸ್ಸಾರ್ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ಪ್ರಚಾರ ಮಾಡಿ ಅಲ್ಲಿ ಕಾಂಗ್ರೆಸ್ ಸೋಲಿಗೆ ನೆರವಾಗಿದ್ದ. ಜೊತೆಗೆ ಅಣ್ಣಾ ಕೂಡ ಈ ದೇಶದಲ್ಲಿ ಕಾಂಗ್ರೆಸ್ ಪಕ್ಷ ಮಾತ್ರ ಭ್ರಷ್ಟ ಪಕ್ಷ ಎಂಬಂತಹ ಬಾಲಿಶ ನಿಲುವು ತಳೆದದ್ದು ಬಹಳಷ್ಟು ಜನರಲ್ಲಿ ನಿರಾಶೆ ಮೂಡಿಸಿತ್ತು. ಇದೆಲ್ಲದರ ಜೊತೆಗೆ ಮತ್ತೊಂದು ಸಣ್ಣ ಕಾರಣವೂ ಹಜಾರೆಯನ್ನು ಬೆಂಬಲಿಸಿದ್ದ ಮಧ್ಯಮ ವರ್ಗದಲ್ಲಿ ಭ್ರಮನಿರಸನ ಉಂಟು ಮಾಡಿತ್ತು. ಅದೇನೆಂದರೆ ಡ್ರಿಂಕ್ಸ್ ಮಾಡುವವರನ್ನು ಕಂಬಕ್ಕೆ ಕಟ್ಟಿ ಥಳಿಸುವ ಮೂಲಕ ಅವರಿಗೆ ಪಾಠ ಕಲಿಸಬೇಕೆಂಬ ಹಜಾರೆ ಥಿಯರಿ!

ಹೇಳಿ ಕೇಳಿ ಭಾರತದ ಮಧ್ಯಮ ವರ್ಗ ಇವತ್ತು ಮಾಲ್ ಮತ್ತು ಪಬ್ ಕಲ್ಚರ್‌ಗೆ ಸೇರಿದ್ದು. ಸಂತೋಷ ಕೂಟವಾಗಲಿ, ರಿಲ್ಯಾಕ್ಸ್ ಮಾಡುವಾಗ, ಫ್ರೆಂಡ್ಸ್ ಜೊತೆ ಸೇರಿದಾಗಲಿ, ಇತರೆ ನೆಪಗಳಿಗಾಗಲಿ ಈ ವರ್ಗ ಡ್ರಿಂಕ್ಸ್ ಮಾಡುತ್ತದೆ. ಅದಕ್ಕೆಂದೇ ಇವತ್ತು ಮಾರುಕಟ್ಟೆಯಲ್ಲಿ ತರಹೇವಾರಿ ದುಬಾರಿ ಡ್ರಿಂಕ್‌ಗಳೂ ಇವೆ. ಸಹಜವಾಗಿಯೇ ಡ್ರಿಂಕ್ಸ್ ಮಾಡುವವರನ್ನು ಥಳಿಸಬೇಕೆಂಬ ಅಣ್ಣಾ ಸಿದ್ಧಾಂತ ಈ ವರ್ಗಕ್ಕೆ ಹಿಡಿಸಲಿಲ್ಲ.

ಭ್ರಷ್ಟಾಚಾರ ವಿರೋಧಿ ಆಂದೋಲನದಲ್ಲೇ ಕಳಂಕಿತರಿರುವುದು, ಸಂಸತ್ತನ್ನೇ ಬ್ಲ್ಯಾಕ್‌ಮೇಲ್ ಮಾಡುವುದು, ಸೋಷಿಯಲ್ ಕುಡುಕರನ್ನೂ ಥಳಿಸಬೇಕೆಂಬ ಸರ್ವಾಧಿಕಾರಿ ಧೋರಣೆಯನ್ನು ಅಣ್ಣಾ ಹಜಾರೆ ಹೊಂದಿರುವುದು....ಇವೆಲ್ಲ ಸೇರಿ ಈ ಬಾರಿಯ ನೀರಸ ಪ್ರತಿಕ್ರಿಯೆಗೆ ಕಾರಣವಾಗಿರಬಹುದಲ್ಲವೇ....

ನಿಮ್ಮ ಬಳಿ 'ಪಾಂಚಾಲಿ' ಇದ್ದಾಳೆಯೇ?

1974ರಲ್ಲಿ 'ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ಎಂಬ ಸಂಘಟನೆಯು ದೀಪಾವಳಿ ಮತ್ತು ರಾಜ್ಯೋತ್ಸವದ ಯುಕ್ತ 'ಪಾಂಚಾಲಿ' ಎಂಬ ವಿಶೇಷ ಸಂಚಿಕೆಯನ್ನು ಪ್ರಕಟಿಸಿತ್ತು. ಅದನ್ನು ಪಿ.ಲಂಕೇಶರು ಸಂಪಾದಿಸಿದ್ದರೆ ಅದರಲ್ಲಿ ಚಂಪಾ, ತೇಜಸ್ವಿ, ಾರ್ ಅಹಮದ್, ಸಿದ್ದಲಿಂಗಯ್ಯ, ಬೆಸಗರಹಳ್ಳಿ ರಾಮಣ್ಣ, ಶಾಂತಿನಾಥ ದೇಸಾಯಿ, ಚೆನ್ನವೀರ ಕಣವಿ, ಶ್ರೀಕೃಷ್ಣ ಆಲನಹಳ್ಳಿ, ದೇವನೂರ ಹಾದೇವ ಸೇರಿದಂತೆ ನಾಡಿನ ಹಲವಾರು ಹಿರಿಯ ಲೇಖಕರ ಕಥೆ, ಕವನ, ನಾಟಕ ಇತ್ಯಾದಿಗಳು ಪ್ರಕಟಗೊಂಡಿದ್ದವು.

ಈಗ, 35 ವರ್ಷಗಳ ನಂತರ, ಮತ್ತೆ 'ಪಾಂಚಾಲಿ'ಯನ್ನು ಮರು ಮುದ್ರಿಸಲು ಎಲ್ಲ ಸಿದ್ಧತೆ ಮಾಡಿಕೊಂಡಿದ್ದೇವೆ. ಕಂಪ್ಯೋಸಿಂಗ್, ಫ್ರೂಫ್ ಎಲ್ಲ ಮುಗಿದಿದೆ. ಆದರೆ ಈ ಹೊಸ ಆವೃತ್ತಿ ಕೂಡ ಮೊದಲನೆ ಪುಟದಿಂದ ಕೊನೆಯ ಪುಟದವರೆಗೂ ಹಳೆಯ ಆವೃತ್ತಿಯಂತೆ ಇರಬೇಕು ಎಂಬುದು ನನ್ನ ಆಸೆ. ಆದರೆ ಹಾಗೆ ಅದನ್ನು ರೂಪಿಸಬೇಕಿದ್ದರೆ, ಹಳೇ ಆವೃತ್ತಿಯಲ್ಲಿದ್ದ ಬಣ್ಣದ ಪುಟಗಳು, ಚಿತ್ರಗಳು ಲ್ಲವೂ ಮತ್ತೆ ನಮಗೆ ಬೇಕಿದೆ.

ಆದ್ದರಿಂದ ನಿಮ್ಮ ಬಳಿ 'ಪಾಂಚಾಲಿ'ಯ ಹಳೆ ಒರಿಜಿನಲ್ ಕಾಪಿ ಇದ್ದರೆ ದಯವಿಟ್ಟು ನಮಗೆ ತಿಳಿಸಿ. ಅದನ್ನು ನಿಮ್ಮಷ್ಟೇ ಜೋಪಾನವಾಗಿ ೋಡಿಕೊಂಡು, ಹೊಸ ಪಾಂಚಾಲಿಯನ್ನು ತಯಾರಿಸಿ, ನಿಮ್ಮ ಹಳೆ 'ಪಾಂಚಾಲಿ'ಯನ್ನು ನಿಮಗೆ ವಾಪಸ್ ಕೊಡುವ ಜವಾಬ್ದಾರಿ ನಮ್ಮದು. ಮ್ಮ ಕಚೇರಿಯ 080-26676427 ನಂಬರ್‌ಗೆ ಫೋನ್ ಮಾಡಿ.

– ಸಂ

ಪತ್ರಿಕೆ ತಂಡಕ್ಕೆ ಪ್ರೆಸ್ ಕ್ಲಬ್ ಪ್ರಶಸ್ತಿ

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ತನ್ನ 2011ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಈ ಬಾರಿಯ ಪ್ರಶಸ್ತಿಗಳಿಗೆ ನಿಮ್ಮ ಈ ಪತ್ರಿಕೆಯ ಸಂಪಾದಕಿ ಗೌರಿ ಲಂಕೇಶ್, ಪ್ರಜಾವಾಣಿಯ ಸಹಾಯಕ ಸಂಪಾದಕ ದಿನೇಶ್ ಅಮೀನ್‌ಮಟ್ಟು ಮತ್ತು ಕನ್ನಡಪ್ರಭ ಪತ್ರಿಕೆಯ ಚಿತ್ರಕಲಾವಿದ ಪ.ಸ.ಕುಮಾರ್ ಅವರು ಆಯ್ಕೆಯಾಗಿದ್ದಾರೆ.

ಹಾಗೆಯೇ ವರ್ಷದ ವಿಶೇಷ ಪ್ರಶಸ್ತಿಗೆ ಸಂಜೆವಾಣಿಯ ಸಂಪಾದಕ ಬಿ.ಟಿ. ಅಮುದನ್ ಮತ್ತು ವರ್ಷದ ವ್ಯಕ್ತಿ ಪ್ರಶಸ್ತಿಗೆ ಹಿರಿಯ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಅವರು ಆಯ್ಕೆಯಾಗಿದ್ದಾರೆ.


ಈ ವರ್ಷ ನಮ್ಮ ತಂಡಕ್ಕೆ ಸಲ್ಲುತ್ತಿರುವ ಮೂರನೇ ಪ್ರಶಸ್ತಿ ಇದಾಗಿದೆ. ಈ ಪ್ರಶಸ್ತಿಯನ್ನು ನಮ್ಮ ವೃತ್ತಿಬಾಂಧವರಾದ ಇತರೆ ಪತ್ರಕರ್ತರು ಕೊಡುತ್ತಿರುವುದರಿಂದ ಇದು ನಮ್ಮ ಇಡೀ ತಂಡಕ್ಕೆ, ನಮ್ಮ ಓದುಗ ಮಿತ್ರರಿಗೆ, ವಿತರಕರಿಗೆ ಮತ್ತು ಮುಖ್ಯವಾಗಿ ನಮ್ಮ ಪರ ನಿಲುವು, ಸಿದ್ಧಾಂತ ಮತ್ತು ಹೋರಾಟಗಳಿಗೆ ಸಿಕ್ಕ ಮನ್ನಣೆ ಎಂದು ಭಾವಿಸುತ್ತೇವೆ.

– ಲಂಕೇಶ್ ಬಳಗ

ಮಂಗಳೂರಿನಲ್ಲಿ ಪೋಲೀಸ್ ಅಂಡರ್‌ವಲ್ಡ್!

ಈ ಪ್ರಕರಣದ ವಿವರಗಳು ಯಾವ ಅಂಡರ್‌ವಲ್ಡ್ ಕತೆಗಿಂತಲೂ ಕಡಿಮೆ ಇಲ್ಲವಾದ್ದರಿಂದ ಇದನ್ನು "ಮಂಗಳೂರು ಪೊಲೀಸ್ ಅಂಡರ್‌ವಲ್ಡ್" ಎಂದು ದಾರಾಳವಾಗಿ ಕರೆಯಬಹುದು. ಈ ಲೋಕದ ದೊರೆಯಂತಿರುವ ಇನ್ಸ್‌ಪೆಕ್ಟರ್ ಗಾಂವ್‌ಕರ್ ಮಾಹಿತಿದಾರ ಮುನೀರ್‌ಗೆ "ಯಾವುದೇ ಕಾರಣಕ್ಕೂ ಎಸಿಪಿ ಗಡದಿಯವರಿಗೆ ಮಾಹಿತಿ ಕೊಡಬಾರದು, ಮತ್ತು ಎಂದಿನಂತೆ ಮಾಮೂಲು ವಸೂಲಿ ಮಾಡಿಕೊಡಬೇಕು, ತಪ್ಪಿದಲ್ಲಿ ಎನ್‌ಕೌಂಟರ್ ಮಾಡಿ ಸಾಯಿಸುತ್ತೇನೆ ಅಥವಾ ಬೇರೆ ರೌಡಿಗಳಿಂದ ಕೊಲೆ ಮಾಡಿಸುತ್ತೇನೆ" ಎಂದು ನೇರ ಕೊಲೆ ಬೆದರಿಕೆ ಹಾಕಿದ್ದಾರೆಂದರೆ ಪರಿಸ್ಥಿತಿಯ ತೀವ್ರತೆ ಯಾರಿಗಾದರೂ ಅರಿವಾಗುತ್ತದೆ.

• ಜಂಗಮ



ಇನ್‌ಸ್ಪೆಕ್ಟರ್ ವಿನಯ್ ಗಾಂವ್‌ಕರ್

ಅಪರಾಧ ಜಗತ್ತಿನವರ ಮೇಲೆ ನಿಗಾ ವಹಿಸಲು ಪೊಲೀಸರು ಸಾಮಾನ್ಯವಾಗಿ ತಮ್ಮದೇ ಬೇಹುಗಾರರು ಅಥವಾ ಮಾಹಿತಿದಾರರ ಜಾಲವನ್ನು ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಬಹುತೇಕ ಇಂಥ ಮಾಹಿತಿದಾರರು ಅಪರಾಧ ಹಿನ್ನೆಲೆಯವರೇ ಆಗಿದ್ದು ತಮ್ಮ ವಿಶೇಷ 'ಕೌಶಲ್ಯ ಹಾಗು ಪ್ರತಿಭೆ'ಗಳನ್ನು ಬಳಸಿ ತಾವು ನೆಚ್ಚಿಕೊಂಡಿರುವ ಪೊಲೀಸರಿಗೆ ಮಾಹಿತಿ ಒದಗಿಸುತ್ತಾರೆ.



ಕಳ್ಳಮಾಲು ಸೀಜ್ ಮಾಡಿದ ಎಸಿಪಿ ಗಡದಿ

ಮುನೀರ್ ಅಹಮದ್ (ಬಿನ್ ಅಬ್ದುಲ್ ಅಜೀಜ್) ಎಂಬ 48 ವಯಸ್ಸಿನ ವ್ಯಕ್ತಿಯೊಬ್ಬ ಕಳೆದ ಕೆಲ ವರ್ಷಗಳಿಂದ ಮಂಗಳೂರಿನ ಪೊಲೀಸರಿಗೆ ಮಾಹಿತಿದಾರನಾಗಿದ್ದ. ಈಗ ಇದೇ ಮುನೀರ್‌ಗೆ ಜೀವ ಬೆದರಿಕೆ ಇದ್ದು ಆತ ತನ್ನ ಪ್ರಾಣ ಉಳಿಸಿಕೊಳ್ಳಲು ಕಂಡ ಕಂಡವರ ಕಾಲು ಹಿಡಿಯುವ ಸ್ಥಿತಿ ಬಂದೊದಗಿದೆ.. ಪೊಲೀಸರಿಗೆ ಮಾಹಿತಿ ನೀಡಿ ಭೂಗತ ಪಾತಕಿಗಳನ್ನು, ಕಳ್ಳಸಾಗಣೆದಾರರನ್ನು ಎದುರು ಹಾಕಿಕೊಂಡರೆ ಇಂಥ ದುಸ್ಥಿತಿ ಅನಿವಾರ್ಯ ಎಂದು ಯಾರಿಗಾದರೂ ಅನಿಸುತ್ತದೆ. ಆದರೆ ಈ ಮುನೀರ್‌ಗೆ ಅಪಾಯ ಬಂದೊದಗಿರುವುದು ಭೂಗತ ಪಾತಕಿಗಳಿಂದಲ್ಲ, ಈತನಿಂದ ಮಾಹಿತಿ ಪಡೆದು ಅದನ್ನು 'ಸದುಪಯೋಗ' ಪಡಿಸಿಕೊಳ್ಳುತ್ತಿದ್ದ ಮಂಗಳೂರಿನ ಬಂದರು ಠಾಣೆಯ ಇನ್‌ಸ್ಪೆಕ್ಟರ್ ವಿನಯ್ ಗಾಂವ್‌ಕರ್ ಮತ್ತು ತಂಡದವರಿಂದ! ಮಂಗಳೂರಿನ ಪೊಲೀಸರು ತಮ್ಮ ಮಾಹಿತಿದಾರನ ಬೇಟೆಗೆ ಅಣಿಯಾಗಿರುವ ಈ ಕತೆ ಖಂಡಿತಾ ಸಿನಿಮಾ ಕತೆಯಲ್ಲ, ಮಂಗಳೂರಿನ ನಗರ ದೇವತೆ ಮಂಗಳಾದೇವಿಯ ಆಣೆಗೂ ಇದು ಸತ್ಯ ಕತೆ!

ಸದರಿ ಮಾಹಿತಿದಾರನಾದ ಮುನೀರ್ ರಾಜ್ಯ ಮಾನವ ಹಕ್ಕುಗಳ ಆಯೋಗ, ಲೋಕಾಯುಕ್ತ ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ ಬಂದರು ಠಾಣೆಯ ಇನ್‌ಸ್ಪೆಕ್ಟರ್ ವಿನಯ್ ಗಾಂವ್‌ಕರ್, ರೈಟರ್ ಬಾಲಕೃಷ್ಣ, ಪಿ.ಸಿ.ಗಳಾದ ಜಯಂತ್, ರಾಜೇಶ್ ಹಾಗೂ ಮಂಗಳೂರು ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್‌ಸಿಂಗ್ ವಿರುದ್ಧ ದೂರು ನೀಡಿದ್ದು ತನ್ನ ಪ್ರಾಣ ಉಳಿಸುವಂತೆ ಮೊರೆ ಇಟ್ಟಿದ್ದಾನೆ. ಈ ಕ್ರಿಮಿನಲ್ ಹಿನ್ನೆಲೆಯ ಮಾಹಿತಿದಾರನ ಕೈಹಿಡಿದ ತಪ್ಪಿಗಾಗಿ ಆತನ ಅಸಹಾಯಕ ಪತ್ನಿ ಷಫೀಕಾ ತನ್ನ ಪತಿಯ ಪ್ರಾಣವನ್ನು ಉಳಿಸಿಕೊಡುವಂತೆ ಹೈಕೋರ್ಟಿಗೆ ಮೊರೆ ಹೋಗಿದ್ದಾಳೆ.

ಈ ಮುನೀರ್ ಅಹಮದ್ ಎಲ್ಲರಂತೆ ಸಹಜ ಶಾಂತಿಯುತ ಜೀವನ ನಡೆಸಬಹುದಿತ್ತು. ಆದರೆ ಆತನ ಹಿನ್ನೆಲೆ ಅದಕ್ಕೆ ಮುಳುವಾಯಿತು. ಈತನ ಅಪ್ಪ ಸೀಮೆಎಣ್ಣೆ ಕಳ್ಳ ವ್ಯಾಪಾರ ಮಾಡುತ್ತಿದ್ದರಿಂದ ಈ ಹುಡುಗನ ಕೈಯಲ್ಲಿ ಪೊಲೀಸರಿಗೆ ಮಾಮೂಲು ಕಳಿಸಿಕೊಡುತ್ತಿದ್ದನಂತೆ. ಹೀಗೆ ಈತನಿಗೆ ಬಾಲ್ಯದಿಂದಲೂ ಪೊಲೀಸರ ನಂಟು ಅಂಟಿಕೊಂಡುಬಿಟ್ಟಿತು. ನಂತರ ಸಣ್ಣಪುಟ್ಟ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ ಈತನ ಮೇಲೆ ಕೆಲವು ಕೇಸುಗಳು ಬಿದ್ದಿದ್ದವು. ಮುನೀರ್ ಹೇಳುವ ಪ್ರಕಾರ, ಒಂದು ದಿನ ಲುಸಾರಿಯೋ ಮತ್ತು ಗಣೇಶ್ ಎಂಬ ಇಬ್ಬರು ಪೊಲೀಸರು ಮುನೀರ್ ಜೊತೆ ಮತ್ತೊಬ್ಬ ಕಸುಬುದಾರ ಕಳ್ಳ ರಫೀಕ್‌ನನ್ನು ಸೇರಿಸಿ, ಟೈಲ್ಸ್ ವ್ಯಾಪಾರದಲ್ಲಿ ಹೆಸರು ಮಾಡಿದ್ದ ಕೃಷ್ಣಾ ನಾಯಕ್ ಎಂಬುವವರ ಅಂಗಡಿಗೆ ನುಗ್ಗಿಸಿದರು. ಭಾರೀ ಹಣ ಸಿಗುವ ನಿರೀಕ್ಷೆ ಇದ್ದುದರಿಂದ ಬಂದಿದ್ದನ್ನು ಹಂಚಿಕೊಳ್ಳೋಣ ಎಂದು ಈ ಕೂಟ ಭಾವಿಸಿತ್ತಂತೆ. ಆದರೆ ಅಂಗಡಿ ಮಾಲಿಕರ ಅದೃಷ್ಟವೋ ಅಥವಾ ಮುನೀರನ ದುರಾದೃಷ್ಟವೋ ಗೊತ್ತಿಲ್ಲ, ಕೆಲ ಪುಡಿಗಾಸು ಬಿಟ್ಟರೆ ಬೇರೆ ಏನೂ ಸಿಗಲಿಲ್ಲ, ಮೂಲೆಯ ಕತ್ತಲಲ್ಲಿ ಕಾವಲಿಗೆ ನಿಂತಿದ್ದ ಪೊಲೀಸರಿಗೆ ಈ ಅನನುಭವಿ ಕಳ್ಳರು ಇದನ್ನು ವರದಿ ಮಾಡಿದರಂತೆ. ಆದರೆ ಇವರು ಹಣವನ್ನು ಬಚ್ಚಿಟ್ಟು ತಮಗೆ ಮೋಸ ಮಾಡುತ್ತಿದ್ದಾರೆಂದು ಭಾವಿಸಿದ ಪೊಲೀಸರು ಇವರಿಗೆ ಕಿರುಕುಳ ನೀಡಲು ಪ್ರಾರಂಭಿಸಿ ಮತ್ತಷ್ಟು ಸುಳ್ಳು ಕೇಸುಗಳನ್ನು ಜಡಿದರಂತೆ.

ಪೊಲೀಸರ ಕಾಟದಿಂದ ತಪ್ಪಿಸಿಕೊಳ್ಳಲು ಮುನೀರ್ ಮುಂಬಯಿಗೆ ಪೇರಿ ಕಿತ್ತ. ಆದರೆ ಈತನ ದುರಾದೃಷ್ಟವೇನೆಂದರೆ ಈತ ಮುಂಬಯಿನಲ್ಲಿದ್ದಾಗಲೂ ಮಂಗಳೂರಿನಲ್ಲಿ ಈತನ ಮೇಲೆ ಕೇಸುಗಳು ಬೀಳುತ್ತಿದ್ದವಂತೆ. ಕೇಸಿದ್ದರೇನಂತೆ? ಲವ್ ಮಾಡಲಿಕ್ಕೆ ಅದೇನೂ ಅಡ್ಡ ಬರುವುದಿಲ್ಲವಲ್ಲ, ಹಾಗೆ ಮುನೀರ್ ಕೂಡ ಲವ್ ಮಾಡಿ 2000ನೆ ಇಸವಿಯಲ್ಲಿ ಮದುವೆಯನ್ನೂ ಮಾಡಿಕೊಂಡ. ಮದುವೆಯಾದ ಬಳಿಕ 2001 ರಲ್ಲಿ ಒಮ್ಮೆ ಹುಟ್ಟೂರಿಗೆ ಬೇಟಿಕೊಟ್ಟು ಮತ್ತೆ ವಾಪಸ್ ಮುಂಬಯಿಗೆ ಹೊರಟು ಮುಲ್ಕಿ ಬಸ್ ನಿಲ್ದಾಣದಲ್ಲಿ ಕಾಯುತ್ತಾ ನಿಂತಿದ್ದ ಈ ನವ ದಂಪತಿಗೆ ಅದೃಷ್ಟ ಕೆಟ್ಟಿತ್ತು, ಹಠಾತ್ತನೆ ಪ್ರತ್ಯಕ್ಷವಾದ ಇನ್‌ಸ್ಪೆಕ್ಟರ್ ವಿನಯ್ ಗಾಂವ್‌ಕರ್ ಸಾಹೇಬರು ವಾರಂಟ್ ಇದೆ ಎಂದು ಹೇಳಿ ಸ್ಟೇಷನ್‌ಗೆ ಕರೆದೊಯ್ದರು.

ನವದಂಪತಿಗಳ ಬಳಿ ಇದ್ದ ಒಡವೆಗಳು ಮತ್ತು 38,000 ರೂ.ಗಳನ್ನು ಕಸಿದು ಒಂದು ಕರ್ಚೀಫಿನಲ್ಲಿ ಗಂಟುಕಟ್ಟಿ ವಶಕ್ಕೆ ಪಡೆದುಕೊಂಡ ಸಾಹೇಬರು ಮುನೀರನನ್ನು ಬಿಡುಗಡೆ ಮಾಡಲು ಮತ್ತೆ 50,000 ರೂ.ಗಳ ಬೇಡಿಕೆ ಇಟ್ಟರು. ಪತ್ನಿಯನ್ನು ಅಲ್ಲೆ ಬಿಟ್ಟು ಠಾಣೆಯಿಂದ ಹೊರಬಿದ್ದ ಮುನೀರ್ ಇನ್ನಿಲ್ಲದ ಪ್ರಯತ್ನ ಮಾಡಿದರೂ ಅಷ್ಟು ಹಣ ಸಿಗಲಿಲ್ಲ, ಪ್ರೇಮ ವಿವಾಹದ ಬಗ್ಗೆ ವಿರೋಧವಿದ್ದುದರಿಂದ ಮನೆಯವರೂ ಸಹಾಯಕ್ಕೆ ಬರಲಿಲ್ಲ, ಇತ್ತ ಪೊಲೀಸರು ಮುನೀರ್‌ನ ನತದೃಷ್ಟ ಪತ್ನಿಯನ್ನು ಬಸ್‌ಸ್ಟಾಂಡಿನಲ್ಲಿ ಸಿಕ್ಕ ಹುಡುಗಿಯೆಂದು ವಾಮಂಜೂರಿನ ಪೊಲೀಸ್ ರಿಮ್ಯಾಂಡ್ ಹೋಮ್‌ಗೆ ಸೇರಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಮುನಿರ್ ಮತ್ತು ಕುಟುಂಬ...

ಹಾಗೂ ಹೀಗೂ 6ನೇ ದಿನ ಮುನೀರ್ 50,000 ರೂ. ಹೊಂದಿಸಿ ಗಾಂವ್‌ಕರ್ ಸಾಹೇಬರಿಗೆ ಸಲ್ಲಿಸಿದ ನಂತರ ರಿಮ್ಯಾಂಡ್ ಹೋಮ್‌ನಲ್ಲಿದ್ದ ಪತ್ನಿಯನ್ನು ಸುರಕ್ಷಿತವಾಗಿ ಬಿಡುಗಡೆ ಮಾಡಿಸಿಕೊಟ್ಟರು. ಅಷ್ಟು ಮಾತ್ರವಲ್ಲ, ಹೆಂಡತಿಯನ್ನು ಬಿಟ್ಟು 6 ದಿನವಾದರು ದುಡ್ಡು ತರಲಾಗದ ಅವನ ಬೇಜವಾಬ್ದಾರಿತನದ ಬಗ್ಗೆ ಕಿವಿಹಿಂಡಿ ಬುದ್ಧಿ ಹೇಳಿದ ಗಾಂವ್‌ಕರ್ ಸಾಹೇಬರು ಬಾಂಬೆಗೆ ಹೋಗಿ ಸುಖವಾಗಿರುವಂತೆ ಆಶೀರ್ವದಿಸಿ ಕಳಿಸಿಕೊಟ್ಟರಂತೆ. ಗಾಂವ್‌ಕರ್ ಸಾಹೇಬರ ಉದಾರತೆ, ಹೃದಯ ವೈಶಾಲ್ಯ ಅರ್ಥಮಾಡಿಕೊಳ್ಳಲು ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ?

ಮುನೀರ್ ದಂಪತಿಗಳಿಗೆ ಮಕ್ಕಳಾದ ನಂತರ ಬೆಂಗಳೂರಿನಲ್ಲಿರುವ ಅತ್ತೆಯ ಮನೆಯಲ್ಲಿ ಆಶ್ರಯ ಪಡೆದರು. ಬ್ಯುಸಿನೆಸ್ ಮಾಡಲೆಂದು ಮಾವನ ಮನೆಯವರು ಆರ್ಥಿಕ ಬೆಂಬಲ ನೀಡಿದರು. ಆದರೆ ತನ್ನ ಬೇಕಾಬಿಟ್ಟಿ ವ್ಯವಹಾರದಿಂದ ಲಕ್ಷಾಂತರ ಹಣ ಪೋಲು ಮಾಡಿದ ಮುನೀರ್ ಕೊನೆಗೆ ವಿಧಿಯಿಲ್ಲದೆ ಮತ್ತೆ ಮಂಗಳೂರಿಗೆ ಕುಟುಂಬ ಸಮೇತ ಹೋಗಿ ನೆಲೆಸುವ ನಿರ್ಧಾರ ಕೈಗೊಂಡ. ಪೊಲೀಸರ ಕಣ್ಣಿಗೆ ಬಿದ್ದಾಗ ಅವರ ಕೈ ಬಿಸಿ ಮಾಡುತ್ತಾ ತಲೆಮರೆಸಿಕೊಂಡು ತಿರುಗಾಡಿದ. ಹೊಟ್ಟೆಪಾಡಿಗಾಗಿ ಫರ್ನಿಚರ್ ಅಂಗಡಿಯೊಂದನ್ನು ನಡೆಸುತ್ತಿದ್ದುದಾಗಿ ಮುನೀರ್ ದಂಪತಿಗಳು ಹೇಳುತ್ತಾರೆ.

ಹೀಗಿದ್ದಾಗ ಒಂದು ದಿನ ಮುನೀರ್‌ನನ್ನು ಹಿಡಿಯಲು ಪೊಲೀಸರು ಬಂದಿದ್ದು ಮತ್ತು ಆತ ತಪ್ಪಿಸಿಕೊಂಡು ಪರಾರಿಯಾಗಿದ್ದರ ಬಗ್ಗೆ ಮುನೀರ್‌ನ ಮಕ್ಕಳ ಶಾಲೆಯಲ್ಲಿ ಚರ್ಚೆಯಾಯಿತಂತೆ. ಇಂಥ ನಿರ್ಲಜ್ಜ ಬದುಕಿನಿಂದ ಮೊದಲೇ ರೋಸಿಹೋಗಿದ್ದ ಈತನ ನತದೃಷ್ಟ ಪತ್ನಿ ಷಫೀಕಾ ಒಂದು ದೃಢ ನಿರ್ಧಾರಕ್ಕೆ ಬಂದುಬಿಟ್ಟಳು. ಈ ಕೇಸುಗಳ ಜಂಜಾಟದಿಂದ ಹೇಗಾದರೂ ಮುಕ್ತವಾಗಿ ನೆಮ್ಮದಿಯ ಜೀವನವನ್ನು ನಡೆಸಲು ಅನುವು ಮಾಡಿಕೊಡುವಂತೆ ಅಧಿಕಾರಿಗಳನ್ನು ಬೇಡಿಕೊಂಡಳು. 2007 ರಲ್ಲಿ ಬಂದರು ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದ ಉಮೇಶ್ ಸೇಠ್ ಹಾಗೂ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಹೆಸರಾಗಿದ್ದ ಯುವ ಐಪಿಎಸ್ ಅಧಿಕಾರಿ ಡಾ. ಸುಬ್ರಮಣ್ಯೇಶ್ವರ ರಾವ್ ಅವರ ಸಲಹೆಯ ಮೇರೆಗೆ ಮುನೀರ್ ಸ್ವತಃ ಪೊಲೀಸರಿಗೆ ಶರಣಾದ. ಸರಿಯಾಗಿ ಒಂದು ವರ್ಷ ಮೂರು ತಿಂಗಳು ಜೈಲುವಾಸ ಅನುಭವಿಸಿ ಎಲ್ಲಾ ಕೇಸುಗಳನ್ನು ಮುಗಿಸಿಕೊಂಡು ಜೈಲಿನಿಂದ ಬಿಡುಗಡೆಯಾಗಿ 2008 ರಲ್ಲಿ ಮನೆಗೆ ಬಂದ.

ಆಗೊಮ್ಮೆ ಈಗೊಮ್ಮೆ ಠಾಣೆಗೆ ಹೋಗಿ ಪೊಲೀಸರೆದುರು ಅನಗತ್ಯ ಹಲ್ಲು ಕಿರಿಯುವುದು, ಪೊಲೀಸರು ಕಂಡಾಗ ಕಾಫಿ ಟೀ ಕುಡಿಸೋದನ್ನು ಬಿಟ್ಟರೆ ಉಳಿದ ತನ್ನ ಹಳೆಯ ಚಾಳಿಗಳನ್ನು ಮುನೀರ್ ಬಿಟ್ಟುಬಿಟ್ಟ. ಈತನ ಪತ್ನಿ ಷಫೀಕಾ ತನ್ನ ಗಂಡನಲ್ಲಿ ಬಂದ ಬದಲಾವಣೆ ಕಂಡು ನೆಮ್ಮದಿಯ ನಿಟ್ಟುಸಿರು ಬಿಟ್ಟಳು. ಎಲ್ಲ ತಾಯಿಯರಂತೆ ತನ್ನ ಮಕ್ಕಳ ಭವಿಷ್ಯದ ಬಗ್ಗೆ ಕನಸು ಕಾಣಲು ಪ್ರಾರಂಭಿಸಿದಳು. ಆದರೆ.....?

ಇನ್‌ಫಾರ್ಮರ್ ಆಗಿ ಬದಲಾದ ಮುನೀರ್

ದುಷ್ಟವಿಧಿ ಈ ಕುಟುಂಬವನ್ನು ಸುಮ್ಮನೆ ಬಿಡಲಿಲ್ಲ, ಆ ವಿಧಿ ಬೇರೆ ಯಾರೂ ಆಗಿರದೆ ಏಳೆಂಟು ವರ್ಷಗಳ ಹಿಂದೆ ಅಮಾಯಕ ಷಫೀಕಾಳನ್ನು ರಿಮ್ಯಾಂಡ್ ಹೋಮ್‌ಗೆ ತಳ್ಳಿದ್ದ ಅದೇ ಇನ್‌ಸ್ಪೆಕ್ಟರ್ ವಿನಯ್ ಗಾಂವ್‌ಕರ್ ರೂಪದಲ್ಲಿ ಬೆನ್ನುಹತ್ತಿತ್ತು.

ಪೊಲೀಸ್ ಇಲಾಖೆಗೂ ಅಂಡರ್‌ವಲ್ಡ್‌ಗೂ ಚುರುಕು ಚಾಲಾಕಿತನ ಅತಿಮುಖ್ಯ. ಈಗ ಹಾಲಿ ಬಂದರು ಠಾಣೆಯಲ್ಲಿರುವ ಗಾಂವ್ಕರ್ ಸಾಹೇಬರು ಕೆಲಸದಲ್ಲಿ ತುಂಬಾ

▶6

ಮಾಮೂಲು 38 ಲಕ್ಷ!

ಸುಮಾರು ಒಂದು ವರ್ಷಕಾಲ ಇನ್ಸ್‌ಪೆಕ್ಟರ್ ವಿನಯ್ ಗಾವ್‌ಕರ್‌ಗೆ ಇನ್‌ಫಾರ್ಮರ್ ಕಂ ಮಾಮೂಲಿ ಕಲೆಕ್ಷನ್ ಮಾಡುತ್ತಿದ್ದ ಮುನೀರ್ ಸಂಗ್ರಹಿಸಿ ಕೊಟ್ಟ ಮೊತ್ತ ಬರೋಬ್ಬರಿ 38 ಲಕ್ಷಗಳು! ಈ ಮಾಜಿ ರೌಡಿ ಮುನೀರ್ ಹೇಳುವ ಪ್ರಕಾರ ಬಿಲ್ಡರ್‌ಗಳಿಂದ 8 ಲಕ್ಷ, ಕ್ಲಬ್/ಬಾರ್‌ಗಳಿಂದ 2 ಲಕ್ಷ ಮಾರ್ಕೆಟ್‌ನಿಂದ 2.30 ಲಕ್ಷ. ಗುಜರಿಯಿಂದ 4.2ಲಕ್ಷ, ಪೆಟ್ರೋಲ್-ಸೀಮೆಣ್ಣೆ ಕಲಬೆರಕೆದಾರರಿಂದ 2.5 ಲಕ್ಷ, ವೇಶ್ಯಾವಾಟಿಕೆ ನಡೆಸುವ ಲಾಡ್ಜ್‌ಗಳಿಂದ 1 ಲಕ್ಷ ಹೀಗೆ ಪಟ್ಟಿ ಮುಂದುವರೆಯುತ್ತದೆ.

ಸಣ್ಣಪುಟ್ಟ ಅಧಿಕಾರಿಗಳೂ ಸಹ ಕೋಟ್ಯಾಂತರ ರೂ. ಮೌಲ್ಯದ ಅಕ್ರಮ ಆಸ್ತಿ ಮಾಡಿರುವುದು ಪ್ರತಿನಿತ್ಯ ಬಯಲಾಗುತ್ತಿರುವ ಈ ದಿನಗಳಲ್ಲಿ ಮುನೀರ್‌ನ ಆರೋಪ ಅತಿಶಯವೆನಿಸುವುದಿಲ್ಲ, ಅಂದಹಾಗೆ ಗಾಂವ್‌ಕರ್ ಒಮ್ಮೆ ಏನು ಹೇಳಿದರಂತೆ ಗೊತ್ತೆ?

"ಈ ಠಾಣೆಗೆ ಬರಲಿಕ್ಕೆ 32 ಲಕ್ಷ ಸುರಿದಿದ್ದೀನಿ" ಅಂತ. ಒಟ್ಟಾರೆ ತನಿಖೆ ಸರಿಯಾದ ದಿಕ್ಕಿನಲ್ಲಿ ಹೊರಟರೆ ಲೋಕಾಯುಕ್ತರ ಬಲೆಗೆ ಭಾರೀ ತಿಮಿಂಗಿಲಗಳೇ ಬೀಳಬಹುದು.

ಗಾವ್‌ಕರ್ ವಿರುದ್ಧ ದಲಿತರ ದೂರು

ಇಲ್ಲಿಗೆ ಸರಿಯಾಗಿ ಒಂದು ವರ್ಷದ ಹಿಂದೆ ನಡೆದ ಘಟನೆಯಿದು. ಗಾಯತ್ರಿ ಎಂಬ ಅಸಹಾಯಕ ಮಹಿಳೆ ಫೈನಾನ್ಷಿಯರ್ ಒಬ್ಬನಿಂದ ವಂಚನೆಗೊಳಗಾಗಿ ತನ್ನ ಚಿನ್ನ ಒಡವೆಗಳನ್ನು ಕಳೆದುಕೊಂಡಳು. ಈ ಬಗ್ಗೆ ದೂರು ಸಲ್ಲಿಸಲು ಡಿಎಸ್‌ಎಸ್‌ನ ಸ್ಥಳೀಯ ನಾಯಕ ಆನಂದ್ ಜೊತೆ ಬಂದರು ಠಾಣೆಗೆ ಹೋದಳು.

ಇನ್ಸ್‌ಪೆಕ್ಟರ್ ಸೀಟಿನಲ್ಲಿ ಕೂತಿದ್ದ ಗಾಂವ್‌ಕರ್ ನೊಂದವರಿಗೆ ಸಾಂತ್ವನ ಹೇಳುವುದಿರಲಿ, ಅವರನ್ನೇ ಪಾಚಾಮಗೋಚರ ಬೈದು ಠಾಣೆಯಿಂದ ಹೊರಗಟ್ಟಿದ. ದಲಿತ ಸಂಘಟನೆ, ಗಾಂವ್‌ಕರ್‌ರವರ ದಲಿತ ವಿರೋಧಿ ಧೋರಣೆಯನ್ನು ಖಂಡಿಸಿ ಮೇಲಧಿಕಾರಿಗಳಿಗೂ ದೂರು ಸಲ್ಲಿಸಿತ್ತು, ಇಂಥ ಹಿನ್ನೆಲೆಯ ಗಾಂವ್‌ಕರ್ ಈಗ ತನ್ನ ಮೇಲಧಿಕಾರಿ ಎಸಿಪಿ ಗಡದಿಯವರ ಬಗ್ಗೆಯೆ ಜಾತಿ ಹೆಸರಿನಿಂದ ನಿಂದಿಸುವ ಮಟ್ಟಕ್ಕೆ ಹೋಗಿದ್ದಾನೆಂದರೆ ಈತನ ವ್ಯಾಪ್ತಿಯಲ್ಲಿರುವ ಬಡಪಾಯಿ ದಲಿತರ ಗೋಳನ್ನು ಯಾರು ಕೇಳಬೇಕು?

ಒಂದಲ್ಲ ಎರಡಲ್ಲ ಅದು ಬರೋಬ್ಬರಿ 302.11 ...ರೆಗಳ ಭಯಂಕರ ಭೂಕಬಳಿಕೆ!



ಸರ್ಕಾರಿ ಭೂಮಿಯನ್ನು ನೆಲಕಂಟಕರಿಂದ ರಕ್ಷಿಸಲೆಂದೇ ...ಟ್ಟಿಕೊಂಡ ಸಾರ್ವಜನಿಕ ಜಮೀನು ಸಂರಕ್ಷಣಾ ನಿಗಮದ ...ಧ್ಯಕ್ಷ ಎ.ಕೆ. ಮೊನ್ನಪ್ಪ ಎಂಬ ಐಎಎಸ್ ಅಧಿಕಾರಿ ...ಾಗಲಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಎಂ.ಕೆ. ...ಯ್ಯಪ್ಪನಾಗಲಿ, ಕಂದಾಯ ಸಚಿವಾಲಯದ ದಕ್ಷ ...ಮಿಷನರ್ ಅಶೋಕ್‌ಕುಮಾರ್ ಮನೋಳಿಯವರೇ ...ರಲಿ; ಯಾರಿಗೂ ಈ ನೆಲಗಳ್ಳರಿಂದ ಪ್ರಖ್ಯಾತ ...ಡ್ಡಗುಬ್ಬಿ ಕೆರೆಯನ್ನು ಉಳಿಸಲಾಗುತ್ತಿಲ್ಲ.

... ಕಾರಣವಿಷ್ಟೆ; ಇದು ಬಿಜೆಪಿ ಸರ್ಕಾರದ ...ಮುಕಮಣಿಗಳೇ ನಿಂತು ನಡೆಸುತ್ತಿರುವ ಭೂದರೋಡೆ.

... ಇಂಧನ ಸಚಿವೆ ಶೋಭಾ ಕರಂದ್ಲಾಜೆಯೇ ಈ ...ದರೋಡೆಯ ಅಧಿನಾಯಕಿ. ಮಾಜಿ ಮಂತ್ರಿ ಅರವಿಂದ ...ಬಾವಳಿ ಮತ್ತು ಕೆ.ಆರ್. ಪುರಂ ಭೂಗಳ್ಳ ಶಾಸಕ ನಂದೀಶ್ ...ಯಂಥ ಬಿಜೆಪಿ ದೈತ್ಯರೇ ನಿಂತು ನಾನೂರು ಎಕರೆ ...ಸ್ತಾರದ, ಅತ್ಯಂತ ಪುರಾತನ ಮತ್ತು ಸುತ್ತಮುತ್ತಲ ಪರಿಸರದ ...ವ ಸೆಲೆಯಂತಿರುವ ದೊಡ್ಡಗುಬ್ಬಿ ಕೆರೆಗೆ ಬಾಯಿ ಹಾಕದೇ ...ೋಗಿದ್ದರೆ ಈ ಭಾಗದ ಪರಿಸರವಾದಿಗಳು ಈ ಪಾಟ ...ಾಗಬೇಕಾದ ಅನಿವಾರ್ಯವೇ ಇರುತ್ತಿರಲಿಲ್ಲ.

... ಲಿಂಗರಾಜಪುರದಿಂದ ಬಿಎಂಟಿಸಿ ಹತ್ತನೇ ...ಾಗೆ ಬಂದು ಅಲ್ಲಿಂದ ಹೆಣ್ಣೂರು, ಭೈರತಿ ...ಬಳಿ ಬಲಗಡೆ ಒಂದು ಕಿ.ಮಿ. ಕ್ರಮಿಸು ...ಂತೆ ಸಿಗುವುದೇ ದೊಡ್ಡಗುಬ್ಬಿಕೆರೆ. ಅದು ...ಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ...ೋಬಳಿಯ ಕೊತ್ತನೂರು ಪೊಲೀಸ್ ಠಾಣೆಯ ...ಸ್ತಿಗೆ ಬರುತ್ತದೆ. ಬೆಂಗಳೂರೀಗ ಭೈರತಿಕ್ರಾಸ್ ...ನ್ನ ದಾಟಿ ಬೆಳೆಯುತ್ತಿದೆ. ನಾನೂರೆಕರೆ ವಿಶಾಲ ...ಯಲ್ಲಿ ಒಂದೆಕರೆ ಹೊಡೆದರೂ ಅದಕ್ಕೆ ಕಮ್ಮಿ ...ಂದರೂ ಒಂದು ಕೋಟಿ ರೂಪಾಯಿಗಳ ...ರುಕಟ್ಟೆ ರೇಟಿದೆ. ಅಷ್ಟಕ್ಕೂ ಬಿಟ್ಟಿ ಭೂಮಿ ...ಕ್ಕುತ್ತದೆಯೆಂದರೆ ಯಾರಿಗೆ ಬೇಡ?

... ಹೇಳಿಕೇಳಿ ಈ ಕೆರೆ ಒಳಪಡುವುದು ...ಬಾವಳಿ ಪ್ರತಿನಿಧಿಸುವ ಮಹದೇವಪುರ ಕ್ಷೇತ್ರದ ...ಸ್ತಿಗೆ. ಬೆಂಗಳೂರು ಪೂರ್ವ ತಹಶೀಲ್ದಾರ್ ...ಕುಮಾರ್ ನಂದೀಶ್ ರೆಡ್ಡಿಯೇ ಹಿಡಿದು ತಂದು


ಇಡೀ ಕಂದಾಯ ಇಲಾಖೆಯೇ ಭೂಕಂಟಕರ ಜೊತೆ ಕೈಜೋಡಿಸಿದೆಯೆಂದರೆ, ಸ್ಥಳೀಯ ಶಾಸಕ ಲಿಂಬಾವಳಿಯಿಂದ ಹಿಡಿದು ಕೆ.ಆರ್.ಪುರಂ ಬಿಜೆಪಿ ಶಾಸಕ ನಂದೀಶ್ ರೆಡ್ಡಿ ಮತ್ತು ಸಚಿವೆ ಶೋಭಾ ಕರಂದ್ಲಾಜೆಯೇ ದೊಡ್ಡಗುಬ್ಬಿ ಕೆರೆ ಕಬಳಿಸಲು ಟೊಂಕಕಟ್ಟಿ ನಿಂತಿದ್ದಾರೆಂದರೆ ಕೆರೆ ಕಾಯಲು ಉಳಿದವರಾದರೂ ಯಾರು?

• ರಾ.ಸೋಮನಾಥ್

ಕರಂದ್ಲಾಜೆ, ಲಿಂಬಾವಳಿ, ನಂದೀಶ್ ರೆಡ್ಡಿ ಜಂಟಿ ಡಕಾಯಿತಿ 300 ಎಕರೆ ಗುಳುಂ! ದೊಡ್ಡಗುಬ್ಬಿಕೆರೆ ಸ್ವಾಹಾ


ಕರಂದ್ಲಾಜೆಯ ಶೋಭಾರ ರಕ್ತ ಸಂಬಂಧಿಯೊಬ್ಬ ದಿನಕ್ಕೆ ಒಮ್ಮೆಯಾದರೂ ಈ ಸೊತ್ತಿಗೆ ಬಂದು ಹೋಗುತ್ತಾನೆ. ತಿಂಗಳಿಗೊಮ್ಮೆಯಾದರೂ ಶೋಭಾ ಬಂದು ತನ್ನ 34.11 ಎಕರೆಯ ಕೊಳ್ಳೆಯ ಆಸ್ತಿಯನ್ನು ಸುತ್ತಾಡಿ ಹೋಗುತ್ತಾಳೆ.

ಈ ರೀತಿ ಕರಂದ್ಲಾಜೆಯನ್ನು ಕೆರೆ ಕಬಳಿಸಲೆಂದು ಕರೆತಂದಿದ್ದು ಬೇರೆ ಯಾರೂ ಅಲ್ಲ, ಗಾಡ್‌ಫಾದರ್ ಯಡ್ಡಿಯ ನಂಬಿಕಸ್ತ ಬಂಟನೆಂದೇ ಚಾಲ್ತಿಯಲ್ಲಿರುವ ಕೆ.ಆರ್. ಪುರಂ ಶಾಸಕ ನಂದೀಶ್ ರೆಡ್ಡಿ. ದೊಡ್ಡಗುಬ್ಬಿಕೆರೆಯ ದುರಂತದ ಮೂಲಪುರುಷ ಅಂತಿದ್ದರೆ ಅದು ನಂದೀಶ್ ರೆಡ್ಡಿಯೆ. ಏಕೆಂದರೆ ಕೆರೆ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿದವರು, ಕಾಂಪೌಂಡ್ ಕಟ್ಟಿ ಆಕ್ರಮಿಸಿಕೊಂಡವರ ಪೈಕಿ ಬಹುತೇಕರು ನಂದೀಶ್ ರೆಡ್ಡಿಯ ಸಂಬಂಧಿಕರು ಮತ್ತು ಅನುಯಾಯಿಗಳೆ.

ಸ.ನಂ. 38 ರಲ್ಲಿರುವ 160 ಎಕರೆ 18 ಗುಂಟೆಯ ವಿಶಾಲ ಕೆರೆಯ ಮೊದಲನೇ ಬ್ಲಾಕಿನಲ್ಲಿ 6 ಎಕರೆಯನ್ನು ಶಾಸಕ ನಂದೀಶ್ ರೆಡ್ಡಿಯೇ ನೇರವಾಗಿ ನುಂಗಿದ್ದಾನೆ. ಕೃಷ್ಣಪ್ಪ ಬಿನ್ ಪಾಪಯ್ಯನ ಹೆಸರಿಗೆ ದಾಖಲಾಗಿರುವ 1.20 ಎಕರೆ ಕೆರೆ ಭೂಮಿ ಮತ್ತು ಉಮೇಶ್ ಚಂದ್ರ ಎಂಬಾತನ ಹೆಸರಿಗೆ ನಕಲಿ ದಾಖಲೆಯಾಗಿರುವ 2.20 ಎಕರೆ ಕೆರೆ ಭೂಮಿಗೆ ಶಾಸಕ ನಂದೀಶ್ ರೆಡ್ಡಿಯೇ ಬೇನಾಮಿ ಧಣಿ. ಇದರ ಪಕ್ಕದಲ್ಲೇ ಮತ್ತೆ 3 ಎಕರೆ 8 ಗುಂಟೆ ಕೆರೆ ಭೂಮಿಗೂ ಸೃಷ್ಟಿಸಿದ ನಕಲಿ ದಾಖಲೆ ಸೇರಿದರೆ ನಂದೀಶ್ ರೆಡ್ಡಿ ಒಬ್ಬನೇ 6 ಎಕರೆ ನುಂಗಿದಂತಾಗುತ್ತದೆ.

ಇದಲ್ಲದೆ ಮುನಿಯಮ್ಮ ಎಂಬಾಕೆ ಒತ್ತುವರಿ ಮಾಡಿದ 2 ಎಕರೆ ಮತ್ತು ರವಿಕುಮಾರ್ ಹೆಸರಿಗೆ ನಕಲಿಯಾದ ಮತ್ತೆ 2 ಎಕರೆ ಕೆರೆ ಭೂಮಿಗೂ ನಂದೀಶ್ ರೆಡ್ಡಿಯೇ ಬೇನಾಮಿಯೆಂಬ ಮಾತಿದೆಯಾದರೂ ಇದಕ್ಕೆ ಪಕ್ಕಾ ಪುರಾವೆಗಳಿಲ್ಲ.

ಕೆರೆಯ 2ನೇ ಬ್ಲಾಕಿನಲ್ಲಿ ಶಶಿಕಲಾ ಬಿನ್ ತಿಮ್ಮಾರೆಡ್ಡಿ ಹೆಸರಲ್ಲಿ ಕಬಳಿಸಿದ 3.10 ಎಕರೆ, ನಾರಾಯಣಪ್ಪನ ಹೆಸರಲ್ಲಿ ಆಕ್ರಮಿಸಿದ್ದ 4 ಎಕರೆ ಮತ್ತು ಚಿಕ್ಕಪಿಳ್ಳಾ ರೆಡ್ಡಿಯ ಹೆಸರಿಗೆ ದಾಖಲೆ ಸೃಷ್ಟಿಸಿ ಒತ್ತುವರಿ ಮಾಡಿಕೊಂಡ 3.17 ಎಕರೆ ಕೆರೆ ಭೂಮಿ ಹೆಸರಿಗಷ್ಟೇ ಇವರ ಸೊತ್ತಾದರೂ ಅದರ ಅಸಲೀ ಮಾಲೀಕ ನಂದೀಶ್ ರೆಡ್ಡಿಯೇ. ಏಕೆಂದರೆ ತಿಮ್ಮಾರೆಡ್ಡಿ ಮಗಳು ಶಶಿಕಲಾ, ಚಿಕ್ಕಪಿಳ್ಳಾ ರೆಡ್ಡಿ ಮತ್ತು ನಾರಾಯಣಪ್ಪ ಈ ಮೂವರೂ ಶಾಸಕ ನಂದೀಶ್ ರೆಡ್ಡಿಯ ರಕ್ತ ಸಂಬಂಧಿಗಳು!


ಕೆರೆ ಭೂಮಿಯಲ್ಲಿ ರಾಜನ ಶೆಡ್ಡು



ರಾಜಾಕಾಲುವೆ ಮೇಲೆ ರಾಜನ ಬಂಗಲೆ

...ಚಿಸಿಕೊಂಡ ರಿಯಲ್ ಎಸ್ಟೇಟ್ ದಲ್ಲಾಳಿಯಂಥವನು. ...ನ್ನ ಕೇಳಬೇಕೆ? ಕೆರೆ ಅಂಗಳದಲ್ಲಿ ಕಂಡಕಂಡ ಜಮೀನಿಗೆ ...ಾರ್‍ಯಾರೋ ಬಂದು ಕಾಂಪೌಂಡ್ ಹಾಕುವುದು, ಸಿಕ್ಕಸಿಕ್ಕ ...ಲಿ ಜಾಗಕ್ಕೆ ಬೇಲಿ ಸುತ್ತುವುದು, ಹೊತ್ತುಗೊತ್ತಿಲ್ಲದೆ ...ಡಿಗಳು ನಿಂತು ಕಟ್ಟಡಗಳನ್ನೆಬ್ಬಿಸುವುದು ಕಳೆದೆರಡು ...ರ್ಷಗಳಿಂದ ನಡೆದೇ ಇತ್ತು. ದೊಡ್ಡಗುಬ್ಬಿಕೆರೆಯೆಂದರೆ ಅದು ...ಮೂಲಿಯ ಕೆರೆಯಲ್ಲ. ಸರ್ವೆ ನಂ. 39 ರಲ್ಲಿರುವ ಕೆರೆಯ ...ನಿಧಿಯು 160 ಎಕರೆ 19 ಗುಂಟೆಯ ವಿಶಾಲ ...ಸ್ತಾರವನ್ನು ಹರಡಿಕೊಂಡಿದೆ. ಅದಕ್ಕೆ ಹೊಂದಿಕೊಂಡಂತೆ ...25 ಎಕರೆ ಅಂದರೆ ಹೆಚ್ಚೂಕಮ್ಮಿ 100 ಎಕರೆಯ ಅಗಾಧ ...ೋಮಾಳವಿದೆ. ಪಕ್ಕವೇ ಸ.ನಂ. 49 ರಲ್ಲಿರುವ 3.08 ...ರೆಯ ಸರ್ಕಾರಿ ಗುಂಡುತೋಪು. ಇದಕ್ಕೆ ಹೊಂದಿ ...ಂಡಂತೆ ಸ.ನಂ. 50 ರಲ್ಲಿ 2.10 ಎಕರೆಯ ಗುಂಡುತೋಪಿನ ...ಕ್ಕೊಂದು ಭಾಗವಿದೆ. ಇವೆಲ್ಲವುಗಳ ನಡುವೆಯೇ ಸ.ನಂ. 87 ರಲ್ಲಿ 3.15 ಎಕರೆಯ ಹಿಂದೂ ರುದ್ರಭೂಮಿ ಮತ್ತು ಸ.ನಂ. 120 ರಲ್ಲಿ ಮತ್ತೆ 2.08 ಎಕರೆಯ ಸರ್ಕಾರಿ ಗೋಮಾಳವೆಲ್ಲ ಸೇರಿತೆಂದರೆ ಅದು 302.11 ಎಕರೆಗಳ ವಿಶಾಲ, ಮನೋಹರ ನಿಸರ್ಗ ನಿಧಿ.

ಈ ಪೈಕಿ ಸ.ನಂ. 14 ರ ನೂರೆಕರೆಯ ಗೋಮಾಳ ವಿದೆಯಲ್ಲ ಅದರ 34.11 ಎಕರೆಯ ದೈತ್ಯ ಭೂಭಾಗವೊಂದಕ್ಕೆ ಬೇಲಿ ಸುತ್ತಿಸಿದ್ದು ಇಂಧನ ಸಚಿವೆ ಶೋಭಾ ಕರಂದ್ಲಾಜೆ. ಆದರೆ ದಾಖಲೆಗಳನ್ನು ನೇರವಾಗಿ ತನ್ನ ಹೆಸರಿಗೆ ಸೃಷ್ಟಿಸಿಕೊಂಡು ಫಜೀತಿ ಮಾಡಿಕೊಳ್ಳುವಂಥ ದಡ್ಡಿಯಲ್ಲ ಕರಂದ್ಲಾಜೆ. ಅದಕ್ಕೆಂದೇ ಪುತ್ತೂರಿನಿಂದ ಕರೆತಂದ ತನ್ನ ಬೇನಾಮಿ ವರ್ಗೀಸ್ ಎಂಬಾತನ ಮಗ ಕುಂಬಾಂಡಿ ಎಂಬ ನಿಗೂಢ ವ್ಯಕ್ತಿಯನ್ನು ಶೋಭಾ ಮುಂದಿಟ್ಟು ಕೊಂಡಿದ್ದಾಳೆ. ಈ ಕುಂಬಾಂಡಿ ಬಿನ್ ವರ್ಗೀಸ್ ಮೂಲತಃ ಕೇರಳದ ಕಾಸರಗೋಡಿನ ಮಲೆಯಾಳಿಯಾದರೂ ವ್ಯವಹಾರ ನಿಮಿತ್ತ ಪುತ್ತೂರಿನಲ್ಲಿ ತಳವೂರಿದ್ದಾನೆ. ಶುರುವಿನಲ್ಲಿ ನಾಟಾ ದಂಧೆಯಲ್ಲಿದ್ದು ಕ್ರಮೇಣ ಕರಂದ್ಲಾಜೆಯ ಸಂಬಂಧಿಕರ ವಿಶ್ವಾಸ ಗಳಿಸಿದ ಕುಂಬಾಂಡಿಗೂ ಬಿದರಹಳ್ಳಿ ಹೋಬಳಿಯ ದೊಡ್ಡಗುಬ್ಬಿ ಕೆರೆಗೂ ಎತ್ತಣದಿಂದೆತ್ತ ಸಂಬಂಧ ಎಂದು ಲೆಕ್ಕ ಹಾಕುವುದೇ ಕಷ್ಟ.

ಇದೆಲ್ಲ ಪಕ್ಕಾ ಯೋಜಿಸಿಯೇ ಕರಂದ್ಲಾಜೆ ಕುಂಬಾಂಡಿಯನ್ನು ಮುಂದಿಟ್ಟುಕೊಂಡು ಸ.ನಂ. 14 ರ ಗೋಮಾಳದ 34.11 ಎಕರೆಗೆ P21 ಎಂಬ ಪ್ರತ್ಯೇಕ ಪೋಡು ಸೃಷ್ಟಿಸಿ ಅದಕ್ಕೆ ಕುಂಬಾಂಡಿಯ ಹೆಸರು ಹಾಕಿಸಿದ್ದಾಳೆ. ಹೀಗೆ ದೊಡ್ಡಗುಬ್ಬಿ ಕೆರೆಯ ದೈತ್ಯಭಾಗದ ನೈವೇದ್ಯವನ್ನು ಕರಂದ್ಲಾಜೆಯ ಬಾಯಿಗೆ ಹಾಕಿದ ನಂತರವೇ ಉಳಿಕೆ ನೂರಾರು ಎಕರೆ ಕೆರೆ ಭೂಮಿಯನ್ನು ಕಬಳಿಸಲು ಭೂಕಂಟಕರಿಗೆ ದಾರಿ ಸಲೀಸಾಗಿದೆ. ಹೆಸರಿಗದು ಕುಂಬಾಂಡಿಯ ಒಡೆತನಕ್ಕೆ ಸೇರಿದೆಯಾದರೂ ಅದರ ಅಸಲಿ ಒಡತಿ


ಇದಿಷ್ಟೂ ನಂದೀಶ್ ರೆಡ್ಡಿಯ ಕೆರೆ ಕಬಳಿಕೆಯ ಭೂ ಡಕಾಯಿತಿಯಾದರೆ ಸ್ಥಳೀಯ ಶಾಸಕ ಅರವಿಂದ ಲಿಂಬಾವಳಿ ಸುಮ್ಮನೆ ಕೂತರೆ ಹೇಗೆ? ಕೆರೆ ಕಬಳಿಕೆಯ ವಿಷಯದಲ್ಲಿ ಲಿಂಬಾವಳಿಯದ್ದೂ ಅದ್ಭುತ ಸಾಧನೆಯೇ. ಸರ್ವೆ ನಂಬರ್ 14 ರಲ್ಲಿರುವ 99.25 ಎಕರೆ ಸರ್ಕಾರಿ ಗೋಮಾಳದ ಢಕಾಯಿತಿಯಲ್ಲಿ ಲಿಂಬಾವಳಿ ಒಟ್ಟು 8 ಮಂದಿ ಬೇನಾಮಿಗಳನ್ನು ಬಳಸಿದ್ದಾರೆ. ಎಲ್ಲಿ ತನ್ನ ಹೆಸರಲ್ಲಿ ಪೋಡಿ, ಪಹಣಿಗಳನ್ನು ಸೃಷ್ಟಿಸಿದರೆ ಕೊನೆಗದು ತನಗೇ ಉರುಳಾಗುತ್ತೋ ಎಂದು ಸ.ನಂ. 14 ರ ನೂರೆಕರೆಯ ಗೋಮಾಳದ 20 ಎಕರೆಯನ್ನು ಯಾರ್‍ಯಾರದೋ ಹೆಸರಿಗೆ ದಾಖಲೆ ಸೃಷ್ಟಿಸಲಾಗಿದೆ. ಇಂಥ ಬೇನಾಮಿ ಪೋಡುಗಳ ಪೈಕಿ P21 ರ 5.5 ಎಕರೆ ಸಿ.ಟಿ.ಚೆರಿಯನ್ ಬಿನ್ ಥಾಮಸ್ ಎಂಬ

▶6

ಕೆರೆ ರಕ್ಷಕರ ರಕ್ತಹರಿಸಲು ಹೊಂಚಿ ಕೂತವನು ಕೇಬಲ್ ಶ್ರೀಧರ

ಯಾವತ್ತು ದೊಡ್ಡಗುಬ್ಬಿಯ ರೈತನಾಯಕರು, ಪರಿಸರವಾದಿಗಳೆಲ್ಲ ಸೇರಿ ...ರೆಭೂಮಿಯನ್ನು ರಕ್ಷಿಸಲು ಮುಂದಾದರೋ ಅವರ ಬಾಯಿ ಮುಚ್ಚಿಸಬೇಕೆಂದರೆ ...ಯಂಕರ ಕ್ರಿಮಿನಲ್‌ಗಳೇ ಬೇಕಲ್ಲವೇ?

ಅದಕ್ಕೆಂದು ತಹಶೀಲ್ದಾರ್ ಟಿ.ಎಲ್.ಶಿವಕುಮಾರ್ ಮತ್ತು ...ಾಸಕ ನಂದೀಶ್ ರೆಡ್ಡಿ ಸೇರಿ ಭೂಬಿಟ್ಟಿದ್ದು ಕಾಕ್ಸ್‌ಟೌನಿನ ಹಂತಕ ...ೇಬಲ್ ಶ್ರೀಧರನನ್ನು, ಈತ ಬಿಎಸ್‌ಪಿ ನಾಯಕ ಸತ್ಯವೇಲು ...ೊಲೆಯ ಸೂತ್ರಧಾರ. ತನ್ನ ಕೇಬಲ್ ದಂಧೆಗೆ ಪೂರಕವಾಗಿ ರಕ್ತ ...ರಿಸುತ್ತಲೇ ಬಂದ ಕೇಬಲ್ ಶ್ರೀಧರ ಹೇಳಿಕೇಳಿ ಬಿಜೆಪಿ ರೌಡಿ. ... ಕಾಲದಿಂದಲೂ ಕಲಾಸಿಪಾಳ್ಯ, ಮಣಿಭಾರತಿ, ಕುಟ್ಟಿ-ರಾಜ, ...ಡಳ್, ಪಳನಿ ಸಗಾಯಂ, ಚಾಮರಾಜ ಮುಂತಾದ ತಮಿಳು ...ಹಂತಕರನ್ನು ಸಾಕಿಕೊಂಡೇ ಬಂದ ಕೇಬಲ್ ಶ್ರೀಧರ ಕಳೆದ ...ಸಭಾ ಚುನಾವಣೆಯಲ್ಲಿ ಪುಲಿಕೇಶಿನಗರಕ್ಕೆ ಬಿಜೆಪಿ ಅಭ್ಯರ್ಥಿಯಾಗಬೇಕಿತ್ತು. ಸುದೈವವಶಾತ್ ಟಿಕೆಟ್ ತಪ್ಪಿತು. ಅದೇ ಹೊತ್ತಿಗೆ ಬಿಜೆಪಿ ಪರವಹಿಸಿ ಲೋಕಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸಾಂಗ್ಲಿಯಾನರ ಚುನಾವಣಾ ಕಚೇರಿಗೆ ಬೆಂಕಿಹಚ್ಚಿದ್ದ.



ಇಂಥವನನ್ನು ಕರೆತಂದು ದೊಡ್ಡಗುಬ್ಬಿಕೆರೆಯ ಐದೆಕರೆಗೆ ನಕಲಿ ದಾಖಲೆ ಸೃಷ್ಟಿಸಿಕೊಟ್ಟವನು ನೆಲಕಂಟಕ ಕುಳ್ಳಾ ರಮೇಶ!

ತಮ್ಮೂರಿನ ಕೆರೆಯನ್ನು ಕಾಪಾಡಲೆಂದು ನಿಂತವರ ಪೈಕಿ ಪ್ರಮುಖರಾಗಿದ್ದದ್ದು ರೈತನಾಯಕ ಅಚ್ಚಪ್ಪ ಮತ್ತು ಕೆ.ನಾಗರಾಜ್. ಇವರೊಂದಿಗೆ ಪರಿಸರವಾದಿ ಕೋಟೆ ಮಂಜುನಾಥ್ ಕೂಡ ಕೆರೆ ರಕ್ಷಣೆಗೆ ನಿಂತದ್ದು ಬಿಜೆಪಿ ನೆಲಕಂಟಕರ ಪಾಲಿಗೆ ದೊಡ್ಡ ತಲೆನೋವಾಯಿತು. ಈಗ ನೇರವಾಗಿ ಕೇಬಲ್ ಶ್ರೀಧರನೇ ಈ ರೈತನಾಯಕರನ್ನು ಮುಗಿಸಲು ನಿಂತಿದ್ದಾನೆ. ಈತನ ಜೊತೆ ಕೆರೆ ರಕ್ಷಕರನ್ನು ಮುಗಿಸಲು ನಿಂತ ಇನ್ನಿಬ್ಬರು ರೌಡಿಗಳೆಂದರೆ ಲಿಂಗರಾಜಪುರದ ಆಯಿಲ್‌ಮಿಲ್ ರಸ್ತೆಯ ಹಳೇ ಕ್ರಿಮಿನಲ್‌ಗಳಾದ ಪಳನಿ ಮತ್ತು ಮುರುಗನ್. ಹೀಗೆ ಎರಡು ಡಜನ್ ರೌಡಿಗಳೆಲ್ಲ ಕುಳ್ಳಾ ರಮೇಶ ಮತ್ತು ಪೆಟ್ರೋಲ್ ರಾಜರ ಇನ್ನೋವಾ ಕಾರುಗಳಲ್ಲಿ ರೌಂಡಿಂಗ್‌ಗೆ ಇಳಿದಿದ್ದಾರೆ. ಅಚ್ಚಪ್ಪನ ಪತ್ನಿಯನ್ನು ನಡುರಸ್ತೆಯಲ್ಲೇ ಅಡ್ಡಗಟ್ಟಿ ಕೊಲೆ ಬೆದರಿಕೆ ಹಾಕಿದ್ದಾರೆ. ಅಚ್ಚಪ್ಪ, ನಾಗರಾಜ ಮತ್ತು ಕೋಟೆ ಮಂಜುನಾಥ್ ಯಾರೇ ಸಿಕ್ಕರೂ ಕತ್ತರಿಸಲು ಹೊಂಚುಹಾಕುತ್ತಿದ್ದಾರೆ.



ಪೊಲೀಸ್ ಕಮೀಷನರ್ ಮಿರ್ಜಿ ಸಾಹೇಬರಿಗೆ ಈಗಾಗಲೇ ಪ್ರಾಣರಕ್ಷಣೆ ಕೋರಿ ಮನವಿಗಳ ಮೇಲೆ ಮನವಿ ಕೊಟ್ಟ ಈ ಕೆರೆ ರಕ್ಷಕರ ಜೊತೆ ಬೆಂಗಳೂರಿನ ಪ್ರಜ್ಞಾವಂತರೆಲ್ಲರೂ ಕೈಗೂಡಿಸ ಬೇಕಿದೆ. ✤

ಪೋಲೀಸ್ ಅಂಡರ್‌ವಲ್ಡ್!


▶ 4

ಚುರುಕು. ಮುನೀರ್‌ನಂಥ ಅಪರಾಧ ಹಿನ್ನೆಲೆಯವರನ್ನು ಸುಮ್ಮನೆ ತನ್ನಪಾಡಿಗೆ ತಾನಿರಲು ಬಿಟ್ಟುಬಿಡುವಷ್ಟು ದಡ್ಡರೇನಲ್ಲ. ಹೀಗಾಗಿ ಮುನೀರ್‌ನ ಕೌಶಲ್ಯ ಹಾಗೂ ಪ್ರತಿಭೆಗಳನ್ನು 'ಸದುಪಯೋಗ' ಪಡಿಸಿಕೊಳ್ಳಲೆಂದು ಒಂದು ಸ್ಕೆಚ್ ಹಾಕಿ ಆತನನ್ನು ಠಾಣೆಗೆ ಕರೆಸಿದರು. ಬಂದರು ಪ್ರದೇಶದಲ್ಲಿ ನಡೆಯುವ ಅಕ್ರಮ, ಅನೈತಿಕ ದಂಧೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ತನಗೆ ಮಾಹಿತಿ ನೀಡಬೇಕೆಂದು ತಾಕೀತು ಮಾಡಿದರು. ತನ್ನ ಹೆಂಡತಿಮಕ್ಕಳನ್ನು ನೆನಪಿಸಿಕೊಂಡ ಮುನೀರ್ ತನ್ನಪಾಡಿಗೆ ತನ್ನನ್ನು ಬಿಟ್ಟುಬಿಡಿ ಎಂದು ಕೈಮುಗಿದು ಬೇಡಿಕೊಂಡದ್ದು ವ್ಯರ್ಥವಾಯಿತು. ಸಮಾಜಘಾತುಕರ ಬಗ್ಗೆ ಮಾಹಿತಿ ಒದಗಿಸುವುದು ಸಮಾಜಸೇವೆಯೇ ಆಗುತ್ತದೆಂದು ಮನಮುಟ್ಟುವಂತೆ ವಿವರಣೆ ನೀಡಿದ ಸಾಹೇಬರು ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಅಭಯ ನೀಡಿದರು. ಆದರೂ ಒಪ್ಪದಿದ್ದ ಮುನೀರ್ ಮೇಲೆ ಮತ್ತೆ ಕೇಸುಗಳನ್ನು ಜಡಿದು ಒಳಗೆ ತಳ್ಳುತ್ತೇನೆ ಎಂದ ಗಾಂವ್‌ಕರ್ ಮಾತನ್ನು ಕೇಳಿ ಒಮ್ಮೆಲೆ ಬೆವತುಹೋದ. ತನ್ನ ಪ್ರಯತ್ನ ಫಲಿಸಿತೆಂದು ಖುಶಿಯಾದ ಸಾಹೇಬರು ಮುನೀರ್ ಅಲಿಯಾಸ್ ಇನ್‌ಫಾರ್ಮರ್ ಮುನೀರ್ ಕೈಗೆ 9663553531 ನಂಬರಿನ ಏರ್‌ಟೆಲ್ ಸಿಮ್‌ಕಾರ್ಡನ್ನು ಕೊಟ್ಟು ಆ ನಂಬರ್‌ನ ಮೂಲಕ ತಮಗೆ ಮಾಹಿತಿ ಒದಗಿಸುವಂತೆ ಫರ್ಮಾನು ಹೊರಡಿಸಿದರು.

ಲೋಕಾಯುಕ್ತರ ದೂರಿನಲ್ಲಿ ನಮೂದಾಗಿರುವಂತೆ ಮುನೀರ್ ಮೊದಲಿಗೆ ಚಿನ್ನದ ಬಿಸ್ಕೆಟ್ ಕಳ್ಳಸಾಗಣೆದಾರರನ್ನು ಹಿಡಿದುಕೊಟ್ಟ. ನಂತರ ಗಾಂಜಾ ಕಳ್ಳಸಾಗಣೆ, ಅಕ್ರಮ ಮದ್ಯ ಸಾಗಾಣಿಕೆ, ಪೆಟ್ರೋಲ್ ಕಲಬೆರಕೆ ಇತ್ಯಾದಿಗಳ ಮಾಹಿತಿ ಒದಗಿಸಿದ. ಪರವಾನಗಿ ಇಲ್ಲದೆ ಗನ್ ಹೊಂದಿದ್ದ ವ್ಯಕ್ತಿಯ ಬಗ್ಗೆಯೂ ಇನ್‌ಫರ್ಮೇಷನ್ ಕೊಟ್ಟ. ಆದರೆ ದಕ್ಷ ಅಧಿಕಾರಿ ಎಂಬ ಅಪಪ್ರಚಾರಕ್ಕೆ ತುತ್ತಾಗಿರುವ ಇನ್‌ಸ್ಪೆಕ್ಟರ್ ಗಾಂವ್‌ಕರ್ ಈ ಯಾವೊಂದು ಪ್ರಕರಣವನ್ನೂ ದಾಖಲಿಸಲಿಲ್ಲ, ಬದಲಿಗೆ ಆರೋಪಿತರಿಂದ ಮಾಮೂಲಿ ನಿಗದಿಪಡಿಸಿಕೊಂಡು ತಮ್ಮ ಕಾಯಕವನ್ನು ನಿರಾತಂಕವಾಗಿ ಮುಂದುವರೆಸಲು ಕಳಿಸಿಕೊಟ್ಟರು.

ಈ ಇನ್‌ಫಾರ್ಮರ್ ಮುನೀರ್ ಸಾಬ್ ಒಂಥರಾ ಜಾತ್ಯತೀತವಾದಿ ಅನಿಸುತ್ತೆ. ಯಾಕೆಂದರೆ ಆತ ಜುಮ್ಮಾ ಮಸೀದಿಯಲ್ಲಿ ಅಕ್ರಮವಾಗಿ ಮಚ್ಚು ಲಾಂಗುಗಳನ್ನು ಇಟ್ಟಿರುವ ಬಗ್ಗೆಯೂ ಪೊಲೀಸರಿಗೆ ತಿಳಿಸಿ ತನ್ನ ಸಮುದಾಯದ ಕೆಲವರ ವಿರೋಧ ಕಟ್ಟಿಕೊಂಡ. ಆದರೆ ಗಾಂವ್‌ಕರ್ ಸಾಹೇಬರದು ಒಂಥರಾ ಉದಾರೀಕರಣ ನೀತಿ. 'ಎಲ್ಲರೂ ಮಾಡುವುದು ಹೊಟ್ಟೆಗಾಗಿ' ಎಂಬ ತತ್ವದಲ್ಲಿ ಅವರಿಗೆ ಅಚಲ ವಿಶ್ವಾಸ ಅಂತ ಕಾಣುತ್ತೆ. ಆದ್ದರಿಂದ ಮಸೀದಿಗಳಿಂದ ತಿಂಗಳಿಗೆ ಒಂದು ಲಕ್ಷ ಮಾಮೂಲಿ ಪಡೆದುಕೊಂಡರೇ ಹೊರತು ಕೇಸು ಹಾಕಿ ಕರ್ಮಕಟ್ಟಿಕೊಳ್ಳುವ ಪಾಪ ಮಾಡಲಿಲ್ಲ. ಹೀಗೆ ನಾನಾ ಪುಣ್ಯದ ಕಾರ್ಯಗಳಲ್ಲಿ ತೊಡಗಿದ ಸಾಹೇಬರಿಗೆ ಮುನೀರ್ ವಸೂಲಿ ಮಾಡಿಕೊಟ್ಟ ಮೊತ್ತ ಬರೋಬ್ಬರಿ 38 ಲಕ್ಷವಂತೆ! ಅಂಡರ್‌ವಲ್ಡ್ ನಲ್ಲಿ ಇಂಥಾ ವಸೂಲಿಗೆ 'ಹಫ್ತಾ' ಎನ್ನುತ್ತಾರೆ. ಆದರೆ ಪೊಲೀಸರ ವಸೂಲಿಯಾದರೆ ಅದನ್ನು 'ಮಾಮೂಲು' ಎನ್ನುತ್ತಾರೆ. ಬೇರೆ ಏನಾದರೂ ವ್ಯತ್ಯಾಸಗಳಿದ್ದರೆ ಅದನ್ನು ಕಾನೂನು ಪಂಡಿತರೇ ಹೇಳಬೇಕು.

ಹೀಗಿರುವಾಗ ರೈಟರ್ ಬಾಲಕೃಷ್ಣ ಮುನೀರ್‌ನ ತಮ್ಮ ರಹೀಮನನ್ನು ಪುಸಲಾಯಿಸಿ ಗಾಂಜಾ ಮಾರಾಟಕ್ಕೆ ಹಚ್ಚಿದ. ಗಾಂಜಾ ಗಿರಾಕಿಗಳು ಮಧ್ಯರಾತ್ರಿಯಲ್ಲೂ ಬಾಗಿಲು ತಟ್ಟಲು ಶುರು ಮಾಡಿದರು. ಈ ವಿಷಯವನ್ನು ತನ್ನ ಹೆಂಡತಿಯಿಂದ ತಿಳಿದುಕೊಂಡ ಮುನೀರ್ ಈ ದಂಧೆ ನಿಲ್ಲಿಸುವಂತೆ ತಮ್ಮನಿಗೆ ಬುದ್ಧಿ ಹೇಳಿದ. ಪ್ರಯೋಜನವಾಗಲಿಲ್ಲ. ಕೊನೆಗೆ ಈ ದಂಧೆ ತಡೆಗಟ್ಟುವಂತೆ ಗಾಂವ್‌ಕರ್ ಸಾಹೇಬರನ್ನು ಒತ್ತಾಯಿಸಿದ. ಉದಾರನೀತಿಯ ಸಾಹೇಬರು "ಅವನೂ ನಾಲ್ಕು ಕಾಸು ಮಾಡಿಕೊಳ್ಳಲಿ ಬಿಡು" ಎಂದರು. ಆದರೂ ಪಟ್ಟುಬಿಡದ ಮುನೀರ್ ಸಾಹೇಬರೊಂದಿಗೆ ಮುನಿಸಿಕೊಂಡ. ವಿಧಿಯಿಲ್ಲದೆ ಸಾಹೇಬರು 'ನಿನ್ನ ಅಣ್ಣನ ಒತ್ತಾಯಕ್ಕಾಗಿ ನಿನ್ನನ್ನು ಅರೆಸ್ಟ್ ಮಾಡುತ್ತಿದ್ದೇವೆ' ಎಂದು ತಿಳಿಸಿಯೇ ತಮ್ಮನನ್ನು ದಸ್ತಗಿರಿ ಮಾಡಿದರು. ತಮ್ಮನನ್ನು ಅರೆಸ್ಟ್ ಮಾಡಿಸಲು ಮುನೀರ್‌ನ ಪತ್ನಿಯೇ ಕಾರಣವೆಂದು ತಿಳಿದ ಕುಟುಂಬದವರು ಆಕೆಯನ್ನು ನಿಂದಿಸಿದರು. ಇದರಿಂದ ಬೇಸತ್ತ ಆಕೆ ತಾರೀಖು 24-06-2011 ರಂದು ಬಾವಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದಳು. ಅದೃಷ್ಟವಶಾತ್ ನೆರೆಹೊರೆಯವರು ಆಕೆಯನ್ನು ಮೇಲೆತ್ತಿ ಜೀವದಾನ ಮಾಡಿದರು. ಆದರೆ ಕುಟುಂಬದವರು ಮುನೀರ್ ಮತ್ತು ಹೆಂಡತಿ ಮಕ್ಕಳನ್ನು ಮನೆಯಿಂದ ಹೊರಹಾಕಿದರು.


ಸೀಮಂತಕುಮಾರ್

ಅಲ್ಲಿಯವರೆಗೆ ಗಾಂವ್‌ಕರ್ ಸಾಹೇಬರಿಗೆ ನಿಷ್ಠನಾಗಿದ್ದುಕೊಂಡು, ಅವರಿಗೆ ಸಲ್ಲಬೇಕಾದ ಕಪ್ಪ ಕಾಣಿಕೆಗಳನ್ನು ವಸೂಲಿ ಮಾಡಿಕೊಡುತ್ತಿದ್ದ ಮುನೀರ್ ಈ ಪ್ರಕರಣದ ನಂತರ ಇನ್‌ಸ್ಪೆಕ್ಟರ್ ಗಾಂವ್‌ಕರ್‌ರೊಂದಿಗೆ ಸಂಬಂಧ ಮುರಿದುಕೊಳ್ಳಲು ತೀರ್ಮಾನಿಸಿದ. ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ, ಅದಕ್ಕಾಗಿ ಮೇಲಧಿಕಾರಿಯಾದ ಎ.ಸಿ.ಪಿ ರವೀಂದ್ರ ಗಡದಿ ಯವರನ್ನು ಸಂಪರ್ಕಿಸಿ ತನಗಾದ 'ಅನ್ಯಾಯ'ವನ್ನು ತೋಡಿಕೊಂಡ. ಎಸಿಪಿ ಗಡದಿಯವರ ಸೂಚನೆಯಂತೆ ನೇರವಾಗಿ ಅವರಿಗೆ ಮಾಹಿತಿ ಒದಗಿಸಲು ಪ್ರಾರಂಭಿಸಿದ. ಈತನ ಮಾಹಿತಿಯ ಮೇರೆಗೆ ಒಂದು ಸುಪಾರಿ ಕೊಲೆ ಪ್ರಕರಣ ಮತ್ತು ಕೆಲವು ಗಾಂಜಾ ಪ್ರಕರಣಗಳನ್ನು ದಾಖಲಿಸಿದ ಗಡದಿಯವರು ಸೂಕ್ತ ಕಾನೂನು ಕ್ರಮಕ್ಕೆ ಮುಂದಾದರು.

ಇದರಿಂದ ಗಾಂವ್‌ಕರ್ ಅವರ ಆದಾಯಕ್ಕೆ ನೇರವಾಗಿ ಹೊಡೆತ ಬಿತ್ತು. ಗಾಂವ್‌ಕರ್ ಕೆರಳಿ ಕೆಂಡವಾದರು. ಸೂಕ್ತ ಸಮಯದಲ್ಲಿ ಮುನೀರ್‌ನಿಗೆ ಪಾಠ ಕಲಿಸಲು ತೀರ್ಮಾನಿಸಿದರು. ಎಸಿಪಿ ಗಡದಿಯವರು ರಜೆಯಲ್ಲಿದ್ದ ಸಮಯ ನೋಡಿ 09-11-2011 ರಂದು ಮಧ್ಯಾಹ್ನ ಸುಮಾರು 12 ಗಂಟೆಯ ವೇಳೆಗೆ 8 ಮಂದಿ ಪೊಲೀಸರ ಪಡೆಯೊಂದು ಮುನೀರ್ ಪ್ರತ್ಯೇಕವಾಗಿ ವಾಸಿಸುತ್ತಿದ್ದ ಮನೆಗೆ ನುಗ್ಗಿ ಮುನೀರ್‌ನನ್ನು ಎಳೆದು ತಂದು ಗಾಂವ್‌ಕರ್ ಸಾಹೇಬರ ಎದುರು ನಿಲ್ಲಿಸಿದರು. ಸಾಹೇಬರು ತನ್ನ ಮಾಜಿ ಸೇವಕನಿಗೆ ಬಹುವಿಧದಲ್ಲಿ 'ಹಿತವಚನ' ಹೇಳಿದರು. "ನೋಡಪ್ಪಾ, ಗಡದಿ ಸಾರ್ ಒಬ್ಬ ಎಸ್‌ಸಿ ಕ್ಯಾಂಡಿಡೇಟು, ಅವರಿಗೆ ಹೆದರಬೇಕಾಗಿಲ್ಲ, ಕಮಿಷನರ್ ನನ್ನ ಜೊತೆ ಇದ್ದಾರೆ" ಎಂದು ಹೇಳಿದ ಗಾಂವ್‌ಕರ್ ಸೀದಾ ಕಮಿಷನರ್ ಸೀಮಂತಕುಮಾರ್ ಬಳಿಗೇ ಮುನೀರ್‌ನನ್ನು ಕರೆದೊಯ್ದರು. ಕಮಿಷನರ್ ನೀಡಿದ ತೀರ್ಪನ್ನು ಮುನೀರ್ ಮಾತುಗಳಲ್ಲೆ ಕೇಳಿ: "ನೋಡಿ ಮುನೀರ್, ನೀನು ಎಸಿಪಿಯವರ ಮಾತು ಕೇಳಬೇಡ, ಅವರು ಇವತ್ತು ಇರುತ್ತಾರೆ ನಾಳೆ ಹೋಗುತ್ತಾರೆ, ಆದರೆ ಶಾಶ್ವತವಾಗಿ ಇರುವವರು ಗಾಂವ್‌ಕರ್, ಆದ್ದರಿಂದ ನೀನು ಅವರ ಮಾತು ಕೇಳು" ಎಂಬ ನೀತಿ ಪಾಠ ಬೋಧಿಸಿದರು. ಬುದ್ಧಿವಂತರ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆ ಎಂಥ ದುಸ್ಥಿತಿಗೆ ತಲುಪಿದೆ ನೋಡಿ!

ಕಮಿಷನರ್ ಸಾಹೇಬರಿಂದ ಗ್ರೀನ್‌ಸಿಗ್ನಲ್ ಪಡೆದುಕೊಂಡ ಗಾಂವ್‌ಕರ್ ಎಸಿಪಿ ವಿರುದ್ಧ ಸುಳ್ಳು ಹೇಳಿಕೆ ನೀಡುವಂತೆ ಒತ್ತಾಯಿಸಿದರು. ನಿರಾಕರಿಸಿದ ಮುನೀರ್ ಮೇಲೆ ಮುಗಿಬಿದ್ದ ಪೊಲೀಸರು ಲಾಠಿಯಿಂದ ಮನಬಂದಂತೆ ಥಳಿಸಿದರು. ಆಗಲೂ ಒಪ್ಪದಿದ್ದಾಗ ಕಬ್ಬಿಣದ ಕುರ್ಚಿಯೊಂದರ ಮೇಲೆ ಕೂರಿಸಿ ಕೈಗಳನ್ನು ಕಟ್ಟಿ ಹಾಕಿ ಕರೆಂಟ್ ಶಾಕ್ ನೀಡಿ ಚಿತ್ರಹಿಂಸೆ ನೀಡಿದರು. ಈ ಹಿಂಸೆಯಿಂದ ತತ್ತರಿಸಿಹೋದ ಮುನೀರ್ 'ಎಸಿಪಿ ಯವರಿಗೆ ಕೆಲವು ಮಾಹಿತಿ ನೀಡಿದ್ದೆ, ಆದರೆ ಅವರು ಲಂಚ ಪಡೆದುಕೊಂಡು ಪ್ರಕರಣ ದಾಖಲಿಸದೆ ಹಾಗೆ ಬಿಟ್ಟುಬಿಟ್ಟಿದ್ದಾರೆ' ಎಂಬ ಸುಳ್ಳು ಹೇಳಿಕೆ ನೀಡಿದ. ಈ ಹೇಳಿಕೆಯನ್ನು ವಿಡಿಯೋ ಕ್ಯಾಮರಾ ಮತ್ತು ಮೊಬೈಲ್‌ಗಳಲ್ಲಿ ರೆಕಾರ್ಡ್ ಮಾಡಿಕೊಂಡ ಗಾಂವ್‌ಕರ್ ತಾವು ಹೇಳಿದಂತೆ ಕೇಳದೆ ಹೋದರೆ ನಿನಗೊಂದು ಗತಿ ಕಾಣಿಸುತ್ತೇವೆಂಬ ಎಚ್ಚರಿಕೆ ನೀಡಿ ಹೊರದಬ್ಬಿದರು. ಅಲ್ಲಿಂದ ತಮ್ಮ ಪತ್ನಿಯೊಂದಿಗೆ ಸೀದಾ ವೆನ್‌ಲಾಕ್ ಆಸ್ಪತ್ರೆಗೆ ಹೋದ ಮುನೀರ್ ಚಿಕಿತ್ಸೆ ಪಡೆದುಕೊಂಡ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಮಾನವ ಹಕ್ಕು ಆಯೋಗ ಮತ್ತು ಲೋಕಾಯುಕ್ತರಿಗೆ ನೀಡಿದ್ದಾರೆ.

ಇದು ಇಲ್ಲಿಗೆ ಮುಗಿಯಿತೆಂದುಕೊಳ್ಳಬೇಡಿ. ಅದೇ ದಿನ ರಾತ್ರಿ ಸುಮಾರು 8.00 ಗಂಟೆಯ ವೇಳೆಗೆ ಮತ್ತೆ ಮನೆಗೆ ನುಗ್ಗಿದ ರಾಜೇಶ್, ಜಯಂತ್ ಸೇರಿದಂತೆ ನಾಲ್ಕು ಜನ ಪೊಲೀಸರ ತಂಡ 17,000 ರೂಪಾಯಿ ಹಣ, ಓಲೆ, ಉಂಗುರ ಮತ್ತಿತರ ಒಡವೆಗಳನ್ನು ಕಸಿದುಕೊಂಡು ಮತ್ತೊಮ್ಮೆ ಫೈನಲ್ ವಾರ್ನಿಂಗ್ ಕೊಟ್ಟು ಹೋಗಿದ್ದಾರಂತೆ.

ಈ ಪ್ರಕರಣದ ವಿವರಗಳು ಯಾವ ಅಂಡರ್‌ವಲ್ಡ್ ಕತೆಗಿಂತಲೂ ಕಡಿಮೆ ಇಲ್ಲವಾದ್ದರಿಂದ ಇದನ್ನು "ಮಂಗಳೂರು ಪೊಲೀಸ್ ಅಂಡರ್‌ವಲ್ಡ್" ಎಂದು ಧಾರಾಳವಾಗಿ ಕರೆಯಬಹುದು. ಈ ಲೋಕದ ದೊರೆಯಂತಿರುವ ಗಾಂವ್‌ಕರ್ ಮಾಹಿತಿದಾರ ಮುನೀರ್‌ಗೆ "ಯಾವುದೇ ಕಾರಣಕ್ಕೂ ಎಸಿಪಿ ಗಡದಿಯವರಿಗೆ ಮಾಹಿತಿ ಕೊಡಬಾರದು, ಮತ್ತು ಎಂದಿನಂತೆ ಮಾಮೂಲು ವಸೂಲಿ ಮಾಡಿಕೊಡಬೇಕು, ತಪ್ಪಿದಲ್ಲಿ ಎನ್‌ಕೌಂಟರ್ ಮಾಡಿ ಸಾಯಿಸುತ್ತೇನೆ ಅಥವಾ ಬೇರೆ ರೌಡಿಗಳಿಂದ ಕೊಲೆ ಮಾಡಿಸುತ್ತೇನೆ" ಎಂದು ನೇರ ಕೊಲೆ ಬೆದರಿಕೆ ಹಾಕಿದ್ದಾರೆಂದರೆ ಪರಿಸ್ಥಿತಿಯ ತೀವ್ರತೆ ಯಾರಿಗಾದರೂ ಅರಿವಾಗುತ್ತದೆ. ಪ್ರಾಣ ಬೆದರಿಕೆಯಿಂದ ತತ್ತರಿಸಿರುವ ಮುನೀರ್ ಮತ್ತು ಆತನ ಹೆಂಡತಿ ಮಕ್ಕಳು ತಮಗೆ ರಕ್ಷಣೆ ಒದಗಿಸುವಂತೆ ಕೋರಿ ಆಯೋಗ, ಕೋರ್ಟು, ಕಚೇರಿಗಳಿಗೆ ಮೊರೆಯಿಡುತ್ತಿದ್ದಾರೆ. ಮುನೀರ್‌ನಿಂದ ಇದನ್ನೆಲ್ಲಾ ನಿರೀಕ್ಷಿಸಿರದಿದ್ದ ಗಾಂವ್‌ಕರ್ 9480805338 ನಂಬರಿನಿಂದ ಮುನೀರ್‌ಗೆ ಕರೆ ಮಾಡಿ ಮನವೊಲಿಸುವ ಮಾತಾಡಿದ್ದಾರಂತೆ, ಎರಡು ಲಕ್ಷಗಳ ಆಮಿಷವನ್ನೂ ಒಡ್ಡಿದ್ದಾರಂತೆ. ಆದರೆ ಮುನೀರ್ ಮತ್ತೊಮ್ಮೆ ಗಾಂವ್‌ಕರ್‌ನ ಮಾತನ್ನು ನಂಬುವ ಸ್ಥಿತಿಯಲ್ಲಿಲ್ಲ.

ಈ ಇಡೀ ಪ್ರಕರಣದಲ್ಲಿ ಎಲ್ಲರಿಗಿಂತ ಹೆಚ್ಚು ತೊಂದರೆಗೆ ಸಿಲುಕಿರುವುದು ಅಪರಾಧ ಹಿನ್ನೆಲೆಯ ವ್ಯಕ್ತಿಯನ್ನು ಕೈಹಿಡಿದ ಷಫೀಕಾ ಎಂಬ ಮಹಿಳೆ ಮತ್ತು ಏನೂ ಅರಿಯದ ಆಕೆಯ ಎರಡು ಕಂದಮ್ಮಗಳು! ಮಾನವ ಹಕ್ಕು ಆಯೋಗ ಮತ್ತು ಲೋಕಾಯುಕ್ತ ಸಂಸ್ಥೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರನ್ನು ಶೀಘ್ರವಾಗಿ ಶಿಕ್ಷಿಸಲಿ ಎಂದು ಆಶಿಸೋಣ. ಇಲ್ಲವಾದರೆ......?

ಕಾನೂನು ಕಟ್ಟಳೆಗಳನ್ನು ಹೊಂದಿರುವ 'ಅತಿ ದೊಡ್ಡ ಪ್ರಜಾಪ್ರಭುತ್ವ' ಎಂದು ಹೆಸರಾಗಿರುವ ಈ ನೆಲದ ಕಾನೂನನ್ನು ಕಾಪಾಡುವವರಾರು? ❖

ದೊಡ್ಡಗುಬ್ಬಿಕೆರೆ ಸ್ವಾಹಾ

▶5

ಕೇರಳ ಕುಟ್ಟಿಯ ಹೆಸರಿನಲ್ಲಿದೆ. P26 ರ 3.1 ಎಕರೆ ಮತ್ತು 2 ಎಕರೆ ಮುನಿನಾಗಾರೆಡ್ಡಿ ಬಿನ್ ಮುನಿಸ್ವಾಮಪ್ಪ, P26 ರ ಮತ್ತೊಂದು 2 ಎಕರೆಯ ತುಂಡು ಪಾಪಯ್ಯರೆಡ್ಡಿಯ ಮಗ ಕೆ.ಪಿ. ಮೂರ್ತಿ, P28 ರ ಮೂರೆಕರೆಗೆ ಕೆ.ಸಿ. ಈರಪ್ಪ ರೆಡ್ಡಿ, P 12 ರ 2.16 ಎಕರೆಗೆ ಮುನಿವೆಂಕಟಪ್ಪ, P13 ರ ಒಂದೆಕರೆಗೆ ಮುನಿಯಪ್ಪ ರೆಡ್ಡಿಯ ಮಗ ಮುನಿಸ್ವಾಮಿ ರೆಡ್ಡಿ, P9 ರ 2 ಎಕರೆಗೆ ರಾಮಚಂದ್ರನ ಪತ್ನಿ ಭಾರ್ಗವಿದೇವಿ; ಹೀಗೆ ಇಡೀ 20 ಎಕರೆಯ ಕೆರೆ ಗೋಮಾಳದ ಕೊಳ್ಳೆಯ ಭಾಗವನ್ನು ಲಿಂಬಾವಳಿ ಯಾರ್‍ಯಾರೋ ಅನಾಮಿಕರ ಹೆಸರಿಗೆ ಪೋಡು ಮಾಡಿ ಆಕ್ರಮಿಸಿದ್ದಾರೆ.

ತನ್ನದೇ ಕ್ಷೇತ್ರದ ವ್ಯಾಪ್ತಿಯ ವಿಶಾಲ ದೊಡ್ಡಗುಬ್ಬಿಕೆರೆಯನ್ನು ರಕ್ಷಿಸುವಲ್ಲಿ ಕನಿಷ್ಠ ಕಾಳಜಿ ಮತ್ತು ಯಾವುದೇ ಹೊಣೆಗಾರಿಕೆಯನ್ನು ತೋರದ ಲಿಂಬಾವಳಿಯ ಎಮ್ಮೆಲ್ಲೆಗಿರಿ ಇಲ್ಲಿ ಬಳಕೆಯಾಗುತ್ತಿರುವುದು ಸುಂದರಕೆರೆಯನ್ನು ಕಬಳಿಸುವಲ್ಲಿ ಮಾತ್ರ.


ಇಂಧನ ಸಚಿವೆ ಕರಂದ್ಲಾಜೆ, ಮಾಜಿ ಮಂತ್ರಿ ಮತ್ತು ಹಾಲಿ ಮಹದೇವಪುರದ ಶಾಸಕ ಲಿಂಬಾವಳಿ ಮತ್ತು ಕೆ.ಆರ್. ಪುರದ ಶಾಸಕ ನಂದೀಶ್ ರೆಡ್ಡಿಯಂಥ ಬಿಜೆಪಿ ಸರ್ಕಾರದ ಆಧಾರ ಸ್ತಂಭಗಳೇ ಕೆರೆಯನ್ನು ಒಂದೊಂದು ತುಂಡು ಮಾಡಿ ಆಕ್ರಮಿಸಿದ ಮೇಲೆ ಇನ್ನು ಈ ಭಾಗದ ನೆಲಗಳ್ಳರು, ರೌಡಿಗಳು, ಪುಢಾರಿಗಳು ಕೈಕಟ್ಟಿ ಕೂರುವುದುಂಟಾ?

ಇನ್ನೂ ಹೇಳಬೇಕೆಂದರೆ ಇಂಥ ಘಟಾನುಘಟಿಗಳನ್ನು ಮುಂದಿಟ್ಟುಕೊಂಡು ಕೆರೆ ನುಂಗಲು ಹವಣಿಸುತ್ತಿರುವ ಕಾಣದ ಕೈಗಳಿವೆಯಲ್ಲ, ಅವೇನು ಸಾಮಾನ್ಯದವುಗಳಲ್ಲ. ಇಂಥ ಭೂಕಂಟಕರ ನಾಯಕರಂತಿರುವುದು ಡಿ.ಪಿ. ರಾಜಶೇಖರ ಅಲಿಯಾಸ್ ಪೆಟ್ರೋಲ್ ರಾಜ ಬಿನ್ ಪಟೇಲಪ್ಪ ಎಂಬ ಹಳೇ ಕೇಡಿ ಮತ್ತು ಎಂ. ರಮೇಶ ಅಲಿಯಾಸ್ ಕುಳ್ಳಾ ರಮೇಶ ಬಿನ್ ಲೇಟ್ ಮುನಿಯಪ್ಪ, ಪೆಟ್ರೋಲ್ ರಾಜ ಉರ್ಫ್ ಡಿ.ಪಿ. ರಾಜಶೇಖರ ಹಿಂದೆ ಪೆಟ್ರೋಲ್ ಕಲಬೆರಕೆ ದಂಧೆಯಲ್ಲಿದ್ದ. ಭಾರತಿನಗರ ಪೊಲೀಸ್ ಠಾಣೆಯಲ್ಲಿ ಈತನ ವಿರುದ್ಧ ಕಾರುಗಳ್ಳತನ, ಆಯಿಲ್ ಕಲಬೆರಕೆ ಇತ್ಯಾದಿ ಕ್ರಿಮಿನಲ್ ಕೇಸುಗಳಿವೆ. ಕುಳ್ಳಾ ರಮೇಶ ವರಸೆಯಲ್ಲಿ ಈತನಿಗೆ ತಮ್ಮನಾಗಬೇಕು. ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳು.


ತಹಶೀಲ್ದಾರ್ ಶಿವಕುಮಾರ್

ಯಾವುದೋ ಕಾಲಕ್ಕೆ ತಮಿಳುನಾಡಿನ ಕೃಷ್ಣಗಿರಿಯಿಂದ ವಲಸೆ ಬಂದು ಕೊತ್ವಾಲ್-ಜಯರಾಜ್‌ರಂಥ ರೌಡಿಗಳನ್ನು ಮುಂದಿಟ್ಟುಕೊಂಡು ಪೆಟ್ರೋಲ್ ಕಲಬೆರಕೆ ಮತ್ತು ಆಯಿಲ್ ದಂಧೆ ಮಾಡಿಕೊಂಡಿದ್ದ ತಮಿಳು ರೌಡಿಗಳ ಮಕ್ಕಳಿವರು. ಪೆಟ್ರೋಲ್ ರಾಜನದ್ದು ಬಹಿರಂಗ ರೌಡಿಸಂ ಆದರೆ ಕುಳ್ಳಾ ರಮೇಶ ಬೆಂಗಳೂರು ಪೂರ್ವ ತಾಲ್ಲೂಕು ಕಚೇರಿ, ಬಿದರಹಳ್ಳಿಯ ನಾಡಕಚೇರಿ ಮತ್ತು ದೊಡ್ಡಗುಬ್ಬಿಯ ಪಂಚಾಯತಿ ಕಚೇರಿಯಲ್ಲಿ ಜಮೀನು ದಲ್ಲಾಳಿ ಕೆಲಸ ಮಾಡಿಕೊಂಡಿದ್ದಾನೆ.

ನಿವೃತ್ತಿ ಹೊಂದಿದ ಕಂದಾಯ ಇಲಾಖೆಯ ಅಧಿಕಾರಿಗಳ ಸಹಿ ಮತ್ತು ನಕಲಿ ರಬ್ಬರ್‌ಸ್ಟಾಂಪ್ ಸೃಷ್ಟಿಸಿ ದೊಡ್ಡಗುಬ್ಬಿಕೆರೆಯ ಗೋಮಾಳವನ್ನು ಯಾರ್‍ಯಾರದೋ ಹೆಸರಿಗೆ ಬರೆದು ಕೊಟ್ಟೇ ಕುಬೇರನಾದವನು ಕುಳ್ಳಾ ರಮೇಶ. ಈ ಪೆಟ್ರೋಲ್ ರಾಜ ಮತ್ತು ಕುಳ್ಳಾ ರಮೇಶರ ಎಡಗೈ ಬಲಗೈಯಂತಿರುವುದು ಇದೇ ದೊಡ್ಡಗುಬ್ಬಿಯ ಆನೆಪ್ಪನ ಮಗ ಎ.ಮುತ್ತುರಾಜ ಮತ್ತು ಆವಲಪ್ಪನ ಮಗ ಡಿ.ಎ. ರಾಮಯ್ಯ.


ನೆಲಕಂಟಕ ಜೋಡಿ ಕುಳ್ಳಾರಮೇಶ ಮತ್ತು ಪೆಟ್ರೋಲ್ ರಾಜ

ರಾಮಯ್ಯನದ್ದು ಮೀಟರ್ ಬಡ್ಡಿ ದಂಧೆ. ಯಾವ ಪಾರ್ಟಿ ಅಧಿಕಾರಕ್ಕೆ ಬಂದರೂ ಅದರ ಬಾವುಟ ಹಿಡಿದು ಎಮ್ಮೆಲ್ಲೆಗೆ ಛೇಲಾಗಿರಿ ಮಾಡಿಕೊಂಡೇ ಈತ ಇವತ್ತು 25 ಕೋಟಿಯ ಕುಬೇರ. ಕೆರೆಯ ವಿವಿಧ ಸರ್ವೆ ನಂಬರುಗಳಲ್ಲಿ ಈತ ಕಮ್ಮಿಯೆಂದರೂ ಎರಡೆಕರೆ ನುಂಗಿದ್ದಾನೆ. ಈತನಿಗೆ ಭೂಮಿ ದೋಚುವುದರಲ್ಲಿ ನೆರವಾಗುವ ಮತ್ತೊಬ್ಬನೆಂದರೆ ಮುನಿವೆಂಕಟಪ್ಪನ ಮಗ ಪುಟ್ಟರಾಜ. ಈತ ಕೆರೆಯ ಎರಡೂವರೆ ಎಕರೆ ನುಂಗಿದ್ದೂ ಅಲ್ಲದೆ ಇದೇ ಕೆರೆ ಭೂಮಿಯಲ್ಲೊಂದು ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಿಸಿದ್ದಾನೆ. ಇದೇ ದೊಡ್ಡಗುಬ್ಬಿಯ ಗೋಪಾಲಸ್ವಾಮಿ ದೇವಸ್ಥಾನದ 2.08 ಎಕರೆ ಕಬಳಿಸಿದ ಲೇಟ್ ಕೃಷ್ಣಪ್ಪನ ಮಗ ಅಪ್ಪಾಜಿಗೌಡ ಉರ್ಫ್ ಅಪ್ಪಯ್ಯಗೌಡ, ಗ್ರೀನ್‌ಬೆಲ್ಟ್ ಜಮೀನುಗಳಿಗೆ ನಕಲಿ ಫಾರ್ಮ್ ನಂಬರ್ 9 ಮತ್ತು 10 ಸೃಷ್ಟಿ ಕೊಡುವ ಖದೀಮ ಆನೆಪ್ಪನ ಮಗ ಮಂಜುನಾಥ ಈ ಗ್ಯಾಂಗಿನ ಇತರೇ ಕಿರಾತಕರು.

ಚುನಾವಣೆ ಬಂತೆಂದರೆ ಬೋಗಸ್ ಓಟು ಹಾಕಿಸುವುದರಿಂದ ಹಿಡಿದು ಕಂಡೋರ ಸೊತ್ತಿಗೆ ಕಾಂಪೌಂಡ್ ಹಾಕುವುದು, ಸರ್ಕಾರಿ ಭೂಮಿ ಕಬಳಿಸುವುದು, ಬೋಗಸ್ ದಾಖಲೆ ಸೃಷ್ಟಿಸುವುದು ಮತ್ತು ಪಾರ್ಟ್ ಟೈಮ್ ಗೂಂಡಾಗಿರಿಯೇ ಇವರ ಕುಲಕಸುಬು. ಇಂಥದೊಂದು ನೆಲಕಂಟಕರ ಬೆನ್ನಿಗೆ ಕಂದಾಯ ಇಲಾಖೆಯ ಖತರ್‌ನಾಕ್ ಹಿಂಡೊಂದು ಆ ಕಾಲದಿಂದಲೂ ಕೈಜೋಡಿಸಿದೆ. ಈ ಪೈಕಿ ಮಹಾನ್ ಪಾಖಂಡಿ ಅಂತಿದ್ದರೆ ಆತ ಕೆ.ಆರ್.ಪುರದ ಬೆಂಗಳೂರು ಪೂರ್ವ ತಹಶೀಲ್ದಾರ್ ಕಚೇರಿಯಲ್ಲಿ ಸದ್ಯ ಗುಮಾಸ್ತನಾಗಿರುವ ರಘುಪತಿ. ಈ ಹಿಂದೆ ಬಿದರಹಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಎಲ್ಲೆಲ್ಲಿ ಸರ್ಕಾರಿ ಜಮೀನಿದೆ, ಅದಕ್ಕೆ ಎಂತೆಂಥ ಕಳ್ಳದಾಖಲೆ ಸೃಷ್ಟಿಸಬೇಕು, ಕಂದಾಯ ಇಲಾಖೆಯ ರೆಕಾರ್ಡ್ ರೂಮುಗಳಿಂದ ಹೇಗೆಲ್ಲ ಮೂಲ ದಾಖಲೆಗಳನ್ನು ಎಗರಿಸಬೇಕೆಂಬುದು ಈತನಿಗೆ ಕರತಲಾಮಲಕ. ಈ ರೀತಿ ಭೂಮಿ ದೋಚಿಯೇ ಇವತ್ತು ರಘುಪತಿ 50 ಕೋಟಿಯ ಒಡೆಯ.

ಇಂಥವನ ಬೆನ್ನಿಗೆ ನಿಂತು ಕಂದಾಯ ದಾಖಲೆಗಳನ್ನು ತಿದ್ದಲು ನೆರವಾಗುವ ಮತ್ತೊಬ್ಬ ಪಾತಕಿಯೇ ಬೆಂಗಳೂರು ಪೂರ್ವ ತಾಲ್ಲೂಕು ಡೆಪ್ಯುಟಿ ತಹಶೀಲ್ದಾರ್ ಶೇಖರಪ್ಪ. ಈತ ಸದ್ಯ 40 ಕೋಟಿಗಿದ್ದಾನೆ. ಇವರಿಬ್ಬರಿಗೂ ಹೆಗಲಿಗೆ ಹೆಗಲುಕೊಟ್ಟು ಕಂದಾಯ ಇಲಾಖೆಗೆ ಕನ್ನಹಾಕಿರುವ ಮತ್ತೊಬ್ಬನೆಂದರೆ ಆತ ಬೆಂಗಳೂರು ಪೂರ್ವ ತಾಲ್ಲೂಕು ಕಚೇರಿಯ ಮೇಜಣಿದಾರ ನಂಜೇಗೌಡ. ಇವರೆಲ್ಲರಿಗೂ ಅಧಿನಾಯಕನಂತಿರುವವನು ಸದ್ಯ ಬೆಂಗಳೂರು ಪೂರ್ವ ತಹಶೀಲ್ದಾರ್ ಶಿವಕುಮಾರ್. ಈತನನ್ನು ನಂದೀಶ್ ರೆಡ್ಡಿಯೇ ಹುಡುಹುಡುಕಿ ಕೆ.ಆರ್.ಪುರಕ್ಕೆ ಹಾಕಿಸಿಕೊಂಡಿದ್ದಾರೆಂದರೆ ಅದರ ಉದ್ದೇಶ ಮತ್ತು ಪರಿಣಾಮ ಎಂಥವರಿಗೂ ಅರ್ಥವಾಗಲೇಬೇಕು.

ಇಡೀ ಕಂದಾಯ ಇಲಾಖೆಯೇ ಭೂಕಂಟಕರ ಜೊತೆ ಕೈಜೋಡಿಸಿದೆಯೆಂದರೆ, ಸ್ಥಳೀಯ ಶಾಸಕ ಲಿಂಬಾವಳಿಯಿಂದ ಹಿಡಿದು ಕೆ.ಆರ್.ಪುರಂ ಬಿಜೆಪಿ ಶಾಸಕ ನಂದೀಶ್ ರೆಡ್ಡಿ ಮತ್ತು ಸಚಿವೆ ಶೋಭಾ ಕರಂದ್ಲಾಜೆಯೇ ದೊಡ್ಡಗುಬ್ಬಿ ಕೆರೆ ಕಬಳಿಸಲು ಟೊಂಕಕಟ್ಟಿ ನಿಂತಿದ್ದಾರೆಂದರೆ ಕೆರೆ ಕಾಯಲು ಉಳಿದವರಾದರೂ ಯಾರು?

ಸದ್ಯ ರೆವಿನ್ಯೂ ಕಮೀಷನರ್ ಆಗಿರುವ ಅಶೋಕ್ ಮನೋಳಿ ಎಷ್ಟೇ ದಕ್ಷನಾದರೂ ಮಂತ್ರಿಣಿ ಕರಂದ್ಲಾಜೆಯ ಕೆಂಗಣ್ಣಿಗೆ ಬಿದ್ದು ಉಳಿಯುವುದುಂಟಾ? ಸರ್ಕಾರಿ ಜಮೀನುಗಳ ಸಂರಕ್ಷಣಾ ನಿಗಮದ ಮುಖ್ಯಸ್ಥನಾಗಿ ಬಂದಿರುವ ಮೊನ್ನಪ್ಪನೇ ಹುಟ್ಟಕಳ್ಳ. ಈತನ ಸಂಬಂಧಿ ಅಯ್ಯಪ್ಪ ಎಂಬ ಮತ್ತೊಬ್ಬ ಕಡುಭ್ರಷ್ಟ ಬೆಂಗಳೂರು ನಗರ ಜಿಲ್ಲಾಧಿಕಾರಿ. ಮುಖ್ಯಮಂತ್ರಿಯ ಕೈಯಲ್ಲೇ ಕಂದಾಯ ಇಲಾಖೆಯಿದೆ. ಮುನ್ನೂರು ಎಕರೆಯ ವಿಶಾಲಕೆರೆಯನ್ನು ಉಳಿಸುವವರ್‍ಯಾರು? ❖



ಶಿರಿನ್

..ಡುಮನೆಯಿಂದ ..್ಯಾಯಾಲಯಕ್ಕೆ

▶2

..ಖವನ್ನು ವೀಕ್ಷಿಸುತ್ತಿದ್ದ ನನಗೆ ಒಂದು ಗಳಿಗೆಯ ಮಟ್ಟಿಗಾದರೂ ..ಧಾನವೆನ್ನಿಸಿತ್ತು. ಆರಿಯಾನಳ ಸಾವು ಘೋರ ಎನ್ನುವುದು ಸತ್ಯ. ಅದರ ..ದ ಘಟನೆಗಳು ಅಗಾಧ ಪರಿಣಾಮವನ್ನು ಬೀರಿದವು ಎನ್ನುವುದೊಂದೇ ..ಧಾನದ ಅಂಶ. ತನ್ನ ಪ್ರಜೆಗಳಿಗೆ ಉತ್ತರ ಕೊಡುವ ಹಂಗಿಲ್ಲ ಎನ್ನುವ ನಿಲುವನ್ನು ..ಮಿಕ್ ಗಣರಾಜ್ಯ ತಳೆದಿರಬಹುದು. ಆದರೆ ಅಂತಾರಾಷ್ಟ್ರೀಯ ..ದಾಯದಲ್ಲಿ ತನ್ನ ಬಹಿಷ್ಕೃತ ಮುಖವನ್ನು ಬದಲಾಯಿಸಿಕೊಳ್ಳಲು ಅದು ..ತ್ನಿಸುತ್ತಿತ್ತು ಎನ್ನುವುದಂತೂ ಸತ್ಯ. ಮಾನವ ಹಕ್ಕುಗಳ ವಿಷಯದಲ್ಲಿ ಪಾಶ್ಚಿಮಾತ್ಯ ..ಗಳೊಂದಿಗೆ ಸಮಾನ ಪಾತಳಿಯಲ್ಲಿ ನಿಲ್ಲಲಾಗದ ಪ್ರಭುತ್ವವೊಂದು ತನ್ನ ..ಳ ಹಕ್ಕುಗಳನ್ನು ಹೊಸಕಿ ಹಾಕುತ್ತಲೇ ಇರುವುದು ಸಾಧ್ಯವಿಲ್ಲ ಎಂದು ..ನವಾಗಿಯಾದರೂ ಅದಕ್ಕೆ ಮನವರಿಕೆಯಾಗಲಾರಂಭಿಸಿತ್ತು.

..ಪ್ರಪಂಚದೆಲ್ಲೆಡೆಯಲ್ಲಿ ಪ್ರಸಾರವಾಗುತ್ತಿದ್ದ ಈ ಸುದ್ದಿಯನ್ನು ವೀಕ್ಷಿಸುತ್ತಿದ್ದ ನನಗೆ ..ಲ ಬಾರಿಗೆ ನಾನು ಪ್ರಸಿದ್ಧಳಾಗುತ್ತಿದ್ದೇನೆ ಎಂಬ ಅಂಶದ ಅರಿವಾಯಿತು! ..ಖ್ಯತೆ ಎನ್ನುವುದು ನಿಧಾನವಾಗಿ ಗಳಿಸಬೇಕಾದ್ದು. ಬರೆಯುತ್ತಾ, ..ತನಾಡುತ್ತ, ಲೇಖನಗಳನ್ನು ಬರೆಯುತ್ತಾ, ಪ್ರವಚನಗಳನ್ನು ನೀಡುತ್ತಾ, ..ರರೊಂದಿಗೆ ಸಂವಾದಿಸುತ್ತಾ, ದಿನ, ರಾತ್ರಿಗಳನ್ನು ಕಳೆದವಳಿಗೆ ಒಂದು ದಿನ ..ಖ್ಯತೆಯನ್ನು ತಂದುಕೊಡುವ ಘಟನೆಗಳ ಮಾಲೆಯೇ ಇದೆ ಎನ್ನುವ ಸತ್ಯ ..ಗುತ್ತದೆ. ನನ್ನ ವಿಷಯದಲ್ಲಂತೂ ಹಾಗೆಯೇ ಆಗಿದ್ದು. ಈ ಪ್ರಾಮುಖ್ಯತೆ ..ಕ್ತಿಕವಾಗಿ ನನಗೆ ಮುಖ್ಯವಲ್ಲದಿರಬಹುದು. ಆದರೆ ನನ್ನ ಕೆಲಸಕ್ಕೆ ಅದು ..ತ ಉಪಯೋಗಕ್ಕೆ ಬಂದಿರುವುದನ್ನು ಹೇಗೆ ಅಲ್ಲಗಳೆಯಲಿ? ನಾನು ..ಡಿದಾಗ ಪತ್ರಕರ್ತರು ಆಲಿಸುತ್ತಿದ್ದರು, ನಾನು ಕೈಗೆತ್ತಿಕೊಂಡ ಪ್ರಕರಣಗಳಿಗೆ ..ರ ಹೊರಗೆ, ಒಳಗೆ ಎಲ್ಲಾ ಕಡೆಯೂ ಪ್ರಚಾರ ಸಿಕ್ಕಲಾರಂಭಿಸಿತು ಎನ್ನುವುದನ್ನು .. ಇಲ್ಲವೆನ್ನಲು ಸಾಧ್ಯ? ಮಾನವ ಹಕ್ಕುಗಳ ವೀಕ್ಷಕರು ನನ್ನ ಮಾತುಗಳನ್ನು ..ರವಾಗಿ ಆಲಿಸಲು ಪ್ರಾರಂಭಿಸಿದ್ದರು. ಅತ್ಯಂತ ತುರ್ತಿನ ಪ್ರಕರಣಗಳಿಗೆ ..ವಾದ ಚುರುಕಾದ ಪ್ರಚಾರ ಅವರಿಂದ ನನಗೆ ದೊರಕುತ್ತಿತ್ತು. 'ಮಾನವ ..ಗಳು' ಎಂಬ ಅಮೂರ್ತ ಪರಿಕಲ್ಪನೆಗೆ ಇರಾನಿನಲ್ಲಿ ಈಗೊಂದು ಸ್ಪಷ್ಟ ಹೆಸರು .. ಮುಖ ಗೋಚರಿಸಲಾರಂಭಿಸಿತ್ತು. ತಮ್ಮ ನೋವು ಹತಾಶೆಗಳಿಗೆ ಧ್ವನಿ ..ಗದ ಸಹಸ್ರಾರು ಇರಾನಿ ಹೆಂಗಸರಿಗೆ ತಮ್ಮ ಪರವಾಗಿ ಮಾತಾಡಬಲ್ಲ ..ತೊಂದು ಇದರಿಂದ ಲಭ್ಯವಾಗಿತ್ತು. ನನ್ನ ಮಟ್ಟಿಗೆ ನನಗೆ ಇದು ..ವಾಗುತ್ತಿರಲಿಲ್ಲ. ಆದರೆ ಇಸ್ಲಾಮಿಕ್ ಗಣರಾಜ್ಯದಲ್ಲಿ ಪ್ರಾತಿನಿಧ್ಯದ ಕೊರತೆಯಿದೆ. ..ಂಚದೆಲ್ಲೆಡೆ ಇರುವ ನಮ್ಮ ವಕ್ತಾರರೆಲ್ಲರು ಆಳುವ ವ್ಯವಸ್ಥೆಗೆ ..ಬಂದಿರುವವರು. ಈ ಆಳುವ ವ್ಯವಸ್ಥೆಗೆ ಜನಸಾಮಾನ್ಯರ ನಿಜವಾದ ..ಪ್ರಾಯಗಳನ್ನು ಮನ್ನಿಸುವ ಜವಾಬ್ದಾರಿ ಬೇಕಿಲ್ಲ. ಹಾಗಿರುವಾಗ ಇರಾನಿ ಜನರ ..ುಗಳನ್ನು ಅಭಿಪ್ರಾಯಗಳನ್ನು ಜಗತ್ತಿಗೆ ತಿಳಿಸುವ ಜವಾಬ್ದಾರಿ ಅನಧಿಕೃತ ..ಭಾರಿಗಳ ಮೇಲೆಯೇ ಬೀಳುತ್ತದೆ.


..ನ್ನ ಬೆಳೆಯುತ್ತಿದ್ದ ಪ್ರಸಿದ್ಧಿ ಮತ್ತು ಇರಾನಿನಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ..ಸರು ಹೇಗೆ ಬದುಕುತ್ತಿದ್ದಾರೆ ಎಂಬ ಜಗತ್ತಿನ ಕುತೂಹಲದ ನಡುವೆ ತನ್ನ ..ಲ್ಲಿ ಕಾನೂನಿಕ ಬದಲಾವಣೆಗಳನ್ನು ಮಾಡಲೊಪ್ಪದ ವ್ಯವಸ್ಥೆಯೊಂದನ್ನು ..ರಾಷ್ಟ್ರೀಯ ಸಮುದಾಯದ ಎದುರು ಬಯಲು ಮಾಡುವುದು ಇದರಿಂದ .. ಹೆಚ್ಚು ಸಾಧ್ಯವಾಯಿತು ಎನ್ನುವುದಂತೂ ಸತ್ಯ. ❀

ಬಂಗಾರಪ್ಪ ಮತ್ತು ನಾವು

ಬಂಗಾರಪ್ಪನವರು ರಾಜ್ಯದ ಮುಖ್ಯಮಂತ್ರಿ ಆಗಿ ಅಧಿಕಾರ ಸ್ವೀಕರಿಸಿದ ಕೆಲವು ದಿನಗಳ ನಂತರ ಅವರ ಬಗ್ಗೆ ಪಿ. ಲಂಕೇಶ್‌ರು ಬರೆದಿದ್ದ ಲೇಖನ ಇಲ್ಲಿದೆ.

ಅವರು ನನಗೆ ಪರಿಚಿತರು. ಯಾವುದೋ ಸಂಬಂಧದಲ್ಲಿ ಈಚೆಗೆ ಇಬ್ಬರೂ ಮಧ್ಯಾಹ್ನ ಊಟ ಮಾಡಬೇಕಾಗಿ ಬಂತು. ಅದೂ ಇದೂ ಮಾತಾಡುತ್ತಾ ಅವರು ತಮ್ಮನ್ನು ಕಾಡುತ್ತಿದ್ದ ವಿಷಯಕ್ಕೆ ಬಂದರು.

"ನಾನು ಹೀಗೆ ಹೇಳ್ತಿದೀನಿ ಅಂತ ತಪ್ಪು ತಿಳ್ಕೋಬೇಡಿ. ನಾನು ಸಹ ಬಂಗಾರಪ್ಪನವರನ್ನು ಈಚೆಗೆ ಭೇಟಿ ಮಾಡಿಲ್ಲ. ಆದರೆ ಅವರ ಕಷ್ಟ, ದುಗುಡ ನನಗೆ ಗೊತ್ತು, ಬಂಗಾರಪ್ಪನವರು ನಿಮ್ಮ ಪತ್ರಿಕೆಯ ಕಾಯಂ ಓದುಗರು ಅನ್ನೋದು ನಿಮಗೆ ಗೊತ್ತಿರಲಿಕ್ಕಿಲ್ಲ. ಅಲ್ಲದೆ ಅವರು ನಿಮ್ಮ ಸ್ನೇಹಿತರಾಗಿದ್ದೋರು. ನಿಮ್ಮ ಸಮಾಜವಾದಿ ಗುಂಪಿನಲ್ಲಿ ಇದ್ದವರು. ನನಗೆ ಆಶ್ಚರ್ಯ ಹುಟ್ಟಿಸೋದು, ಅವರು ಮುಖ್ಯಮಂತ್ರಿಯಾದಾಗಿನಿಂದ ನಿಮ್ಮ ಪತ್ರಿಕೆಯಲ್ಲಿ ಅವರ ಬಗ್ಗೆ ಅಪಾರ ಸಿಟ್ಟು, ಟೀಕೆ, ವ್ಯಂಗ್ಯವನ್ನು ಮಾತ್ರ ವ್ಯಕ್ತಪಡಿಸಿದ್ದೀರಿ. ವೀರೇಂದ್ರ ಪಾಟೀಲರ ಬಗ್ಗೆ ಕೂಡ ಒಳ್ಳೆಯದನ್ನು ಬರೆದಿರಿ. ನಿಮಗೆ ಬಂಗಾರಪ್ಪ ಏನು ಕೆಟ್ಟದು ಮಾಡಿದ್ದಾರೆ? ಬೇಕಾದರೆ ಅವರ-ನಿಮ್ಮ ಭೇಟಿಯ ವ್ಯವಸ್ಥೆ ಮಾಡೋಣ. ಅವರು ನಿಮಗೆ ಪ್ರತಿಸ್ಪರ್ಧಿಯಂತೂ ಅಲ್ಲ. ಅವರು ಕೂಡಲೆ ಮಾಡಬೇಕಾದ್ದನ್ನು ಕುರಿತು ನೀವು ಮಾರ್ಗದರ್ಶನ ಮಾಡಬಹುದು. ಅವರು ನಿಜಕ್ಕೂ ಕರ್ನಾಟಕಕ್ಕೆ ಒಳ್ಳೆಯದನ್ನು ಮಾಡುವ ಉದ್ದೇಶವುಳ್ಳ ಮನುಷ್ಯ."



ನಾನು ಅವರ ಮಾತುಗಳನ್ನು ಕುರಿತು ಯೋಚಿಸಿದೆ. ಮೇಲಿನ ತರಹದ ಮಾತುಗಳು ಬಂದಾಗ ಇನ್ನೊಬ್ಬರ ದಾಗಿದ್ದರೆ ಕೂಡಲೆ ತಮ್ಮನ್ನು ಸಮರ್ಥಿಸಿಕೊಳ್ಳಲು ಯತ್ನಿಸುತ್ತಿದ್ದರು. ನಾನು ಹಾಗೆ ಮಾಡಲಿಲ್ಲ. ವಿಚಿತ್ರ ನೋವನ್ನನುಭವಿಸುತ್ತ ನನ್ನನ್ನು ನಾನು ಸ್ಪಷ್ಟಪಡಿಸಿಕೊಳ್ಳತೊಡಗಿದೆ. ಈ ಸ್ಪಷ್ಟನೆಯನ್ನೇ ಅವರಿಗೆ ಹೇಳುತ್ತಾ ಹೋದೆ.

ವೈಯಕ್ತಿಕವಾಗಿ ನನಗೂ ಬಂಗಾರಪ್ಪನವರಿಗೂ ಬೇರೆಯವರು ತಿಳಿದಿರುವುದಕ್ಕಿಂತ ಹೆಚ್ಚಿನ ಸಂಬಂಧವಿದೆ. ಬಂಗಾರಪ್ಪ ನಮ್ಮ ಜಿಲ್ಲೆಯವರು, ನಮ್ಮ ಶಿವಮೊಗ್ಗೆ ತಾಲ್ಲೂಕಿನ ಪಕ್ಕದ ಸೊರಬದವರು. ನಮ್ಮ ಜೊತೆಯಲ್ಲೇ ಆ ಜಿಲ್ಲೆಯ ಸಮಾಜವಾದ, ಕಾಂಗ್ರೆಸ್, ಗೋಪಾಲಗೌಡ, ಬದರಿನಾರಾಯಣ, ಪಟೇಲ್, ಕಾಗೋಡು-ಎಲ್ಲರೊಂದಿಗೆ ಬೆಳೆದವರು. ಇವೆಲ್ಲ ತೀರಾ ಸಹಜ, ಸಾಮಾನ್ಯ ಗಂಟುಗಳಾದವು; ಇದಕ್ಕಿಂತ ಹೆಚ್ಚಾಗಿ ಬಂಗಾರಪ್ಪನವರನ್ನು ನಾನು ಬಲ್ಲೆ. ಇವರೆಂದೂ ರಾಜಕಾರಣಿ, ಮಂತ್ರಿ ಅಥವಾ ಮುಖ್ಯಮಂತ್ರಿ ಎಂಬಂತೆ ನನ್ನೊಂದಿಗೆ ವರ್ತಿಸಿಲ್ಲ. ಒಮ್ಮೆ ನನಗೆ ತೀರಾ ಹತ್ತಿರದವನಾದ ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತನಾದ ಹುಡುಗನೊಬ್ಬ ಕನ್ನಡ ಎಂ.ಎ. ಪಾಸ್ ಮಾಡಿ ಕೆಲಸವಿಲ್ಲದೆ ಕಂಗಾಲಾಗಿದ್ದ. ಅವನನ್ನು ಬಂಗಾರಪ್ಪನವರಲ್ಲಿಗೆ ಚೀಟಿಯೊಂದರೊಂದಿಗೆ ಕಳಿಸಿದೆ. ಬಂಗಾರಪ್ಪ ಅವನನ್ನು ತಮ್ಮ ಆಪ್ತನನ್ನಾಗಿ ನೇಮಕ ಮಾಡಿಕೊಂಡದ್ದು ಮಾತ್ರವಲ್ಲ, ಆತನಿಗೆ ತಮ್ಮ ವ್ಯಕ್ತಿತ್ವ ಅರ್ಥವಾಗುವಂತೆ ನಡೆದುಕೊಂಡರು. ಸುಮಾರು ಒಂದು ವರ್ಷ ಬಂಗಾರಪ್ಪನವರ ಜೊತೆಗಿದ್ದ ಈ ಹುಡುಗ ಬಂಗಾರಪ್ಪನವರ ಔದಾರ್ಯ, ಸರಳತೆ, ಪ್ರೀತಿ ಮತ್ತು ಮಾನವೀಯತೆಯ ಬಗ್ಗೆ ಇವತ್ತಿಗೂ ಹೇಳುತಿರುತ್ತಾನೆ. ಮೊನ್ನೆ ಬಂಗಾರಪ್ಪ ಮುಖ್ಯಮಂತ್ರಿಯಾದಾಗ ಬೇರೆ ಉದ್ಯೋಗದಲ್ಲಿರುವ ಅವನಿಗೆ, "ಬಂಗಾರಪ್ಪನವರನ್ನು ನೋಡಿಕೊಂಡು ಬಾ" ಅಂದೆ. ಅವನು "ಈಗ ಮರೆತುಬಿಟ್ಟಿರಬಹುದು" ಅಂದ. "ಅವರು ಮರೆಯುವುದಿಲ್ಲ, ನೋಡು" ಅಂದೆ.



ಇಷ್ಟೆಲ್ಲ ನನಗೆ ವೈಯಕ್ತಿಕ ತಿಳಿವಳಿಕೆ ಇರುವುದರಿಂದಲೇ ನಾನು ಕರ್ನಾಟಕದ ಈಗಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ಕಠೋರ ನಿಷ್ಠುರತೆಯಿಂದ ಬರೆಯಬೇಕಾಗುತ್ತದೆ; ರಾಜಕಾರಣಿಗಳ ಸ್ನೇಹದಿಂದ ದೂರವಿದ್ದು ವಸ್ತುನಿಷ್ಠವಾಗಿ ಗ್ರಹಿಸಬೇಕಾಗುತ್ತದೆ. ಪತ್ರಕರ್ತ ವಿಚಿತ್ರ ಪ್ರಾಣಿ ಎಂಬುದು ಅನೇಕರಿಗೆ ಗೊತ್ತಿಲ್ಲ. ವಾಸ್ತವದಿಂದ ದೂರವಿರುವ ಪತ್ರಕರ್ತನಂತೆಯೇ ರಾಜಕಾರಣಿಗಳ, ಅಧಿಕಾರಿಗಳ ಕರುಳು ಬಳ್ಳಿಗೆ ಸಿಕ್ಕಿಹಾಕಿಕೊಂಡ ಪತ್ರಕರ್ತ ಜನದ್ರೋಹಿಯಾಗುತ್ತಾನೆ. ಆತನಲ್ಲಿ ಸತ್ಯಪ್ರೇಮಕ್ಕೆ ಬದಲು ದಾಕ್ಷಿಣ್ಯ, ತಿಳಿದುಕೊಳ್ಳುವ ಏಕಾಗ್ರತೆಗೆ ಬದಲು ಭಟ್ಟಂಗಿತನ, ವಸ್ತುನಿಷ್ಠೆಗೆ ಬದಲು ಪಕ್ಷಪಾತ ಶುರುವಾಗುತ್ತದೆ.

****

ಹಾಗೆಯೇ ಇಲ್ಲಿ ಆಗುತ್ತಿರುವುದನ್ನು ಗಮನಿಸಿ, ಕರ್ನಾಟಕದಲ್ಲಿ ನಡೆದದ್ದೇ ಆಂಧ್ರದಲ್ಲಿ ಆಗಿದೆ; ತಮಗೆ ಇಷ್ಟವಿಲ್ಲದ ಮುಖ್ಯಮಂತ್ರಿಯನ್ನು ಓಟುಗಳ ಮೂಲಕ, ಅವಿಶ್ವಾಸದ ಮೂಲಕ ಕೆಳಗಿಳಿಸುವ ಬದಲು ನೂರಾರು ಜನರನ್ನು ಕೊಂದು, ಕಾನೂನು ಕಟ್ಟಳೆಗಳನ್ನು ಗಾಳಿಗೆ ತೂರಿ ಮುಖ್ಯಮಂತ್ರಿಗಳನ್ನು ಬದಲಿಸಲಾಗಿದೆ. ಇದು ಕಾಂಗ್ರೆಸ್ ಭಿನ್ನಮತೀಯರು ಕಂಡುಹಿಡಿದಿರುವ ಹೊಚ್ಚ ಹೊಸಾ ತಂತ್ರ. ಆರೆಸ್ಸೆಸ್ ಪುಂಡರು ಸುತ್ತ ಇದ್ದು ರಕ್ತಪಾತಕ್ಕೆ ಹಾತೊರೆಯುತ್ತಿದ್ದುದರಿಂದ ಈ ತಂತ್ರ ಆರೆಸ್ಸೆಸ್ ತಂತ್ರವೆಂದು ಹೇಳುವುದು ಕಾಂಗ್ರೆಸ್‌ಗೆ ಸಾಧ್ಯವಾಗಿದೆ. ಆದರೆ ಸಾರ್ವಜನಿಕ ಜೀವನದಲ್ಲಿ ಜನಕ್ಕೆ ಈಗಾಗಲೇ ಕಾಂಗೈಗಳ ಈ ತಂತ್ರ ಗೊತ್ತಾಗಿಹೋಗಿದೆ.

ಅದಿರಲಿ, ಇದಕ್ಕೂ ಬಂಗಾರಪ್ಪನವರಿಗೂ ಏನು ಸಂಬಂಧ? ಉತ್ತರ ಸ್ಪಷ್ಟ. ಆದರೆ ಇಲ್ಲಿ ನಾವು ಕರ್ನಾಟಕದಲ್ಲಿ ಮೊನ್ನೆ ನಡೆದದ್ದಕ್ಕೆಲ್ಲ ಬಂಗಾರಪ್ಪ ಕಾರಣ ಎಂದು ಹೇಳಕೂಡದು, ಯಾಕೆಂದರೆ ಬಂಗಾರಪ್ಪ ಇದಕ್ಕೆ ಹೊಣೆಯಲ್ಲ. ಹಾಗೆಯೇ ಬಂಗಾರಪ್ಪ ಮುಖ್ಯಮಂತ್ರಿಯಾಗದಿದ್ದರೆ ಇನ್ನೊಬ್ಬರು ಮುಖ್ಯಮಂತ್ರಿಯಾಗುತ್ತಿದ್ದರು. ಇದರಿಂದ ಪರಿಸ್ಥಿತಿಯೇನೂ ಬದಲಾಗುತ್ತಿರಲಿಲ್ಲ. ವಿಚಿತ್ರವೆಂದರೆ, ಮುಖ್ಯಮಂತ್ರಿಯಾಗಬೇಕೆಂದು ಬಹುಕಾಲದಿಂದ ಕನಸೊತ್ತಿದ್ದ ಬಂಗಾರಪ್ಪ ಇವತ್ತು ದೊಂಬಿ, ಗಲಭೆ, ಕುತಂತ್ರಗಳ ಅವಾಂತರಕಾರಿಗಳಿಂದಾಗಿ ಮುಖ್ಯಮಂತ್ರಿಯಾಗಿದ್ದಾರೆ. ಅದರಿಂದಾಗಿಯೇ ಇವತ್ತು ಬಂಗಾರಪ್ಪ ಕಷ್ಟಗಳ ಸರಣಿಯನ್ನೇ ಎದುರಿಸಬೇಕಾಗಿದೆ.

ನಾವು ಬಿ.ಎಸ್. ಪಾಟೀಲ್ ಬಗ್ಗೆ, ಅಲೆಕ್ಸಾಂಡರ್ ಬಗ್ಗೆ ತೆಗೆದುಕೊಂಡ ನಿಲುವನ್ನು ಬಂಗಾರಪ್ಪನವರನ್ನೇ ಪೂರ್ತಿ ಹೊಣೆಯಾಗಿಸಿ ಟೀಕಿಸುವ ಪರಿಸ್ಥಿತಿ ಇಲ್ಲ; ಅದು ದುರಂತ. ಪತ್ರಕರ್ತನಾದವನು ಆಡಳಿತದ ತಪ್ಪುಗಳಿಗೆ ಕಾರಣನಾದ ಮಂತ್ರಿ, ಮುಖ್ಯಮಂತ್ರಿಯನ್ನೇ ಟೀಕಿಸಬೇಕಾಗುತ್ತದೆ; ಆಡಳಿತದ ದುರಂತಗಳಿಗೆ ಕಾರಣವಾಗುವ ಕಾಣದ ಕೈಗಳನ್ನು ಊಹಿಸಿ ಟೀಕಿಸಲಾಗುವುದಿಲ್ಲ. ಹೀಗೆ ನೋಡಿದಾಗಲೇ ಬಂಗಾರಪ್ಪನವರು ಮುಖ್ಯಮಂತ್ರಿಯಾಗಲು ಕಾರಣರಾದವರೇ ಅವರಿಂದ ತಪ್ಪು ಮಾಡಿಸುತ್ತಾ ಹೋಗುತ್ತಾರೆ. ಇಲ್ಲಿ ಒಂದೇ ಒಂದು ಉದಾಹರಣೆ ಸಾಕು. ಜಿಲ್ಲಾ ಪರಿಷತ್‌ಗಳನ್ನು ದುರ್ಬಲಗೊಳಿಸಿ ಅಧಿಕಾರವನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಲು ಬಸವಲಿಂಗಪ್ಪ ಮತ್ತು ಅಧಿಕಾರಿ ವರ್ಗ ಪ್ರಯತ್ನಿಸಿ ಜಿಲ್ಲಾ ಪರಿಷತ್ ಮಸೂದೆಗೆ ತಿದ್ದುಪಡಿ ತರಲು ಯತ್ನಿಸಿದೆ. ಬಂಗಾರಪ್ಪನವರಿಗೆ ಜಿಲ್ಲಾ ಪರಿಷತ್ ಪರವಾಗಿಯಾಗಲಿ ವಿರೋಧವಾಗಿಯಾಗಲಿ ತೀವ್ರ ಅನ್ನಿಸಿಕೆಗಳಿಲ್ಲ. ಇಲ್ಲಿ ತಲೆಹರಟೆ ಮಾಡುತ್ತಿರುವವರು ಬಸವಲಿಂಗಪ್ಪ, ರಾಜೀವ್‌ಗಾಂಧಿ ಕೂಡ ತಿದ್ದುಪಡಿಯ ಅಪಾಯ ತಿಳಿದುಕೊಳ್ಳಬಲ್ಲರು. ಇಷ್ಟಾದರೂ ಬಸವಲಿಂಗಪ್ಪನವರಿಗೆ ತೆಪ್ಪಗಿರಲು ಅಥವಾ ಮಂತ್ರಿ ಮಂಡಲದಿಂದ ತೊಲಗಲು ಹೇಳಲು ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಬಸವಲಿಂಗಪ್ಪ ಮಂತ್ರಿಯಾಗಲು ಕಾರಣ ಇಲ್ಲಿಯ ಶಾಸಕರೂ ಅಲ್ಲ, ಮುಖ್ಯಮಂತ್ರಿಯೂ ಅಲ್ಲ, ರಾಜೀವರೂ ಅಲ್ಲ, ದಿಲ್ಲಿಯ ನಿಗೂಢವ್ಯಕ್ತಿ ಇದಕ್ಕೆಲ್ಲ ಕಾರಣರಾಗಿರುವಾಗ ಸಹಜವಾಗಿಯೇ ರಾಜಕೀಯ ಇಲ್ಲಿಯ ನಾಯಕನ ಹಿಡಿತದಲ್ಲಿರುವುದಿಲ್ಲ. ಇದೇ ಮಾತನ್ನು ನಾವು ಚಂಡಪ್ರಚಂಡ ಅಧಿಕಾರಿಗಳಾದ ಅಲೆಗ್ಸಾಂಡರ್, ಪ್ರಭಾಕರ ರಾವ್ ತರಹದವರ ಬಗ್ಗೆ ಹೇಳಬಹುದು.

ಇದೆಲ್ಲ ತೀರಾ ದೀರ್ಘವಾಗುವ ಮುನ್ನ ಇಷ್ಟರಲ್ಲೇ ನಿಮಗೆ ನಾನು ಬಂಗಾರಪ್ಪನವರನ್ನು ವೈಯಕ್ತಿಕವಾಗಿ ಇಷ್ಟಪಡುವುದಕ್ಕೂ ಮುಖ್ಯಮಂತ್ರಿಯಾದ ಬಂಗಾರಪ್ಪನವರ ಬಗ್ಗೆ ವರದಿ ಮಾಡಬೇಕಾದ ಅನಿವಾರ್ಯತೆಗೂ ಇರುವ ವ್ಯತ್ಯಾಸ ತಿಳಿದಿರಬಹುದು. ನನಗೆ ಈ ವ್ಯಕ್ತಿಯ ಬಗ್ಗೆ ಯಾವುದೇ ದ್ವೇಷ, ಮತ್ಸರ ಇಲ್ಲವೆಂದು ಮಾತ್ರ ಇಲ್ಲಿ ಹೇಳಬಲ್ಲೆ. ಬಂಗಾರಪ್ಪ ರೈತರ ಬಗ್ಗೆ ತೋರುತ್ತಿರುವ ಕಾಳಜಿ, ಆಡಳಿತವನ್ನು ಚುರುಕುಗೊಳಿಸುವ ಬಗ್ಗೆ ಅವರಲ್ಲಿರುವ ಉತ್ಸಾಹ-ಇದನ್ನೆಲ್ಲ ಉಲ್ಲೇಖಿಸಿ ಕಾಂಗ್ರೆಸ್ ವ್ಯವಸ್ಥೆಯ ಭೀಕರ ಸ್ವಾರ್ಥದಲ್ಲಿ ಬಂಗಾರಪ್ಪ ಒಳ್ಳೆಯದು ಮಾಡುವಂತಾಗಲಿ ಎಂದು ಮಾತ್ರ ಹೇಳಿ ವಿರಮಿಸುತ್ತೇನೆ.

• ಪಿ. ಲಂಕೇಶ್

-ಡಿಸೆಂಬರ್ 30, 1990

ಕರಾವಳಿಯ ಜಾದೂಗಾರ 'ಬಂ'

• ನಹುಷ



ಸೆಂತಯವೇ ಇಲ್ಲ!

ಚಿರ ಭಿನ್ನಮತೀಯ 'ಬಂ' ಕರ್ನಾಟಕ ಕಂಡ ರಾಜ್ಯಮಟ್ಟದ ಚಾರಿಷ್ಮಾದ ಏಕೈಕ ಜನನಾಯಕನಾಗಿದ್ದರು; ದೇವರಾಜ ಅರಸರ ಬಳಿಕ ಇದೀ ಹಿಂದುಳಿದ ವರ್ಗವನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದ ಬ್ಯಾಕ್‌ವರ್ಡ್ ಲೀಡರ್ ಆಗಿದ್ದರೆಂಬುದಕ್ಕೆ ದುಸರಾ ಮಾತೇ ಇಲ್ಲ. ಮೇಲ್ವರ್ಗದ ಬ್ರಾಹ್ಮಣ-ಲಿಂಗಾಯತ ಷಡ್ಯಂತ್ರಗಾರರ ಎದುರುಹಾಕಿಕೊಂಡು ಧಿಮಾಕಿನ ರಾಜಕಾರಣ ಮಾಡಿಕೊಂಡಿದ್ದ 'ಬಂ' ಎಷ್ಟೇ ತುಕಿದರೂ ಬಾಗದ ಬಂಗಾರವಾಗಿದ್ದರು. ಸಂದರ್ಭ-ಸನ್ನಿವೇಶ ಅರ್ಥಮಾಡಿಕೊಳ್ಳದೆ ದುಡುಕುತ್ತಿದ್ದ 'ಬಂ'ರನ್ನು ಅತ ಓದಿದಷ್ಟೇ ಜೋರಾಗಿ ಹಿಂದಕ್ಕೆಳೆದು ತಂದು ನಿಲ್ಲಿಸಿಬಿಡುತ್ತಿತ್ತು ಆತನ ಹುಚ್ಚು ಹಠಮಾರಿತನ.

ಸಿನಿಮಾ ಹೀರೋನಂತ ಲುಕ್‌ನ 'ಬಂ' ಶೋಕಿಯಷ್ಟೇ ಮಾಡಲಿಲ್ಲ. ದೀನ ದಲಿತರ, ಶೋಷಿತರ, ಹಿಂದುಳಿದವರ ಕಟ್ಟಾ ಪಕ್ಷಪಾತಿತನ ಆತನ ನಡೆ-ನುಡಿ-ಆಡಳಿತದಲ್ಲಿರುತ್ತಿತ್ತು. ಹಿಂದುಳಿದವರಿಗೆ ಅನ್ಯಾಯವಾದರೆ ಆಕ್ರೋಶದಿಂದ ಕುದಿಯುತ್ತಿದ್ದರು. ರೈತ ಹೋರಾಟದ ಮೂಸೆಯಲ್ಲಿ ರೂಪಿತವಾಗಿದ್ದ 'ಬಂ' ಭೂಸುಧಾರಣೆ ಕಾನೂನಿನ ಸಂಪೂರ್ಣ ಲಾಭ ಅಸಹಾಯಕ-ಅನಕ್ಷರಸ್ಥ ಮಂದಿಗೆ ಸಿಗುವಂತೆ ಮಾಡಲು ಹರಸಾಹಸವನ್ನೇ ಮಾಡಿ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿದ್ದರು. ಆದರೆ ಏನೋ ಕಳಕೊಂಡಂತೆ ಹುಡುಕುತ್ತ-ಹುಡುಕುತ್ತ ಬರೋಬ್ಬರಿ ಒಂಭತ್ತು ಪಕ್ಷ ಹೊಕ್ಕು ಹೊರಬಂದ 'ಬಂ' ಎಂದೂ 24x7 ರಾಜಕಾರಣಿ ಮಾತ್ರ ಆಗಿರಲಿಲ್ಲ. ಕ್ರೀಡೆ, ಸಂಗೀತ, ಸಾಹಿತ್ಯ ಕಲೆ, ಸಿನಿಮಾ, ಹಾಸ್ಯ, ಊಟ, ಪಾಠ, ಐಲಾಟ.... ಹೀಗೆ ಪ್ರತಿ ಪ್ರಕಾರದಲ್ಲೂ 'ಬಂ' ತನ್ಮಯತೆಯಿಂದ ತೊಡಗಿಸಿಕೊಂಡಿದ್ದರು.

'ಬಂ'ಗೆ ಬ್ರಾಹ್ಮಣ ವೈರಿ ಎಂಬ ಹಣೆಪಟ್ಟಿ ಪಟ್ಟಭದ್ರರು ಕಟ್ಟಿದ್ದರು. ಆದರೆ 'ಬಂ' ಬ್ರಾಹ್ಮಣಿಕೆ, ಪುರೋಹಿತಶಾಹಿ ವಿರೋಧಿಯಾಗಿದ್ದರೇ ಹೊರತು ಬ್ರಾಹ್ಮಣರ ಶತ್ರುವಾಗಿರಲಿಲ್ಲ. ಇದಕ್ಕೆ ಸೊರಬ-ಸಾಗರ ಏರಿಯಾದ ದೊಡ್ಡ ಸಂಖ್ಯೆಯ ಬ್ರಾಹ್ಮಣರು 'ಬಂ' ಬೆಂಬಲಿಗರಾಗಿದ್ದುದೇ ಸಾಕ್ಷ್ಯಾಧಾರದಂತಿದೆ. ಈ ಬರಹಗಾರನಿಗೇ ಗೊತ್ತಿರುವಂತೆ, ಬ್ರಾಹ್ಮಣರಿಗೆ ಜಾತಿಯತೆ ಮಾಡದೆ ನಿಷ್ಕಲ್ಮಷವಾಗಿ ನೆರವಾಗಿದ್ದರು. ಯಕ್ಷಗಾನದ ಮೇರುನಟ ಚಿಟ್ಟಾಣಿ ರಾಮಚಂದ್ರ ಹೆಗಡೆಗೆ ರಾಜ್ಯೋತ್ಸವದ ಪ್ರಶಸ್ತಿ ಕೊಡಿಸಿದ್ದೇ 'ಬಂ'. ಯಕ್ಷಗಾನ ರಂಗದ ಬ್ರಾಹ್ಮಣರೊಳಗಿನ ಕಿತಾಪತಿಯಿಂದಾಗಿಯೇ ಅದ್ಭುತ ಕಲಾವಿದ ಚಿಟ್ಟಾಣಿ ಪ್ರಜ್ಞಾಪೂರ್ವಕವಾಗೇ ಅವಜ್ಞೆಗೆ ಒಳಗಾಗಿದ್ದರು. 'ಬಂ'ಗೆ ಇದೆಲ್ಲ ಬ್ರಾಹ್ಮಣರೇ ತಿಳಿಸಿದ್ದರು. ಈ ಬ್ರಾಹ್ಮಣ ಬಳಗ 'ಬಂ'ರ ನಂಬಿಗಸ್ಥರೂ ಹೌದು. ಹೀಗಾಗಿ ಕೊಂಚ ನ್ಯಾಯ-ಗೌರವ ಸರ್ಕಾರಿ ಮಟ್ಟದಲ್ಲಿ 'ಬಂ' ಪರ್ವದಲ್ಲಿ ಚಿಟ್ಟಾಣಿಗೆ ಸಿಕ್ಕಿತ್ತು.

ಹಾಗೆಯೇ ಈ ಲೇಖಕನ ಬ್ರಾಹ್ಮಣ ಮಿತ್ರನೊಬ್ಬನ ಅಣ್ಣನಿಗೆ 'ಬಂ' ತುಂಬ ಮುತುವರ್ಜಿಯಿಂದ ಮಾಸ್ತರಿಕೆ ಕೊಡಿಸಿದ್ದರು. ಕುಮಟಾ-ಹೊನ್ನಾವರ ನಡುವಿನ ಹಳದೀಪುರದ ಅಗ್ರಹಾರದ ಪಕ್ಕಾ ಹಾರವರ ಹುಡುಗನಾತ. ಆತನ ತಾಯಿ ಶಿಕ್ಷಕಿಯಾಗಿದ್ದಾಗಲೇ ಸಾವಿಗೀಡಾಗಿದ್ದರು. ಈತನದು ಟಿಸಿಎಚ್ (ಡಿಎಡ್) ಮುಗಿದಿತ್ತು. ಅನುಕಂಪದ ಆಧಾರದಲ್ಲಿ ಶಿಕ್ಷಕ ನೌಕರಿ ಪಡೆಯಲು ಆ ಹುಡುಗ ಹೆಣಗಿ-ಹೆಣಗಿ ಸುಸ್ತಾಗಿದ್ದ. ಕೊನೆಗೆ ಆತನ ವಯೋವೃದ್ಧ ಅಜ್ಜಿ ಮೊಮ್ಮಗನ ಕಟ್ಟಿಕೊಂಡು ಸಿಎಂ ಆಗಿದ್ದ 'ಬಂ' ಬಳಿಗೋಡುತ್ತಾಳೆ. ಕೆಂಪು ಸೀರೆಯುಟ್ಟು ತಲೆ ಮೇಲೆ ಸೆರಗು ಹಾಕಿಕೊಂಡು ಕಷ್ಟಪಟ್ಟು ಬೆಂಗಳೂರಿಗೆ ಬಂದಿದ್ದ ಆ 75 ರ ಅಜ್ಜಿಯನ್ನು ಕಂಡಿದ್ದೇ 'ಬಂ' ಜಾತಿ-ಪಾತಿ ನೋಡದೆ ಮನುಷ್ಯತ್ವದಿಂದ ವರ್ತಿಸಿದರು. ತಕ್ಷಣ ಸಂಬಂಧಿಸಿದ ಅಧಿಕಾರಿಗಳ ಕರೆಸುತ್ತಾರೆ. ಅದೇನೇ ತಾಂತ್ರಿಕ ತೊಂದರೆ ಇದ್ದರೂ ಅದೆಲ್ಲ ನಿವಾರಿಸಿ ಆ ಬ್ರಾಹ್ಮಣ ಬಾಲಕನಿಗೆ ನೌಕರಿ ಕೊಡುವಂತೆ ಕಟ್ಟುನಿಟ್ಟಿನ ಆದೇಶ ಕೊಡುತ್ತಾರೆ! ಅಷ್ಟೇ ಅಲ್ಲ, ಆ ಅಜ್ಜಿ-ಮೊಮ್ಮಗನಿಗೆ ಊರಿಗೆ ತಲುಪುತ್ತಿದ್ದಂತೆಯೇ ನೇಮಕಾತಿ ಪತ್ರವೂ ಬರುತ್ತದೆ. ಇವತ್ತಿಗೂ ಆ ಬ್ರಾಹ್ಮಣ ಕುಟುಂಬ 'ಬಂ'ರ ನೆನೆದು ಆಕಾಶಕ್ಕೆ ಕೈಮುಗಿಯುತ್ತದೆ!!

ಇಂಥ ಅನೇಕ ನಿದರ್ಶನಗಳಿವೆ. ಈ ಹಿಂದುಳಿದವರ ನಾಯಕ ಮುಂದುವರಿದವರ ಬಗ್ಗೆ ಸೇಡು-ದ್ವೇಷವೆಂದೂ ಸಾಧಿಸಿಲ್ಲ ಎಂದು ತೋರಿಸಲು. ಮಲೆನಾಡು-ಕರಾವಳಿಯ ಬ್ರಾಹ್ಮಣರ ಜೀವನಾಧಾರ ಬೆಳೆಯೆಂದೇ ಕರೆಸಿಕೊಳ್ಳುವ ಅಡಿಕೆಗೆ ಬೆಂಬಲ ಬೆಲೆ ಕೊಡಿಸಲು, ತೋಟಿಗರ ಕಷ್ಟ ಪರಿಹರಿಸಲು 'ಬಂ' ದಿಲ್ಲಿ ಮುಂಬೈನಲ್ಲಿ ಶತಪ್ರಯತ್ನ ನಡೆಸಿದ್ದರು. ಬೆಲೆ ಕುಸಿತದಿಂದ ಕಂಗಾಲಾಗಿದ್ದ ಹೈಗರಿಗೆ ಹೆಲ್ಪ್ ಹೊರಜಗತ್ತಿಗೆ ಮುಂಗೋಪಿ-ಒರಟನಂತೆ ಭಾಸವಾಗುತ್ತಿದ್ದ 'ಬಂ' ನಿಜಕ್ಕೂ ಕರುಣಾಮಯಿ-ಹೃದಯವಂತನಾಗಿದ್ದರು.


ಅದಕ್ಕೊಂದು ಉದಾಹರಣೆ ಇಲ್ಲಿದೆ. 'ಬಂ' ಸಿಎಂ ಆಗಿದ್ದ ಕಾಲವದು. ಡಿಸೆಂಬರ್‌ನ ಘೋರ ಚಳಿಯ ದಿನಗಳಲ್ಲೊಂದು ರಾತ್ರಿ 'ಬಂ'ರ ಸೊರಬದಿಂದ ಎರಡೆರಡು ಬಸ್ ಜನ ಸಿಎಂ ನಿವಾಸ 'ಕಾವೇರಿ'ಗೆ ಬರುತ್ತಾರೆ. ಅದೂ ರಾತ್ರಿಯ 10 ಗಂಟೆ ಹೊತ್ತು. ಈ ಅಭಿಮಾನಿಗಳು ಬಂದಾಗ 'ಬಂ' ಮನೆಯಲ್ಲಿ ಇರುವುದಿಲ್ಲ. ಹಳ್ಳಿಗಾಡಿನ ಜನ ಸಿಎಂರ ಅಧಿಕೃತ ಸರ್ಕಾರಿ ಬಂಗಲೆಯ ಸುತ್ತಲಿನ ಗಿಡ-ಮರದ, ಬುಡ, ಗೋಡೆ ಪಕ್ಕವೇ ಒಂದಕ್ಕೆಯಂಥ ನೈಸರ್ಗಿಕ ಕರ್ಮ ತೀರಿಸಿಕೊಳ್ಳ ತೊಡಗಿದ್ದರು. ಆಗ ಬರ್‍ತಾರೆ 'ಬಂ' ಸಾಹೇಬರು. ಜನರ ಗೌಜಿ-ಗಲೀಜು ಕಂಡು ಕೆರಳುತ್ತಾರೆ. ತಕ್ಷಣ ಸರ್ಕಾರಿ ಬಂಗ್ಲೆಯ ಕಾಂಪೌಂಡ್ ಆಚೆ ಹೋಗುವಂತೆ ಬೈದು ಒಳ ಹೊಕ್ಕುತ್ತಾರೆ. ರಾಜಾತಿಥ್ಯ ನಿರೀಕ್ಷೆ ಬಂದಿದ್ದ ಅಭಿಮಾನಿಗಳಿಗೆ ನಡುರಾತ್ರಿಯಲ್ಲಿ ದಿಕ್ಕೆ ತೋಚದಂತಾಗುತ್ತದೆ. ಹತಾಶರಾಗಿ ಊರಿಗೆ ವಾಪಸಾಗಲು ಬಸ್ ಏರತೊಡಗುತ್ತಾರೆ. ಅಷ್ಟೊತ್ತಿಗೆ 'ಬಂ'ಗೆ ಪಶ್ಚಾತ್ತಾಪದ ಪರಿತಾಪ ಶುರುವಾಗಿರುತ್ತದೆ. ಈ ಮುಗ್ಧ ಮಂದಿಗೆ ಈ ಸರಿರಾತ್ರಿಯಲ್ಲಿ ಊಟ ಎಲ್ಲಿ ಕೊಡಿಸೋದು? ವಸತಿ ಹೇಗೆ ವ್ಯವಸ್ಥೆ ಮಾಡೋದು? ಚಿಂತಿತರಾಗುತ್ತಾರೆ. ಮುಖ್ಯಮಂತ್ರಿಗಳ 'ಕಾವೇರಿ' ಪಕ್ಕದಲ್ಲೇ ಇದ್ದ ಅಶೋಕ ಹೋಟೆಲಿಗೆ ಓಡೋಡಿ ಹೋಗ್ತಾರೆ. ಅಲ್ಲಿ ಪ್ರತಿ ಊಟಕ್ಕೆ 300 ರೂ. ಆ ಕಾಲದಲ್ಲಿ. ಆದರೂ 'ಬಂ' ಬೇಸರಿಸಲಿಲ್ಲ, ಆದರೆ ಊಟ ಮಾತ್ರ ಖಾಲಿಯಾಗಿತ್ತು. ರಾತ್ರಿ 11 ರ ಹೊತ್ತಲ್ಲಿ ಊಟ ಎಲ್ಲಿಂದ ಸಿಗಬೇಕು? ಆದರೂ ಅಶೋಕ ಹೋಟೆಲಿನ ಮ್ಯಾನೇಜರ್‌ಗೆ ಸಾಕ್ಷಾತ್ ಸಿಎಂ ಸಾಹೇಬರೇ ಬಂದು ತನ್ನೂರಿನ ಜನರಿಗೆ ಊಟ ಕೇಳುತ್ತಿರುವುದು ಕಂಡು 'ಇಲ್ಲ' ಎನ್ನಲಾಗಲಿಲ್ಲ. ಇದ್ದಬಿದ್ದ ಸಸ್ಯಹಾರ-ಮಾಂಸಾರವನ್ನೆಲ್ಲ ಬೆರೆಸಿ ರುಚಿಕರವಾದ ಎರಡು ಬಸ್ ಜನರಿಗಾಗುವಷ್ಟು ಊಟ ತಯಾರಿಸಿ ಕೊಡುತ್ತಾರೆ.

ಬೇಸರದಿಂದ ಊರಿಗೆ ಹೋಗಲು ಅಣಿಯಾಗಿದ್ದ ಜನಗಳಿಗೆ ಒತ್ತಾಯದಿಂದ ಕರೆದು ಹೊಟ್ಟೆತುಂಬ ಊಟ ಹಾಕಿಸುತ್ತಾರೆ. 'ಬಂ' ಅಂಥ ಜನಪರ ಕಳಕಳಿ-ಕಾಳಜಿ ಕಕ್ಕುಲತೆ 'ಬಂ'ಗಿತ್ತು, ಹಾಗಂತ ಇಂಥದ್ದನ್ನೆಲ್ಲ ಬಳಸಿಕೊಂಡು ಸುದ್ದಿಯಾಗುವ ಕೀಳು ಬುದ್ಧಿ ಆತನಿಗಿರಲಿಲ್ಲ, 'ಬಂ'- ಪ್ರಚಾರ ಪ್ರಿಯನಾಗಿರಲಿಲ್ಲ, ಜನ ಸಮುದಾಯದ ಬೇರುಮಟ್ಟದ ಸಹಜ ಒಡನಾಡಿಯಾಗಿದ್ದರು. ಮಲೆನಾಡಿನ ಈ ಚೆಂದದ ಬಂಗಾರಿ ಕರಾವಳಿಯ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಮನೆ ಮಗನಂತಾಗಿ ಹೋಗಿದ್ದರು. ಈ ಮೂರು ಜಿಲ್ಲೆಗಳಲ್ಲಿ 'ಬಂ'ರ ಸ್ವಜಾತಿ ಈಡಿಗ (ದೀವರು-ನಾಮಧಾರಿ-ಬಿಲ್ಲವ) ಸಮುದಾಯ ಹೆಚ್ಚಿರುವುದೇ ಆತ ಅಲ್ಲಿ ಶಕ್ತಿಶಾಲಿಯಾಗಲು ಕಾರಣವೆಂದು ಕುಹಕವಾಡುವವರೂ ಇದ್ದಾರೆ. ಆದರೆ ಈಡಿಗೇತರ ಹಿಂದುಳಿದ ಸಮುದಾಯದ ಮೀನುಗಾರರು-ದಲಿತರು-ಹಾಲಕ್ಕಿ-ಒಕ್ಕಲಿಗರು-ಮುಸ್ಲಿಮರು-ಕ್ರಿಶ್ಚಿಯನ್ನರು 'ಬಂ'ರನ್ನು ಪ್ರೀತಿ-ವಿಶ್ವಾಸದ ನಾಯಕನಾಗಿ ಒಪ್ಪಿಕೊಂಡಿದ್ದರು. 'ಬಂ' ಬರ್‍ತಾರೆಂದರೆ ಸರಿರಾತ್ರಿ ಹೊತ್ತಿನವರೆಗೂ ಹಿಂದುಳಿದ ಅಲ್ಪಸಂಖ್ಯಾತ ವರ್ಗದವರು ಉತ್ಸಾಹ-ಕಾತರದಿಂದ ಕಾಯುತ್ತಿದ್ದರು. ಉತ್ತರ ಕನ್ನಡದಲ್ಲಿ ಸ್ಥಳೀಯ ಹೈಗರ ನಾಯಕ ದಿವಂಗತ ರಾಮಕೃಷ್ಣ ಹೆಗಡೆ, ಉಡುಪಿ-ದಕ್ಷಿಣ ಕನ್ನಡದಲ್ಲಿ ಮೊಯ್ಲಿ-ಆಸ್ಕರ್-ಜನಾರ್ದನ ಪೂಜಾರಿ-ಡೀವಿಎಸ್‌ಗಿಂತ ಜನಪ್ರಿಯರಾಗಿದ್ದರು. ಮೇಲ್ವರ್ಗದ ಶೋಷಣೆ-ದಬ್ಬಾಳಿಕೆಯಿಂದ ತತ್ತರಿಸಿಹೋಗಿದ್ದ ಉತ್ತರ ಕನ್ನಡದ ಹಿಂದುಳಿದವರಿಗೆ ನೈತಿಕ ಸ್ಥೈರ್ಯ-ಸಾಮಾಜಿಕ ಗೌರವ-ರಾಜಕೀಯ ಧ್ವನಿ ನೀಡಿದ್ದೇ ಬಂಗಾರಿ! ಹೀಗಾಗಿ ದೀವರು-ಹಾಲಕ್ಕಿ ಒಕ್ಕಲಿಗರಂಥವರಿಗೆ ಹೈಗರಿಗೆ ಎದುರಾಗಿ ನಿಂತು ರಾಜಕಾರಣ ಮಾಡುವ ಛಾತಿ-ತಾಕತ್ತು ಬಂದಿತ್ತು.


ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದ ಅಷ್ಟೂ ಪಕ್ಷದ ಮುಖಂಡರನ್ನು ಸೇರಿಸಿದರೂ 'ಬಂ' ತೂಕ ಬರುತ್ತಿರಲಿಲ್ಲ. 'ಬಂ'ಗೆ ಕರಾವಳಿ ಜಿಲ್ಲೆಯೊಂದಿಗೆ ಅನ್ಯೋನ್ಯ ಸಂಬಂಧವಿತ್ತು, 'ಬಂ' ಮದುವೆಯಾಗಿದ್ದು ಶಿರಸಿಯ ಹೆಣ್ಣಾದರೆ, ಮಗ ಕುಮಾರ್ ಬಂಗಾರಪ್ಪಗೆ ತಂದುಕೊಂಡದ್ದು ಮಂಗಳೂರಿನ ಹುಡುಗಿ. ಈ ರಕ್ತ ಸಂಬಂಧಕ್ಕಿಂತಲೂ ಮಿಗಿಲಾದ ನಂಟು 'ಬಂ'ಗೆ ಕರಾವಳಿಯ ಹಿಂದುಳಿದ ಜನ ಸಮುದಾಯದೊಂದಿಗಿತ್ತು. 'ಬಂ' ಎಂದರೆ ಹುಚ್ಚೆದ್ದು ಕುಣಿವ ದೊಡ್ಡ ದಂಡೇ ಪ್ರತಿ ಊರೂರಲ್ಲಿದೆ. ಹೀಗಾಗಿ 'ಬಂ' ದಕ್ಷಿಣೋತ್ತರ ಕನ್ನಡದ ಪ್ರತಿ ಇಲೆಕ್ಷನ್‌ನ ಸಮೀಕರಣ-ಫಲಿತಾಂಶ ಬದಲಿಸುವ ಪಾಲಿಟಿಕಲ್ ಪವಾಡ ಪುರುಷನಂತಾಗಿ ಹೋಗಿದ್ದರು.

ಪಕ್ಷ ಬದಲಿಸುವ ಖಯಾಲಿಯ 'ಬಂ' ಯಾವ ಪಕ್ಷ ಸೇರುತ್ತಾರೋ ಎಂಬ ಆತಂಕ ಚುನಾವಣೆ ಹತ್ತಿರಬಂದಂತೆ ಶಾಸಕ-ಸಂಸದ ಆಕಾಂಕ್ಷಿಗಳಿಗೆ ಮತ್ತು ಎಲ್ಲ ಪಕ್ಷಗಳಿಗೆ ಕಾಡುತ್ತಿತ್ತು. 'ಬಂ' ಫ್ಯಾಕ್ಟರ್‌ನಿಂದ ಗೆಲ್ಲುವ ಆಸಾಮಿ ಸೋತು ಅನಾಮಧೇಯ ಗೆಲ್ಲುವ ಜಾದೂ ನಡೆದುಹೋಗುತ್ತಿತ್ತು. ಅಂಥ ನಿರ್ಣಾಯಕ ಶಕ್ತಿ ಬಂಗೆ ಕರಾವಳಿಯ ಮೂರೂ ಜಿಲ್ಲೆಯ ಹಲವು ಕ್ಷೇತ್ರದಲ್ಲಿತ್ತು. ಶಾಸಕನಾಗುವ ಯಾವ ಯೋಗ್ಯತೆಯೂ ಇಲ್ಲದ ಆರ್.ಎನ್. ನಾಯ್ಕ, ಅಂಕೋಲೆಯ ಕೆ.ಎಚ್. ಗೌಡ, ಹೊನ್ನಾವರದ ಡಾ. ಎಂ.ಪಿ. ಕರ್ಕಿ, ಶಿರಸಿಯ ಕಾನಡೆ, ಉಡುಪಿಯ ಯು.ಆರ್. ಸಭಾಪತಿ, ಈಗಿನ ಸಿಎಂ ಸದಾನಂದ ಗೌಡನಂಥವರು ಶಾಸಕನಾಗಿದ್ದು, ದೇವರಾಯ ನಾಯ್ಕ, ಆಸ್ಕರ್ ಫರ್ನಾಂಡಿಸ್, ಪೂಜಾರಿ, ಬಿಜೆಪಿಯ ಅನಂತ್ಮಾಣಿಯಂಥವರು ದೊಡ್ಡ ಅಂತರದಿಂದ ಗೆಲ್ಲುತ್ತಿದ್ದುದು 'ಬಂ'ರ ತರಲೆ-ತಂತ್ರದಿಂದಲೇ ಆಗಿತ್ತು! ಸಮಾಜವಾದಿ ತತ್ವಾದರ್ಶ-ಹಿಂದುಳಿದ ಪರ ಕಾಳಜಿಯ 'ಬಂ' ಜೀವನದ ಸಂಧ್ಯಾಕಾಲದಲ್ಲಿ ಒಂಥರಾ ಎಡಬಿಡಂಗಿಯಂತಾಗಿಹೋಗಿದ್ದರು. ಆತ ಅರಳುಮರಳಿನ ದಿನಗಳಲ್ಲಿ ದೊಡ್ಡ ರಾಜಕೀಯ 'ಪಾತಕ'ವನ್ನೇ ಮಾಡಿಬಿಟ್ಟರು. ಕೋಮುವಾದಿ, ಮನುವಾದಿ ಹಿಂದುಳಿದವರ ವಿರೋಧಿ ಬಿಜೆಪಿಗೆ ಆತ ಸೇರಿದ್ದೇ ಇವತ್ತು ನಾಟಕದ ರಾಜಕಾರಣ ಈ ಪರಿ ಕೆಟ್ಟು ಗಬ್ಬೇಳಲು ಪ್ರಮುಖ ಕಾರಣ. ಜೀವನುದ್ದಕ್ಕೂ 'ಬಂ' ಪಾಲಿಸಿಕೊಂಡು ಬಂದಿದ್ದು ಧ್ಯೆಯೋದ್ದೇಶವನ್ನೇ ಮರೆತು ಆತ ಪ್ರತಿಗಾಮಿ ಚೆಡ್ಡಿ-ಕಾವಿ ಪಡೆಗೆ ಶರಣಾಗಿದ್ದರು. 'ಬಂ'ರಿಂದಾಗಿಯೇ ಆ ಪುರೋಹಿತಶಾಹಿ ಪಾರ್ಟಿಗೆ 75 ರಷ್ಟು ಶಾಸಕರನ್ನು 2004 ರಲ್ಲಿ ಗೆಲ್ಲಿಸಿಕೊಳ್ಳಲು ಸಾಧ್ಯವಾಯ್ತು! ಆನಂತರ ಕುಮಾರಸ್ವಾಮಿ ಅಧಿಕಾರದಾಹದಿಂದ ಬಿಜೆಪಿ ಮತ್ತಷ್ಟು ಕೊಬ್ಬಿತು. ಇವತ್ತು ಕೋಮು ರಾಜಕಾರಣದ ಸೋಂಕಿಲ್ಲದ ಕರ್ನಾಟಕ ಚೆಡ್ಡಿಗಳ ಹಿಡಿತಕ್ಕೊಳಗಾಗಿ ಖರಾಬೆದ್ದು ಹೋಗಿರುವುದಕ್ಕೆ ಬಂ-ಕುಮಾರಸ್ವಾಮಿಯೇ ಹೊಣೆ.

❖



'ಬಂ' ಬಂಡಾಯದಿಂದ ಡೀವಿಗೂ ಬಂತು ಭಾಗ್ಯ



'ಬಂ'ರ ಪಕ್ಷಗಳ ಕಟ್ಟುವ ಮತ್ತು ಒಡೆಯುವ ಕಸರತ್ತು ಅನೇಕ ಬಾರಿ ಅರ್ಹರಿಗೆ ಅನಾಹುತ-ಅನರ್ಹರಿಗೆ ಶಾಸಕ-ಸಂಸದಗಿರಿ ಭಾಗ್ಯ ಬರುವಂತೆ ಮಾಡಿಬಿಡುತ್ತಿತ್ತು! ಸ್ವಜಾತಿ ಈಡಿಗರು (ದೀವರು-ನಾಮಧಾರಿ-ಬಿಲ್ಲವ) ಮತ್ತು ಹಿಂದುಳಿದ ಜನಸಮುದಾಯದ ಮೇಲೆ 'ಬಂ'ಗೆ ಇದ್ದ ಪ್ರಭಾವದಿಂದ ಆತ ಪಕ್ಷಾಂತರ ಮಾಡಿದಾಗೆಲ್ಲ ಚುನಾವಣೆಯ ಸೂಕ್ತ-ಸಮೀಕರಣ ಹಠಾತ್ ಬದಲಾಗಿ ಬಿಡುತ್ತಿತ್ತು. ಆಗ ಸೋಲುವವರು ಗೆಲ್ಲುತ್ತಿದ್ದರು, ಗೆಲ್ಲಬೇಕಾದವರು ಮಣ್ಣು ಮುಕ್ಕುತ್ತಿದ್ದರು. ಕೋಮುವಾದಿ ಬಿಜೆಪಿಗಂತೂ 'ಬಂ' ಆತ್ಮಹತ್ಯಾತ್ಮಕ ರಾಜಕಾರಣದಿಂದ ಭರ್ಜರಿ ಲಾಭವಾಗಿದ್ದೂ ಇದೆ. ಕರಾವಳಿಯಲ್ಲಿ ಬಿಜೆಪಿಗೆ ಆರಂಭದಲ್ಲಿ ಜಾಕ್‌ಪಾಟ್ ಛಾನ್ಸ್ ಬಂದಿದ್ದೇ 'ಬಂ' ಭಂಡಾಟದಿಂದ.

1994 ರಲ್ಲಿ 'ಬಂ'ಗೆ ಕಾಂಗ್ರೆಸ್ ಕೊಲ್ಲುವ ಕೆಟ್ಟ ಹಠ ಹತ್ತಿತ್ತು, ಆಗಾತ ತನ್ನ ಮಹತ್ವಾಕಾಂಕ್ಷೆಯ ಆಶ್ರಯ-ಅಕ್ಷಯ-ಆರಾಧನಾ-ವಿಶ್ವ ಎಂಬ ಬಡವರ ಪರ ಕಾರ್ಯಕ್ರಮಕ್ಕೆ ಹಣ ಕೊಡದ ಅಂದಿನ ಪಿಎಂ ನರಸಿಂಹರಾವ್ ಎಂಬ ಮಹಾಬ್ರಾಹ್ಮಣನ ಮೇಲೆ ಸಿಟ್ಟಾಗಿದ್ದರು. ಅಂದು ಆತ ಕಾಂಗ್ರೆಸ್‌ಗೆ ಬೈ ಹೇಳಿ ಕೆಸಿಪಿ ಎಂಬ ಸ್ವಂತ ಪಕ್ಷ ಕಟ್ಟಿದ್ದರು. ಈ ಪಕ್ಷ ಶೇ. 8 ಮತ ಪಡೆದು ಕಾಂಗ್ರೆಸ್ ದಿವಾಳಿ ಮಾಡಿತ್ತು. ಆಗ 'ಬಂ'ಗೆ ಲಾಭವಾಗದಿದ್ದರೂ ಕೆಸಿಪಿ ಕಸಿದ ಮತದಿಂದ ಕರಾವಳಿಯಲ್ಲಿ ಬಿಜೆಪಿಗೆ ದೊಡ್ಡ ಪ್ರಯೋಜನವಾಯ್ತು. ಕುಮಟಾದ ಡಾ. ಎಂ.ಪಿ. ಕರ್ಕಿ, ಭಟ್ಕಳದ ಚಿತ್ತರಂಜನ್, ಸುರತ್ಕಲ್‌ನ ಕುಂಬಳೆ ಸುಂದರರಾವ್, ಪುತ್ತೂರಿನ ಡಿ.ವಿ. ಸದಾನಂದಗೌಡನಂಥ ಅನಾಹುತಕಾರಿ ಚೆಡ್ಡಿ ಚತುರರಿಗೆ ವಿಧಾನಸೌಧದ ಮೆಟ್ಟಿಲೇರುವ ಸೌಭಾಗ್ಯ ಖುಲಾಯಿಸಿಬಿಟ್ಟಿತ್ತು.

ಇಂದು ಸಿಎಂ ಆಗಿರುವ ಸದಾನಂದ ಗೌಡರಂತೂ ಅಂದು ಪುತ್ತೂರಲ್ಲಿ ಪ್ರಪ್ರಥಮವಾಗಿ ಶಾಸಕನಾಗಿ ಆಯ್ಕೆಯಾಗಿದ್ದೇ ಬರೀ 400 ಮತದಂತರದಿಂದ! ಆಗ ಶಾಸಕನಾಗಿದ್ದ ವಿನಯಕುಮಾರ್ ಸೊರಕೆ ಮೇಲೆ ಸ್ಥಳೀಯ ಕಾರಣಕ್ಕೆ ಮುನಿದಿದ್ದ ಬಂಟರು ಹೋಮನಾಥ ಶೆಟ್ಟಿ ಎಂಬಾತನನ್ನು 'ಬಂ' ರ ಕೆಸಿಪಿಯಿಂದ ಕಣಕ್ಕಿಳಿಸಿದ್ದರು. ಈತನಿಗೆ ಸ್ವಜಾತಿ ಮತಗಳಿಗಿಂತ ಹೆಚ್ಚಾಗಿ 'ಬಂ'ರ ಫ್ಯಾನ್‌ಗಳಾದ ಬಿಲ್ಲವರ ಮತಗಳೇ ಬಂದಿದ್ದವು. ಇವೆಲ್ಲ ಬಿಲ್ಲವರ ಹುಡುಗ ಸೊರಕೆಗೆ ಸೇರಬೇಕಾಗಿದ್ದ ಓಟುಗಳಾಗಿದ್ದವು. ಕೆಸಿಪಿ ಆಗ ಒಂದೂವರೆ ಸಾವಿರದಷ್ಟು ಮತ ಗಳಿಸಿತ್ತು. ಇದು ಕಾಂಗ್ರೆಸ್‌ಗೆ ಹಾನಿ ಮಾಡಿ ನಿಗೂಢ ನಗೆಯ ಪಕ್ಕಾ ಅನಾಹುತಕಾರಿ ಹಿಂದೂತ್ವವಾದಿ ಡಿ.ವಿ. ಸದಾನಂದ ಗೌಡರಿಗೆ ಶಾಸಕಗಿರಿ ಅನಾಯಾಸವಾಗಿ ಕೊಡಿಸಿಬಿಟ್ಟಿತ್ತು.

'ಬಂ'ರ ಕೆಸಿಪಿ ಇಲ್ಲದಿದ್ದರೆ ಡೀವಿ ಅಂದು ಶಾಸಕನಾಗುವುದು ಸಾಧ್ಯವೇ ಇರಲಿಲ್ಲ. ಆ ಬಳಿಕ ಡೀವಿ ಹಿಂತಿರುಗಿ ನೋಡಿದ್ದೇ ಇಲ್ಲ. ಕೋಮುವಾದಿ ರಾಜಕಾರಣದ ಚಾಂಪಿಯನ್ ಆಗಿಹೋದ ಡೀವಿ ಇವತ್ತು ಸಿಎಂ ಪೀಠಕ್ಕೇನಾದರೂ ಏರಿದಿದ್ದರೆ ಅದು 'ಬಂ'ರ ಕೆಡಹುವ ಕಾರ್ಯಾಚರಣೆಯ ಕೊಡುಗೆ ಅಷ್ಟೆ!!

❖



ದಾರಿ ತಪ್ಪಿದ ಒಂಟಿ ನಾಯಕ

• ಬಿ. ಚಂದ್ರೇಗೌಡ

"ಬಂಗಾರಪ್ಪ ಕಾಂಗ್ರೆಸ್ಸನ್ನ ಬಿಟ್ಟು ಹೋದಾಗಲೆಲ್ಲಾ ಹೊಸ ಪಾರ್ಟಿ ಮಾಡಿದ್ದಾರೆ. ಅವರ ಕೆಪಾಸಿಟಿ ಎಷ್ಟೆಂದರೆ ಏಳೆಂಟು ಶಾಸಕರನ್ನು ಗೆಲ್ಲಿಸಿ, ಹತ್ತಾರು ಕಾಂಗ್ರೆಸ್ ಶಾಸಕರನ್ನು ಸೋಲಿಸುವುದಾಗಿತ್ತು. ಇಂತಹವೇ ಕೆಲಸಗಳನ್ನು ಮೂರ್‍ನಾಲ್ಕು ಬಾರಿ ಮಾಡಿದ ಅವರು ಕಡೆಗೆ ಇಬ್ಬರು ಶಾಸಕರನ್ನು ಮಾತ್ರ ಗೆಲ್ಲಿಸಿಕೊಳ್ಳುವ ಮಟ್ಟಕ್ಕೆ ಬಂದರು. ಅವೂ ಎಂತಹ ಅನರ್ಘ್ಯ ರತ್ನಗಳೆಂದರೆ ಅಸಂಬದ್ಧವಾಗಿ ಮಾತನಾಡುವ ಬೇಳೂರು ಗೋಪಾಲಕೃಷ್ಣ ಮತ್ತು ಕಚ್ಚೆ ಹರುಕ ಹರತಾಳು ಹಾಲಪ್ಪ. ಬಂಗಾರಪ್ಪನವರ ಕೊನೆಗಾಲದಲ್ಲಿ ಇವರೂ ಅವರೊಂದಿಗೆ ಇರಲಿಲ್ಲ."

ನಿರ್ಗುರಂಜಿತ ರಾಜಕಾರಣಿ ಬಂಗಾರಪ್ಪನವರ ನಿಧನಕ್ಕೆ ...ಡಿನ ಎಲ್ಲಾ ವರ್ಗದ ಜನರೂ ಮರುಗಿದ್ದಾರೆ. ಬುದ್ಧಿ ...ಗಳೂ ಶೋಕಿಸಿದ್ದಾರೆ. ಸಿನಿಮಾ, ನಾಟಕ ಮತ್ತು ಜನಪದ ...ದರಲ್ಲದೇ ತಬ್ಬಲಿ ಜಾತಿಯ ಜನಗಳು ಕೂಡಾ ತಮ್ಮ ...ಕ ಇನ್ನಿಲ್ಲವಾದನೆಂದು ಶೋಕಿಸಿದ್ದಾರೆ. ಹಾಗೆ ...ದರೆ ಹಿಂದುಳಿದ ವರ್ಗದ ಏಕೈಕ ನಾಯಕ ಬಂಗಾರಪ್ಪ ...ದರಲ್ಲಿ ಎರಡು ಮಾತಿಲ್ಲ. ಇಂದಿರಾಗಾಂಧಿ ಗರೀಬಿ ...ವ್ ಎಂಬ ಘೋಷಣೆಯ ಕಾರಣಕ್ಕೆ ಹೇಗೆ ದೇಶದ ...ರ, ನಿರ್ಗತಿಕರ ನಾಯಕಿಯಾಗಿಬಿಟ್ಟಳೋ, ಹಾಗೆಯೇ ...ರಪ್ಪನವರೂ ಕೂಡ ತಾನು ಬಡವರ ಬಂಧು ಎಂದು ...ಕೊಂಡ ಕಾರಣಕ್ಕೆ ಹಿಂದುಳಿದ ವರ್ಗದ ಪ್ರಶ್ನಾತೀತ ...ಕರಾಗಿ ಉಳಿದರು. ಅವರ ಕ್ಷೇತ್ರದ ಜನರಂತೂ ...ಂದ ಏನೂ ನಿರೀಕ್ಷಿಸದೆ ಗೆಲ್ಲಿಸುತ್ತಾ ಹೋದರು. ...ದರೆ 1983ರ ಚುನಾವಣೆಯಲ್ಲಿ ಬಂಗಾರಪ್ಪ ತನ್ನ ...ಕಾಲಿಡದೆ ಗೆದ್ದು ಬಂದರು. ನಂತರ ಸೊರಬದಲ್ಲಿದ್ದರೂ ...ಸುತ್ತದೆ ಗೆದ್ದು ಬಂದರು. ಇಂತಹ ದಾಖಲೆಯನ್ನು ...ಟಕದ ಯಾವ ರಾಜಕಾರಣಿಯೂ ಮಾಡಿಲ್ಲ.

...ಈ ರೂಪದಲ್ಲಿ ಬಡವರು, ಹಿಂದುಳಿದವರು ಮತ್ತು ...ತಿಕರು ಕಣ್ಣುಮುಚ್ಚಿಕೊಂಡು ಬಂಗಾರಪ್ಪರನ್ನು ...ಲಿಸಲು ಕಾರಣವೇನೆಂದು ಯೋಚಿಸಿದರೆ, ಬಂಗಾರಪ್ಪ ...ಗೆ ಬಡವರ ಬಗೆಗಿದ್ದ ಕಾಳಜಿ ಮತ್ತು ಭಾಷಣದ ...ಯಲ್ಲಿ ಜನ ನಂಬಿಕೆ ಇಟ್ಟಿದ್ದರು. ಬಂಗಾರಪ್ಪನವರಿಗೆ ...ರನ್ನು ಮೇಲೆತ್ತುವ ಕಾಳಜಿ ಮತ್ತು ಕನಸುಗಳಿದ್ದವು. ...ನಸು ಈಡೇರಬೇಕಾದರೆ ಅಧಿಕಾರ ಬೇಕು. ಅಧಿಕಾರ ...ಮಬೇಕಾದರೆ ಸಹನೆ, ಸೈರಣೆ ಮತ್ತು ಸಹಬಾಳ್ವೆಯ ...ನ್ನು ಮೇಳೈಸಿರಬೇಕು. ಆದರೆ ಬಂಗಾರಪ್ಪನಿಗೆ ಅವೇ ...ಲ್ಲ, ಅವರು ಖಾಸಗಿಯಾಗಿ ಮಾತನಾಡುವಾಗ ...ಗನ್ನು ಹಿಡಿದುಕೊಂಡು 'ನನ್ನ ಪ್ರಕಾರ' ಎನ್ನುತ್ತಿದ್ದರು. ...ವಾಗಿ ಯೋಚಿಸಿದರೆ ಅವರದ್ದೇ ಒಂದು ಪ್ರಕಾರವಿತ್ತು. ...ಕಾರಕ್ಕೆ ಅಡ್ಡಿ ಬಂದ ಯಾವುದೇ ವಿವೇಕವನ್ನಾಗಲೀ, ...ಳಿಕೆಯನ್ನಾಗಲಿ ಅವರು ಕೇಳಿಸಿಕೊಳ್ಳುತ್ತಿರಲಿಲ್ಲ. ...ದ್ದೆ ಹಠ. ಹಠ ಎಂದರೆ ಆತ್ಮಹತ್ಯಾತ್ಮಕವಾದ ಹಠ. ... ಫಲವಾಗಿ ಏಕಾಂಗಿ ನಾಯಕನಾಗಿ ಅಲೆದರು.

...ಅವರು ಮೊಟ್ಟಮೊದಲು ಕರ್ನಾಟಕದ ಜನಕ್ಕೆ ಆಘಾತ ...ದ್ದು, ಇಂದಿರಾಗಾಂಧಿಯ ಚಿತಾವಣೆಯಿಂದ ಅರಸು ...ದ್ಧ ನಿಂತಾಗ. ಮುಂದೆ ಹಲವು ಜನ ನಾಯಕರು ...ರಪ್ಪನವರನ್ನ ಈ ಬಗ್ಗೆ ಹೀಯಾಳಿಸುತ್ತಿದ್ದರು. ...ಸದಲ್ಲೇ ಒಮ್ಮೆ ಹೆಗಡೆ 'ನಾವು ಅರಸುರನ್ನು ...ರೋಧಿಸಿದ್ದು ನಿಜ. ಆದರೆ ಬೆನ್ನಿಗೆ ಚೂರಿ ಹಾಕಲಿಲ್ಲ' ...ಲ್ಲಾ ಮೂದಲಿಸಿದಾಗ ಬಂಗಾರಪ್ಪ ನಿರುತ್ತರರಾಗಿದ್ದರು. ...ಅರಸುಗೆ ತಿರುಗಿಬಿದ್ದ 'ಬಂ' ಮುಂದೆ ಇಂದಿರಾ ...ಧಿಗೂ ತಿರುಗಿಬಿದ್ದರು. ಗುಂಡೂರಾಯರನ್ನ ...ಕನೆಂದು ಒಪ್ಪಿಕೊಳ್ಳಲಾಗದೆ ನೇರ ಇಂದಿರಾಗಾಂಧಿ ...ಗೆ ಹೋಗಿ ರಾಜೀನಾಮೆ ಸಲ್ಲಿಸಿ ಬಂದರು. ಹೀಗೆ ತಮ್ಮ ...ಮಾನಕ್ಕೆ ಧಕ್ಕೆ ಬಂದಾಗಲೆಲ್ಲಾ... ಸಿಡಿದು ನಿಂತು ದೂರ ...ಗುತ್ತಿದ್ದ ಬಂಗಾರಪ್ಪ 1983ರ ಚುನಾವಣೆಯಲ್ಲಿ ಹೆಗಡೆ ...ವರು ಮುಖ್ಯಮಂತ್ರಿಯಾಗಲಿದ್ದಾಗ ಅವರನ್ನು ...ವೊಲಿಸಲು ಬಂದ ದೇವೇಗೌಡರಿಗೆ ಗೂಸಾ ಕೊಟ್ಟು ...ಸಿದ್ದರು. ಕಡೆಗೆ ದೇವೇಗೌಡರ ಮನೆಯ ಪಾರ್ಟಿ ...ಕೊಂಡಿದ್ದು ಒಂದು ವಿಪರ್ಯಾಸ!

...ಬಂಗಾರಪ್ಪ ಹಲವು ಪ್ರತಿಭೆಗಳನ್ನು ಹೊಂದಿದ್ದರು. ...ರು ಹಿಂದೂಸ್ಥಾನಿ ಸಂಗೀತ ಕಲಿತಿದ್ದರೂ ಒಳ್ಳೆಯ ...ತೃವಾಗಿ ಉಳಿದರೇ ಹೊರತು ಕಚೇರಿ ನೀಡುವವ ...ರಲಿಲ್ಲ. ಒಳ್ಳೆಯ ಬ್ಯಾಡ್ಮಿಂಟನ್ ಪಟುವಾಗಿದ್ದರೂ ಯಾವ ...ಯಲ್ಲೂ ಭಾಗವಹಿಸದೆ, ಅಗತ್ಯಕ್ಕೂ ಮೀರಿ ...ಗಟ್ಟಲೇ ಆಡಿ ಮಂಡಿ ನೋವು ತಂದುಕೊಂಡರು. ... ವಕೀಲರಾಗಿದ್ದರೂ ಅದೂ ಮುಂದುವರೆಯಲಿಲ್ಲ. ...ವರು ದೀನದಲಿತರ ಬಗ್ಗೆ ತೀವ್ರ ಕಾಳಜಿ ಹೊಂದಿದವ ...ದ್ದರೂ ಅವರಿಗೆ ಏನಾದರೂ ಮಾಡುವ ಅವಕಾಶ ...ಲ್ಲ. ಸಿಕ್ಕಿದ್ದ ಎರಡು ವರ್ಷಗಳ ಮುಖ್ಯಮಂತ್ರಿಗಿರಿಯಲ್ಲಿ ...ಸುಳಿದ ಜನ ಅರಸು ಕಾಲ ಮರುಕಳಿಸುತ್ತದೆ ಎಂದು ...ಸಿದ್ದರು. ಆದರೆ ಕರ್ನಾಟಕ ಬೆಚ್ಚಿ ಬೀಳುವಂತಹ ಆಡಳಿತ ...ರಪ್ಪನವರ ಅವಧಿಯಲ್ಲಿ ಆರಂಭಗೊಂಡಿತು. ಅವರ ...ಟದ ಮಂತ್ರಿಗಳನ್ನು ನೋಡಿದರೆ ಸಾಕು, ಬಂಗಾರಪ್ಪ ...ಯ ಸರ್ಕಾರವನ್ನು ಕೊಡಲು ಸಾಧ್ಯವೇ ಇಲ್ಲ ಎಂದು ...ಗಾದರೂ ಹೊಳೆಯುತ್ತಿತ್ತು, ಹಾಗೆಯೇ ಆಯಿತು.

...ಅವರು ಬಹು ಕಾಳಜಿಯಿಂದ ತಂದ ಅಕ್ಷಯ, ಆಶ್ರಯ, ...ಶ್ರಿಸೆ, ಯೋಜನಾ, ವಿಶ್ವ ಮತ್ತು ಗ್ರಾಮೀಣ ಕೃಪಾಂಕದ ...ರ್ಯಕ್ರಮ ಕ್ರಾಂತಿಕಾರಿಯಾಗಿದ್ದವು. ಆದರೆ ಈ ಪೈಕಿ ...ಯುವಾಗಲೇ ಕೋಟ್ಯಂತರ ರೂಪಾಯಿ ಹಗರಣದಲ್ಲಿ ...ಕೊಂಡಿತ್ತು, ದಿಢೀರನೆ ಪ್ರಕಟಗೊಂಡ ಕಾರ್ಯಕ್ರಮಗಳನ್ನು ...ಷ್ಠಿಗೊಳಿಸಲು ಸರ್ಕಾರಿ ಕರ್ಮಚಾರಿಗಳು ತಯಾರಿರ... ಯೋಜನೆಗಳು ಅನುಷ್ಠಾನಗೊಳ್ಳುತ್ತಿದ್ದಂತೆ. ಸಾಧನೆ ...ವೇಶ ಜರುಗಿತು. ಆಗ ನಾಗಮಂಗಲದ ವಕೀಲ ...ಧರ ಮೂರ್ತಿ ಕೊಲೆಯಾಗಿತ್ತು; ಬಂಗಾರಪ್ಪನವರೂ ...ಲರಾಗಿದ್ದರು. ಆದರೆ ಕೊಲೆ ಆರೋಪ ಹೊತ್ತಿದ್ದ ...ರಿಗೆ ರಕ್ಷಣೆ ಕೊಟ್ಟಿದ್ದರು. ಇದನ್ನು ಪ್ರತಿಭಟಿಸಿ ಬಂದ್ ...ರಣೆ ವೇಳೆ ಗೋಲಿಬಾರಾಗಿ ಒಬ್ಬ ಮೃತನಾಗಿದ್ದ. ಇದೇ ...ಸಮಯವೆಂದು ಬಂದ ದೇವೇಗೌಡರು ಸಭೆಗಳು ...ಇತ್ಯಾದಿ ಕಾರ್ಯಕ್ರಮಗಳನ್ನ ಜರುಗಿಸುತ್ತಾ ಬಂಗಾರಪ್ಪ ...ದ್ಧ ಹೋರಾಡುತ್ತಿದ್ದರು.

ಬಂಗಾರಪ್ಪ ಆಗ ಅನುಭವಿಸಿದ್ದು ಅವರ ಶಕ್ತಿಸಾಮರ್ಥ್ಯದಿಂದ ತಂದ ಅಧಿಕಾರವನ್ನಲ್ಲ. ಬದಲಿಗೆ ವೀರೇಂದ್ರ ಪಾಟೀಲರು ತಂದ ಸರಕಾರದಲ್ಲಿ ಮುಖ್ಯಮಂತ್ರಿಯಾಗಿದ್ದರು. ಜನಾಭಿಪ್ರಾಯವಿಲ್ಲದ ಮೇಲೆ ಅಧಿಕಾರ ಸಿಕ್ಕಾಗ ಅದನ್ನ ಗಳಿಸಿಕೊಳ್ಳಬೇಕಾಗುತ್ತದೆ. ಅದನ್ನೇ ಮಾಡಲಿಲ್ಲ ಅವರು.

ಮುಖ್ಯಮಂತ್ರಿ ಪಟ್ಟವನ್ನ ಒಂದು ರೀತಿ ಜಾಲಿಯಾಗಿ ಅನುಭವಿಸತೊಡಗಿದರು. ಅದೂ ತನಗಿಷ್ಟ ಬಂದಂತೆ ಸ್ವೇಚ್ಛಾಚಾರದಲ್ಲಿ. ಆಗ 'ಬಂ'ರನ್ನು ಬಲಿ ತೆಗೆದುಕೊಳ್ಳಲು ಕಾಂಗ್ರೆಸ್ ತಯಾರಾಯ್ತು. ಅದರಂತೆ ದಕ್ಷಿಣ ಕನ್ನಡದ ಮೊಯ್ಲಿ ಅವರನ್ನು ತಂದು ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರಿಸಿತು. ಇಂದೂ ಕೂಡ ಇತಿಹಾಸ ಮರುಕಳಿಸಿದೆ. ದ.ಕ.ದ ಸದಾನಂದ ಗೌಡರು ಮುಖ್ಯಮಂತ್ರಿಯಾದರೆ, ಬಂಗಾರಪ್ಪನವರ ಹಾದಿಗೆ ಯಡೂರಪ್ಪನವರು ತಯಾರಾಗುತ್ತಿದ್ದಾರೆ.

ಆದರೆ ಬಂಗಾರಪ್ಪನವರ ಚಾಲೆಂಜನ್ನು ಯಾರೂ ತೆಗೆದುಕೊಳ್ಳಲಾರರು. ಕಾಂಗ್ರೆಸ್ಸನ್ನ ಬಿಟ್ಟು ಹೋದಾಗಲೆಲ್ಲಾ ಹೊಸ ಪಾರ್ಟಿ ಮಾಡಿದ್ದಾರೆ. ಅವರ ಕೆಪಾಸಿಟಿ ಎಷ್ಟೆಂದರೆ ಏಳೆಂಟು ಶಾಸಕರನ್ನು ಗೆಲ್ಲಿಸಿ, ಹತ್ತಾರು ಕಾಂಗ್ರೆಸ್ ಶಾಸಕರನ್ನು ಸೋಲಿಸುವುದಾಗಿತ್ತು. ಇಂತಹವೇ ಕೆಲಸಗಳನ್ನು ಮೂರ್‍ನಾಲ್ಕು ಬಾರಿ ಮಾಡಿದ ಅವರು ಕಡೆಗೆ ಇಬ್ಬರು ಶಾಸಕರನ್ನು ಮಾತ್ರ ಗೆಲ್ಲಿಸಿಕೊಳ್ಳುವ ಮಟ್ಟಕ್ಕೆ ಬಂದರು. ಅವೂ ಎಂತಹ ಅನರ್ಘ್ಯ ರತ್ನಗಳೆಂದರೆ ಅಸಂಬದ್ಧವಾಗಿ ಮಾತನಾಡುವ ಬೇಳೂರು ಗೋಪಾಲಕೃಷ್ಣ ಮತ್ತು ಕಚ್ಚೆ ಹರುಕ ಹರತಾಳು ಹಾಲಪ್ಪ. ಬಂಗಾರಪ್ಪನವರ ಕೊನೆಗಾಲದಲ್ಲಿ ಇವರೂ ಅವರೊಂದಿಗೆ ಇರಲಿಲ್ಲ. ಈ ಪೈಕಿ ಹರತಾಳ ಹಾಲಪ್ಪನಂತೂ ಕಡುವೈರಿಯಾಗಿದ್ದರು.

ಒಮ್ಮೆ ಇದ್ದಕ್ಕಿದ್ದಂತೆ ಬಂಗಾರಪ್ಪನವರು ಕೈಯಲ್ಲಿ ಕಮಲ ಹಿಡಿದು ದರ್ಗಾ ಮಂದಿರಕ್ಕೆ ಲಗ್ಗೆಯಿಟ್ಟರು. ನಿಜಕ್ಕೂ ಅದು ಅವರ ಪತನದ ಮೊದಲ ಹೆಜ್ಜೆಯಂತಿತ್ತು. 'ಸಮಾಜವಾದಿ, ಸ್ವಾಭಿಮಾನಿ ಬಂಗಾರಪ್ಪ ಬಿಜೆಪಿಗೆ ಹೊರಟರೆ ಇರಲಾಗದು' ಎಂದು ಇಡೀ ಕನ್ನಡನಾಡು ಅನುಮಾನಗೊಳ್ಳುವಷ್ಟರಲ್ಲಿ ಬಂಗಾರಪ್ಪ ಮೋದಿ ಜೊತೆ ಕೈಜೋಡಿಸಿಯಾಗಿತ್ತು. ಯಾವ ನೆಲದಲ್ಲಿ ಗೋಪಾಲಗೌಡರು ಕಾಲುನಡಿಗೆಯಲ್ಲಿ ಮತ ಕೇಳುತ್ತ ಅಲೆದಿದ್ದರೋ, ಯಾವ ಪ್ರದೇಶದಲ್ಲಿ ಕುವೆಂಪು ತಿರುಗಾಡಿದ್ದರೊ ಅಂತ ಐತಿಹಾಸಿಕ ಜಾಗಕ್ಕೆ ಗುಜರಾತಿನ ಮೋದಿ ಬಂದಾಗ ಅವರ ಕೈಹಿಡಿದು ಮೇಲೆತ್ತಿದ ಬಂಗಾರಪ್ಪನವರನ್ನು ಬಹುಶಃ ಇತಿಹಾಸ ಎಂದೂ ಕ್ಷಮಿಸದು. ಬಂಗಾರಪ್ಪನವರ ಜೊತೆಗೆ ಶಿವಮೊಗ್ಗ, ಉತ್ತರಕನ್ನಡ ಮತ್ತು ದಕ್ಷಿಣ ಕನ್ನಡದ ಮುಗ್ಧ ಮತದಾರರು ಬಿಜೆಪಿಗೆ ಹೋಗಿಬಿಟ್ಟರು. ಆದರೆ ಬಂಗಾರಪ್ಪ ಬಿಜೆಪಿ ತೊರೆದು ಬಂದಾಗ ಮತದಾರ ಅಲ್ಲೇ ಉಳಿದು ಬಂಗಾರಪ್ಪ ಮಾತ್ರ ಬಂದಿದ್ದರು.



ಬಂಗಾರಪ್ಪನ ಈ ದಿಢೀರ್ ನಿರ್ಧಾರಕ್ಕೂ ಒಂದು ಪ್ರಬಲ ಕಾರಣವಿತ್ತು, ಅವರು ಎಸ್ಸೆಂ ಕೃಷ್ಣನಿಗೆ ವಿರೋಧ ಪಕ್ಷವೇ ಇಲ್ಲದಂತೆ ಮಾಡಿದ್ದರು. ಶಿವಮೊಗ್ಗ ಜಿಲ್ಲೆಯ ಟಿಕೆಟ್ ವಿಷಯದ ಜವಾಬ್ದಾರಿ ಹೊತ್ತ ಬಂಗಾರಪ್ಪ ಶಿಕಾರಿಪುರಕ್ಕೆ ಸಾದ ಲಿಂಗಾಯತರ ಮಹಾಲಿಂಗಪ್ಪನನ್ನ ನಿಲ್ಲಿಸಿ ಯಡೂರಪ್ಪನನ್ನೇ ಉಡಾಯಿಸಿದ್ದರು. ಇನ್ನು ಶಿವಮೊಗ್ಗಕ್ಕೆ ಚಂದ್ರಶೇಖರಪ್ಪನೆಂಬ ಹುಂಬನನ್ನು ನಿಲ್ಲಿಸಿ ಈಶ್ವರಪ್ಪನನ್ನ ತೆಗೆದಿದ್ದರು. ಈ ಪೈಕಿ ಭದ್ರಾವತಿಯ ಸಂಗಮೇಶ ಒಂದು ಸಾಮಾಜಿಕ ಸಮಸ್ಯೆಯಾಗಿದ್ದರಿಂದ ಜನ ಆತನನ್ನು ಸೋಲಿಸಿದ್ದರು. ಹೀಗೆ ಟಿಕೆಟ್ ಹಂಚುವಲ್ಲಿ ಚಾಣಾಕ್ಷತೆ ಮೆರೆದು ಎಸ್ಸೆಂ ಕೃಷ್ಣನಿಗೆ ವಿರೋಧ ಪಕ್ಷವೇ ಇಲ್ಲದಂತೆ ಮಾಡಿಕೊಟ್ಟ ಬಂಗಾರಪ್ಪನವರನ್ನ ಕೃಷ್ಣ ಪಟಾಲಂ ಗೌರವಯುತವಾಗಿ ನಡೆಸಿಕೊಳ್ಳಬೇಕಿತ್ತು. ಮೂಲತಃ ಕಾಂಗ್ರೆಸ್ ಇಂತಹದ್ದನ್ನೆಲ್ಲಾ ಗಮನಿಸಿ ಪುರಸ್ಕಾರ ನೀಡುವುದಿಲ್ಲ. ಅದು ತನ್ನ ಜಾಯಮಾನಕ್ಕೆ ತಕ್ಕಂತೆ ಇಡುತ್ತದೆ. ಅದನ್ನು ಬಂಗಾರಪ್ಪ ಅರ್ಥಮಾಡಿಕೊಂಡು ರಾಜಕಾರಣ ಮಾಡಿದ್ದರೆ ರಾಷ್ಟ್ರನಾಯಕರೂ ಆಗಬಹುದಿತ್ತು. ಆದರೆ ಕೇಂದ್ರದಲ್ಲಿ ಪುನಃ ಬಿಜೆಪಿ ಬರುತ್ತದೆ ಎಂದು ಗ್ರಹಿಸಿ ತಮ್ಮ ವ್ಯಕ್ತಿತ್ವಕ್ಕೆ ಒಗ್ಗದ ಚಡ್ಡಿ ತೊಟ್ಟು ಲಾರಿ ಹಿಡಿದು ದೆಹಲಿಗೆ ಹೋದರೆ ವಾಜಪೇಯಿ ಟೀಮು ತಣ್ಣಗೆ ಮನೆಗೆ ಹೋಗಿಬಿಟ್ಟಿತು.

ಮತ್ತೆ ಬಂಗಾರಪ್ಪನವರ ಅಲೆದಾಟ ಪ್ರಾರಂಭವಾಯ್ತು. ಬಿಜೆಪಿಗೆ ರಾಜೀನಾಮೆ ನೀಡಿ ಪುನಃ ಲೋಕಸಭೆಗೆ ಸ್ಪರ್ಧಿಸಿದರು. ಅವರ ಸುದೈವಕ್ಕೆ ದೇವೇಗೌಡರು ಒಬ್ಬ ಬ್ರಾಹ್ಮಣನನ್ನು ಜೆಡಿಎಸ್ ಕ್ಯಾಂಡೇಟ್ ಮಾಡಿ ಐವತ್ತು ಸಾವಿರ ಓಟು ಕಿತ್ತು, ಬಂಗಾರಪ್ಪ ಗೆಲ್ಲುವಂತೆ ಮಾಡಿದರು. ಇಂತಹ ರಿಸ್ಕನ್ನ ದೇವೇಗೌಡರು ಕಳೆದ ಚುನಾವಣೆಯಲ್ಲಿ ತೆಗೆದುಕೊಳ್ಳದ ಕಾರಣವಾಗಿ ಬಂಗಾರಪ್ಪ ಅದೇ ಐವತ್ತು ಸಾವಿರ ಮತದಲ್ಲಿ ರಾಘವೇಂದ್ರನ ಎದುರು ಸೋತುಹೋದರು. ಅಷ್ಟೇ ಅಲ್ಲ, ಯಡೂರಪ್ಪನ ಎದುರು ಹೀನಾಯವಾಗಿ ಸೋತುಹೋದರು. ಆದರೆ ಸಿಟ್ಟುಗೊಂಡ ಬಂಗಾರಪ್ಪ ತನ್ನ ನಿರ್ಧಾರವನ್ನು ನಿಂದಿಸಿಕೊಳ್ಳುವ ಬದಲು ಮತದಾರರನ್ನೇ ಬೈದು ಹೋದರು. ಅಲ್ಲಿಗೆ ಚುನಾವಣಾ ಇತಿಹಾಸ ಮುಗಿದು ಹೋಯ್ತು.

ಬಂಗಾರಪ್ಪನವರು ತಮ್ಮ ಮಾರ್ಗದಲ್ಲಿ ಹೊರಟಾಗ ಅವರ ಹಿಂಬಾಲಕರು ಪ್ರಶ್ನೆ ಮಾಡದೆ ಮರುಮಾತನಾಡದೆ ಅನುಸರಿಸಬೇಕಿತ್ತು, ಈ ಬಗ್ಗೆ ಕಿಂಚಿತ್ತು ಅನುಮಾನ ಬಂದರೂ ಬಂಗಾರಪ್ಪ ಕೂಡಲೇ ಅವರನ್ನು ತಿರಸ್ಕರಿಸಿ ಅವರನ್ನು ಹತ್ತಿರ ಸೇರಿಸುತ್ತಿರಲಿಲ್ಲ, ಅವರಿದ್ದಲ್ಲಿ ಸುಳಿಯುತ್ತಿರಲಿಲ್ಲ, ಅವರ ತೀವ್ರ ಸೇಡಿಗೆ ತುತ್ತಾದವರೆಂದರೆ ಹೊಸನಗರದ ಸ್ವಾಮಿರಾವ್ ಮತ್ತು ಕಾಗೋಡು ತಿಮ್ಮಪ್ಪ. ತಿಮ್ಮಪ್ಪನವರಂತೂ ತೀರಾ ಅವಮಾನ ಮತ್ತು ತೊಂದರೆ ಅನುಭವಿಸಿದ್ದಾರೆ.

ತಿಮ್ಮಪ್ಪನವರನ್ನು ಸೋಲಿಸಲೋಸ್ಕರ ಬಿಜೆಪಿ ಸೇರಿದ್ದ ಬಂಗಾರಪ್ಪ ಮತೀಯ ಗಲಭೆಯನ್ನೇ ಮಾಡಿಸಿಬಿಟ್ಟರು. ಆ ಸಮಯದಲ್ಲಿ ಬಂಗಾರಪ್ಪನ ಬಾಯಿಯಿಂದ ಹೊರಟ ಮತೀಯ ಗಲಭೆಯ ಮಾತುಗಳಿಂದ ಬೆಚ್ಚಿದ ತಿಮ್ಮಪ್ಪನವರು ಮುಂಗಡವಾಗಿ ದೂರು ದಾಖಲಿಸಿದ್ದರು.

ಎಲ್ಲಾ ಆದ ಮೇಲೆ ಬಂಗಾರಪ್ಪ ಕೆಲವು ಆಯ್ದ ಗಲಭೆ ಪೀಡಿತ ಪ್ರದೇಶಕ್ಕೆ ಬಂದು 'ಎಲ್ಲರೂ ಶಾಂತ ರೀತೀಲಿ ಅಣ್ಣತಮ್ಮಂದಿರ ತರ ಇರಬೇಕು' ಎಂದು ಭಾಷಣ ಬಿಗಿಯುವಾಗ ಒಬ್ಬ 'ಎಲ್ಲಾ ಈಗ ಬಂದು ಮಾತಾಡೋರೆ. ಪೊಲೀಸರು ನಮಗೆ ಓಡಿಸ್ಯಾಡಿಕೊಂಡು ಹೊಡೀವಾಗ ಯಾರೂ ಇರಲಿಲ್ಲ" ಎಂದ. ಕೆರಳಿದ ಬಂಗಾರಪ್ಪ "ಆಗ ನಾನು ಡಿಲ್ಲಿಲಿದ್ದೆ. ಅಲ್ಲಿಂದ ಬರಬೇಕು ಅಂದ್ರೆ ಸುಮ್ನೆ ಆಗ್ತದೇನೋ ಡೆಲ್ಲಿಯಿಂದ ಬೆಂಗಳೂರಿಗೆ ಬರಬೇಕು. ಅಲ್ಲಿಂದ ಶಿವಮೊಗ್ಗಕ್ಕೆ ಬರಬೇಕು, ಅಲ್ಲಿಂದ ಸಾಗರಕ್ಕೆ ಬರಬೇಕು ಅಂದ್ರೆ, ಇಲ್ಲಿ ಕರ್ಫ್ಯೂ ಹಾಕಿದಾರೆ. ಹೆಂಗೆ ಬರಬೇಕೊ" ಎಂದು ರೇಗಿದರು. ಕರ್ಫ್ಯೂ ಹಾಕಿರುವಾಗ ಸಾಹೇಬ್ರು ಹೆಂಗೆ ಬರುತರೊ ಎಂದು ಸಭಿಕರು ಆತನಿಗೆ ಗದರಿ ನೂಕಿದರು. ಅಂತೂ ಕಡೆಗೂ ಬಂಗಾರಪ್ಪ ತಿಮ್ಮಪ್ಪನನ್ನ ತೆಗೆದೇ ಬಿಟ್ಟರು. ಆದರೂ ಕಷ್ಟಕಾಲದಲ್ಲಿ ಇಬ್ಬರೂ ಒಂದಾಗಿ ಸವತಿಯರಂತೆ ಮಾತನಾಡುವುದು ಮೋಜಿನದಾಗಿತ್ತು. ಇತ್ತೀಚೆಗೆ ಕೂಡಾ ಯಾಕೋ ಜೆಡಿಎಸ್‌ನ ರಾಜಕಾರಣದಿಂದಲೂ ಬೇಸತ್ತಿದ್ದ ಬಂಗಾರಪ್ಪ ಮರಳಿ ಕಾಂಗ್ರೆಸ್ಸಿನ ಕಡೆ ಹೊರಟಿದ್ದರು.

ಆದರೆ ಕಾಂಗ್ರೆಸ್‌ನಲ್ಲಿರುವ ಕುಮಾರ್ ಬಂಗಾರಪ್ಪನನ್ನು ನೆನೆಸಿಕೊಂಡ ಕೂಡಲೇ ಅವರ ಕೋಪ ಕೆರಳುತ್ತಿತ್ತು. ತಂದೆ ಮಗನಲ್ಲಿ ಯಾಕೆ ಇಷ್ಟೊಂದು ದ್ವೇಷ ಎಂಬುದನ್ನ ಯಾರೂ ಸರಿಯಾಗಿ ಅರ್ಥೈಸಲಾಗದವರಾಗಿದ್ದರು. ಕುಮಾರ್ ಬಂಗಾರಪ್ಪನಲ್ಲಿ ಒಂದಿಷ್ಟು ಸ್ವಾರ್ಥದ ಗುಣವಿದೆ ಎಂಬುದು ಎಲ್ಲರಿಗೂ ಗೊತ್ತು. ಹಣಕಾಸಿನ ವಿಷಯದಲ್ಲಿ ಜಗಳವಾಡಿಕೊಂಡ ಅಪ್ಪಮಕ್ಕಳು ಅರ್ಧರಾತ್ರಿಯಲ್ಲಿ ಬೇರೆಯಾದರು ಎಂಬುದು ಎಷ್ಟು ನಿಜವೋ ಸುಳ್ಳೋ? ಆದರೆ ಸಭೆಗಳಲ್ಲಿ ಬಂಗಾರಪ್ಪ ಮಗನನ್ನ ಟೀಕಿಸುತ್ತಿದ್ದ ಪರಿಗೆ ಸೊರಬದ ಜನ ಬೆಚ್ಚಿಬಿದ್ದರು. ಯಾರಿಗೂ ಇಂತಹ ಮಗ ಹುಟ್ಟಬಾರದು ಎಂದು ಸಭೆಗಳಲ್ಲಿ 'ಬಂ' ಹೇಳುತ್ತಿದ್ದರು. "ಜಿಲ್ಲಾ ಪಂಚಾಯತಿ ಚುನಾವಣಾ ಖರ್ಚಿಗೆ ಪಾರ್ಟಿ ಕೊಟ್ಟ ಹಣವನ್ನೇ ಯಾವ ಅಭ್ಯರ್ಥಿಗೂ ಕೊಡದೆ ಲಪಟಾಯಿಸಿದನಂತೆ" ಎಂದು ಬಂಗಾರಪ್ಪನೇ ಮಗನ ವಿರುದ್ಧ ದೂರಿದ್ದರು. ಇದರಿಂದ ಬಂಗಾರಪ್ಪ ದ್ವೇಷ ಮಾಡುವುದರಲ್ಲಿ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಮತ್ತು ಇತರರು ಎಂಬ ಭೇದಭಾವವಿಲ್ಲ ಅಂತಹ ನಿಷ್ಠುರ ವ್ಯಕ್ತಿ ಎಂದು ಜನಗಳಿಂದಲೇ ಮೆಚ್ಚುಗೆ ಪಡೆದಿದ್ದರು. ನಲ್ವತ್ತೈದು ವರ್ಷ ರಾಜಕಾರಣ ಮಾಡಿ ನಾಲ್ಕೂವರೆ ವರ್ಷ ಮಾತ್ರ ಅಧಿಕಾರದಲ್ಲಿದ್ದರೂ ಕರ್ನಾಟಕದ ನಾಯಕನಾಗಿ ಮೆರೆದ ಬಂಗಾರಪ್ಪ "ಏನು ಮಾಡಿ ಏನು ಬಂತಣ್ಣಾ" ಎಂಬ ನಾಣ್ಣುಡಿಗೆ ಪಕ್ಕಾ ಆಸಾಮಿಯಾಗಿಯೇ ಕಾಣುತ್ತಾರೆ. ಹಾಗೆಯೇ ದಾರಿತಪ್ಪಿ ನಡೆದ ಒಂಟಿ ನಾಯಕನಾಗಿಯೂ ಕಾಣುತ್ತಾರೆ. ಕರ್ನಾಟಕದ ತುಂಬಾ ಅಲ್ಲಲ್ಲಿ ಬಂಗಾರಪ್ಪ ಬೆಳೆಸಿರುವ ಜನ ನೋಡಿದರೆ ಎಷ್ಟು ನಿರಾಶೆಯಾಗುತ್ತದೆ ಎಂದರೆ ಈ ಬಂಗಾರಪ್ಪನವರಿಗೆ ರಾಜಕಾರಣ ಮಾಡಲು ಮಾನವಂತ ಜನಗಳೇ ಸಿಗಲಿಲ್ಲವೆ ಅನ್ನಿಸುತ್ತದೆ. ಸ್ವತಃ ಸ್ವಾಭಿಮಾನ ಮೆರೆದ ಬಂಗಾರಪ್ಪನವರಿಗೆ ಸ್ವಾಭಿಮಾನಿ ಹಿಂಬಾಲಕರೇ ಬೇಕಿಲ್ಲದಿದ್ದರೂ ಒಂದು ವಿಪರ್ಯಾಸ.

ಬಂಗಾರಪ್ಪ ಎಷ್ಟು ಶಕ್ತಿವಂತ ರಾಜಕಾರಣಿಯಾಗಿದ್ದರೆಂದರೆ ಸ್ವಜಾತಿಯ ಲಿಕ್ಕರ್ ಲಾಬಿಯ ಕುಳಗಳು ಅವರ ಬೆನ್ನಿಗಿದ್ದರು. ಪ್ರಜಾವಾಣಿ ಸಂಸ್ಥೆಯ ಬೀಗರಾಗಿದ್ದರು. ವರನಟರ ಕುಟುಂಬದ ಬೀಗರಾಗಿದ್ದರು. ಇಷ್ಟೊಂದು ಪ್ರಭಾವಿ ಶಕ್ತಿವಂತ ರಾಜಕಾರಣಿಯೇ ಕರ್ನಾಟಕದಲ್ಲಿ ಇನ್ನಾರೂ ಇರಲಿಲ್ಲ. ಆದರೂ ಇಂತಹ ಪ್ರಭಾವಿ ಕುಳಗಳಿಗೆ ಚ್ಯುತಿ ಬಾರದಂತೆ ರಾಜಕಾರಣ ಮಾಡಿದ್ದು ಸಾಮಾನ್ಯ ಸಂಗತಿಯಲ್ಲ. ಆ ವಿಷಯದಲ್ಲಿ ಬಂಗಾರಪ್ಪ ಅತ್ಯಂತ ಸೂಕ್ಷ್ಮತಿಯಾಗಿದ್ದರು. "ನಾನು ಯಾವುದರಲ್ಲೂ ನಿಮಗಿಂತ ಕಡಿಮೆಯವನಲ್ಲ" ಎಂದು ಬದುಕಿದ್ದರು. ಬಹುಶಃ ಅವರ ಸುದೀರ್ಘ ರಾಜಕಾರಣದ ಸಂದೇಶವೂ ಇದೇ ಇರಬಹುದೇನೋ?



ಹಠವಾದಿಯ ನಿರ್ಗಮನ ಸೆಟಗೊಂಡ ಯುವಕ ಊರು ಬಿಟ್ಟು ನಡೆದ...

ದೇವರಾಜ ಅರಸರು ಬಲಿಷ್ಟ ಜಾತಿಗಳನ್ನು ಎದುರು ಹಾಕಿಕೊಂಡು ಜಾರಿಗೆ ತಂದ ಭೂಸುಧಾರಣೆಯಂತಹ ಕ್ರಾಂತಿಕಾರಿ ಕಾನೂನುಗಳನ್ನು ತರಲು ಬಂಗಾರಪ್ಪನವರಿಗೆ ಸಾಧ್ಯವಾಗಲಿಲ್ಲ ಎನ್ನುವುದೇನೊ ಸತ್ಯ. ಆದರೆ ಗ್ರಾಮೀಣ ಕೃಪಾಂಕ ಸಾವಿರಾರು ಹಳ್ಳಿಯ ಯುವಕರ ಬಾಳಿನಲ್ಲಿ ಬೆಳಕು ಮೂಡಿಸಿತು. ಹಳ್ಳಿಯ ಮಕ್ಕಳನ್ನು ಶಾಲೆಗೆ ಸೆಳೆಯುವ ದಿನಕ್ಕೊಂದು ರೂಪಾಯಿ, ಹಾಲು, ಮೊಟ್ಟೆ ನೀಡಿಕೆ ಕಾರ್ಯಕ್ರಮಗಳು ಉತ್ತಮ ಪರಿಣಾಮ ಬೀರಿದವು.

• ಸರ್ಜಾಶಂಕರ ಹರಳಿಮಠ

ರಾತ್ರಿ ಸುಮಾರು ಹನ್ನೊಂದು ಗಂಟೆಯ ಸಮಯ. ಚಳಿ ಕ್ಷಣದಿಂದಕ್ಷಣಕ್ಕೆ ತನ್ನ ಪ್ರಭಾವವನ್ನು ಹೆಚ್ಚಿಸುತ್ತಿತ್ತು. ನಮ್ಮ ಮನೆಯ ಸಮೀಪದ ಜೂನಿಯರ್ ಕಾಲೇಜು ಆವರಣಕ್ಕೆ ಬಂಗಾರಪ್ಪನವರ ದೇಹ ಬರುವ ಸುದ್ದಿ ತಿಳಿದು ನಾನು ಮತ್ತು ಪ್ರತಿಮಾ ಮಫ್ಲರು, ಶಾಲು, ಸ್ವೆಟರು, ಕೋಟು ಇತ್ಯಾದಿಗಳನ್ನೆಲ್ಲ ಸುತ್ತಿಕೊಂಡು ಅಲ್ಲಿಗೆ ಹೊರಟೆವು. ಆಗಲೇ ಸಾವಿರಾರು ಜನ ಬಂಗಾರಪ್ಪನವರ ದಾರಿ ಕಾಯುತ್ತಿದ್ದರು. ಬಂಗಾರಪ್ಪ ರಾಜಕಾರಣದಲ್ಲಿ ತುಂಬಾ ಕ್ರಿಯಾಶೀಲರಾಗಿದ್ದ ದಿನಗಳನ್ನು ಆ ದೃಶ್ಯ ಹಲವರಿಗೆ ನೆನಪಿಸುತಿತ್ತು. ಆಗಲೂ ರಾತ್ರಿ ಎಷ್ಟು ಹೊತ್ತಾದರೂ ಜನ ಬಂಗಾರಪ್ಪನವರ ಭಾಷಣಕ್ಕೆ ಕಾಯುತ್ತಿದ್ದರು.

ಕಾಲೇಜು ಮುಂದಿನ ಬೃಹತ್ ಕ್ರೀಡಾಂಗಣವನ್ನು ಶುಚಿಗೊಳಿಸಿ ಧೂಳು ಏಳದಂತೆ ನೀರು ಸಿಂಪಡಿಸಿದ್ದರು. ಅಂಗಳದ ಒಂದು ಭಾಗದಲ್ಲಿ ಶಾಮಿಯಾನ ಹಾಕಿ ಅಂತಿಮ ದರ್ಶನ ಪಡೆಯಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಿದ್ದರು. ಎಲ್.ಸಿ.ಡಿ ಪರದೆಯ ಮೇಲೆ ಬಂಗಾರಪ್ಪ ಹಿಂದೆ ಎಂದೋ ಮಾಡಿದ ಭಾಷಣ ಬಿತ್ತರವಾಗುತ್ತಿತ್ತು. ಅಷ್ಟು ಹೊತ್ತಿಗೆ ಸರಣಿ ಪಟಾಕಿ ಸ್ಫೋಟಿಸಿದ ಶಬ್ದ ಕೇಳಿ ಆಚ್ಚರಿಯಾಯಿತು. ದೂರದಲ್ಲಿ ಬಂಗಾರಪ್ಪನವರನ್ನು ಹೊತ್ತಿದ್ದ ವಾಹನ ಬರುತ್ತಿರುವುದು ಜನರಲ್ಲಿ ಮೂಡಿದ ಸಂಚಲನದಿಂದ ಅರಿವಾಯಿತು. ಪಟಾಕಿ ಸ್ಫೋಟ ಮುಂದುವರಿದಿತ್ತು, ಯಾವುದೋ ವಿಜಯೋತ್ಸವವನ್ನು ನೆನಪಿಸುತ್ತಿದ್ದ ಆ ಅನಿಯಂತ್ರಿತ ಪಟಾಕಿ ಸ್ಫೋಟ ದುಃಖವನ್ನು ಹೀಗೂ ವ್ಯಕ್ತಪಡಿಸಬಹುದೇ ಎಂದು ಗಲಿಬಿಲಿಗೊಳಿಸಿತು. ಇದೇ ರಾತ್ರಿ ಪಕ್ಕದ ತೀರ್ಥಹಳ್ಳಿಯ ತುಂಗಾ ತೀರದಲ್ಲಿ ತೆಪ್ಪೋತ್ಸವವಿದ್ದು ಬಂಗಾರಪ್ಪನವರ ನಿಧನದಿಂದಾಗಿ ಆ ಉತ್ಸವದ ಮುಖ್ಯ ಆಕರ್ಷಣೆಯಾದ ಸಿಡಿಮದ್ದು ಪಟಾಕಿಯನ್ನು ರದ್ದುಗೊಳಿಸಿದ್ದರು. ನಿರಂತರವಾಗಿ ಸ್ಫೋಟಗೊಳ್ಳುತ್ತಿದ್ದ ಪಟಾಕಿಗಳು ತೀರ್ಥಹಳ್ಳಿಯ ತೆಪ್ಪೋತ್ಸವವನ್ನೇ ಇಲ್ಲಿಗೆ ಸ್ಥಳಾಂತರಿಸಿದಂತಿತ್ತು.

ಕೊನೆಗೂ ಬಂಗಾರಪ್ಪನವರ ದೇಹ ಹೊತ್ತ ವಾಹನ ಬಂದಿತು. ಜನ ವಾಹನವನ್ನು ಮುತ್ತತೊಡಗಿದರು. ವಾಹನದ ಒಳಗೆ ಮಧು ಬಂಗಾರಪ್ಪ ಜನರತ್ತ ನೋಡಿ ಕೈಮುಗಿಯುತ್ತಿದ್ದರು, ಕೆಲವೊಮ್ಮೆ ಕೈ ಬೀಸುತ್ತಿದ್ದರು. ಇವರೊಂದಿಗಿದ್ದ ಒಂದಿಬ್ಬರು ಪುಢಾರಿಗಳೂ ಹೀಗೆ ಕೈಮುಗಿಯುತ್ತ ಜನರತ್ತ ಕೈ ಬೀಸುತ್ತಿದ್ದರು!

ಒಂದೆರಡು ನಿಮಿಷಗಳಲ್ಲೇ ಕುಮಾರ್ ಬಂಗಾರಪ್ಪನವರಿದ್ದ ಕಾರು ಹಿಂಬಾಲಿಸಿ ಬಂತು. ಕಾರು ಬಂದ ತಕ್ಷಣವೇ ಅದನ್ನು ಸುತ್ತು ಹಾಕಿಕೊಂಡ ಒಂದಷ್ಟು ಜನ 'ಕುಮಾರ್ ಬಂಗಾರಪ್ಪಾಕಿ ಜೈ' ಎಂದು ಅಸಂಬದ್ಧವಾಗಿ ಜೈಕಾರ ಕೂಗತೊಡಗಿದರು. ಬಹುಶಃ ಅನತಿ ದೂರದಲ್ಲಿಯೇ ಮಲಗಿ ಜನರಿಗೆ ಅಂತಿಮ ದರ್ಶನ ನೀಡುತ್ತಿದ್ದ ಬಂಗಾರಪ್ಪನವರಿಗೆ ಈ ಘೋಷಣೆ ಕೇಳಿದ್ದರೆ ಕೂಡಲೇ ಮೈಕೊಡವಿ ಎದ್ದು ಬಂದು ಘೋಷಣೆ ಕೂಗಿದವರ ಕೆನ್ನೆಗೆ ನಾಲ್ಕು ಬಾರಿಸಿ 'ಮಧು ಬಂಗಾರಪ್ಪಾಕಿ ಜೈ' ಎಂದು ತಿದ್ದುತ್ತಿದ್ದರೇನೊ!

ನಾವು ಕ್ರೀಡಾಂಗಣದ ಕಾಂಪೌಂಡಿನ ಮೇಲೆ ನಿಂತು ವಾಹನದೊಳಗೆ ಚಿರನಿದ್ರೆಯಲ್ಲಿದ್ದ ಬಂಗಾರಪ್ಪನವರ ಅಂತಿಮ ದರ್ಶನ ಪಡೆದಿದ್ದೆವು. ಅಲ್ಲಿ ನಿಂತೇ ಈ ದೃಶ್ಯಾವಳಿಗಳನ್ನು ಸೆರೆಹಿಡಿಯುತ್ತಿದ್ದೆವು.



ಧ್ವನಿವರ್ಧಕದಲ್ಲಿ ಶಿಸ್ತು ಸಂಯಮ ಕಾಪಾಡಲು ಕರೆ ಕೊಡುತ್ತಿದ್ದ ಯಾವುದೋ ಇಳಿವಯಸ್ಸಿನ ದನಿಯನ್ನು ಕ್ಯಾರೇ ಎನ್ನದೆ ಜನ ಅಂತಿಮದರ್ಶನ ಪಡೆಯಲು ಮುನ್ನುಗ್ಗುತ್ತಿದ್ದರು. ಥೇಟು ಬಂಗಾರಪ್ಪನವರಂತೇ! ಒಬ್ಬ ವ್ಯಕ್ತಿಯಂತೂ 'ಸಾಹೇಬರೊಂದಿಗೆ ನಾನೂ ಸಾಯುತ್ತೇನೆ' ಎಂದು ಮುನ್ನುಗ್ಗುತ್ತಿದ್ದ. ಟಿವಿ ವಾಹಿನಿಗಳ ಪ್ರಖರ ಬೆಳಕು ಆತನ ಮೇಲೆ ಬಿದ್ದನಂತರವಂತೂ 'ತಾನು ಸತ್ತು ಬಂಗಾರಪ್ಪನವರನ್ನು ಹಿಂಬಾಲಿಸುವ' ಆತನ ಬಯಕೆ ಇನ್ನಷ್ಟು ತೀವ್ರವಾಗಿ ತಾನು ಬಂಗಾರಪ್ಪನವರಿಲ್ಲದೆ ಬದುಕುವುದಿಲ್ಲವೆಂದು ಎದೆಬಡಿದುಕೊಂಡು ಚೀರತೊಡಗಿದ. ಆತ ಬಂಗಾರಪ್ಪ ಅಧಿಕಾರದಲ್ಲಿದ್ದ ಅವಧಿಗಳಲ್ಲೆಲ್ಲ ಅವರ ಹೆಸರು ಬಳಸಿಕೊಂಡು ಸರ್ಕಾರಿ ಅಧಿಕಾರಿಗಳನ್ನು ಬೆದರಿಸುತ್ತ 'ಬೆಳೆದ' ಶಿವಮೊಗ್ಗದ ಪುಢಾರಿಯಾಗಿದ್ದ.


ಇಂತಹ ಒಂದಷ್ಟು ಜನರನ್ನು ಹೊರತುಪಡಿಸಿದರೆ ಉಳಿದಂತೆ ಅಲ್ಲಿ ಸೇರಿದ್ದ ಹತ್ತಾರು ಸಾವಿರ ಜನ ಮತ್ತು ಬೆಂಗಳೂರಿನಿಂದ ಊರು ತಲುಪುವವರೆಗೂ ರಾತ್ರಿಯಿಡೀ ಬಂಗಾರಪ್ಪನವರ ಅಂತಿಮ ದರ್ಶನ ಪಡೆಯಲು ಕಾಯುತ್ತಿದ್ದ ಜನ ಮತ್ತು ಸೊರಬದಲ್ಲಿ ಅಂತಿಮ ಸಂಸ್ಕಾರಕ್ಕೆ ಸೇರಿದ್ದ ಲಕ್ಷಾಂತರ ಜನ ಬಂಗಾರಪ್ಪನವರನ್ನು ಯಾಕೆ ಅಷ್ಟೊಂದು ಪ್ರೀತಿಸುತ್ತಿದ್ದರು ಎಂದು ನನ್ನ ಮನಸ್ಸು ಚಿಂತಿಸುತ್ತಿತ್ತು. ಈ ಜನರಲ್ಲಿ ಬಂಗಾರಪ್ಪ ಒದಗಿಸಿದ ಗ್ರಾಮೀಣ ಕೃಪಾಂಕದಿಂದ ಉದ್ಯೋಗ ಪಡೆದು ಬದುಕು ರೂಪಿಸಿಕೊಂಡ ಒಂದಷ್ಟು ಜನರಿದ್ದಿರಬಹುದು, ಬಂಗಾರಪ್ಪ ಅಧಿಕಾರದಲ್ಲಿದ್ದಾಗ ಅವರಿಂದ ವಿವಿಧ ರೀತಿಯಲ್ಲಿ ಅನುಕೂಲ ಪಡೆದ ಹಲವು ಸಾವಿರ ಜನರಿದ್ದಿರಬಹುದು, ಕುತೂಹಲಕ್ಕೂ ಒಂದಷ್ಟು ಜನ ಬಂದಿರಬಹುದು. ಆದರೆ ಬಹುಪಾಲು ಜನ ಬಂಗಾರಪ್ಪನವರಿಂದ ಆತ್ಮವಿಶ್ವಾಸ ಬೆಳೆಸಿಕೊಂಡ ಹಿಂದುಳಿದ ವರ್ಗದ ಜನರೇ ಇರಬೇಕು.

ತುಂಬಾ ಮಹತ್ವಾಕಾಂಕ್ಷಿಯಾಗಿದ್ದ ಬಂಗಾರಪ್ಪ ರಾಜಕೀಯವಾಗಿ ಗಟ್ಟಿಯಾಗಲು ಹಣವನ್ನು ಅತಿಯಾಗಿ ನಂಬಿ ಭ್ರಷ್ಟರೂ ಆದರು. ಭ್ರಷ್ಟತೆಗೆ ಇನ್ನೊಂದು ಹೆಸರು ಎನ್ನುವಷ್ಟು ಅಪಖ್ಯಾತಿಗೆ ಒಳಗಾಗಿದ್ದ ದೇವರಾಜ ಅರಸರು ಬಲಿಷ್ಟ ಜಾತಿಗಳನ್ನು ಎದುರು ಹಾಕಿಕೊಂಡು ಜಾರಿಗೆ ತಂದ ಭೂಸುಧಾರಣೆಯಂತಹ ಕ್ರಾಂತಿಕಾರಿ ಕಾನೂನುಗಳನ್ನು ತರಲು, ಬಂಗಾರಪ್ಪನವರಿಗೆ ಸಾಧ್ಯವಾಗಲಿಲ್ಲ ಎನ್ನುವುದೇನೊ ಸತ್ಯ. ಆದರೆ ಗ್ರಾಮೀಣ ಕೃಪಾಂಕ ಸಾವಿರಾರು ಹಳ್ಳಿಯ ಯುವಕರ ಬಾಳಿನಲ್ಲಿ ಬೆಳಕು ಮೂಡಿಸಿತು. ಹಳ್ಳಿಯ ಮಕ್ಕಳನ್ನು ಶಾಲೆಗೆ ಸೆಳೆಯುವ ದಿನಕ್ಕೊಂದು ರೂಪಾಯಿ, ಹಾಲು, ಮೊಟ್ಟೆ ನೀಡಿಕೆ ಕಾರ್ಯಕ್ರಮಗಳು ಉತ್ತಮ ಪರಿಣಾಮ ಬೀರಿದವು. ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಅಭಿವೃದ್ಧಿ ಪಡಿಸಿದ್ದುದನ್ನು ಈಗಲೂ ಜನ ಕೃತಜ್ಞತೆಯಿಂದ ನೆನೆಯುತ್ತಾರೆ. ಕುವೆಂಪು ಜನ್ಮಸ್ಥಳವನ್ನು ಮಾದರಿ ಕೇಂದ್ರವಾಗಿಸಿದ ಕುವೆಂಪು ಪ್ರತಿಷ್ಠಾನವೂ ಬಂಗಾರಪ್ಪನವರ ಕೊಡುಗೆಯೇ. ಆಶ್ರಯ ಯೋಜನೆಯಲ್ಲಿ ರಾಜ್ಯದ ಲಕ್ಷಾಂತರ ಬಡವರು ಬದುಕಲಿಕ್ಕೊಂದು ನೆಲೆ ಕಂಡುಕೊಂಡರು. ಕೇವಲ ರಾಜಕೀಯ ಕಾರಣಗಳಿಗಿಂತ ಸಾಮಾಜಿಕ ಬದ್ಧತೆ ಬಂಗಾರಪ್ಪ ಆರಂಭಿಸಿದ ಅನೇಕ ಯೋಜನೆಗಳಲ್ಲಿ ಇದ್ದವು. ಈ ಯೋಜನೆಗಳ ದುರುಪಯೋಗವೂ ಸಾಕಷ್ಟು ಆಯಿತು. ಆಶ್ರಯ ಯೋಜನೆಯಲ್ಲಿ ಕೋಟ್ಯಂತರ ದುಡ್ಡು ಹೊಡೆದ ಶಿವಮೊಗ್ಗದ ಬಂಗಾರಪ್ಪನವರ ಆಪ್ತರೊಬ್ಬರು ಬೃಹತ್ ವಸತಿಗೃಹವನ್ನು ಕಟ್ಟಿ ಅದಕ್ಕೆ 'ಆಶ್ರಯ' ಎಂಬ ಹೆಸರನ್ನೇ ಇಟ್ಟು ಬಂಗಾರಪ್ಪನವರಿಗೆ ಕೃತಜ್ಞತೆ ತೋರಿದರು.



ಬಂಗಾರಪ್ಪ ಏನು ರಾಜಕಾರಣ ಮಾಡಿದರೂ ಯಾವುದೇ ನಿರ್ದಿಷ್ಟ ಜಾತಿಯವರನ್ನು ದ್ವೇಷಿಸುತ್ತಿರಲಿಲ್ಲ. ಮೂಲತಃ ಜನಾಂಗದ್ವೇಷಿಯಲ್ಲದ ಬಂಗಾರಪ್ಪ ರಾಜಕಾರಣದಲ್ಲಿ ಎಲ್ಲವೂ ಸಮ್ಮತವೆಂಬ ನಿರ್ಧಾರದಿಂದಲೋ ಏನೊ ಕೆಲವು ಸಲ ತಮ್ಮ ಸಮಾಜವಾದಿ ಪ್ರಜ್ಞೆಗೆ ವಿರುದ್ಧವಾದ ಕೆಲಸಗಳಿಗೂ ಕೈ ಹಾಕಿದರು. ಬಂಗಾರಪ್ಪ ಜನಾಂಗ ದ್ವೇಷಿಯಾದ ಬಿ.ಜೆ.ಪಿ ಪಕ್ಷ ಸೇರಿದ್ದು ಮತ್ತು ತಮ್ಮ ರಾಜಕೀಯ ವೈರಿ ಕಾಗೋಡು ತಿಮ್ಮಪ್ಪನವರನ್ನು ಮುಗಿಸಲು ಸಾಗರದ ಇತಿಹಾಸದಲ್ಲಿಯೇ ಕಂಡುಕೇಳರಿಯದ ಕೋಮುಗಲಭೆಗೆ ಪ್ರಚೋದನೆ ನೀಡಿದ್ದು ಅವರ ಅಂತಹ ಕ್ಷಮಿಸಲಾರದ ಪ್ರಮಾದಗಳು. ಕುಮಾರಸ್ವಾಮಿ ಬಿ.ಜೆ.ಪಿಯೊಂದಿಗೆ ಕೂಡಿಕೆ ಮಾಡಿಕೊಂಡು ಅಧಿಕಾರ ಅನುಭವಿಸಲು ತೆಗೆದುಕೊಂಡ ಸಲೀಸು ನಿರ್ಧಾರದ ಹಿಂದೆ ತಮ್ಮ ಸಮಾಜವಾದಿ ಹಿನ್ನೆಲೆಗೆ ತದ್ವಿರುದ್ಧವಾಗಿದ್ದ ಬಿ.ಜೆ.ಪಿ ಸೇರಿ ಬಂಗಾರಪ್ಪ ಅದನ್ನು ಪವಿತ್ರಗೊಳಿಸಿದ್ದರ ಹಿನ್ನೆಲೆಯಿತ್ತು. ಕರ್ನಾಟಕದಲ್ಲಿ ಯಡಿಯೂರಪ್ಪನವರಿಗಿಂತಲೂ ಬಿ.ಜೆ.ಪಿಯನ್ನು ನಿಜವಾಗಿ ಕಟ್ಟಿ ಬೆಳೆಸಿದ್ದು ಬಂಗಾರಪ್ಪ ಮತ್ತು ಕುಮಾರಸ್ವಾಮಿಯವರೇ!

ಬಂಗಾರಪ್ಪ ಎಲ್ಲಾ ಜಾತಿಯ ಜನರನ್ನು ಬೆಳೆಸಿದರು. ಬಂಗಾರಪ್ಪ ಬೆಳೆಸಿದ ಅನೇಕ ಜನ ಸ್ವಯಂ ರಾಜಕಾರಣ ಮಾಡುವ ಪ್ರಬುದ್ಧತೆ ಹೊಂದಿರಲಿಲ್ಲ. ಚಾಣಾಕ್ಷರಾದ ಬೇಳೂರು ಗೋಪಾಲಕೃಷ್ಣ ಮತ್ತು ಹರತಾಳು ಹಾಲಪ್ಪನಂತಹ ಕೆಲವರು ತಾವು ಬೆಳೆಯಲು ಎಲ್ಲಾ ಅಡ್ಡದಾರಿಗಳನ್ನು ಹಿಡಿದರು. ತಮ್ಮ ಗುರುವಿಗೆ ತಿರುಮಂತ್ರ ಹಾಕಿದರು. ನಿಜಕ್ಕೂ ತನ್ನ ಶಿಷ್ಯರಲ್ಲಿ ಯಾರಾದರೂ ತನ್ನೆದುರು ಸ್ವಾಭಿಮಾನದಿಂದ ವರ್ತಿಸಿದಾಗ ತುಂಬಾ ಸ್ವಾಭಿಮಾನಿಯಾದ ಬಂಗಾರಪ್ಪ ಅದನ್ನು ಮೆಚ್ಚಿ ಹುರಿದುಂಬಿಸುವ ಬದಲು ಆತನನ್ನು ತನ್ನ ಪ್ರತಿಸ್ಪರ್ಧಿಯೆಂದು ದೂರವಿಡುತ್ತಿದ್ದರು. ಇಲ್ಲವೇ ಮಟ್ಟ ಹಾಕುತ್ತಿದ್ದರು. ತನ್ನ ಗರಡಿಯಲ್ಲಿ ಬೆಳೆದ ತನ್ನ ಹಿರಿಮಗನೇ ತನಗೆ ಪ್ರತಿಸ್ಪರ್ಧಿಯೆಂದು ಬಗೆದ ಬಂಗಾರಪ್ಪನವರ ಮನೋಭಾವ ವಿಚಿತ್ರವೆನಿಸಿದರೂ ಅದು ಅವರ ಹುಟ್ಟುಗುಣವೇ ಆಗಿತ್ತು. ಈ ಗುಣವೇ ಅವರನ್ನು ರಾಜಕಾರಣದಲ್ಲಿನ ಕೊನೆಗಾಲದ ಸೋಲಿನ ಸರಣಿಗೂ ತಂದು ನಿಲ್ಲಿಸಿತ್ತು.



'ಬಂಗಾರಪ್ಪ ವಿನೋದವಿಲ್ಲದ ಮನುಷ್ಯ. ಇವರು ಮೂವರಿಗಿಂತ ಹೆಚ್ಚಾಗಿರುವ ಯಾವುದೇ ಗುಂಪಿನಲ್ಲಿದ್ದರೂ ತಾನೇ ನಾಯಕನೆಂದು ತಿಳಿದುಕೊಂಡುಬಿಡುತ್ತಾರೆ. ಅವರ ತಿಳಿವಳಿಕೆ ತಪ್ಪು ಎಂದು ಆ ಮೂವರಲ್ಲಿ ಯಾರಾದರೂ ಹೇಳಿದರೆ ಇವರಿಗೆ ಸಿಟ್ಟು ಬರುತ್ತದೆ. ಆ ಗುಂಪಿನಲ್ಲಿರುವ ಪ್ರತಿಯೊಬ್ಬರೂ ಖೂಳರಂತೆಯೂ, ಮೂರ್ಖರಂತೆಯೂ ಬಂಗಾರಪ್ಪನವರಿಗೆ ಕಾಣಿಸತೊಡಗುತ್ತಾರೆ. ಬಂಗಾರಪ್ಪನವರ ಪಕ್ಷ ಅಧಿಕಾರದಿಂದ ದೂರ ವಿದ್ದಾಗ ಯಾವ ಸಮಸ್ಯೆಯೂ ಏಳುವುದಿಲ್ಲ. ಅಧಿಕಾರ ಸನಿಹದಲ್ಲಿದೆ ಅಥವಾ ಅಧಿಕಾರದಲ್ಲಿ ಪಾಲುಗೊಳ್ಳುವ ಅವಕಾಶವಿದೆ ಎಂಬಂಥ ಸಂದರ್ಭ ಬಂದೊಡನೆ ಬಂಗಾರಪ್ಪನವರ ಆತ್ಮಪ್ರಜ್ಞೆ ಉಲ್ಬಣಗೊಳ್ಳುತ್ತದೆ' ಎಂದು ಲಂಕೇಶ್ ಸುಮಾರು ಮೂವತ್ತು ವರ್ಷಗಳ ಹಿಂದೆ ಬರೆದಿದ್ದರು. ಇದನ್ನು ಬಹುಶಃ ಬಂಗಾರಪ್ಪ ಓದಿಲ್ಲವೆನಿಸುತ್ತದೆ. ಓದಿದ್ದರೂ ಅವರೇನೂ ಬದಲಾಗುತ್ತಿರಲಿಲ್ಲ. ಮಾಡಿದ ತಪ್ಪುಗಳನ್ನೇ ಮತ್ತೆ ಮತ್ತೆ ಮಾಡಿಯೇ ಬಂಗಾರಪ್ಪ ತಮ್ಮ ಸೋಲಿಲ್ಲದ ಸರದಾರನ ಪಟ್ಟ ಕಳೆದುಕೊಂಡದ್ದು.

ಅಪಾರ ಚೈತನ್ಯವಿದ್ದ ಜನರ ನಾಡಿಮಿಡಿತ ಅರಿತಿದ್ದ ಜನರನ್ನು ಅಪಾರವಾಗಿ ಪ್ರೀತಿಸುತ್ತಿದ್ದ, ಜನರ ನಡುವೆಯೇ ಮೂಡಿಬಂದ ಬಂಗಾರಪ್ಪ ಸಿಡುಕು, ಕೆಟ್ಟ ಹಠಗಳಿಂದ ತಮ್ಮ ಸುದೀರ್ಘ ಹೋರಾಟದ ಫಲವಾಗಿ ಪಡೆದ ರಾಜಕೀಯ ಶಕ್ತಿಯನ್ನು ಎಲ್ಲೆಲ್ಲೊ ಚೆಲ್ಲಿ ಸೆಟಗೊಂಡ ಯುವಕ ಊರು ಬಿಟ್ಟು ಹೋಗುವಂತೆ ನಿರ್ಗಮಿಸಿದ್ದಾರೆ. ಬುದ್ಧಿವಂತರು ಆ ಚಿರಯುವಕ ಅವಿವೇಕದಿಂದ ಚೆಲ್ಲಿದ ಯಾವುದೇ ಶ್ರಮವಿಲ್ಲದೆ ದೊರಕಿದ ಶಕ್ತಿಯಿಂದ ಸಿಕ್ಕಿದ್ದನ್ನೆಲ್ಲ ದೋಚುತ್ತಿದ್ದಾರೆ, ಕಂಡ ಕಡೆಯೆಲ್ಲ ದಳ್ಳುರಿ ಹಚ್ಚುತ್ತಿದ್ದಾರೆ.

ಬಂಗಾರಪ್ಪನವರನ್ನು 'ಹಲವು ಕಾರಣಗಳಿಗಾಗಿ' ಕರ್ನಾಟಕ ಬಹುದಿನ ನೆನಪಿನಲ್ಲಿಟ್ಟುಕೊಳ್ಳುತ್ತದೆ.



ಕು.ಬಂಗಾರಪ್ಪರನ್ನು ಏಕಾಂಗಿಯಾಗಿಸುವ ಪ್ರಯತ್ನ ಮಧುವಿಗೆ ತಿರುಗುಬಾಣವಾದೀತೆ?

ರಾಜಕೀಯದಲ್ಲಿ ಸಕ್ರಿಯವಾಗಿರುವ ಕುಟುಂಬಗಳು ವೈಯಕ್ತಿಕವಾದ, ಸಂತೋಷ ಹಾಗು ದುಃಖದ ಸಂದರ್ಭಗಳಾದ ಹುಟ್ಟು, ಮದುವೆ, ಸಾವು ಎಲ್ಲವನ್ನೂ ರಾಜಕಾರಣಕ್ಕೆ ಬಳಸಿಕೊಳ್ಳುವುದನ್ನು ಕಾಣಬಹುದು. ಬಂಗಾರಪ್ಪನವರ ಸಾವು ಕೂಡ ಅದಕ್ಕೆ ಹೊರತಾಗಲಿಲ್ಲ.

ಬಂಗಾರಪ್ಪನವರು ಅಸುನೀಗಿದ್ದಾರೆಂದು ಅಧಿಕೃತವಾಗಿ ಘೋಷಿಸಿದ ನಂತರ ಅವರ ಮೃತದೇಹವನ್ನು ಬೆಂಗಳೂರಿನಿಂದ ಸೊರಬದವರೆಗೆ ದಾರಿಯಲ್ಲಿನ ನಗರ ಹಳ್ಳಿಗಳಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡುತ್ತ ತರಲಾಯಿತು. ಬೆಂಗಳೂರಿನಿಂದ ಮೊದಲ್ಗೊಂಡು ಹುಟ್ಟೂರಿನಲ್ಲಿ ಅಗ್ನಿಸ್ಪರ್ಶ ಮಾಡುವವರೆಗೂ ಕುಮಾರ್ ಬಂಗಾರಪ್ಪನವರನ್ನು ಇವೆಲ್ಲವುಗಳಿಂದ ಸಾಕಷ್ಟು ಅಂತರದಲ್ಲಿಡುವ ಪ್ರಯತ್ನಗಳು ತುಂಬಾ ವ್ಯವಸ್ಥಿತವಾಗಿ ನಡೆಯುತ್ತಿದ್ದುದು ಕಣ್ಣಿಗೆ ರಾಚುವಂತಿದ್ದವು. ಬಂಗಾರಪ್ಪನವರ ಮೃತದೇಹವಿದ್ದ ವಾಹನದಲ್ಲಿ ಉದ್ದಕ್ಕೂ ಮಧು ಬಂಗಾರಪ್ಪ ಮತ್ತು ಕೆಲ ರಾಜಕಾರಣಿಗಳಿದ್ದರು. ಆದರೆ ಕುಮಾರ್ ಬಂಗಾರಪ್ಪರಿಗೆ ಅಲ್ಲಿ ಅವಕಾಶವಿರಲಿಲ್ಲ. ಅವರು ಶವಯಾತ್ರೆಯನ್ನು ಕಾರಿನಲ್ಲಿ ಹಿಂಬಾಲಿಸಿ ಬಂದರು.


ಒಬ್ಬ ನಾಯಕ ಅಸುನೀಗಿದಾಗ ಅವರ ಕಟೌಟುಗಳನ್ನು ಅವರ ಅಭಿಮಾನಿಗಳು ಅಲ್ಲಲ್ಲಿ ನಿಲ್ಲಿಸುವುದು ಸಾಮಾನ್ಯ. ಆದರೆ ಬಂಗಾರಪ್ಪನವರ ಅಂತ್ಯಸಂಸ್ಕಾರದ ದಿನ ಇಡೀ ಸೊರಬ ಪಟ್ಟಣದ ತುಂಬೆಲ್ಲ ಬಂಗಾರಪ್ಪನವರ ಕಟೌಟ್‌ಗಳಿಗಿಂತ ಜಾಸ್ತಿ ರಾರಾಜಿಸುತ್ತಿದ್ದುದು ವಿವಿಧ ಡ್ರೆಸ್‌ಗಳಲ್ಲಿದ್ದ ಮಧು ಬಂಗಾರಪ್ಪ ಮತ್ತು ಅಲ್ಲಲ್ಲಿ ಬಂಗಾರಪ್ಪನವರ ಪತ್ನಿ ಶಕುಂತಲಾ ಅವರ ಫ್ಲೆಕ್ಸ್‌ಗಳು. ಹುಡುಕಿದರೂ ಕುಮಾರ್ ಬಂಗಾರಪ್ಪನವರ ಒಂದೇ ಒಂದು ಫ್ಲೆಕ್ಸ್ ಇರಲಿಲ್ಲ. ಅಂದರೆ ಇವುಗಳನ್ನು ಯಾರು ಹಾಕಿಸಿದ್ದರು ಎಂಬುದನ್ನು ಸುಲಭವಾಗಿ ಊಹಿಸಬಹುದು. ಸಾವಿನ ಸಂದರ್ಭದಲ್ಲಿ ಇವು ತುಂಬಾ ಅಸಹನೀಯವೆನಿಸಿದವು. ಅಂತ್ಯಸಂಸ್ಕಾರದ ದಿನ ಜನರಲ್ಲಿ ಇದ್ದೇ ಚರ್ಚೆಗೆ ಗ್ರಾಸವಾಗಿದ್ದ ವಿಚಾರವಾಗಿತ್ತು. ಇದರೊಂದಿಗೆ ಕುಟುಂಬದೊಳಗೆ ಏನೇ ಭಿನ್ನಾಭಿಪ್ರಾಯವಿದ್ದರೂ ಹಿರಿಮಗನಿಗೆ ತಂದೆಯ ಮೃತದೇಹಕ್ಕೆ ಅಗ್ನಿಸ್ಪರ್ಶ ಮಾಡಲು ಅವಕಾಶ ನೀಡದಿರುವ ಬಗ್ಗೆ ಜನ ಬಹಿರಂಗವಾಗಿಯೇ ಬೇಸರ ವ್ಯಕ್ತಪಡಿಸುತ್ತಿದ್ದರು. ಇದಾವುದಕ್ಕೂ ತಲೆಕೆಡಿಸಿಕೊಳ್ಳದೆ ತುಂಬಾ ಗಾಂಭೀರ್ಯದಿಂದ ಕೊನೆಯವರೆಗೂ ನಡೆದುಕೊಂಡ ಕುಮಾರ್ ಬಂಗಾರಪ್ಪ ಜನರ ಅನುಕಂಪಕ್ಕೆ ಪಾತ್ರರಾದರು. ಅಣ್ಣನನ್ನು ಏಕಾಂಗಿಯಾಗಿಸುವ ಮಧುವಿನ ಪ್ರಯತ್ನಗಳೇ ಅವರಿಗೆ ತಿರುಗುಬಾಣವಾಗುವಂತೆ ತೋರುತ್ತಿತ್ತು.

ಹಠವಾದಿ ಬಂಗಾರಪ್ಪ ಯಾಕೋ ಏನೋ ಜನ ರೋಸಿಹೋಗುವಷ್ಟು ತನ್ನ ಹಿರಿಮಗ ಕುಮಾರ್ ಬಂಗಾರಪ್ಪರನ್ನು ದ್ವೇಷಿಸಿದರು. ರಾಜಕೀಯವಾಗಿ ಮುಗಿಸಲು ಪ್ರಯತ್ನಿಸಿದರು. ಅದರ ಪರಿಣಾಮವಾಗಿ ಸೋಲಿಲ್ಲದ ಸರದಾರ ಎನಿಸಿದ್ದ ತಾವೇ ಸೋಲತೊಡಗಿದರು. ಬಂಗಾರಪ್ಪನವರ ಈ ತಪ್ಪುಗಳೇ ಮಧುವಿಗೆ ಪಾಠವಾಗಬೇಕು. ಹಳೆಯದನ್ನೆಲ್ಲ ಮರೆತು ಅಣ್ಣತಮ್ಮಂದಿರು ಒಂದಾಗಿ ಸಹನೀಯ ರಾಜಕೀಯದ ವಾತಾವರಣವನ್ನು ನಿರ್ಮಿಸಿದರೆ ಸೊರಬದ ಜನತೆ ಈ ಕುಟುಂಬವನ್ನು ಕೈಹಿಡಿದು ಮೇಲೆತ್ತುವುದರಲ್ಲಿ ಯಾವುದೇ ಅನುಮಾನವಿಲ್ಲ.



ನಿರರ್ಥಕ ಬಂಡಾಯಗಳ ಸಾರ್ಥಕ ಬದುಕು!!

ಸುಮಾಕಿ ಕತೆ"–ಇದು ಅಂದಿನ ಬ್ಲ್ಯಾಕ್ ಅಂಡ್ ...ಕೇಶ್ ಪತ್ರಿಕೆಯ ಮುಖಪುಟದಲ್ಲಿ ಕೆ.ಪಿ. ...ತ್ರ ತೇಜಸ್ವಿಯವರು ಅತೀವ ಕೋಪ ಮತ್ತು ...ದ ಬರೆದ ಲೇಖನಕ್ಕಾಗಿ ಅವರೇ ನೀಡಿದ್ದ ಶೀರ್ಷಿಕೆ. ...982 ರ ಜುಲೈ ಮೊದಲ ವಾರದ ಸಂಚಿಕೆ ...ದೇವರಾಜ ಅರಸರು ಹಠಾತ್ ಹೃದಯಾಘಾತ ...ರಾಗಿ ಆಗಷ್ಟೇ ಒಂದು ತಿಂಗಳಾಗಿತ್ತು. ಅವರು ...ಡೆಯ ರಾಜಕೀಯ ಪ್ರಯೋಗವೆಂಬಂತೆ ಕಟ್ಟಿದ ...ಕ್ರಾಂತಿರಂಗ' ಎಂಬ ...ಪಕ್ಷ ತನ್ನ ಶೈಶವಾ...ಮೇ ತಂದೆಯನ್ನು ...ದ ಅನಾಥ ಮಗುವಿ... ಆ ಪಕ್ಷದ ವಾರಸು ...ನಡೆದ ಪೈಪೋಟಿ ...ಎಸ್. ಪಟೇಲ್ ಮತ್ತು ...ನವರ ನಡುವೆ ...ಗುದ್ದಾಟ ಆರಂಭವಾಗಿತ್ತು.



...ಸ್ ನಗರದ ವಸ್ತುಪ್ರದರ್ಶನ ಮೈದಾನದಲ್ಲಿದ್ದ ...ಬಿಎಂಟಿಸಿ ಬಸ್ ನಿಲ್ದಾಣವಿರುವ ಜಾಗ) ...ಶ್ವರಿ ಟ್ರಸ್ಟಿನ ಕಚೇರಿಯೇ ದೇವರಾಜ ಅರಸರ ...ಪಕ್ಷದ ಅಖಾಡವಾಗಿತ್ತು. ಅಲ್ಲೊಂದು ಮುಂಜಾನೆ ...ತಿಮ ದಿನಗಳ ರಾಜಕೀಯ ಒಡನಾಡಿಗಳಾದ ...ರಾಚಯ್ಯ ಎಂ.ಸಿ. ಪೆರುಮಾಳ್, ಪಿ.ಪಿ. ಹೆಗರೆ, ...ಶೆಟ್ಟಿ ಮೊದಲಾದ ಹಿರಿಯ ನಾಯಕರುಗಳ ...ಚನಾ ಸಭೆ ಜರುಗಿತ್ತು. ಈ ಸಭೆ ಇನ್ನೂ ಆರಂಭದ ...ವಂತೆಯೇ ಬಂಗಾರಪ್ಪ ಅಭಿಮಾನಿಗಳೆಂದು ...ಸುಮಾರು ನೂರು ಮಂದಿ ಯುವ ಧಾಂಡಿಗರ ...'ಬಂ'ಗೆ ಜೈಕಾರ ಕೂಗುತ್ತ ಒಳಕ್ಕೆ ನುಗ್ಗಿಬಂತು. ...ಯಕರುಗಳಿಗೆ ಮುತ್ತಿಗೆ ಹಾಕಿ, ಬಾಯಿಗೆ ಬಂದಂತೆ ...ದು ಬಂಗಾರಪ್ಪನವರಿಗೇ ಸಲ್ಲಬೇಕಾದ ಗೌರವ, ...ರಸುಗೆ ಉತ್ತರಾಧಿಕಾರಿ; ನೀವುಗಳ್ಯಾರಿಗೂ ಆ ...ಇಲ್ಲ" ಎಂದೆಲ್ಲ ಒದರಾಡಿ ಬಲವಂತದಿಂದ ...ಹೊರದಬ್ಬಿ ಆಫೀಸನ್ನು ಆಕ್ರಮಿಸಿಬಿಟ್ಟಿತು.

...ನಿರೀಕ್ಷಿತ ದೊಂಬಿ, ದಾಂಧಲೆಯಿಂದ ...ಂಡ ಪಟೇಲರೊಂದಿಗೆ ಅಲ್ಲಿದ್ದ ಕ್ರಾಂತಿರಂಗದ ...ಮುಗಳು ಕಾಲ್ನಡಿಗೆಯಲ್ಲಿಯೇ ಶಾಸಕರ ಭವನಕ್ಕೆ ... ಮೆರವಣಿಗೆಯಲ್ಲಿ ಸಾಗಿ ಬಂದು ಈ 'ಬಂ' ...ಗಳ ಪುಂಡಾಟಿಕೆಯನ್ನು ಖಂಡಿಸಿ ತಮ್ಮ ...ತೋಡಿಕೊಂಡರು. ಸ್ವತಃ ಬಂಗಾರಪ್ಪನವರೇ ...ಲ್ಲ ನೇರವಾಗಿ ಕುಮ್ಮಕ್ಕು ನೀಡಿರದಿದ್ದರೂ ಅಲ್ಲಿದ್ದ ...ಪೈಕಿ ಬಹುಪಾಲು ಜನ ಡಾ. ಜೀವರಾಜ್ ಆಳ್ವ ...ದಿನ ಚೈತನ್ಯಶಾಲಿ ಯುವ ರಾಜಕಾರಣಿಯ ...ಮುಗಳಾಗಿದ್ದರೆಂಬುದಂತೂ ದಿಟವಾಗಿತ್ತು.

...ತ್ತ ಆರ್. ಗುಂಡೂರಾವ್ ಎಂಬ ಇಂದಿರಾ ...ಸರ್ಕಾರದ ಮುಖ್ಯಮಂತ್ರಿ ಹಾಗೂ ಅವರ ...ಮಿತ್ರ ಎಫ್.ಎಂ. ಖಾನ್ ಎಂಬ ಕೊಡಗು ...ಮುಂಬ ರಾಜಕಾರಣಿಯ ಜಂಟಿ ದರಬಾರಿನಲ್ಲಿ ... ಸಾರ್ವಜನಿಕ ಬದುಕಿಗೆ ಗ್ರಹಣ ಹಿಡಿದಂತಹ ...ಣವಿತ್ತು. ವ್ಯಕ್ತಿಪೂಜೆ, ಭಟ್ಟಂಗಿತನ ಮತ್ತು ... ಸ್ವೇಚ್ಛಾಚಾರದ ಆಡಂಬೊಲದಂತಾಗಿದ್ದ

ಆದರೆ ಅವರೆಂದೂ ಒಬ್ಬ ಟೀಮ್ ಲೀಡರ್ ಆಗಲೇ ಇಲ್ಲ, ರಾಜಕೀಯದಲ್ಲೂ ಅವರು ಒಂಟಿ ಸಲಗವೇ. ಅವರ ಅಚ್ಚುಮೆಚ್ಚಿನ ಶಟಲ್ ಬ್ಯಾಡ್ಮಿಂಟನ್ ಆಟದಲ್ಲೂ ಅವರು ಯಾವತ್ತೂ ಸಿಂಗಲ್ಸ್ ಆಟಗಾರನೇ... ಇನ್ನೊಬ್ಬರ ನಾಯಕತ್ವದಲ್ಲಿ ಅನುಯಾಯಿಯಾಗಿರಲು ನಿರಾಕರಿಸುತ್ತಿದ್ದ ಅವರ ಮನಸ್ಸು ತಮ್ಮದೇ ನಾಯಕತ್ವವಿದ್ದಾಗಲೂ ತಮ್ಮ ಸಹೋದ್ಯೋಗಿಗಳ ಮನೋಧರ್ಮಕ್ಕನುಸಾರವಾಗಿ ಅವರೊಂದಿಗೆ ಹೊಂದಿಕೊಂಡು ಹೋಗಲೂ ನಿರಾಕರಿಸುತ್ತಲೇ ಬಂತು. ಹಾಗೆಯೇ ಬಂಗಾರಪ್ಪನವರನ್ನು ಸಾಮೂಹಿಕ ಉದ್ದೇಶಕ್ಕೋಸ್ಕರ ಕೊಂಚ ಹೊಂದಾಣಿಕೆ, ಸಹನೆ, ಸಹಭಾಗಿತ್ವಕ್ಕೆ ತರಬೇತುಗೊಳಿಸಬಲ್ಲ, ರಾಜಕೀಯ ಗುರು ಅಥವಾ ಮೆಂಟರ್ ಎಂಬುವವರ್ಯಾರೂ ಸಿಗಲೂ ಇಲ್ಲ, ಸಿಕ್ಕರೂ ಅವರನ್ನು ತನ್ನ ಮಾರ್ಗದರ್ಶಿ ಎಂದೊಪ್ಪಿಕೊಳ್ಳುವ ಮನಸ್ಥಿತಿಯನ್ನು ಅವರು ಬೆಳೆಸಿಕೊಳ್ಳಲೂ ಇಲ್ಲ.

ಬಂಗಾರಪ್ಪನವರ ಜನಪ್ರಿಯತೆಯ ಸಮ್ಮೋಹಿನಿಗೊಳಗಾಗಿದ್ದ ಅವರ ಅಂದಿನ ಅಭಿಮಾನಿ ಸ್ನೇಹಿತರಾದ ಡಿ.ಬಿ.ಚಂದ್ರೇಗೌಡರು ಕ್ರಾಂತಿರಂಗದ ಅಧ್ಯಕ್ಷತೆಗೆ ಬಂಗಾರಪ್ಪನವರೇ ಸೂಕ್ತ ಅಭ್ಯರ್ಥಿ ಎಂದು ಲಂಕೇಶರೆದುರು ವಾದಿಸಿದರು: "ಮೇಷ್ಟ್ರೇ, ಬಂಗಾರಪ್ನೋರ ಹತ್ರ ವೋಟು ಬ್ಯಾಂಕುಗಳಿವೆ. ಚುನಾವಣೆಗೋಸ್ಕರ ಯಥೇಚ್ಛವಾಗಿ ಹಣ ಖರ್ಚು ಮಾಡಬಲ್ಲ ಶ್ರೀಮಂತ ಹಿತೈಷಿಗಳಿದ್ದಾರೆ. ರಾಜ್ಯಾದ್ಯಂತ ಅವರಿಗೋಸ್ಕರ ಹುಚ್ಚೆದ್ದು ಕುಣಿದಾಡಬಲ್ಲ ಯುವಕರಿದ್ದಾರೆ. ಪಾರ್ಟಿ ಕಟ್ಟಲೋಸ್ಕರ ಅಗತ್ಯವಾಗಿರೋ ಕಾರು–ಜೀಪು–ಲಾರಿಗಳನ್ನು ಒದಗಿಸಬಲ್ಲ ಸ್ನೇಹಿತರುಗಳಿದ್ದಾರೆ. ಮಾಧ್ಯಮಗಳಲ್ಲೂ ಅವರಿಗೆ ಧಾರಾಳವಾಗಿ ಪ್ರಚಾರ ನೀಡುವ ಅಭಿಮಾನಿಗಳಿದ್ದಾರೆ...." ಇತ್ಯಾದಿ ಇತ್ಯಾದಿ ಕಾರಣಗಳನ್ನು ಪಟ್ಟಿ ಮಾಡುತ್ತಾ ಹೋದರು.

ಚಂದ್ರೇಗೌಡರು ಮಾತು ಮುಗಿಸಿದ ಮೇಲೆ ಮೇಷ್ಟ್ರು ತಣ್ಣಗೆ ಉತ್ತರಿಸಿದ್ದು ಹೀಗೆ: "ಗೌಡ್ರೇ, ತಾವು ಹೇಳಿದ್ದು ನೂರಕ್ಕೆ ನೂರರಷ್ಟು ನಿಜ. ನಾನೊಪ್ತೀನಿ. ಬಂಗಾರಪ್ನೋರ ಹತ್ರ ಹಣ ಇದೆ, ಹಣವಂತ ಸ್ನೇಹಿತರಿದ್ದಾರೆ, ಜೀಪು–ಕಾರುಗಳಿವೆ, ಲಕ್ಷಾಂತರ ಮಂದಿ ಜೈಕಾರ ಹಾಕೋ ಯುವಕರ ಸೈನ್ಯವೇ ಇದೆ. ಆದರೆ ಈ ಕಾರಣಕ್ಕಾಗಿಯೇ ಅವರು ಬೇಡ ಅಂತ ನಾನು ಹೇಳೋದು."!

ಕಾಂಗ್ರೆಸ್ ಕಲ್ಚರ್‌ಗೆ ಪರ್ಯಾಯವಾಗಿ ಕ್ರಾಂತಿರಂಗವನ್ನು ರೂಪಿಸಬೇಕೆಂತಾದರೆ ಅಲ್ಲಿ ಬಂಗಾರಪ್ಪ ಇಷ್ಟಪಡಬಹುದಾದ ಧನಬಲ, ತೋಳ್ಬಲ ಹಾಗೂ ಜಾತಿಬಲದ ಪ್ರದರ್ಶನ ಇರಕೂಡದು ಎಂಬುದು ಲಂಕೇಶರ ತಾತ್ವಿಕ ನಿಲುವಾಗಿತ್ತು. ಅಂತಿಮವಾಗಿ ಜಾರ್ಜ್ ಫರ್ನಾಂಡಿಸ್ ಹಾಗೂ ಖಾದ್ರಿ ಶಾಮಣ್ಣನವರೊಂದಿಗೆ ಸಮಾಲೋಚಿಸಿ ಲಂಕೇಶರೇ ಅಬ್ದುಲ್ ನಜೀರ್ ಸಾಬ್ ಎಂಬ ಗುಂಡ್ಲುಪೇಟೆಯ ಚಿಂತನಾಶೀಲ ಹಾಗೂ ಕ್ರಿಯಾಶೀಲ ನಾಯಕನನ್ನು ಕಾಂಪ್ರಮೈಸ್ ಅಭ್ಯರ್ಥಿ ಎಂಬ ಪ್ರಸ್ತಾಪವನ್ನಿಟ್ಟಾಗ ಪಟೇಲ್ ಮತ್ತು ಬಂಗಾರಪ್ಪನವರಿಬ್ಬರೂ ಸಮ್ಮತಿಸಿಬಿಟ್ಟರು. ಕ್ರಾಂತಿರಂಗದ

ತೊಳಲಾಟದಿಂದಾಗಿ ಕೊಂಚ ಕುಗ್ಗಿಹೋಗಿದ್ದ ಅವರಿಗೆ ಆತ್ಮಸ್ಥೈರ್ಯ ತುಂಬಿದರು. ಮುಂದೆ ಅರಸರ ವೈಕುಂಠ ಸಮಾರಾಧನೆ ಸಂದರ್ಭದಲ್ಲಿ ಬಂಗಾರಪ್ಪನವರನ್ನು ಕಲ್ಲಹಳ್ಳಿಗೆ ಕರೆದುಕೊಂಡು ಬಂದರು. ಅಲ್ಲಿ ಅರಸರ ಸಮಾಧಿ ಸ್ಥಳಕ್ಕೆ ಗೌರವ ಸಲ್ಲಿಸಿ ಹಣೆಗೆ ಅವರ ಚಿತಾಭಸ್ಮದ ಬೊಟ್ಟನ್ನಿರಿಸಿಕೊಂಡಾದ ಮೇಲೆ ಬಂಗಾರಪ್ಪನವರ ಮುಖದಲ್ಲಿ ನಿರಾಳತೆ, ಹುಮ್ಮಸ್ಸುಗಳು ಕಾಣಿಸಿಕೊಂಡವು.

ಬೆಂಗಳೂರಿಗೆ ಮರಳಿದ ನಂತರ ಕ್ರಾಂತಿರಂಗದ ಚೇತರಿಕೆಗೆ ಮುಂದಡಿಯಿಟ್ಟ ಬಂಗಾರಪ್ಪನವರ ಮನೆಗೊಮ್ಮೆ ರಮೇಶ್ ಕುಮಾರ್‌ರೊಂದಿಗೆ ಹೋಗುವ ಅವಕಾಶ ಈ ಲೇಖಕನಿಗೆ ಲಭಿಸಿತು. ಅವರಂತೆಯೇ ಅರಸರನ್ನ ತೊರೆದು ಗುಂಡೂರಾಯರ ಕಾಂಗ್ರೆಸ್ಸಿನಲ್ಲಿ ಎಂಟ್ರಿ ಪಡೆಯಲು 8–10 ತಿಂಗಳು ಕಾದು ಅವಮಾನಿತರಾಗಿ ತೊಳಲಾಡುತ್ತಿದ್ದ ಡಿ.ಬಿ.ಚಂದ್ರೇಗೌಡರನ್ನೂ ಜತೆಗೂಡಿಸಿಕೊಳ್ಳಬೇಕೆಂಬ ವಿಚಾರ ಬಂತು. ಕೂಡಲೇ ತಮ್ಮ ಫಿಯಟ್ ಕಾರಲ್ಲಿ ನಮ್ಮಿಬ್ಬರನ್ನು ಕೂರಿಸಿಕೊಂಡು ತಾವೇ ಹೈಸ್ಪೀಡ್ ಡ್ರೈವಿಂಗ್ ಮಾಡುತ್ತಾ ಜಯಮಹಲ್‌ನ ಮತ್ತೊಂದು ಸರಕಾರಿ ನಿವಾಸದಲ್ಲಿದ್ದ ಚಂದ್ರೇಗೌಡರ ಮನೆಗೆ ಕರೆದೊಯ್ದರು. ಆ ಗಳಿಗೆಯಿಂದಲೇ

ದೇಬಿಟ್ಟರು. ಮುಂದೆ ಕ್ರಮೇಣ ತಾನೇ ಹೀನಾಮಾನವಾಗಿ ಜರಿದಿದ್ದ ಕಾಂಗ್ರೆಸ್ಸಿಗೆ ಮರುಪ್ರವೇಶ ಪಡೆದುಕೊಂಡು ವಿರೋಧ ಪಕ್ಷದ ನಾಯಕರಾಗೂ ಕೊಂಚಕಾಲ ಮಿಂಚಿದರು.

ತಮ್ಮ ಆಸೆ, ಆಕಾಂಕ್ಷೆಗಳಿಗೆ ವ್ಯತಿರಿಕ್ತವಾಗಿ ರಾಜಕೀಯ ಘಟನಾವಳಿಗಳು ಸಂಭವಿಸಿದಾಕ್ಷಣವೇ ಬಂಡಾಯವೇಳುವ 'ಬಂ'ರ ಅವಸರದಿಂದಾಗಿ ಜನತಾರಂಗದ ಮೂಲಕ ಪುನರ್ಜನ್ಮ ಪಡೆಯಬೇಕಿದ್ದ ದೇವರಾಜ ಅರಸು ಕಾಲದ ಸಾಮಾಜಿಕ ನ್ಯಾಯದ ರಾಜಕೀಯ ಪ್ರಕ್ರಿಯೆಗೆ ಶಾಶ್ವತವಾದ ವಿಘ್ನವೊದಗಿಬಂತು. ಕ್ರಾಂತಿರಂಗದ

ಡಿಬಿಸಿ ಕೂಡ ಕ್ರಾಂತಿರಂಗದ ಅವಿಭಾಜ್ಯ ಅಂಗವಾಗಿಬಿಟ್ಟರು.

ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಜರುಗಿದ ಪ್ರಚಂಡ ರ‍್ಯಾಲಿಯಲ್ಲಿ ಬಂಗಾರಪ್ಪ ವಿದ್ಯುಕ್ತವಾಗಿ ಕ್ರಾಂತಿರಂಗಕ್ಕೆ ಪ್ರವೇಶ ಪಡೆದುಕೊಂಡರು. ಖಾದ್ರಿ ಶಾಮಣ್ಣನವರ ಮಾರ್ಗದರ್ಶನದಲ್ಲಿ ತಾವೇ ಸಿದ್ದಪಡಿಸಿದ್ದ ಅಮೋಘವಾದ ಲಿಖಿತ ಭಾಷಣವನ್ನ 'ಬಂ' ತಮ್ಮ ವಿಶಿಷ್ಟ ಶೈಲಿಯಲ್ಲಿ ವಾಚಿಸತೊಡಗಿದಂತೆಯೇ ಪ್ರತಿಯೊಂದು ವಾಕ್ಯಕ್ಕೂ ಕಿವಿಗಡಚಿಕ್ಕುವ ಚಪ್ಪಾಳೆ, ಸಿಳ್ಳೆಗಳ ಮೆಚ್ಚುಗೆ ಪ್ರಕಟಗೊಳ್ಳುತ್ತಾ ಹೋಯಿತು.

ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಧೋರಣೆ, ಅವರ ಕುಟುಂಬ ರಾಜಕಾರಣದ ಅತಿರೇಕಗಳು, ರಾಜಕೀಯವಾಗಿ ಕಿಂಚಿತ್ತೂ ತಿಳಿವಳಿಕೆಯಿಲ್ಲದ ತನ್ನ ಹಿರಿಯ ಮಗ ರಾಜೀವ್ ಗಾಂಧಿಯನ್ನು ಈ ರಾಷ್ಟ್ರದ ಮೇಲೆ ಹೇರಬೇಕೆಂಬ ಅವರ ಹವಣಿಕೆ, ಕರ್ನಾಟಕದಲ್ಲಿ ಗುಂಡೂರಾಯರ ಪಟಾಲಂ ಕೈಗೆ ರಾಜ್ಯಭಾರವನ್ನೊಪ್ಪಿಸಿದ ಅವರ ರಾಜಕೀಯ ಉದ್ಧಟತನ ಇವುಗಳನ್ನೆಲ್ಲ ಎಳೆಎಳೆಯಾಗಿ ಬಿಡಿಸುತ್ತ ಕಾಂಗ್ರೆಸ್ ಕಲ್ಚರಿನ ವಿರುದ್ಧ ತಮ್ಮ ಅಭಿಮಾನಿಗಳಲ್ಲಿ ಕಿಚ್ಚು–ರೊಚ್ಚುಗಳನ್ನು ಬಿತ್ತುವಲ್ಲಿ ಯಶಸ್ವಿಯಾಗಿಬಿಟ್ಟರು ಬಂಗಾರಪ್ಪ.

ಸೈದ್ಧಾಂತಿಕ ಆಶಯಗಳೆಲ್ಲ ಮಣ್ಣುಪಾಲಾಗಿ ಸಂಸ್ಥಾ ಕಾಂಗ್ರೆಸ್ ಮೂಲದ ಹೆಗಡೆ–ದೇವೇಗೌಡ ಹಾಗೂ ಎಸ್‌ಆರ್ ಬೊಮ್ಮಾಯಿ ಎಂಬ ತ್ರಿಮೂರ್ತಿಗಳ ಯಜಮಾನಿಕೆಯಲ್ಲಿಯೆ ಪ್ರಗತಿಪರ ಶಕ್ತಿಗಳೆಲ್ಲ ನರಳಾಡುವಂತಾಯ್ತು.

ಇದೇ ತರದ ದಿಢೀರ್ ಬಂಡಾಯಗಳ ಮೂಲಕವೇ ಸಾಗಿಬಂದ ಬಂಗಾರಪ್ಪನವರ ರಾಜಕೀಯ ಯಾತ್ರೆ ಅವರನ್ನು ಮುಂದೆ ಪಿ.ವಿ.ನರಸಿಂಹರಾವ್ ವಿರುದ್ಧ , ಸೋನಿಯಾ ಗಾಂಧಿಯ ವಿರುದ್ಧ ಭಾಜಪದ ಅಡ್ವಾಣಿಯವರ ವಿರುದ್ಧ ಕಡೆಯಲ್ಲಿ ಸಮಾಜವಾದಿ ಪಾರ್ಟಿಯ ಮುಲಾಯಂಸಿಂಗ್‌ರ ವಿರುದ್ಧವೂ ಕಾಲಕಾಲಕ್ಕೆ ಬಂಡಾಯವೆದ್ದು, ಜಗಳವಾಡಿಕೊಂಡು ಹೊರಬರುವ ನಿರಂತರ ಚಂಚಲತೆ, ನಿರಂತರ ಅಸ್ಥಿರತೆಯ ಹಾದಿಯಲ್ಲಿ ತಂದು ನಿಲ್ಲಿಸಿಬಿಟ್ಟಿತ್ತು.

ಒಂದೊಂದು ಸಂದರ್ಭದಲ್ಲಿ 'ಬಂ'ರ ಬಂಡಾಯ ಕಾಂಗ್ರೆಸ್ಸು ಮತ್ತು ಬಿಜೆಪಿಯಂತಹ ರಾಷ್ಟ್ರೀಯ ಪಕ್ಷಗಳ ಹೈಕಮಾಂಡ್ ರಾಜಕೀಯದ ಯಜಮಾನ್ಯ ಸಂಸ್ಕೃತಿಯ ವಿರುದ್ಧದ ಸ್ವಾಭಿಮಾನದ ಸಂಕೇತದಂತೆ ವಿಜೃಂಭಿಸಿದ್ದುದು ಸತ್ಯವೇ ಆದರೆ ಬಹುತೇಕ ಪ್ರಸಂಗಗಳಲ್ಲಿ ಅವರ ಬಂಡಾಯಗಳಿಗೆ ಯಾವುದೇ ನಿರ್ದಿಷ್ಟವಾದ ಸಮುದಾಯಿಕ ಕಾಳಜಿ ಅಥವಾ ಸೈದ್ಧಾಂತಿಕ ಆಶಯಗಳಿಗಿಂತ ಕೇವಲ ವೈಯಕ್ತಿಕ ನೆಲೆಯಲ್ಲಿ ಅನುಭವಿಸಿದ ಅಪಮಾನ, ಅವಹೇಳನ ಮತ್ತು ಮುಜುಗರಗಳಿಗೆ ಮಯ್ಯಿ ತೀರಿಸಿಕೊಳ್ಳಬೇಕೆಂಬ ಹತಾಶೆಯೆ ಮುಖ್ಯವಾಗತೊಡಗಿತ್ತು.









...ವಿರುದ್ಧ ಪರ್ಯಾಯ ರಾಜಕೀಯ ಶಕ್ತಿಯಾಗಿ ...ಮ್ಮಬಹುದಾದ ಭರವಸೆ ಮೂಡಿಸಿದ್ದ ಕರ್ನಾಟಕ ...ಕ್ಕೆ ಹೀಗೆ 'ಬಂ' ಅಭಿಮಾನಿಗಳೆಂದುಕೊಂಡ ... ಪುಂಡಾಟಿಕೆಯಿಂದುಂಟಾದ ಮುಜುಗರ, ...ಕಂಡು ರೋಸಿಹೋಗಿಯೇ ಮೂಡಿಗೆರೆಯಿಂದ ...ಚೇರಿಗೆ ಧಾವಿಸಿದ್ದರು ತೇಜಸ್ವಿ. ಈ ಘಟನಾವಳಿ ...ವರಷ್ಟೇ ಕೋಪಿಸಿಕೊಂಡಿದ್ದ ಲಂಕೇಶ್ ಮೇಷ್ಟ್ರ ...ರ್ಶಿಸಿ ಆ ಕ್ಷಣದಲ್ಲಿಯೇ 'ಬಂ'ರ ರಾಜಕೀಯ ...ಳನ್ನು ಉಲ್ಲೇಖಿಸಿ ಆ ಅಗ್ರ ಲೇಖನವನ್ನು ...ಟ್ಟಿದ್ದರು.

... ವಿರುದ್ಧ ಲಂಕೇಶ್ ಪತ್ರಿಕೆಯ ಬಳಗದಿಂದ ...ಂತಹ ತೀಕ್ಷ್ಣ ಪ್ರತಿಕ್ರಿಯೆಯಿಂದಾಗಿ ಬಂಗಾರಪ್ಪ ...ಪ್ತರೊಂದಿಗೆ ಸಿಡಿಮಿಡಿಗೊಂಡು ಮಾತನಾಡಿ ...ಂಗಳಗೆಯುಲ್ಲಿಯೇ ತಮ್ಮ ಶಿಷ್ಯರಿಂದಾದ ಪ್ರಮಾದ ...ಂಬುದನ್ನರ್ಥ ಮಾಡಿಕೊಂಡು ವಿಷಾದ ...ು. ಮೇಷ್ಟ್ರೊಂದಿಗೆ ಆ ದಿನಗಳಲ್ಲಿ ಈ ಪರ್ಯಾಯ ...ಕ್ಕೋಸ್ಕರ ನಿರಂತರ ಒಡನಾಟವಿಟ್ಟುಕೊಂಡಿದ್ದ ...'ದ ಸಂಪಾದಕ ಖಾದ್ರಿ ಶಾಮಣ್ಣನವರ ಮೂಲಕ ...ಕೆಗಳನ್ನು ರವಾನಿಸಿದರು.

...ಬಂಗಾರಪ್ಪನವರ ಸಹಜ ಜಾಯಮಾನವಾಗಿತ್ತು, ...ರಿತನಾಗೂ ಒಬ್ಬ ಪ್ರಚಂಡ ಮಾಸ್ ಲೀಡರ್,

ಅಧ್ಯಕ್ಷತೆಯ ಸಮಸ್ಯೆ ಬಗೆಹರಿದುಬಿಟ್ಟಿತು. ಅವರೊಂದಿಗೆ ಹಿರಿಯ ದಲಿತನಾಯಕ ಬಿ.ರಾಚಯ್ಯನವರನ್ನು ಸಂಸದೀಯ ಮಂಡಲಿಯ ಅಧ್ಯಕ್ಷರನ್ನಾಗಿ ಮಾಡುವುದಕ್ಕೂ ಬಂಗಾರಪ್ಪ ಸೈ ಎಂದುಬಿಟ್ಟರು.

ಅಂದಹಾಗೆ ಜೂನ್ 6, 1982ರಂದು ಮಧ್ಯಾಹ್ನ ದೇವರಾಜ ಅರಸರು ತೀರಿಕೊಂಡಾಗ ಕಾರವಾರದಲ್ಲಿ ಮುಕ್ಕಾಂ ಮಾಡಿದ್ದ ಬಂಗಾರಪ್ಪನವರಿಗೆ ಭಾರೀ ಧರ್ಮಸಂಕಟವೇ ಕಾಡಲಾರಂಭಿಸಿತ್ತು. ತಾನು ಹಿಂದೆ 1979ರಲ್ಲಿ ಇಂದಿರಾ ಗಾಂಧಿಯವರ ಆಣತಿಗೆ ಓಗೊಟ್ಟು ರಾತ್ರೋರಾತ್ರಿ ಅರಸರನ್ನ ತೊರೆದು ಬಂದು ಆ ಗುಂಡೂರಾವ್–ಖಾನ್ ಗ್ಯಾಂಗಿನೊಂದಿಗೆ ಗುರುತಿಸಿಕೊಂಡು ತಪ್ಪು ಮಾಡಿಬಿಟ್ಟನೇನೋ ಎಂಬ ಪಾಪಪ್ರಜ್ಞೆ ಬಾಧಿಸಿರಬೇಕು. ಈ ಚಡಪಡಿಕೆಯಿಂದಾಗಿ ಅವರು ಅರಸರ ಪಾರ್ಥಿವ ಶರೀರದ ದರುಶನಕ್ಕೂ ಬಾರದೆಯೆ ದೂರವೇ ಉಳಿದು ಒಂಟಿಯಾಗಿ ಮಾನಸಿಕ ಯಾತನೆಯನ್ನು ಅನುಭವಿಸುವಂತಾಯ್ತು. ಅರಸು ಅಂತಿಮ ಕ್ರಿಯೆಗಳೆಲ್ಲ ಮುಗಿದ ನಂತರದ ದಿನಗಳಲ್ಲೊಮ್ಮೆ ಬೆಂಗಳೂರಿನ ಕುಮಾರಪಾರ್ಕ್ ಈಸ್ಟ್ ಗಾಂಧಿಭವನದ ರಸ್ತೆಯ ಮಂತ್ರಿ ನಿವಾಸದಲ್ಲಿಯೇ ಮುಂದುವರಿದಿದ್ದ ಬಂಗಾರಪ್ಪನವರನ್ನು ಎಂ.ರಘುಪತಿ ಮತ್ತು ರಮೇಶ್‌ಕುಮಾರ್ ಖುದ್ದಾಗಿ ಭೇಟಿಯಾಗಿ ಸಮಾಧಾನ ಮಾಡಿದರು–ಅರಸರ ಅಗಲಿಕೆಯ ಸಂದರ್ಭದಲ್ಲಿ ಅನುಭವಿಸಬೇಕಾಗಿ ಬಂದ


1983 ಜನವರಿಯಲ್ಲಿ ಜರುಗಿದ ರಾಜ್ಯ ಅಸೆಂಬ್ಲಿ ಚುನಾವಣೆಯಲ್ಲಿ ರೂಪುಗೊಂಡ ಜನತಾಪಾರ್ಟಿ ಹಾಗೂ ಕ್ರಾಂತಿರಂಗಗಳ ಮೈತ್ರಿಕೂಟವಾದ ಜನತಾರಂಗದ ಪ್ರಧಾನ ಪ್ರಚಾರಕರಾಗಿ ಮುಂಚೂಣಿಯಲ್ಲಿ ನಿಂತು ಓಡಾಡಿದರು ಬಂಗಾರಪ್ಪ. ಅವರು ಕ್ರೋಢೀಕರಿಸುತ್ತ ಬಂದ ದುರ್ಬಲ ವರ್ಗಗಳ ಜನಶಕ್ತಿಯ ಅಖಂಡ ಬೆಂಬಲದ ಲಾಭ ಜನತಾ ರಂಗಕ್ಕೆ ದಕ್ಕಿ ಅದು ಅಭೂತಪೂರ್ವ ಜಯಗಳಿಸುವಂತಾಯ್ತು.

ಗುಂಡೂರಾವ್ ಮತ್ತು ಅವರ ಇಂದಿರಾ ಕಾಂಗ್ರೆಸ್ ಪಕ್ಷಕ್ಕೆ ಹೀನಾಯವಾದ ಸೋಲಾಯ್ತು. ಆದರೆ ನಿಚ್ಚಳ ಬಹುಮತ ದಕ್ಕದೆ ಹಂಗ್ ಅಸೆಂಬ್ಲಿಯ ಸೃಷ್ಟಿಯಾಯಿತು. ಆಗ 18 ಮಂದಿ ಭಾಜಪ ಶಾಸಕರು ಮತ್ತು 12 ಮಂದಿ ಪಕ್ಷೇತರ ಶಾಸಕರ ಬಾಹ್ಯ ಬೆಂಬಲದೊಂದಿಗೆ ಪ್ರಪ್ರಥಮ ಕಾಂಗ್ರೆಸ್ಸೇತರ ಸರ್ಕಾರದ ಉಗಮ ಖಚಿತವೆಂದಾದಾಗ ಬಂಗಾರಪ್ಪ ಮುಖ್ಯಮಂತ್ರಿ ಸ್ಥಾನಕ್ಕೆ ತಾನೇ ಆಗಬೇಕೆಂದು ಪಟ್ಟು ಹಿಡಿದು ಕೂತರು. ಜನತಾರಂಗದ ಪೈಕಿ 59 ಸ್ಥಾನ ಪಡೆದಿದ್ದ ಅಂದಿನ ಜನತಾಪಕ್ಷ ಹಿರಿಯಣ್ಣನಂತೆ ವರ್ತಿಸಿ 32 ಸ್ಥಾನ ಪಡೆದಿದ್ದ ಕ್ರಾಂತಿರಂಗದ ಮೇಲೆ ತನ್ನ ಅಧಿಪತ್ಯ ಸಾಧಿಸಿದಾಗ ಆದುವರೆಗೂ ನೇಪಥ್ಯದಲ್ಲಿದ್ದ ರಾಮಕೃಷ್ಣ ಹೆಗಡೆ ಪಕಾಪಕಿಯಾಗಿ ಮುಖ್ಯಮಂತ್ರಿಯಾಗಿ ಅವತರಿಸಿಯೇಬಿಟ್ಟರು.

ಆಘಾತಗೊಂಡ ಬಂಗಾರಪ್ಪ ತತ್‌ಕ್ಷಣವೇ ಜನತಾರಂಗಕ್ಕೆ ಧಿಕ್ಕಾರ ಹೇಳಿ ತಮ್ಮ ...ಕರೊಂದಿಗೆ ಹೊರನಡೆ

ಸತತವಾಗಿ ತನ್ನ ಸೊರಬ ಕ್ಷೇತ್ರದ ಚುನಾವಣೆಗಳಲ್ಲಿ, ಆ ನಂತರ ಮೂರು ಬಾರಿ ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಗೆಲ್ಲುತ್ತಾ ಬಂದ ಬಂಗಾರಪ್ಪನವರಿಗೆ ಈ ನಿರಂತರ ಚುನಾವಣಾ ಗೆಲುವುಗಳೇ ತಮ್ಮ ಜನಪ್ರಿಯತೆಯ ಕುರಿತು ಅತಿಯಾದ ಆತ್ಮವಿಶ್ವಾಸವನ್ನು ತುಂಬುತ್ತಾ ಬಂದವು. ತತ್ಪರಿಣಾಮವಾಗಿ ತಮ್ಮನ್ನಾವರಿಸಿಕೊಂಡ ಪ್ರಚಂಡ ಜನಪ್ರಿಯತೆಯ ಗುಂಗಿನಿಂದಾಗಿ ತಮ್ಮದೇ ಪೂರ್ವಾಶ್ರಮವಾದ ಸಮಾಜವಾದಿ ಪಾರ್ಟಿಯ ದಿನಗಳ ವೈಚಾರಿಕತೆಯ ಬುತ್ತಿ ಖಾಲಿಯಾಗುತ್ತಾ ಬಂತು. ಅದೇ ಅವರ ರೋಮಾಂಚಕಾರಿ ರಾಜಕೀಯ ಬದುಕಿನ ದುರಂತವಾಗಿಬಿಟ್ಟಿತು.

ಇಷ್ಟೆಲ್ಲ ಅನಿಶ್ಚಿತತೆ, ಅಸ್ಥಿರತೆ ಮತ್ತು ಅರಾಜಕತೆಗಳ ಬೆಂಗಾಡಿನಲ್ಲೂ ಬಂಗಾರಪ್ಪನವರ ರಾಜಕೀಯ ಬದುಕು ನಾಡಿನ ಜನರ ಮನಸ್ಸುಗಳಲ್ಲಿ ಚಿರಸ್ಥಾಯಿಯಾಗಿ ಉಳಿಯಲಿರುವುದು ಅವರ ದಿಟ್ಟ, ಸ್ವಾಭಿಮಾನಿ ಹಾಗೂ ಸಾಹಸಮಯ ವ್ಯಕ್ತಿತ್ವದಿಂದಾಗಿ. ರಾಜಕಾರಣದ ಹಲಾಹಲ್ಲಿಯ ನಡುವೆಯೂ ತಮಗೆ ಅನ್ನಿಸಿದ್ದನ್ನ ಆಡುವ ಸ್ವಾತಂತ್ರ್ಯ ಹಾಗೂ ಆಡಿದ್ದನ್ನ ಮಾಡಿ ತೋರಿಸುವ ಸ್ವಾತಂತ್ರ್ಯವನ್ನು ಸತತವಾಗಿ ಎತ್ತಿಹಿಡಿಯುತ್ತ ಬಂದರೆಂಬ ಕಾರಣಕ್ಕಾಗಿ. ಜತೆಗೆ ಚುನಾವಣೆಗಳಲ್ಲಿ ಧನಬಲಕ್ಕಿಂತ ಹೆಚ್ಚಾಗಿ ಕೇವಲ ತಮ್ಮನ್ನು ಪ್ರೀತಿಸುವ ಜನಬಲವನ್ನೇ ನೆಚ್ಚಿಕೊಂಡು ಬಂದ ಅಪೂರ್ವ ಪ್ರಜಾತಂತ್ರ ಪ್ರೇಮಿ ಎಂಬ ಹೆಗ್ಗಳಿಕೆಗಾಗಿ....





ಕುರ್ಚಿ ಸಿಕ್ಕಿದ ಮೇಲೆ ಯಾರಿಗೂ ಬಿಟ್ಟುಕೊಡಬಾರ್ದು

ಮಾಜಿ ಮಂತ್ರಿ ಹೆಚ್.ಟಿ.ಕೃಷ್ಣಪ್ಪನವರಿಗೂ ಬಂಗಾರಪ್ಪನವರಿಗೂ ತುಂಬಾ ಗೆಳೆತನವಿತ್ತು. ಕಾರಣ ಇಬ್ಬರೂ ಕಲಾವಿದರಾಗಿದ್ದರು. ಬಂಗಾರಪ್ಪ ಹಿಂದೂಸ್ತಾನಿ ಸಂಗೀತ ಹೇಳಿದರೆ, ಕೃಷ್ಣಪ್ಪನವರು ನಾಟಕದ ಹಾಡೇಳುತ್ತಿದ್ದರು. ಅಂದು ನಡೆಯುತ್ತಿದ್ದ ಶಾಸಕರ ಏನಾಟಕದಲ್ಲಿ ಇಬ್ಬರೂ ಭಾಗವಹಿಸಿ ತಮ್ಮ ಕಲಾಪ್ರತಿಭೆ ಪ್ರದರ್ಶಿಸುತ್ತಿದ್ದರು. ಒಮ್ಮೆ ನಾರದನ ಪಾರ್ಟ್ ಮಾಡುವುದಾಗಿ ಒಪ್ಪಿಕೊಂಡು ಹೋದ 'ಬಂ' ಕೈಕೊಟ್ಟರಂತೆ. ಕೃಷ್ಣಪ್ಪ ಗಟ್ಟಿ ಚಂದ್ರಶೇಖರ್ ಎಂಬ ಶಾಸಕನನ್ನ ತಯಾರು ಮಾಡಿ ತಂದು ನಿಲ್ಲಿಸಿದರೆ ಆತ ಹಾಡು, ಮಾತನ್ನೆಲ್ಲಾ ಮರೆತು ನಿಂತುಕೊಂಡನಂತೆ. ಆಗ ಗಂಭೀರ ನಾಟಕ ನಗೆನಾಟಕವಾಯ್ತಂತೆ.

ಆ ಕಾಲದಲ್ಲಿ ಬಂಗಾರಪ್ಪನವರ ಬಳಿ ಯಾವ ವಾಹನವೂ ಇರಲಿಲ್ಲವಂತೆ. "ಊರಿಗೆ ಹೋಗಿ ಗರ್ಭಿಣಿ ಹೆಂಡತಿಯನ್ನು ನೋಡಿಕೊಂಡು ಬರುತ್ತೇನೆ, ನಿನ್ನ ಕಾರು ಕೊಡು" ಎಂದು ಕಾಗೋಡು ತಿಮ್ಮಪ್ಪನವರನ್ನು ಕೇಳಿದರಂತೆ. ತಿಮ್ಮಪ್ಪ ಕೊಡಲು ನಿರಾಕರಿಸಿದರು. ಬಂಗಾರಪ್ಪ ಕೃಷ್ಣಪ್ಪನವರಿಗೆ ಗಂಟುಬಿದ್ದು "ಗರ್ಭಿಣಿ ಹೆಂಡತಿಯನ್ನು ನೋಡಿಕೊಂಡು ಬರಬೇಕು. ಏನಾದರೂ ಮಾಡಿ ತಿಮ್ಮಪ್ಪನ ಕಾರು ಕೊಡಿಸಿ" ಎಂದರು. ಆಗ ಕೃಷ್ಣಪ್ಪನವರು ತಿಮ್ಮಪ್ಪನವರ ಬಳಿಗೋಗಿ "ಇಂತ ಕೆಲಸಕ್ಕೆ ಇಲ್ಲ ಅನ್ನಬಾರದು, ಕೊಡಿ" ಎಂದರು. ತಿಮ್ಮಪ್ಪ "ನೋಡಣ್ಣ ಅವನೇನು ಅಂತ ನನಗೆ ಚೆನ್ನಾಗಿ ಗೊತ್ತು, ಕಾರನ್ನ ಯದ್ವಾತದ್ವಾ ಓಡಿಸಿ ಹಾಳುಮಾಡಿಕೊಂಡು ತರ್ತಾನೆ. ಅದ್ಕೆ ಕೊಡಲ್ಲ" ಎಂದರು. ಕೃಷ್ಣಪ್ಪನವರು "ಹಾಗೇನಾದರೂ ನಿಮ್ಮ ಕಾರಿಗೆ ಡ್ಯಾಮೇಜಾದರೆ ನಾನೇ ರಿಪೇರಿ ಮಾಡಿಸಿಕೊಡುತ್ತೇನೆ, ಕೊಡಿ" ಎಂದರು. ಅದರಂತೆ ತಿಮ್ಮಪ್ಪ ಕಾರು ಕೊಟ್ಟರು. ಆದರೆ ಕೃಷ್ಣಪ್ಪನವರು ಕರಾರನ್ನ 'ಬಂ'ಗೆ ಹೇಳುವುದನ್ನು ಮರೆತರು. ಆದ್ದರಿಂದ 'ಬಂ' ತಿಮ್ಮಪ್ಪನ ಮೇಲಿನ ಸಿಟ್ಟನ್ನು ಕಾರಿನ ಮೇಲೆ ತೀರಿಸಿಕೊಂಡು ತಂದು ನಿಲ್ಲಿಸಿದರು. ತಿಮ್ಮಪ್ಪನವರು ಬಂದು "ನಾನು ಹೇಳಲಿಲ್ಲವೆ, ಆತ ಸರಿಯಿಲ್ಲ ಅಂತ. ಕೇಳಿದ್ರ ನೀವು?" ಎಂದರು. ಕೃಷ್ಣಪ್ಪ ಮರುಮಾತನಾಡದೆ ಕಾರನ್ನು ರಿಪೇರಿ ಮಾಡಿಸಿಕೊಟ್ಟರು. ಮುಂದೆ ಬಂಗಾರಪ್ಪ ಕೆಸಿಪಿ ಪಾರ್ಟಿ ಸ್ಥಾಪಿಸಿಕೊಂಡು ಹೆಲಿಕಾಪ್ಟರ್‌ನಲ್ಲಿ ಓಡಾಡಿದರು. ಅದೇ ಹೆಲಿಕಾಪ್ಟರ್‌ನಲ್ಲಿ ನಾಗಮಂಗಲಕ್ಕೂ ಬಂದಿದ್ದರು. ಕೃಷ್ಣಪ್ಪನವರ ಎದುರು ನಿಂತ ಅದರ ಪಾರ್ಟಿ ಕ್ಯಾಂಡಿಡೇಟು ಸಾವಿರದ ಆರುನೂರು ಓಟು ಪಡೆದಿದ್ದ!

ಬಂಗಾರಪ್ಪನ ರೈತರ ಬಗೆಗಿನ ಕಾಳಜಿ ಪ್ರಶ್ನಾತೀತವಾಗಿತ್ತು. ಇದನ್ನು ಕಂಡೇ ನಂಜುಂಡಸ್ವಾಮಿಯವರು ಎರಡು ಉಗ್ರ ಪ್ರತಿಭಟನೆಯನ್ನು ವಾಪಸ್ ಪಡೆದಿದ್ದರು. ಮುಖ್ಯಮಂತ್ರಿಯಾದರೂ ಪ್ರೊಫೆಸರ್ ಇದ್ದಲ್ಲಿಗೇ ಹೋಗಿ ಮಾತನಾಡಿಸುವವರಾಗಿದ್ದರು.

ಒಮ್ಮೆ ರೈತನಾಯಕ ಸುಂದರೇಶ್, ಕೆಲವು ಅಂಗಹೀನ ರೈತ ಮಕ್ಕಳನ್ನು ಬಂಗಾರಪ್ಪನ ಬಳಿ ಕರೆದುಕೊಂಡು ಹೋದಾಗ ಮುಖ್ಯಮಂತ್ರಿ ಕುರ್ಚಿಯಿಂದ ಎದ್ದು ಬಂದ 'ಬಂ' ಸುಂದರೇಶ್ ಪಕ್ಕದಲ್ಲಿ ಕುಳಿತು "ಸುಂದರೇಶ್, ನಿಜಕ್ಕೂ ನಿಮ್ಮ ಕಾಳಜಿಗೆ ನನ್ನ ಹ್ಯಾಟ್ಸಾಫ್. ಪಾಪ ಇವರನ್ನ ಮೂರನೇ ಮಹಡಿವರೆಗೂ ಕರಕೊಂಡು ಬಂದಿದೀರಲ್ಲಾ, ಹೇಳಿ ಏನಾಗಬೇಕು?" ಎಂದಿದ್ದರು.

ಒಮ್ಮೆ ಕುಂಸಿ, ಶಿಕಾರಿಪುರ, ಆಯನೂರು, ಸೊರಬದ ಕಡೆ ಬರಗಾಲ ಬಂದು ರೈತರಿಗೆ ಬಿತ್ತನೆ ಬೀಜದ ಸಮಸ್ಯೆಯಾಗಿತ್ತು. ಬಂಗಾರಪ್ಪನವರು ತಮ್ಮ ಮಗ ಮಧು ಜೊತೆ ಸೇರಿಕೊಂಡು ಲಾರಿಗಟ್ಟಲೇ ಬತ್ತ ತರಿಸಿ ಬಡವರಿಗೆ ಹಂಚಿದ್ದರು. ಇದು ಕರ್ನಾಟಕದಲ್ಲಿ ಯಾವೊಬ್ಬ ಸಂಸದನೂ ಈವರೆಗೂ ಮಾಡದಿರುವ ಸಾಹಸ. ಅದನ್ನ ನೋಡಲು ಕುಂಸಿಗೆ ಹೋದೆ. ಬಂಗಾರಪ್ಪ ರೈತರಿಗೆ ಮಾಡುವ ಭಾಷಣವೇ ಬೇರೆ ಎಂದು ಅಂದು ತಿಳಿಯಿತು. ಅಲ್ಲಿನ ಪ್ರಾದೇಶಿಕವಾದ ಭಾಷಾ ಸೊಗಡು, ಗಾದೆ ಮಾತು, ಸಭೆಯಲ್ಲಿದ್ದ ಪರಿಚಿತರನ್ನು ಮಾತನಾಡಿಸುತ್ತಾ ಹಾಸ್ಯ ಬೆರೆಸುವುದು ಅವರ ಶೈಲಿ. ಬಂಗಾರಪ್ಪ ಬರುತ್ತಾರೆಂದರೆ ಅಲ್ಲಿ ಜನ ಯಾಕೆ ಸಂಭ್ರಮಪಡುತ್ತಾರೆಂದು ಅಂದು ತಿಳಿಯಿತು. ನಾಗೇಂದ್ರಪ್ಪನವರು "ಇವರು ಲಂಕೇಶ್ ಪತ್ರಿಕೆಯಿಂದ ಬಂದಿದ್ದಾರೆ" ಎಂದು ನನ್ನನ್ನು ಪರಿಚಯಿಸಿದರು. "ಯಾವಾಗ್ ಬಂದ್ರಿ?" ಎಂದ 'ಬಂ' ಎರಡು ಕುರ್ಚಿ ತರಿಸಿ ಕೂರುವಂತೆ ಹೇಳಿ "ಕುರ್ಚಿ ಸಿಕ್ಕಿದ ಮೇಲೆ ಯಾರಿಗೂ ಬಿಟ್ಟುಕೊಡಬಾರದು. ಮತ್ತೆ ಸಿಗಲ್ಲ" ಎಂದು ಹಾಸ್ಯ ಮಾಡಿದರು.

ಬಂಗಾರಪ್ಪ ಬಿಜೆಪಿ ಸೇರಿದಾಗ ಅವರ ಮಗ ಕುಮಾರ್ ಬಂಗಾರಪ್ಪ "ನಮ್ಮ ಸೈನ್ಯದ ಮುಂದಾಳೇ ಎದುರು ಪಾರ್ಟಿಗೆ ಹೋಗಿ ಸೇರಿದಂತಾಗಿದೆ" ಎಂದರು. ಅವರಿವರ ಟೀಕೆಗಿಂತ ಮಗನ ಟೀಕೆಗೆ 'ಬಂ' ತುಂಬಾ ಕೆರಳುತ್ತಿದ್ದರು. ಸೊರಬದ ಕಟ್ಟಡವೊಂದರ ಉದ್ಘಾಟನೆಗೆ ಕುಮಾರ್ ಬಂಗಾರಪ್ಪನೂ ಬಂದು ಹೋದ ಸುದ್ದಿ ಕೇಳಿ "ಅವರಿವರು ಕಟ್ಟಿರುವ ಕಟ್ಟಡದ ಉದ್ಘಾಟನೆಗೆ ಬಂದ್ರೆ ಅವರ ಸೊಂಟ ಮುರಿರಿ" ಎಂದು ಹೇಳಿದ್ದರು. ಮಗನಿಗೆ ಹೊಡೆಯಿರಿ ಎಂದು ಸಾರ್ವಜನಿಕರಿಗೆ ಕರೆಕೊಟ್ಟ ರಾಜಕಾರಣಿ ದೇಶದಲ್ಲಿ ಬಂಗಾರಪ್ಪ ಮಾತ್ರ.

***

ನಾವೊಂದಿಷ್ಟು ಗೆಳೆಯರು 'ಕಟ್ಟೆಪುರಾಣ' ನಾಟಕ ತೆಗೆದುಕೊಂಡು ಮೈಸೂರಿಗೆ ಹೋಗುತ್ತಿದ್ದೆವು. ಆಗ ಬೀರೂರ ಬಳಿ 'ಬಂ' ತಿಂಡಿ ತಿನ್ನುತ್ತ ಕಾರಿನಲ್ಲಿ ಕುಳಿತಿದ್ದರು. ನಾವು ನಾಟಕದವರೆಲ್ಲ ಹೋಗಿ ಪರಿಚಯಿಸಿಕೊಂಡೆವು. "ಏನು ನಿಮ್ಮ ನಾಟಕದ ಸಬ್ಜೆಕ್ಟು?" ಎಂದರು. "ರಾಜಕೀಯದ ವಿಡಂಬನೆ ನಾಟಕ ಸಾರ್" ಎಂದೆ. "ಓಹ್, ಹಿರಣ್ಣಯ್ಯನ ನಾಟಕದಂಗೆ ಅನ್ನಿ" ಎಂದರು. "ಇಲ್ಲ ಸಾರ್, ಅವುನು ಒಬ್ಬನೇ ನಿಂತಗೊಂಡು ಟೀಕೆ ಮಾಡ್ತನೆ. ನಮ್ಮ ನಾಟಕದಲ್ಲಿ ಎಲ್ಲಾ ಹಳ್ಳಿ ಪಾತ್ರಗಳು. ತಮ್ಮ ಲೆವೆಲ್ಲಿನ ಗ್ರಹಿಕೆ ಮಾತನಾಡ್ತವೆ ಸಾರ್" ಎಂದೆ. "ಹಾಗೊ, ಒಳ್ಳೇದು, ಹೋಗಿ ಬನ್ನಿ. ನಾಟಕ ಚೆನ್ನಾಗಿ ಮಾಡಿ" ಎಂದರು.

ನಾನು ಹಾಗೇ ಸೂಕ್ಷ್ಮವಾಗಿ ನೋಡಿದೆ. ಆ ವಯಸ್ಸಿನಲ್ಲೂ ತಲೆತುಂಬ ಕೂದಲಿದ್ದು, ಅದಕ್ಕೆ ಡೈಯಿಂಗ್ ಮಾಡಿಕೊಳ್ಳುವ ಕಾರಣವಾಗಿ ಮುಖ ಅಲ್ಲಲ್ಲಿ ಬ್ಲಾಕೌಟಾದಂತೆ ಕಾಣುತ್ತಿತ್ತು. ಅಂತೂ ಬಂಗಾರ ಕಾಗೆ ಬಂಗಾರವಾಗಿ ತನ್ನ ವರ್ಚಸ್ಸು ಕಳೆದುಕೊಂಡಿತ್ತು. ಒಮ್ಮೆ ಅವರು ಇನ್ನೊಬ್ಬರ ಸಹಾಯದಿಂದ ನಡೆಯುವುದನ್ನ ನೋಡಿದಾಗಂತೂ ಕಾಲ ಪುರುಷನ ಮೇಲೆ ಸಿಟ್ಟು ಬಂದಿತ್ತು.

• ಬಿ. ಚಂದ್ರೇಗೌಡ

ಭಗವದ್ಗೀತೆ ಬಿಸಿಯಲ್ಲಿ ಬೆಂದ ಇಸ್ಕಾನಿ ಬೇಳೆ


'ಇಸ್ಕಾನ್ ಹೆಸರಿನ ನಾಮದ ಟೀಮು ಮತ್ತೊಮ್ಮೆ ತಮ್ಮ ಸ್ವಾರ್ಥಕ್ಕಾಗಿ ಭಗವದ್ಗೀತೆಯನ್ನು ಹರಾಜಿಗಿಟ್ಟಿದೆ. ಆದರೆ ಈ ಬಾರಿ ಅಂತಾರಾಷ್ಟ್ರೀಯ ಮಟ್ಟದಲ್ಲೆಂಬುದೇ ದೊಡ್ಡ ದುರಂತ. ರಷ್ಯಾದ ಮೂಲೆಯಲ್ಲಿರುವ ಟಾಮ್ಸ್ಕ್ ಎಂಬ ಪುಟ್ಟ ನಗರದಲ್ಲಿ ತಮಗೆದುರಾಗಿದ್ದ ಪ್ರತಿರೋಧವನ್ನೇ ಇಸ್ಕಾನಿಗಳು ಭಾರತದ ಆತ್ಮಗೌರವದ, ಹಿಂದೂಗಳ ಧಾರ್ಮಿಕ ಪ್ರತಿಷ್ಠೆಯ ವಿಷಯವನ್ನಾಗಿ ಬಿಂಬಿಸಿ ತಮ್ಮ ಕಾರ್ಯದಲ್ಲಿ ಕುತಂತ್ರ ಜಯ ಸಾಧಿಸಿದ್ದಾರೆ.

ಟಾಮ್ಸ್ಕ್ ನಗರದ ಸಂಪ್ರದಾಯವಾದಿ ಚರ್ಚ್ ಒಂದು ಭಗವದ್ಗೀತೆಯನ್ನು 'ಉಗ್ರಗಾಮಿ' ಸಾಹಿತ್ಯವೆಂದು ಪರಿಗಣಿಸಿ ಅದನ್ನು ಬ್ಯಾನ್ ಮಾಡಬೇಕೆಂದು ಕೋರ್ಟ್ ಮೆಟ್ಟಿಲೇರಿತ್ತು ಎಂಬುದು ಇತ್ತೀಚೆಗೆ ಭಾರೀ ಸುದ್ದಿಯಾಗಿತ್ತು. ನಿಜವನ್ನು ಅರಿಯದ ಭಾರತದ ಎಂ.ಪಿ ಮಹಾಶಯರುಗಳು ಮಧ್ಯ ಪ್ರವೇಶಿಸುವಂತೆ, ರಷ್ಯಾದ ಅಧಿಕಾರಿಗಳೊಂದಿಗೆ ಸಮಾಲೋಚಿಸುವಂತೆ ಕೇಂದ್ರ ಸರ್ಕಾರದ ಮೇಲೆ ವಿಪರೀತ ಒತ್ತಡವೇರಿದ ಘಟನೆಯೂ ನಡೆದುಹೋಯ್ತು. ಇದನ್ನೇ ಬಂಡವಾಳ ಮಾಡಿಕೊಂಡ ಆರ್.ಎಸ್.ಎಸ್. ಮೂಲದ ವೆಬ್‌ಸೈಟ್ ಒಂದು ತನ್ನ ಮೈತುಂಬ ರಷ್ಯಾದ ಚರಿತ್ರೆಯನ್ನು ತಮಗನುಕೂಲವಾಗುವಂತೆ ಚಿತ್ರಿಸಿಕೊಂಡು ಭಾರತಕ್ಕೆ ಮತ್ತೊಂದು ಪಾಕಿಸ್ತಾನವನ್ನು ಸೃಷ್ಟಿಸುವ ಹುನ್ನಾರದಲ್ಲಿಯೂ ಇತ್ತು. ಸಭ್ಯ ರಾಜ್ಯದ ಅಸಭ್ಯ ಬಿಜೆಪಿಗಳೂ ಇದರಲ್ಲೇನು ಹಿಂದೆ ಬೀಳಲಿಲ್ಲ. ಈಶ್ವರಪ್ಪನ ನೇತೃತ್ವದಲ್ಲಿ ಪ್ರತಿಭಟನಾ ಸಭೆಯನ್ನು ನಡೆಸಿ ತಮ್ಮ ತಿಕ್ಕಲುತನವನ್ನು ಪ್ರದರ್ಶಿಸಿದ್ದರು. ಆದರೆ ವಿವಾದದ ಅಸಲಿಯತ್ತನ್ನು ತಿಳಿದದ್ದೇ ಆದಲ್ಲಿ ಭಾರತೀಯರು, ವಿರ್ದಿಷ್ಟವಾಗಿ ಹಿಂದೂಗಳು ತಲೆಕೆಡಿಸಿಕೊಳ್ಳುವಂತಹ ಸಂಗತಿಯೇ ಅದಾಗಿರಲಿಲ್ಲ.

ರಷ್ಯಾದ ಸಂಪ್ರದಾಯವಾದಿ ಚರ್ಚ್ ಕೋರ್ಟ್ ಮೆಟ್ಟಿಲೇರಿದ್ದೇನೋ ನಿಜ, ಆದರೆ ಬಿಂಬಿತವಾಗಿರುವಂತೆ ಹಿಂದೂಗಳ 'ಭಗವದ್ಗೀತೆ'ಯ ವಿರುದ್ಧವಲ್ಲ, ಬದಲಾಗಿ ಇಸ್ಕಾನ್ ಸಂಸ್ಥಾಪಕ ಸ್ವಾಮಿ ಪ್ರಭುಪಾದ ಬರೆದಿರುವ 'ಭಗವದ್ಗೀತೆ ಆಸ್ ಇಟ್ ಈಸ್' ಎಂಬ ಇಂಗ್ಲಿಷ್ ಅನುವಾದದ ಪುಸ್ತಕದ ಮೇಲೆ. ಅದನ್ನು ಈ ಇಸ್ಕಾನಿಗಳು ಭಾರತದ, ಹಿಂದೂಗಳ ತಲೆಗೆ ಕಟ್ಟಿ ಇಲ್ಲದ ವಿವಾದವನ್ನು ಹುಟ್ಟುಹಾಕಿದ್ದಾರೆ.

ಹಾಗೆ ನೋಡಲು ಹೋದರೆ 'ಭಗವದ್ಗೀತೆ ಆಸ್ ಇಟ್ ಈಸ್' ಎಂಬುದು ದೇವನಾಗರಿ ಲಿಪಿಯಲ್ಲಿರುವ ಮೂಲ ಭಗವದ್ಗೀತೆಯ ಇಂಗ್ಲಿಷ್ ಅನುವಾದ. ಇದನ್ನು ಬ್ಯಾನ್ ಮಾಡುವುದು ಮೂಲ ಭಗವದ್ಗೀತೆಯನ್ನು ಬ್ಯಾನ್ ಮಾಡುವುದು ಎರಡೂ ಒಂದೇ ಅಲ್ಲವೇ? ಎಂಬ ವಾದ ಮಾಡಬಹುದು. ಅದು ಭಗವದ್ಗೀತೆಯ ಯಥಾವತ್ ಅನುವಾದವಾಗಿದ್ದರೆ ಆ ವಾದಕ್ಕೆ ಕೊಂಚ ಬೆಲೆಯಿರುತ್ತಿತ್ತೇನೋ, ಆದರೆ ಪ್ರಭುಪಾದನು ಇಲ್ಲಿ ಪ್ರತಿ ಶ್ಲೋಕಕ್ಕೆ ತನ್ನದೇ **interpretation** ನೀಡಿರುವುದೇ ಇಷ್ಟೆಲ್ಲ ವಿವಾದಕ್ಕೆ ಕಾರಣವಾಗಿದೆ.

ಈತ ಇದನ್ನು **1968** ರಲ್ಲಿ ಅನುವಾದ ಮಾಡಿ ಅಚ್ಚಾಕಿಸಿದ್ದ. ಆದರೆ ಆ ಆವೃತ್ತಿಯಲ್ಲಿ ಕೇವಲ ಭಗವದ್ಗೀತೆಯ ಶ್ಲೋಕಗಳು, ಪದಗಳ ಅರ್ಥ ಮತ್ತು ಶ್ಲೋಕದ ಸಾಂದರ್ಭಿಕ ಭಾವಾರ್ಥ ವಿವರಣೆ ಮಾತ್ರ ಇತ್ತು. **1972** ರಲ್ಲಿ ಅದು ಮರು ಮುದ್ರಣಕ್ಕೆ ಹೋಗುವ ಹೊತ್ತಿಗೆ ಪ್ರತಿ ಶ್ಲೋಕದಲ್ಲೂ ಅಡಗಿರಬಹುದಾದ ತಾತ್ಪರ್ಯವನ್ನು ತನ್ನ ವಿವೇಚನಾ ಸಾಮರ್ಥ್ಯಕ್ಕೆ ತಕ್ಕಂತೆ, ಅದೇ ವಾಸ್ತವ ಎಂಬರ್ಥದಲ್ಲಿ ಬಿಂಬಿಸಿ **400** ಹೆಚ್ಚುವರಿ ಪುಟಗಳೊಂದಿಗೆ ಮ್ಯಾಕ್‌ಮಿಲನ್ ಎಂಬ ಪ್ರಕಾಶನ ಸಂಸ್ಥೆಗೆ ಮುದ್ರಿಸಲು ಕೊಟ್ಟಿದ್ದ.



ಇಲ್ಲಿ 'ತನ್ನ ವಿವೇಚನಾ ಸಾಮರ್ಥ್ಯಕ್ಕೆ ತಕ್ಕಂತೆ' ಎಂದು ಉಲ್ಲೇಖಿಸಿರುವುದರಲ್ಲೂ ಅರ್ಥವಿದೆ. ಭಗವದ್ಗೀತೆ ರಚನೆಯಾದ ನಂತರದಲ್ಲಿ ಸಾಕಷ್ಟು ಧಾರ್ಮಿಕ ಚಿಂತಕರು, ತಾತ್ವಿಕ ದಾರ್ಶನಿಕರು ಅದನ್ನು ವಿವರಿಸುವ ಪ್ರಯತ್ನಕ್ಕೆ ಮುಂದಾಗಿದ್ದರು ಎಂಬುದನ್ನು ವೇದವನ್ನು ಓದುವವರೇ ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲ, 'ಭಗವದ್ಗೀತೆಯ ತಾತ್ಪರ್ಯವನ್ನು ವಿವರಿಸಿದ ಭಕ್ತಿ ಪಂಥದ ಪ್ರಮುಖರು' ಎಂದು ಸ್ವತಃ ಪ್ರಭುಪಾದನು ತನ್ನ ಈ ವಿವಾದಿತ ಪುಸ್ತಕದ ಮುನ್ನುಡಿಯಲ್ಲಿ 32 ಹೆಸರುಗಳನ್ನು ನೀಡಿದ್ದಾನೆ. ಅದರಲ್ಲಿ 32ನೇ ಹೆಸರಾಗಿ ತನ್ನ ಹೆಸರನ್ನು ತಾನೇ ಬರೆದುಕೊಂಡಿದ್ದಾನೆ. ಅಲ್ಲಿಗೆ ಮೂಲ ಭಗವದ್ಗೀತೆ ಹಾಗೂ ಇಷ್ಟೂ ಜನರ ವಿವರಣಾರ್ಥ ಕೋಶಗಳು 'ಅಲಗ್' ಎಂದ ಆಗಾಯ್ತು.

ಈ ಇಸ್ಕಾನ್ ಮೇಧಾವಿಯ ಭಗವದ್ಗೀತಾ ವಿವರಣೆಯ ಕುರಿತು ಮತ್ತೊಬ್ಬ ಹವ್ಯಕನೇ ಆದ ಶ್ರೀಶ ರಾವ್ ಎಂಬಾತನು 'ಒಬ್ಬ ಕುರುಡ, ಕುರುಡರ ಸಮೂಹಕ್ಕೆ ದಾರಿ ತೋರಿಸುವ ಮುಂದಾಳತ್ವ ವಹಿಸಿದಂತೆ, ತನ್ನನ್ನು ತಾನು ಬುದ್ಧಿವಂತ ಎಂದು ನಂಬಿಕೊಂಡವ, ತನಗೆ ತಿಳಿಯದಿದ್ದನ್ನು ಜನರಿಗೆ ತಿಳಿಸುವ ಅವಿವೇಕಿ ಕೆಲಸದಂತಿದೆ ಪ್ರಭುಪಾದನ ಭಗವದ್ಗೀತೆಯ ವಿವರಣೆ' ಎಂದು ನೇರವಾಗಿಯೇ ಆರೋಪಿಸಿದ್ದ.

ಪ್ರಭುಪಾದನ ಮೇಲಿನ ವೈಷಮ್ಯಕ್ಕೋ, ಈರ್ಷ್ಯೆಗೋ ಹೇಳಿದ ಮಾತು ಅದಾಗಿರಲಿಲ್ಲ. ಪ್ರಭುಪಾದನ ಅವಿವೇಕದ ಹತ್ತಾರು ಸ್ಯಾಂಪಲ್‌ಗಳನ್ನು ಆತ ಎದುರಿಗಿಟ್ಟೇ ಈ ಪರಿ ಆಕ್ರಮಣಕ್ಕಿಳಿದಿದ್ದ. ಮೊದಲೇ ಹೇಳಿರುವಂತೆ ಈ ಪ್ರಭುಪಾದನು ತನ್ನ ಮುನ್ನುಡಿಯಲ್ಲಿ ತನ್ನ ಹೆಸರಿನ ಜೊತೆಗೆ 32 ಹೆಸರುಗಳನ್ನು ಪೋಣಿಸಿಕೊಂಡು, ಇವರ ಭಗವದ್ಗೀತಾ ವಿವರಣೆಯ ಮುಂದುವರಿದ ಭಾಗವೇ ತಾನು ಎಂದು ಹೇಳಿಕೊಂಡಿದ್ದಾನೆ. ಆ ನಿಟ್ಟಿನಲ್ಲಿ ಐದನೇ ಹೆಸರಾಗಿ ಮಧ್ವಾಚಾರ್ಯರ ಹೆಸರೂ ಇದೆ. ಅಂದರೆ ಅವರ ವಿವರಣೆಗೆ ಪೂರಕವಾಗಿಯೇ ಈತನ ಕಾವ್ಯಾರ್ಥ ವಿವರಣೆಯೂ ಇರಬೇಕು. ಆದರೆ ಮಧ್ವಾಚಾರ್ಯರ ಭಗವದ್ಗೀತಾ ಅರ್ಥವಿವರಣೆಗೂ, ಈತನ ವಿವರಣೆಗೂ ತದ್ವಿರುದ್ಧತೆಗಳಿರುವುದನ್ನು ಶ್ರೀಶ ರಾವ್ ಸಾಕ್ಷಿಸಮೇತ ಬಯಲಿಗೆಳೆದಿದ್ದರು. ಈ ಪರಿ ಎಡವಟ್ಟುಗಳಿರುವ, ಭಾರತದಲ್ಲೇ ವಿವಾದಗಳಿರುವ ಪ್ರಭುಪಾದನ 'ಆಸ್ ಇಟ್ ಈಸ್'ಗೆ ಪ್ರತಿರೋಧ ಉಂಟಾಗಿದ್ದೇನು ದೊಡ್ಡ ವಿಷಯವಲ್ಲ, ಅದರಲ್ಲೂ ಕೋಮುವಾದಿಗಳು ಬೊಬ್ಬಿಡುತ್ತಿರುವಂತೆ ಭಾರತದ ಮರ್ಯಾದೆ ಮಣ್ಣುಪಾಲಾಗುವಂತಹ ಸಂಗತಿಯೇ ಅಲ್ಲ.

ಇಸ್ಕಾನ್ ಪ್ರೇರಿತ ಭಗವದ್ಗೀತಾ ಅನುವಾದ ಮತ್ತು ತನ್ನದೇ **Interpretation** ಒಳಗೊಂಡ ಪುಸ್ತಕಕ್ಕೆ ಎದುರಾದ ಇಂತಿಷ್ಟು ವಿರೋಧವನ್ನು 'ಭಗವದ್ಗೀತೆಯ ಬ್ಯಾನ್' ಎಂದು ರೂಪಿಸಿದ ಹರೇ ರಾಮಗಳು ಎರಡು ದೇಶಗಳ ನಡುವೆಯೇ ತಂದಿಡುವ ಕೆಲಸಕ್ಕೆ ಮುಂದಾಗಿದ್ದರು. ಅಸಲಿಗೆ **1788** ರಲ್ಲೆ ಭಗವದ್ಗೀತೆಯ ರಷ್ಯನ್ ಅನುವಾದ ಅಲ್ಲಿ ಮುದ್ರಣಗೊಂಡಿತ್ತು. ರಷ್ಯನ್ನರು ಅದಕ್ಕೆ ಇದುವರೆವಿಗೂ ಯಾವ ಪ್ರತಿರೋಧವನ್ನು ಒಡ್ಡಿಲ್ಲ. ಒಂದು ವೇಳೆ ಭಗವದ್ಗೀತೆಯೇ ಅವರ ಗುರಿಯಾಗಿದ್ದರೆ ಇಷ್ಟು ದಿನ ಸುಮ್ಮನಿರಬೇಕಾಗಿದ್ದ ಯಾವ ಒತ್ತಡವೂ ಅವರ ಮೇಲಿರಲಿಲ್ಲ.


ಅದಿರಲಿ, ಇದ್ದಕ್ಕಿದ್ದಂತೆ ಈ ಪ್ರಭುಪಾದನ 'ಭಗವದ್ಗೀತೆ ಆಸ್ ಇಟ್ ಈಸ್' ಪುಸ್ತಕಕ್ಕೆ ಬ್ಯಾನ್‌ನ ಭೂತವಾದರೂ ಅದ್ಯಾಕೆ ಬಡಿಯಿತು ಎಂದು ಕೆದಕಲು ಹೋದರೆ ಇಸ್ಕಾನಿಗಳ ಭೂಹಗರಣ ಬಯಲಿಗೆ ಬೀಳುತ್ತೆ. ಜೂನ್ ತಿಂಗಳಿನಲ್ಲಿ ಟಾಮ್ಸ್ಕ್ ನಗರದ ಒಂದು ಜಾಗದಲ್ಲಿ ಈ ಇಸ್ಕಾನಿಗಳು ಒಂದಷ್ಟು ಮನೆ ಕಟ್ಟಿಕೊಂಡು ತಳ ಭದ್ರ ಮಾಡಿಕೊಳ್ಳಲು ಮುಂದಾಗಿದ್ದರು. ಅವರು ಗುದ್ದಲಿಪೂಜೆ ಮಾಡಿದ ಜಾಗ ರಕ್ಷಿತ ಪ್ರದೇಶವಾಗಿತ್ತಾದ್ದರಿಂದ ವಿಷಯ ಕೋರ್ಟ್ ಮೆಟ್ಟಿಲೇರಿತ್ತು. ಅಲ್ಲಿನ ಕೆಲವರು ಈ ಹರೇ ರಾಮಗಳು ಯಾರು, ಏನಿವರ ಮೂಲ, ಎಂಬಿತ್ಯಾದಿಯಾಗಿ ಅವರ ಮರ್ಮಾಂಗವೇ ಜಾಮ್ ಆಗುವಂತ ಪ್ರಶ್ನೆ ಕೇಳಿದ್ದರು. ತಮ್ಮದೆಂತ ಘನತೆವೆತ್ತ ಮೂಲ ಎಂಬುದನ್ನು ರಷ್ಯನ್ನರಿಗೆ ತೋರಿಸಲು ಈ ಇಸ್ಕಾನಿಗಳು ಕೆಲ ಮೇಧಾವಿಗಳ ಕೈಗೆ ಪ್ರಭುಪಾದನ 'ಭಗವದ್ಗೀತೆ ಆಸ್ ಇಟ್ ಈಸ್' ಎಂಬ ಪುಸ್ತಕ ನೀಡಿ ಓದಿಕೊಳ್ಳಿ ಎಂದಿದ್ದರು.

ಅವರಲ್ಲಿ ಇಬ್ಬರು ಪ್ರೊಫೆಸರ್‌ಗಳು ಪುಸ್ತಕವನ್ನು ಇಡಿಯಾಗಿ ಓದಿ ಪ್ರಭುಪಾದನ ಕೆಲ ವಿಶ್ಲೇಷಣೆಗಳು ಪ್ರತಿಗಾಮಿ ಆಲೋಚನೆಯಿಂದ ಕೂಡಿವೆ ಎಂದು ಕೋರ್ಟ್‌ಗೆ ತಿಳಿಸಿದ್ದರು. ತಾವು ಭಾರೀ ಸುಭದ್ರವೆಂದುಕೊಂಡಿದ್ದ ತಮ್ಮ ಮೂಲಕ್ಕೇ ಅದ್ಯಾವಾಗ ಬಿಸಿ ನೀರು ಬೀಳಲಾರಂಭಿಸಿತೋ ಆಗ ಎಚ್ಚೆತ್ತುಕೊಂಡವರಂತೆ ಭಗವದ್ಗೀತೆಯನ್ನು ಬೀದಿಗೆಳೆದು ರಂಪಾಟ ಎಬ್ಬಿಸಿದ್ದಾರೆ. ಅಷ್ಟಕ್ಕೂ ಅಂತಾರಾಷ್ಟ್ರಿಯ ಮಟ್ಟದಲ್ಲಿ ವಿವಾದ ಸೃಷ್ಟಿಯಾಗುತ್ತಿದ್ದಂತೆ ಆ ಇಬ್ಬರೂ ತಮ್ಮ ಹೇಳಿಕೆಗಳನ್ನು ವಾಪಸ್ಸು ಪಡೆದಿದ್ದರು. ಇಸ್ಕಾನಿಗಳಿಗೆ ಬೇಕಿದ್ದುದು ರಷ್ಯದಲ್ಲಿ ತಮ್ಮ ಭೂಕಬಳಿಕೆಗೆ ಧಾರ್ಮಿಕ ಪರವಾನಗಿಯೇ ಹೊರತು ಭಗವದ್ಗೀತೆಯ ಮೇಲಿನ ಗೌರವವಾಗಿರಲಿಲ್ಲವಾದ್ದರಿಂದ ಒಂದಕ್ಕೆ ಎರಡು ಸೇರಿಸಿ ಇಷ್ಟೆಲ್ಲಾ ಮಾಡಿಟ್ಟಿದ್ದಾರೆ.

ಕೃತಕ ಪ್ರಕ್ಷುಬ್ಧತೆಗೆ ಬೆದರಿದ ವಿದೇಶಾಂಗ ಸಚಿವ ಎಸ್.ಎಂ ಕೃಷ್ಣ ಕೂಡಾ ಯುದ್ಧವೇ ಮೈಮೇಲೆರಗಿದಂತಹ ದಿಗಿಲಿನಲ್ಲಿ ರಷ್ಯನ್ ರಾಯಭಾರಿ ಅಲೆಕ್ಸಾಂಡರ್ ಕಡಕಿನ್ ಜೊತೆ ಮಾತುಕತೆ ಶುರುವಿಟ್ಟುಕೊಂಡಿದ್ದರು. ಡಿಸೆಂಬರ್ 28 ರಂದು ತೀರ್ಪು ಪ್ರಕಟಿಸಿದ ಅಲ್ಲಿನ ಕೋರ್ಟ್ ಬ್ಯಾನ್ ಸಲಹೆಯನ್ನು ತಿರಸ್ಕರಿಸುವ ಮೂಲಕ ದೊಡ್ಡ ಮಟ್ಟದ ಕುತಂತ್ರವೊಂದನ್ನು ತಣ್ಣಗೆ ಬಗೆಹರಿಸಿದೆ. ಪ್ರಭುಪಾದನ ಟ್ರಾನ್ಸ್‌ಲೇಟೆಡ್ ವರ್ಷನ್‌ಗೆ ಭಗವದ್ಗೀತೆಯ ಕವರ್‌ಪೇಜ್ ಅಂಟಿಸಿಕೊಂಡು ಹತ್ತಿಸಿದ್ದ ಬೆಂಕಿಯಲ್ಲಿ ಇಸ್ಕಾನಿಗಳ ಬೇಳೆಯೇನೋ ಬೆಂದಿದೆ, ಜೊತೆಗೆ ಸತ್ಯವನ್ನು ಮರೆಮಾಚಿ ಕೋಮುವಾದವನ್ನು ಹುಟ್ಟುಹಾಕಲು ಮುಂದಾಗಿದ್ದ ಅವರ ನಿಜಬಣ್ಣವೂ ಮತ್ತೊಮ್ಮೆ ಬಯಲಾಗಿದೆ. ಇದು ಜನರಿಗೆ ಅರ್ಥವಾಗಬೇಕಷ್ಟೆ.


ಚಿಕ್ಕಮಗಳೂರು

...ದೀಮ ...ುಂಜಪ್ಪನಿಗೆ ...ಾಸಕ ...ಟಿ.ರವಿಯ ಶ್ರೀರಕ್ಷೆ!




ಕುಂಜಪ್ಪ

...ಕ್ಕಮಗಳೂರು ಉಪವಿಭಾಗಾಧಿಕಾರಿ ಕಚೇರಿಯ ... ಕುಂಜಪ್ಪ ನನ್ನ ಕ್ಷೇತ್ರದವರಾಗಿದ್ದು, ನನಗೆ ತುಂಬಾ ...ವರಾಗಿದ್ದಾರೆ. ಇವರು ಕಡೂರು ತಾಲ್ಲೂಕು ...ಲ್ಲಿ ಸೇವೆಯಲ್ಲಿದ್ದಾಗ ಅಲ್ಲಿನ ಪುರಸಭೆಯಲ್ಲಿ ಪ್ರಭಾರಿ ...ಕಾರಿಯಾಗಿ ಕೆಲವು ತಿಂಗಳುಗಳ ಕಾಲ ಕಾರ್ಯ...ದ್ದರು. ಈ ಅವಧಿಯಲ್ಲಿ ಖಾಸಗಿ ಬಡಾವಣೆ...ಗಳ ಖಾತೆಗಳಿಗೆ ಸಂಬಂಧಿಸಿದಂತೆ ಅಭಿವೃದ್ಧಿ ಶುಲ್ಕ ...ಡಿರಲಿಲ್ಲ ಎಂದು ಅವರ ಮೇಲೆ ಆರೋಪ ಮಾಡಿ, ... ಕೈಗೊಳ್ಳಲು ಬೆಂಗಳೂರು ನಗರಾಭಿವೃದ್ಧಿ ಇಲಾಖೆ ...ರು 2009 ಮಾರ್ಚ್ 18ರಂದು ಆದೇಶಿಸಿರುತ್ತಾರೆ. ... ಅಧಿಕಾರಿಯು ಅಭಿವೃದ್ಧಿ ಶುಲ್ಕ ಪಾವತಿಸದೇ ...ಡಲು ಸಾಧ್ಯವಿಲ್ಲವೆಂದು ಅರ್ಜಿದಾರರಿಗೆ ಹಿಂಬ...ದ್ದು, ಅದನ್ನು ಅರ್ಜಿದಾರರು ತಮ್ಮ ಕಚೇರಿಯಲ್ಲಿ ... ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಳ್ಳದೆ ಖಾತೆ ಮಾಡಲು ...19ರಂದು ನಿಮ್ಮ ಕಚೇರಿ ಪತ್ರದಲ್ಲಿ ತಿಳಿಸಿರುತ್ತೀರಿ. ...ಅವರು ಖಾತೆ ಮಾಡಿರುತ್ತಾರೆ. ನಿಮ್ಮ ಪತ್ರದಲ್ಲಾಗಲಿ, ...ಸುತ್ತೋಲೆ ಸಂಖ್ಯೆ ನಅಇ10/ಟಸಿಟಿ 2003 ...ದಲ್ಲಾಗಲಿ ಯಾವ ಜಮೀನನ್ನು ಅಭಿವೃದ್ಧಿ ಶುಲ್ಕ ...ಂದ ಹೊರತುಪಡಿಸಿದೆ ಎಂಬ ಬಗ್ಗೆ ವಿವರಣೆ ಇರುವುದಿಲ್ಲ, ಮೇಲಧಿಕಾರಿಗಳ ಕಚೇರಿಯಿಂದ ತಪ್ಪು ನಿರ್ದೇಶನ ಹೋಗಿದ್ದಲ್ಲಿ ಅದಕ್ಕೆ ನಿರ್ದೇಶನ ನೀಡಿದವರು ಹೊಣೆಯಾಗಿರುತ್ತಾರೆ. ಅಲ್ಲದೇ ಆಗಿರುವ ತಪ್ಪನ್ನು ಸರಿಪಡಿಸಬೇಕಾಗಿರುತ್ತದೆ. ಕಂದಾಯ ಇಲಾಖೆಗೆ ಸೇರಿದ ಸದರಿ ಅಧಿಕಾರಿಯು ಮೇಲಧಿಕಾರಿಗಳ ಸುತ್ತೋಲೆಯಂತೆ ಕಾರ್ಯನಿರ್ವಹಿಸಿದ್ದು, ಉದ್ದೇಶಪೂರ್ವಕವಾಗಿ ಕರ್ತವ್ಯ ಲೋಪ ಮಾಡಿರುವುದಿಲ್ಲ, ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಿದರೆ ಅವರಿಗೆ ಕೆಲಸ ಮಾಡಲು ಧೈರ್ಯಗುಂದಿಸಿದಂತಾಗುತ್ತದೆ. ಈ ಕುರಿತು ಪರಿಶೀಲಿಸಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕಾಗಿ ಕೋರುತ್ತೇನೆ..."



ಜಿಲ್ಲಾಧಿಕಾರಿಗೆ ಸಿ.ಟಿ.ರವಿ ಬರೆದ ಪತ್ರ



ಇಂತಹ ಒಂದು ಪತ್ರ ಅಂದಿನ ಜಿಲ್ಲಾಧಿಕಾರಿ ನಾರಾಯಣಸ್ವಾಮಿಗೆ ತಲುಪುತ್ತದೆ. ಅದನ್ನು ಬರೆದ ಘನಂದಾರಿ ಮನುಷ್ಯನ ಹೆಸರು ಸಿ.ಟಿ.ರವಿ.

ಈತ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಶಾಸಕ. ಸದ್ಯದ ಮಟ್ಟಿಗೆ ಭೂಕಬಳಿಕೆ ವಿಚಾರದಲ್ಲಿ ರವಿಯ ವಿರುದ್ಧವೇ ಲೋಕಾಯುಕ್ತ ಅಧಿಕಾರಿಗಳು ಸಿಆರ್‌ಪಿಸಿ 420 ಕಲಂನಡಿ ಪ್ರಕರಣ ದಾಖಲಿಸಿದ್ದಾರೆ. ಇಂತಹ ಪ್ರಕರಣಗಳಲ್ಲಿ ಹಸ್ತಕ್ಷೇಪ ನಡೆಸುತ್ತಿರುವ ರವಿಯನ್ನು 420 ಎಂದು ಸಂಬೋಧಿಸಿದರೆ ಅತಿಶಯೋಕ್ತಿಯಾಗಲಾರದು ಅಲ್ಲವೇ?

ಚಿಕ್ಕಮಗಳೂರು ಕ್ಷೇತ್ರದಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಸಿ.ಟಿ.ರವಿಯ ಶ್ರೀರಕ್ಷೆಯಿದೆ ಅನ್ನುವುದಕ್ಕೆ ಮೇಲೆ ಉಲ್ಲೇಖಿಸಿರುವ ಪತ್ರವೇ ಸಾಕ್ಷಿಯಾಗಿದೆ. ಸುಲಿಗೆಕೋರ ಅಧಿಕಾರಿಗಳನ್ನು ಅಪರಾತಪರಾ ರಕ್ಷಿಸುವ ಜಾಯಮಾನ ರವಿಗಿದೆ. ಕುಂಜಪ್ಪ ನಡೆಸಿದ ಭ್ರಷ್ಟಾಚಾರದಿಂದ ಆತನನ್ನು ಪಾರು ಮಾಡಲು ರವಿ ಹೆಣಗಾಡಿದ್ದಾನೆ: ಜಿಲ್ಲಾಧಿಕಾರಿ ನಾರಾಯಣಸ್ವಾಮಿಯ ಮೇಲೆ ಒತ್ತಡ ಹೇರಿ ಅವರನ್ನು ಕಂಗೆಡಿಸಿದ್ದಾನೆ. ಕುಂಜಪ್ಪ ಕಡೂರು ಪುರಸಭೆಯನ್ನು ವಂಚಿಸಲು ಜಿಲ್ಲಾಧಿಕಾರಿಯ ಸುತ್ತೋಲೆಯೇ ಕಾರಣ ಎಂದು ವಾದಿಸಿ ಜಿಲ್ಲಾಧಿಕಾರಿ ನಾರಾಯಣಸ್ವಾಮಿಯ ಬೆವರಿಳಿಸಿದ್ದಾನೆ. ನಿಜಹೇಳಬೇಕೆಂದರೆ, ಕಡೂರು ಪುರಸಭೆಯ ಅದ್ವಾನಗಳಿಗೆ ಜಿಲ್ಲಾಧಿಕಾರಿಯ ಕುಮ್ಮಕ್ಕಿತ್ತು. ಆದರೆ ಆ ಸಂಗತಿಯನ್ನೇ ಉಪಯೋಗಿಸಿಕೊಂಡು ರವಿ ಆತನ ಮೇಲೆ ಬ್ಲಾಕ್‌ಮೇಲ್ ತಂತ್ರ ಬಳಸಿ ಯಶಸ್ವಿಯಾಗಿದ್ದಾನೆ.

ಸಿ.ಟಿ.ರವಿಯ ಪರಮಾಪ್ತ ಕುಂಜಪ್ಪ ಸಾಮಾನ್ಯ ಆಸಾಮಿಯಲ್ಲ. ಈತ ಹಿಂದೊಮ್ಮೆ ಬೀರೂರು ಹೋಬಳಿಯ ರಾಜಸ್ವ ನಿರೀಕ್ಷಕನಾಗಿದ್ದ. ಆ ಸಮಯದಲ್ಲಿ ಕುಂಜಪ್ಪ ಜನರನ್ನು ಸುಲಿಯುತ್ತಿದ್ದ ಪರಿಯನ್ನು ಕಂಡು ದಂಗಾಗದವರಿಲ್ಲ. ತೀರ ಬೇಸತ್ತವರು ಕುಂಜಪ್ಪನನ್ನು ಮನೆಯತ್ತ ಕಳಿಸುವ ಯತ್ನ ಮಾಡಿದ್ದರು. ಒಮ್ಮೆ ಈತ ಜಮೀನು ಖಾತೆ ವಿಚಾರದಲ್ಲಿ ಕೃಷ್ಣೇಗೌಡ ಎಂಬವರನ್ನು ಲಂಚಕ್ಕಾಗಿ ಪೀಡಿಸಿದ್ದ. ಆಗ ಕೃಷ್ಣೇಗೌಡರು ಲೋಕಾಯುಕ್ತದ ಮೊರೆ ಹೋಗಿದ್ದರು. ಪರಿಣಾಮ ಕೃಷ್ಣೇಗೌಡರಿಂದ ಲಂಚ ಭಕ್ಷಣೆಗಿಳಿದ ಕುಂಜಪ್ಪ ಲೋಕಾಯುಕ್ತ ಬಲೆಗೆ ಬಿದ್ದು ಜೈಲು ಸೇರಿದ್ದ. ಅವತ್ತು ಕುಂಜಪ್ಪ ಮೊದಲ ಸಲ ಅಮಾನತ್ತು ಶಿಕ್ಷೆಗೊಳಗಾಗಿದ್ದ. ಈ ಕುಂಜಪ್ಪನ ಹಣದ ದಾಹ ಯಾವ ಪರಿಯದ್ದೆಂದರೆ ಈತ ಕಟ್ಟಿಕೊಂಡ ಸ್ವಂತ ಪತ್ನಿಯನ್ನೂ ಬಿಡದೇ ವರದಕ್ಷಿಣೆ ಹಣಕ್ಕಾಗಿ ಹಿಂಸಿಸಿದ್ದ. ಈ ಕಾರಣದಿಂದ ಆಕೆಯ ಸಹೋದರರು ಆತನನ್ನು ಅಟ್ಟಾಡಿಸಿ ಬಡಿದಿದ್ದರು.

2002-06ರಲ್ಲಿ ಕಡೂರು ಪುರಸಭೆಯಲ್ಲಿ ಭ್ರಷ್ಟಾಚಾರ ತಾರಕಕ್ಕೇರಿತ್ತು, ಅವತ್ತು ಸ್ಥಳೀಯ ಶಾಸಕರಾಗಿದ್ದ ಕೆ.ಎಂ. ಕೃಷ್ಣಮೂರ್ತಿ ದಿಟ್ಟ ಹೆಜ್ಜೆ ಇಟ್ಟಿದ್ದರೆ ಪರಿಸ್ಥಿತಿ ಈ ಮಟ್ಟಕ್ಕೆ ತಲುಪುತ್ತಿರಲಿಲ್ಲ. ಆದರೆ ಅವರಿಂದ ಅದು ಸಾಧ್ಯವಾಗದಿದ್ದರೆ ಸಹಜವಾಗಿಯೇ ಪುರಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪುರಸಭೆಯನ್ನು ಎಕ್ಕುಟ್ಟಿಸಿದ್ದರು. ಅವತ್ತು ಪುರಸಭೆಯೊಳಗೆ ದಿನಸಿ ಅಂಗಡಿ ತೆರೆದವನಂತೆ ಪ್ರಭಾರಿ ಹುದ್ದೆಯಲ್ಲಿ ಕುಳಿತವನು ಇದೇ ಕುಂಜಪ್ಪ, ಆಗ ಮುಖ್ಯಾಧಿಕಾರಿಯಾಗಿದ್ದ ಎನ್.ಎಲ್.ಕೆಂಚಪ್ಪ, ಪ್ರ.ದ.ಸಹಾಯಕ ಎಂ.ಟಿ.ಗಂಗಾಧರಪ್ಪ ಹಾಗೂ ದ್ವಿ.ದ.ಸಹಾಯಕ ಟಿ.ಆರ್.ರಂಗನಾಥ್ ಎಂಬವರ ಹಿಂಡು ಕುಂಜಪ್ಪನೊಂದಿಗೆ ಸೇರಿ ಪುರಸಭೆಯನ್ನು ಮಕಾಡೆಗೊಳಿಸಿತ್ತು. ಪಟ್ಟಣದ ಜನರು ಬಳಸುವ ಕುಡಿಯುವ ನೀರಿಗೆ ಹಾಕುವ ಬ್ಲೀಚಿಂಗ್ ಪೌಡರ್‌ನಿಂದ ಹಿಡಿದು ರಸ್ತೆ, ಚರಂಡಿ, ವಸತಿ, ಬೀದಿ ದೀಪ, ಎಲ್ಲದರಲ್ಲೂ ದೋಚಿದ್ದರು.

ಕಸಬಾ ಹೋಬಳಿ ಮಲ್ಲಪ್ಪನಹಳ್ಳಿ ಗ್ರಾಮದ ಸ.ನಂ.55/1ಪಿಯಲ್ಲಿ 1 ಎಕರೆ, 56/ಪ21 ಎಕರೆ ಜಮೀನನ್ನು ಸಹೋದರರಾದ ಕೆ.ಎಂ.ಶ್ರೀನಿವಾಸ್ ಮತ್ತು ಕೆ.ಎಂ.ಮೋಹನ್‌ಕುಮಾರ್ ಹೆಸರಿನಲ್ಲಿ ಅನ್ಯಕ್ರಾಂತಗೊಂಡಿತ್ತು. ಈ ಜಮೀನು ಷೆಡ್ಯೂಲ್‌ನ ಸಂಗತಿಯಲ್ಲಿ ಪುರಸಭೆಯ ಖಜಾನೆಗೆ ಅಭಿವೃದ್ಧಿ ಶುಲ್ಕ ಪಾವತಿಸಿಕೊಳ್ಳದೆ ತನ್ನ ಜೇಬನ್ನು ಭರ್ತಿಗೊಳಿಸಿಕೊಂಡು ಖಾತೆ ಮಾಡಿಕೊಟ್ಟವನು ಕುಂಜಪ್ಪ. ಕೆಲವು ವರ್ಷಗಳ ಹಿಂದೆ ನಗರ ಯೋಜನಾ ಇಲಾಖೆಯು ಇದೇ ಜಮೀನನ್ನು ಬಡಾವಣೆ ಎಂದು ಅನುಮೋದಿಸಿತು. ಕಚೇರಿ ಟಿಪ್ಪಣಿಯಲ್ಲಿ ಶುಲ್ಕ ಪಾವತಿಗೆ ಸೂಚಿಸಿತ್ತು, ಇದರಿಂದ ಪುರಸಭೆಗೆ ಕೋಟ್ಯಾಂತರ ರೂ.ಗಳು ಹರಿದು ಬರುವುದಿತ್ತು. ಅದಕ್ಕೆ ಉಂಡೆ ನಾಮ ಬಳಿದ ಕುಖ್ಯಾತಿ ಕುಂಜಪ್ಪ ಮತ್ತು ಆತನ ಚೇಲಾಗಳಿಗೆ ಸಲ್ಲುತ್ತದೆ.

ಸರಕಾರದ ಸುತ್ತೋಲೆ ಸಂಖ್ಯೆ ಎಚ್‌ಯುಡಿ 223/ಟಟಪಿ 89(11) 1990ರಂತೆ ಪುರಸಭಾ ಕಾಯ್ದೆ ಪ್ರಕಾರ ಪ್ರಕರಣ 160 ಮತ್ತು 170 ಕಲಂಗಳಡಿ ಸ್ಪಷ್ಟೀಕರಣ ಪಡೆದಿದೆ. ಆದರೆ ಸರಿಯಾದ ವಿವರಣೆ ಬಾರದ್ದರಿಂದ ಅಭಿವೃದ್ಧಿ ಶುಲ್ಕ ಪಾವತಿಸದಿರುವುದು ಸ್ಪಷ್ಟವಾಗಿತ್ತು. ಈ ಹೊತ್ತಿಗೆ ಅನಾಮತ್ತು 267 ಖಾತೆಗಳನ್ನು ನಿಯಮಬಾಹಿರವಾಗಿ ಶುಲ್ಕ ಕಟ್ಟಿಸಿಕೊಳ್ಳದೇ ಅನೇಕರ ಹೆಸರಿಗೆ ಬರೆದಿಟ್ಟಿದ್ದ ಕುಂಜಪ್ಪ ತಾನೇ ತೋಡಿಕೊಂಡಿದ್ದ ಗುಂಡಿಯೊಳಗೆ ಬಿದ್ದಿದ್ದ. ಈ ಸ್ಫೋಟಕ ಮಾಹಿತಿಯು ಚಿಕ್ಕಮಗಳೂರು ಜಿಲ್ಲಾಧಿಕಾರಿ ನಾರಾಯಣಸ್ವಾಮಿಯ ಗಮನಕ್ಕೆ ಬಂದಿತ್ತು. ಅವರು ಈ ಕುರಿತು ಪರಿಶೀಲನೆ ನಡೆಸಿ 267 ನಿಯಮಬಾಹಿರ ಖಾತೆಗಳನ್ನು ವಜಾಗೊಳಿಸಿದ್ದರು. ಜೊತೆಗೆ ಪ್ರಕರಣದ ಸೂತ್ರಧಾರಿ ಕುಂಜಪ್ಪ ಎನ್.ಎಲ್.ಕೆಂಚಪ್ಪ ಎಂ.ಟಿ.ಗಂಗಾಧರಪ್ಪ, ಟಿ.ಆರ್.ರಂಗನಾಥ್ ವಿರುದ್ಧ ಮೈಸೂರು ವಿಭಾಗದ ಪೌರಾಯುಕ್ತರಿಗೆ ಮತ್ತು ನಗರಾಭಿವೃದ್ಧಿ ಇಲಾಖೆ ನಿರ್ದೇಶಕರಿಗೆ ವರದಿ ಸಲ್ಲಿಸಿ ಎಲ್ಲರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿದ್ದರು.

ಹೀಗೆ ಸರಕಾರಿ ನೀತಿ, ನಿಯಮಗಳನ್ನು ಗಾಳಿಗೆ ತೂರಿದ ಕುಂಜಪ್ಪ ಸಹಿತ ನಾಲ್ವರ ವಿರುದ್ಧ ಶಿಸ್ತು ಕ್ರಮಕ್ಕೆ ಆದೇಶ ಹೊರಡಿಸಲಾಯಿತು. ಆಗ ಕಡೂರು ಪುರಸಭೆಯಲ್ಲಿ




ಕಡೂರು ಪುರಸಭೆ

ಉಳಿದುಕೊಂಡಿದ್ದ ಎಂ.ಟಿ.ಗಂಗಾಧರಪ್ಪ ಮತ್ತು ಟಿ.ಆರ್. ರಂಗನಾಥ್ ಸಹಿತ ಕೆಂಚಪ್ಪರನ್ನು ಅಮಾನತ್ತುಪಡಿಸಲಾಯಿತು. ಆದರೆ ಚಿಕ್ಕಮಗಳೂರಿನ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಠಿಕಾಣಿ ಹೂಡಿದ್ದ ಕುಂಜಪ್ಪನ ರಕ್ಷಣೆಗೆ ಸಿ.ಟಿ.ರವಿ ಮುಂದಾದ. ಜಿಲ್ಲಾಧಿಕಾರಿ ನಾರಾಯಣಸ್ವಾಮಿ ಮೇಲೆ ಒತ್ತಡ ಹೇರಿ ಕುಂಜಪ್ಪನನ್ನು ಉಳಿಸಿದ. ತಮ್ಮನ್ನೂ ಉಳಿಸಲು ಗಂಗಾಧರಪ್ಪ ಮತ್ತಿತರರು ಪರಿ-ಪರಿಯಾಗಿ ಬೇಡಿಕೊಂಡರೂ ಅವರ ವಿರುದ್ಧ ಕ್ರಮ ಜರುಗುವುದನ್ನು ತಡೆಗಟ್ಟಲು ರವಿಯಿಂದ ಸಾಧ್ಯವಾಗಲಿಲ್ಲ.

ಕೇರಳ ಮೂಲದ ಕುಂಜಪ್ಪ ಇವತ್ತು ಚಿಕ್ಕಮಗಳೂರು ಜಿಲ್ಲಾ ಕೇಂದ್ರದ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ವ್ಯವಸ್ಥಾಪಕನ ಹುದ್ದೆಯಲ್ಲಿದ್ದಾನೆ. ಇದು ಜಿಲ್ಲಾಧಿಕಾರಿ ಕಚೇರಿಯ ಕಟ್ಟಡದಲ್ಲಿದೆ. ಈ ಕಚೇರಿಗೆ ಬರುವ ಬಡಬಗ್ಗರನ್ನು ಕುಂಜಪ್ಪ ಎಂಬ ದಗಾಕೋರ ಗುಂಜಿ ಹೈರಾಣಾಗಿಸುವ ಪರಿಯನ್ನು ನೀವೊಮ್ಮೆ ಕಂಡರೆ ದಂಗಾಗುತ್ತೀರಿ. ಪ್ರತಿ ಕಡತಗಳ ಮೇಲೆ 'ವ್ಯಾಪಾರ' ಕುದುರದಿದ್ದರೆ ಈತನ ಟೇಬಲ್ ಮೇಲಿನಿಂದ ಕಡತ ಕದಲುವುದಿಲ್ಲ. ಕಚೇರಿಗೆ ಬರುವ ಹೊಸ ಅಧಿಕಾರಿಗಳನ್ನು ನಂಬಿಸಿ ವಂಚಿಸುವ ವಿದ್ಯೆಯಲ್ಲೂ ಕುಂಜಪ್ಪ ಕರಗತನಾಗಿದ್ದಾನೆ. ಬದ್ಮಾಶ್ ರವಿ ಮಾತ್ರ ಕುಂಜಪ್ಪನ ಬೆನ್ನ ಹಿಂದೆ ಗೂರ್ಖಾನಂತೆ ನಿಂತುಕೊಂಡಿದ್ದಾನೆ. ನಿಜಕ್ಕೂ ಸರಕಾರಿ ಕೆಲಸ ದೇವರ ಕೆಲಸವಾಗಿ ಉಳಿಯಬೇಕಾದರೆ ಕುಂಜಪ್ಪನನ್ನು ಒದ್ದೋಡಿಸುವುದು ಅನಿವಾರ್ಯವಾಗಿದೆ.

• ಅಜೀಜ್ ಕಿರುಗುಂದ



ಹಳ್ಳಿಗಾಡಿನ ಸಹಜ ಸಂವೇದಿಯಾಗಿದ್ದ ಆಲಂಗೂರು ಶ್ರೀನಿವಾಸ್

ಜನಸಾಮಾನ್ಯರ ಮಧ್ಯೆ ಗೆಲುವಾಗಿ ಓಡಾಡಿಕೊಂಡಿದ್ದ ಉತ್ಸಾಹಿ ರಾಜಕಾರಣಿ ಆಲಂಗೂರು ಶ್ರೀನಿವಾಸ್ ನಿಧನರಾಗಿದ್ದಾರೆ. ಯಾವುದೇ ಕಾಯಿಲೆ, ಕಸಾಲೆ, ದೈಹಿಕ ದೌರ್ಬಲ್ಯವಿಲ್ಲದಿದ್ದ ಅವರು ಇಷ್ಟು ಬೇಗ ಸಾವಿಗೆ ಶರಣಾಗಬಹುದೆಂದು ಯಾರೂ ಊಹಿಸಿರಲಿಲ್ಲ.

ರಾಜಕೀಯವಾಗಿ ಹೇಳುವುದಾದರೆ, ಯಾವುದೇ ಘನಂದಾರಿ ಷೋಗಳಾದ 'ಶೋಭಾಯಾತ್ರೆ', 'ಗ್ರಾಮ ವಾಸ್ತವ್ಯ', 'ರಥಯಾತ್ರೆ', 'ಪಾದಯಾತ್ರೆ'ಗಳ ಆಡಂಬರವಿಲ್ಲದೆ, ಹಳ್ಳಿಗಾಡಿನ ಪಂಚಾಯತಿಯ ಪಟೇಲನಂತೆ ಆಲಂಗೂರ್ ವರ್ತಿಸುತ್ತಿದ್ದರು. ಸುತ್ತಮುತ್ತ ಹತ್ತಾರು ಹಳ್ಳಿಗಳ ಚಾವಡಿ, ಅರಳೀಕಟ್ಟೆ, ಕಾಲು ಕದ್ದೀಕಂಗಾಣಗಳ ಮಧ್ಯೆ ಗ್ರಾಮಸ್ಥರೊಟ್ಟಿಗೆ ಬೇಟಿಯಾಗುತ್ತ ಮಳೆ ಬೆಳೆಗೆ ಸ್ಪಂದಿಸುತ್ತಿದ್ದವರು.

ತಮ್ಮ ಕ್ಷೇತ್ರದ. ರಾಮಲಿಂಗೇಶ್ವರ ದನಗಳ ಜಾತ್ರೆ, ಅಂಕಾಳಮ್ಮನ ಪರಿ, ಗಂಗಮ್ಮನ ಉತ್ಸವ, ಹಳ್ಳಿಹಳ್ಳಿಗಳ ಸುಗ್ಗಿ, ಸಂಕ್ರಾಂತಿ, ಕೋಲಾಟ, ಬಾಬಯ್ಯನ ಉರುಸು, ಹಲಗೆ ಹುಲಿವೇಷಗಳ ಜೊತೆಜೊತೆಗೆ ಹೆಜ್ಜೆ ಹಾಕುತ್ತಾ ಗ್ರಾಮೀಣ ಜನರ ಬದುಕು ಮತ್ತು ಬವಣೆಯೊಂದಿಗೆ ಬೆರೆತು ಬಾಳಿದವರು. ರಾಜಕೀಯ ಉದ್ದೇಶಗಳನ್ನು ಮೀರಿ ಮುಳಬಾಗಿಲು ತಾಲ್ಲೂಕಿನಂತಹ ಹಿಂದುಳಿದ ಪ್ರದೇಶದಲ್ಲಿ ಕುಡಿಯುವ ನೀರು, ಅಂತರ್ಜಲ, ಒಣಗುಕೆರೆಗಳ ಬಗ್ಗೆ ಚಿಂತಿಸುತ್ತಿದ್ದರು.

...ಮಕ್ಕೆ ಒಳಗಾಗುವ ಬರಡು ನೆಲದ ಬಗ್ಗೆ ರೈತಾಪಿ...ರೊಟ್ಟಿಗೆ ಸಮಾಲೋಚಿಸುತ್ತಿದ್ದರು. ಮುಳಬಾಗಿಲು ...ನ ಸಾಹಿತ್ಯ, ಸಂಸ್ಕೃತಿ, ಕಲೆ, ಸಾಂಸ್ಕೃತಿಕ ನೆಲೆ... ...ಯತೆ ಆಲಂಗೂರರ ವ್ಯಕ್ತಿತ್ವವಾಗಿತ್ತು.

ಆಲಂಗೂರು ಶ್ರೀನಿವಾಸರ ರಾಜಕೀಯ ಜೀವನದಲ್ಲಿ ಏರುಪೇರುಗಳಾಗಿ, ಸಫಲತೆ ಮತ್ತು ವಿಫಲತೆಗಳ ಎರಡರ ನಡುವೆಯೂ ಜನಪರವಾಗಿ ಹಲವು ರೀತಿಯ ಉತ್ತಮ ಕೆಲಸಗಳನ್ನು ಮಾಡಿದರು ಅವರು ಹಳ್ಳಿಗಾಡಿನ ಎಲ್ಲ ವರ್ಗದ ಗ್ರಾಮಸಂವೇದನೆಯ ಕನಸುಗಳಲ್ಲಿ ಒಂದಿಷ್ಟಾದರೂ ಫಲಕಾರಿಯಾಗಲು ಅವರು ಶ್ರಮಿಸುತ್ತಿದ್ದರು. ಅವರದು ಸಾಯುವ ವಯಸ್ಸಲ್ಲ, ಅವರು ಇನ್ನಷ್ಟು ವರ್ಷಗಳ ಕಾಲ ಬದುಕಿ ನಮ್ಮೊಂದಿಗೆ ಇರಬೇಕಿತ್ತು.

• ಉತ್ತನೂರು ರಾಜಮ್ಮ ವಿ. ಶೆಟ್ಟಿ

ಪುಸ್ತಕ ಪರಿಚಯ



ಚಂದ್ರಶೇಖರ್ ಐಜೂರ್

ವಿಮರ್ಶಾ ಹೆಜಮನಿಗಳೂ ಸಾಹಿತ್ಯ ವಿಮರ್ಶೆ ಎಂಬ ಶ್ರೇಣೀಕೃತ ವ್ಯವಸ್ಥೆಯೂ

ವಸಂತ ಬನ್ನಾಡಿಯವರ ಮಹತ್ವದ ಪುಸ್ತಕವೊಂದು ಹೊರಬಂದಿದೆ. ಅದು ಮಹತ್ವ ಅನ್ನಲಿಕ್ಕೆ ಎರಡು ಕಾರಣಗಳಿವೆ. ವೃತ್ತಿಯಿಂದ ಕಾಮರ್ಸ್ ಅಧ್ಯಾಪಕರಾಗಿರುವ ಬನ್ನಾಡಿ ಪ್ರವೃತ್ತಿಯಲ್ಲಿ ಮಾತ್ರ ಅಪ್ಪಟ ರಂಗಭೂಮಿಯ ಪರಿಚಾರಕ. ಅವರ ರಂಗಭೂಮಿಯೆಡೆಗಿನ ತುಡಿತ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಗಳತ್ತಲೂ ಗಂಭೀರವಾಗಿ ತೆತ್ತುಕೊಳ್ಳುವಂತೆ ಮಾಡಿವೆ. ಕಡಲ ಧ್ಯಾನ, ನೀಲಿ ಹೂ, ನಿಜದ ನೆಲೆ, ಮೀನಿನ ಹೊಳಪನ್ನು ನೀರಿಗೇ ಬಿಟ್ಟು ಕವನ ಸಂಕಲನಗಳ ನಂತರ ಅವರ 'ಇಗೋ ಅರಿವೆ' ಸಂಕಲನ ಪ್ರಕಟಗೊಂಡಿದೆ. ಕಡಲು ನೀನು ಕಣ್ಣಾಗುವೆ ಪ್ರತಿ ಗಳಿಗೆಗು, ಯಾವಾಗ ಹೊತ್ತಿತೋ ನೀನು ಹೊತ್ತಿಸಿದ ಕಿಡಿ, ಕಾಣಲಾರರು ಯಾರೂ ನಿನ್ನೊಳಗೊಂದು ಜ್ವಾಲಾಮುಖಿ ಅಡಗಿರುವುದನ್ನು, ನಿನ್ನ ದನಿ ಎಲ್ಲಿದ್ದರೂ ಕೇಳಿಸುವುದು ನನಗೆ, ಯಾವಾಗ ಬೇಕಾದರೂ ಕಳಚಬಹುದೇ ಕೊಂಡಿ? ಕಿಡುವುದಿಲ್ಲವೇ ನಮ್ಮ ರಕುತವೂ ಕೆಟ್ಟರೆ ನೆಲದ ಮಣ್ಣು... ಹೀಗೆ ಒಟ್ಟು ಆರು ಪದರಗಳಲ್ಲಿ ಹಬ್ಬಿಕೊಂಡಿರುವ ಇಲ್ಲಿನ ಪದ್ಯಗಳು ವಿಶಾಲ ಅರ್ಥ ಮತ್ತು ವ್ಯಾಪ್ತಿಯೊಂದಿಗೆ ಪ್ರೇಮದ ವಿರಹ ಮತ್ತು ಒಲವಿನೊಂದಿಗೆ ಅನುಸಂಧಾನಕ್ಕಿಳಿಯುತ್ತವೆ.

ಮುಖ್ಯವಾಗಿ ಬನ್ನಾಡಿಯವರ ಇಲ್ಲಿನ ಪದ್ಯಗಳನ್ನು ಮೀರಿ ಅವರ ಮುನ್ನುಡಿಯ ಮಾತುಗಳು ಕನ್ನಡ ಸಾಹಿತ್ಯ ಲೋಕದ 'ವಿಮರ್ಶಾ ಹೆಜಮನಿಗಳ' ಶ್ರೇಣೀಕೃತ ಯಾಜಮಾನ್ಯದ ನಿಜರೂಪವನ್ನು ತೋರಿಸಲು ಯತ್ನಿಸಿವೆ. ಬಹುಮುಖ್ಯ ಅನ್ನಿಸಬಲ್ಲ ನಿಷ್ಠುರ ಪ್ರಶ್ನೆಗಳನ್ನು, ತಕರಾರುಗಳನ್ನು ಬನ್ನಾಡಿಯವರು ತಮ್ಮ ಈ ಸುದೀರ್ಘ ಲೇಖನದಲ್ಲಿ ಎತ್ತಿದ್ದಾರೆ. ಇದಕ್ಕಾಗಿ ಅವರು ಮತ್ತೆ ಮತ್ತೆ ಲಂಕೇಶರ ನೆರವು ಪಡೆದರೂ ಅವರು ಎತ್ತುವ ಪ್ರಶ್ನೆಗಳು ಈಗಾಗಲೇ ಕನ್ನಡ ಸಾಹಿತ್ಯ ಲೋಕದ ಜಗಲಿ ಪಡಸಾಲೆಗಳಲ್ಲಿ ಸಾಹಿತ್ಯಿಕ ಸುಪ್ರೀಂಕೋರ್ಟ್ ಮತ್ತು ಹೈಕಮಾಂಡ್‌ಗಳನ್ನು ಸೃಷ್ಟಿಸಿಕೊಂಡು ಬೆಚ್ಚಗಿರುವ ಅನಂತಮೂರ್ತಿ ಪ್ರಣೀತ ವಿಮರ್ಶಾ ಸೋಗಿನ ಶುದ್ಧ ಸಾಹಿತ್ಯ ವಲಯದ ವಿದ್ವಾಂಸರ ಚರ್ಮಗಳಿಗೆ ಹೇಗೆ ತಾಗುವುದೋ ಗೊತ್ತಿಲ್ಲ. ವಿಮರ್ಶೆ ಹೆಸರಿನಲ್ಲಿ ಪರಸ್ಪರ ಬೆನ್ನು ಕೆರೆಯುವ ಹೊಸ ಪಂಥವನ್ನೇ ಹುಟ್ಟುಹಾಕಿದ ಖ್ಯಾತಿ-ಕುಖ್ಯಾತಿಗಳೆರಡು ಸದ್ಯಕ್ಕೆ ಕನ್ನಡದ ವೈದಿಕ ಲೇಖಕರ ಹೆಸರಿನಲ್ಲಿವೆ.


ಅನಂತಮೂರ್ತಿ ಪ್ರಣೀತ ವಿಮರ್ಶೆ ಹೆಸರಿನ ಶ್ರೇಣೀಕೃತ ವ್ಯವಸ್ಥೆಯನ್ನು ಬನ್ನಾಡಿಯವರು ಒಳಗಣ್ಣುಗ್ರಹಿಸಿರುವುದು ಹೀಗೆ: 'ಸಾಹಿತ್ಯ ವಿಮರ್ಶಕರೆನಿಸಿಕೊಂಡ ಇವರು ಒಂದು ಕೃತಿಯ ಬಗ್ಗೆ ಮಾತನಾಡಿದ್ದರೆ ಸಮಸ್ಯೆಯಿರುತ್ತಿರಲಿಲ್ಲ, ಒಂದು ಕೃತಿಗಿಂತ ಇನ್ನೊಂದು ಕೃತಿ ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಎಂದು ಹೇಳಿದ್ದರೂ ಸಮಸ್ಯೆಯಿರುತ್ತಿರಲಿಲ್ಲ, ಆದರೆ ಈ ಕೆಲವರು ಸಾಹಿತ್ಯ ಕೃತಿಗಳ ಬಗ್ಗೆ ಮಾತನಾಡುತ್ತಲೇ ಇಡೀ ಸಂಸ್ಕೃತಿಯ ಬಗ್ಗೆ ಮಾತನಾಡುವ ಧಾರ್ಷ್ಟ್ಯ ತೋರುತ್ತಲೇ ಬಂದಿದ್ದಾರಲ್ಲ; ಮತ್ತು ಈ ಅಸ್ತ್ರವನ್ನು ತಮಗೆ ಬೇಕೆಂದಾಗ, ಬೇಕಾದಂತೆ ಬಳಸಿ ಲೇಖಕರ ಶ್ರೇಣಿಯನ್ನೂ ಕೃತಿಗಳ ಶ್ರೇಣಿಯನ್ನೂ ಕಟ್ಟುತ್ತಲೇ ಬಂದಿದ್ದಾರಲ್ಲ; ಇದು ಸಮಸ್ಯಾತ್ಮಕವಾದುದು. ಇದೆಲ್ಲ ಬಹಳ ಸಹಜ ಎಂಬಂತೆಯೂ ಇವರು ಮತ್ತು ಇವರ ಪರಿವಾರದವರು ಬಿಂಬಿಸಿಕೊಂಡು ಬಂದಿದ್ದಾರೆ. ಪ್ರಾಯಶಃ ಅನಂತಮೂರ್ತಿಯವರು ಈ ಬಗೆಯ ಪಾಂಡಿತ್ಯದ ಮುಸುಕಿನ ಸಾಹಿತ್ಯ ವಿಮರ್ಶಾ ಪರಂಪರೆಯ ಕೊನೆಯ ಕೊಂಡಿ ಇರಬಹುದು.'

ಬನ್ನಾಡಿಯವರು ತಮ್ಮ ಮುನ್ನುಡಿಯ ಮಾತುಗಳನ್ನಷ್ಟೆ ಪ್ರತ್ಯೇಕವಾಗಿ ಸಂಗ್ರಹಿಸಿ ಕಿರುಪುಸ್ತಕದ ರೂಪದಲ್ಲಿಯೂ ಪ್ರಕಟಿಸಿದ್ದಾರೆ. ಹೊಸತೊಂದು ಚರ್ಚೆಗೆ ಕಾರಣವಾಗಬಲ್ಲ ಬನ್ನಾಡಿಯವರ ಈ ಲೇಖನ ವಿಮರ್ಶೆಯನ್ನು ಗಂಭೀರವಾಗಿ ಅಧ್ಯಯನ ಮಾಡುತ್ತಿರುವ ಸಾಹಿತ್ಯ ವಿದ್ಯಾರ್ಥಿಗಳು, ಈವರೆಗಿನ ಸಾಹಿತ್ಯ ವಿಮರ್ಶಾ ರಾಜಕೀಯದ ಒಳಸುಳಿಗಳನ್ನು ಬಲ್ಲವರು, ದೂರನಿಂತು ಬರೀ ಚಪ್ಪಾಳೆ ಸದ್ದಿನಲ್ಲಿಯೇ ಕರಗಿಹೋದವರು ಒಮ್ಮೆ ಈ ಕೃತಿಗಳನ್ನು ಓದಬೇಕು.



ಇಗೋ ಅರಿವೆ (ಕವನ ಸಂಕಲನ)
ಪುಟಗಳು: 156, ಬೆಲೆ: 100, ಪ್ರಕಟಣೆ: 2011
ನೆರೂಡ ಮತ್ತು ಬ್ರೆಕ್ಟ್ ಎಂಬ 'ಕೇತುಗ್ರಸ್ತ'ರೂ
ಅನಂತಮೂರ್ತಿ ಪ್ರಣೀತ 'ಕಲಬೆರಕೆ ಸಾಹಿತ್ಯ
ವಿಮರ್ಶೆ' ಎಂಬ ಶ್ರೇಣೀಕೃತ ವ್ಯವಸ್ಥೆಯೂ
ಪುಟಗಳು: 24, ಬೆಲೆ: 10, ಪ್ರಕಟಣೆ: 2011
ಈ ಎರಡು ಕೃತಿಗಳ ಲೇಖಕರು: ವಸಂತ ಬನ್ನಾಡಿ
ಪ್ರಕಾಶಕರು: ತಿಂಗಳ ಬೆಳಕು ಪ್ರಕಾಶನ,
ವಡೇರಹೋಬಳಿ, ವಿಠಲವಾಡಿ,
ಕುಂದಾಪುರ-576201

ಅಣುಸ್ಥಾವರ ವಿರೋಧಿಸಿದರೆ ಜೋಕೆ!



ತಮಿಳು ನಾಡಿನಲ್ಲಿ ಕೂಡನ್ಕುಲಂ ಅಣುಸ್ಥಾವರದ ವಿರುದ್ಧ ನೂರಾರು ಜನ ಗ್ರಾಮಸ್ಥರು ಕಳೆದ ಸೆಪ್ಟೆಂಬರ್ ತಿಂಗಳಿನಿಂದ ಸರಣಿ ಉಪವಾಸ ಕೂತಿರುವ ಬಗ್ಗೆ ಈ ಪತ್ರಿಕೆಯಲ್ಲಿ ಬರೆದಿದ್ದೆವು. ಕೇಂದ್ರ ಸರ್ಕಾರದ ಕುತಂತ್ರಕ್ಕೆ ಮಣಿಯದ ಆ ಜನರ ವಿರುದ್ಧ ಮಾತ್ರವಲ್ಲ ಅವರಿಗೆ ಬೆಂಬಲ ನೀಡಲು ಬಂದಿದ್ದ ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್ ವಿರುದ್ಧವೂ ತಮಿಳುನಾಡಿನ ಪೊಲೀಸರು ಕೇಸುಗಳನ್ನು ದಾಖಲಿಸಿಕೊಳ್ಳುವ ಮೂಲಕ ಆ ಪ್ರತಿಭಟನೆಯನ್ನು ದಮನ ಮಾಡಲು ಯತ್ನಿಸಿದ್ದರು. ಈಗ ಪೊಲೀಸರ ಕೆಂಗಣ್ಣಿಗೆ ಬಿದ್ದಿರುವವರು ವಿ.ಪುಗಳೇಂದಿ ಎಂಬ ಜನಪರ ವೈದ್ಯರು.

ಮಧುರೈ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮಾಡಿದ ಪುಗಳೇಂದಿ ಕಾಲೇಜಿನಲ್ಲೇ ಗೋಲ್ಡ್ ಮೆಡಲ್ ಪಡೆದಿದ್ದರು. ಆ ನಂತರ ಅವರು ಯಾವುದೇ ಹೈಟೆಕ್ ಆಸ್ಪತ್ರೆಯಲ್ಲಿ ಕೆಲಸ ಪಡೆಯಬಹುದಿತ್ತು, ಆದರೆ ಮೊದಲಿನಿಂದಲೂ ಬಡವರ ಬಗ್ಗೆ ಕಾಳಜಿ ಹೊಂದಿದ್ದ ಪುಗಳೇಂದಿ 1990ರಲ್ಲಿ ಕಲ್ಪಾಕಂ ಅಣುಸ್ಥಾವರದ ಹತ್ತಿರವಿರುವ ಸದ್ರಸ್ ಎಂಬ ಹಳ್ಳಿಗೆ ಬಂದು ಅಲ್ಲಿನ ಸುತ್ತಮುತ್ತಲಿನ ಹಳ್ಳಿಗಳ ಜನರಿಗೆ ಕಡಿಮೆ ದರದಲ್ಲಿ ವೈದ್ಯಕೀಯ ಸೇವೆ ಸಲ್ಲಿಸಲಾರಂಭಿಸಿದರು. ಸಹಜವಾಗಿಯೇ ಅವರು ಬಹಳ ಜನಪ್ರಿಯ ವ್ಯಕ್ತಿಯಾಗಿ 'ಒಂದು ರೂಪಾಯಿ ಡಾಕ್ಟರ್' ಎಂದು ಹೆಸರು ಪಡೆದರು.

ಒಮ್ಮೆ ಪುಗಳೇಂದಿ ಅವರಿದ್ದ ಪ್ರದೇಶದಲ್ಲಿ ಪೊಲಿಡಾಕ್ಟಿಲ್ (ಐದಕ್ಕಿಂತ ಹೆಚ್ಚು ಕೈ/ಕಾಲುಬೆರಳು ಇರುವಿಕೆ) ವಿಕಲಾಂಗತೆ ಹೆಚ್ಚು ಪ್ರಮಾಣದಲ್ಲಿ ಇರುವುದನ್ನು ಅವರು ಗಮನಿಸಿದರು. ಅದೇ ಹೊತ್ತಿಗೆ (2001ರಲ್ಲಿ) ಔಟ್‌ಲುಕ್ ಪತ್ರಿಕೆ ಕೂಡ ಇದನ್ನು ಕುರಿತು ಒಂದು ಸಮೀಕ್ಷೆ ಮಾಡಿತು.

ಪೊಲಿಡಾಕ್ಟಿಲ್ ವಿಕಲಾಂಗತೆ ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ಇರುವುದನ್ನು ಕಂಡು ಪುಗಳೇಂದಿ ಅವರು ಅಣುಸ್ಥಾವರಕ್ಕೂ, ಈ ವಿಕಲಾಂಗತೆಗೂ ಇರುವ ಸಂಬಂಧವನ್ನು ಅಧ್ಯಯನ ಮಾಡಲು ಪ್ರಾರಂಭಿಸಿದರು. ಅವರ ಅಧ್ಯಯನದಿಂದ ಪೊಲಿಡಾಕ್ಟಿಲ್‌ಗೂ ಅಣುವಿಕಿರಣಕ್ಕೂ ಸಂಬಂಧ ಇರುವುದು ಪತ್ತೆಯಾಯಿತು. ಅಷ್ಟೇ ಅಲ್ಲ ಅದನ್ನು ಕುರಿತು ಅಣುಸ್ಥಾವರದ ಅಧಿಕಾರಿ ವೃಂದಕ್ಕೆ ತಿಳಿಸಿದರು. ಜನರನ್ನು ಅಣುವಿಕಿರಣದಿಂದ ರಕ್ಷಿಸಲು ಅಣುಸ್ಥಾವರಗಳಲ್ಲಿ ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದ ಸುರಕ್ಷತಾ ಕ್ರಮಗಳನ್ನು ಅಳವಡಿಸುವಂತೆ ಒತ್ತಾಯಿಸುತ್ತಾ ಬಂದರು.

ಪುಗಳೇಂದಿ ಅವರ ಸಂಶೋಧನೆಯನ್ನು ಮೆಚ್ಚಿ ಸ್ಥಳೀಯ ನಾಗರಿಕರ 'ಅಣು ವಿಕಿರಣ ವಿರೋಧಿ ಜನತಾ ಚಳವಳಿ'ಯ ಮುಖ್ಯಸ್ಥರು ಅವರನ್ನು ತಾಂತ್ರಿಕ ಮತ್ತು ವೈದ್ಯಕೀಯ ಸಲಹೆಗಾರನಾಗುವಂತೆ ಕೇಳಿಕೊಂಡರು. ಅದಕ್ಕೆ ಪುಗಳೇಂದಿ ಅವರು ಒಪ್ಪಿ ಅಣುವಿಕಿರಣದ ಅಪಾಯದ ಬಗ್ಗೆ ಜನರಿಗೆ ವಿವರಿಸಲಾರಂಭಿಸಿದರು. ಆದರೆ ಅವರು ಜನರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದ್ದಕ್ಕೆ ಈಗ ಅವರ ವಿರುದ್ಧ ಪೊಲೀಸರು ಖೊಟ್ಟಿ ಕೇಸುಗಳನ್ನು ದಾಖಲಿಸಿಕೊಂಡು ಬೆದರಿಸುತ್ತಿದ್ದಾರೆ.

ಕಳೆದ ಡಿಸೆಂಬರ್ 1ರಂದು ಪುದುಪಟ್ಟಣಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಿವಕುಮಾರ್ ಎಂಬಾತ ಡಾ. ಪುಗಳೇಂದಿ ಅವರಿಗೆ ಫೋನ್ ಮಾಡಿ ಠಾಣೆಗೆ ಬರುವಂತೆ ಹೇಳಿದ. ಪುಗಳೇಂದಿ ಅಲ್ಲಿಗೆ ಹೋದಾಗ "ಪುದುಪಟ್ಟಣಂನ ಪಂಚಾಯತಿ ಮುಖ್ಯಸ್ಥರು ತಮ್ಮ ವಿರುದ್ಧ ದೂರೊಂದನ್ನು ದಾಖಲಿಸಿದ್ದಾರೆ" ಎಂದರು ಪೊಲೀಸರು. ಅದು ಎಂತಹ ದೂರೆಂದರೆ ಅಣುವಿರೋಧಿ ಹೋರಾಟಕ್ಕೆ ಪುದುಪಟ್ಟಣಂನ ಪಂಚಾಯತಿ ಮುಖ್ಯಸ್ಥ ಕಲಿಯಾ ಪೆರುಮಾಳ್ ಎಂಬುವವರು ಸಹಕರಿಸಲಿಲ್ಲವಾದ್ದರಿಂದ ಪುಗಳೇಂದಿ ಅವರು ನೆಹರೂ ಎಂಬುವವರ ಮೂಲಕ ಅನಾಮಧೇಯ ಬೆದರಿಕೆ ಪತ್ರವನ್ನು, ಫೋನ್ ಕರೆಗಳನ್ನು ಮತ್ತು ಎಸ್‌ಎಂಎಸ್‌ಗಳನ್ನು ಕಳುಹಿಸಿದ್ದರು ಎಂಬುದಾಗಿತ್ತು.

ಅದನ್ನು ಕೇಳಿ ಪುಗಳೇಂದಿ ಅವರು ಸಹಜವಾಗಿಯೇ ತಬ್ಬಿಬ್ಬಾದರು. ಆಗ ಪುಗಳೇಂದಿ ಅವರು "ಕಲ್ಪಾಕಂ ನ್ಯೂಕ್ಲಿಯರ್ ಘಟಕದ ವಿಕಿರಣ ಹಾಗೂ ಆರೋಗ್ಯ ಸಂಬಂಧೀ ಅಧ್ಯಯನಗಳಲ್ಲಿ ಕಳೆದೆರಡು ದಶಕಗಳಿಂದ ತೊಡಗಿಸಿಕೊಂಡಿರುವ ನಾನು ಕಂಡುಕೊಂಡ, ಸಂಗ್ರಹಿಸಿದ ಅಂಶಗಳನ್ನು ವೃತ್ತಿಪರ ಸೇವೆಯ ಭಾಗವಾಗಿಯೇ ಜನರಿಗೆ ತಿಳಿಸುತ್ತಿದ್ದೇನೆ. ನಾನು ನ್ಯೂಕ್ಲಿಯರ್ ವಿರೋಧಿ ಚಳವಳಿಯ ಸಂಘಟಕನಲ್ಲ, ಆದರೆ ಅಂತಹ ಚಳವಳಿಗಳ ತಾಂತ್ರಿಕ-ವೈದ್ಯಕೀಯ ಸಲಹೆಗಾರನಾಗಿದ್ದೇನೆ. ಇತ್ತೀಚೆಗೆ ಕುಡಂಕುಳಂನಲ್ಲಿ ನಡೆದ ಅಣುಶಕ್ತಿ ವಿರೋಧಿ ಜನತಾ ಚಳವಳಿಯ ಪ್ರತಿಭಟನೆಯಲ್ಲಿ ಸಮಿತಿಯ ಸದಸ್ಯರಲ್ಲೊಬ್ಬನಾಗಿ ನನ್ನ ಅನುಭವಗಳನ್ನು ಹಂಚಿಕೊಂಡಿದ್ದೇನೆ.

ನಾನು ಪಂಚಾಯತಿ ಮುಖ್ಯಸ್ಥ ಕಾಲಿ ಪೆರುಮಾಳ್‌ರನ್ನು ಹಲವು ಸಾರಿ ಭೇಟಿಯಾಗಿದ್ದೇನೆ. ಅವರು ಸ್ಥಳೀಯ ಚುನಾವಣೆಯಲ್ಲಿ ಗೆಲುವನ್ನು ಸಾಧಿಸಿದಾಗ ನಾನು ಅವರನ್ನು ಅಭಿನಂದಿಸಿದ್ದೇನೆ ಕೂಡ. ಅವರೊಂದಿಗೆ ಯಾವಾಗಲೂ ಸೌಹಾರ್ದಯುತವಾಗಿಯೇ ಮಾತನಾಡಿದ್ದೇನೆ. ನನ್ನನ್ನು ಭೇಟಿ ಮಾಡಿದ ಪ್ರತಿಯೊಬ್ಬರಿಗೂ ಹೇಳುವಂತೆ ಸುತ್ತಲಿನ ಅಣು ವಿಕಿರಣದ ಪರಿಣಾಮಗಳ ಬಗ್ಗೆ ಅವರಿಗೂ ಹೇಳಿದ್ದೇನೆ. ನಾನು ವೃತ್ತಿಪರ ವೈದ್ಯನಾಗಿ ಕೆಲಸ ಮಾಡುತ್ತಿದ್ದೇನೆಯೇ ಹೊರತು ರಾಜಕೀಯ ಸಂಘಟಕನಾಗಿ ಅಲ್ಲ, ಹಾಗಿರುವಾಗ ಅಣು ಸ್ಥಾವರ ವಿರೋಧಿಸುವಂತೆ ಕಾಲಿ ಪೆರುಮಾಳ್‌ರನ್ನು ಬೆದರಿಸುವ ಪ್ರಶ್ನೆ ಎಲ್ಲಿಂದ ಬರುತ್ತದೆ?

"ನಾನು ಎಂದೂ ಕಾಲಿ ಪೆರುಮಾಳ್ ಅವರನ್ನು ಅಣುಸ್ಥಾವರ ವಿರೋಧಿ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಬೆದರಿಕೆ ಹಾಕಿಲ್ಲ, ಕಾಲಿ ಪೆರುಮಾಳ್‌ಗೆ ಬಂದಿರುವ ಅನಾಮಧೇಯ ಬೆದರಿಕೆಗಳಿಗೂ ನನಗೂ ಸಂಬಂಧವಿಲ್ಲ" ಎಂದು ವಿವರಿಸಿದ್ದಾರೆ.

ಆದರೆ ಪೊಲೀಸರು ಸುಮ್ಮನಿರಬೇಕಲ್ಲ, ಇನ್ಸ್‌ಪೆಕ್ಟರ್ ಶಿವಕುಮಾರ್ "ಡಾಕ್ಟರ್! ನೀನು ಮಾಡುತ್ತಿರುವ ಕೆಲಸಗಳನ್ನೇ ನೆಪವಾಗಿಟ್ಟುಕೊಂಡು ನಿನ್ನ ಮೇಲೆ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಕೇಸು ದಾಖಲಿಸಬಹುದು ಗೊತ್ತಾ? ನೀನು ಪೊಲೀಸ್ ಎನ್‌ಕೌಂಟರ್‌ಗಳ ಬಗ್ಗೆ ಕೇಳಿದ್ದೀಯಾ? ಹುಷಾರಾಗಿರು" ಎಂದು ಬೆದರಿಸಿದ್ದಾನೆ.

ಇದೆಲ್ಲದಕ್ಕೆ ಕಾರಣವೇನು? ಪುಗಳೇಂದಿ ಅವರು ಹೇಳುವ ಪ್ರಕಾರ "ಇದರ ಹಿಂದೆ ಕಲ್ಪಾಕಂ ನ್ಯೂಕ್ಲಿಯರ್ ಸ್ಥಾವರ ಘಟಕದ ಅಧಿಕಾರಸ್ಥರ ಕೈವಾಡವಿದೆ. ಅವರು ತೆಗೆದುಕೊಳ್ಳದಿರುವ ಸುರಕ್ಷತಾ ಕ್ರಮಗಳನ್ನು ಕುರಿತ ಸತ್ಯಾಂಶಗಳನ್ನು ಇತ್ತೀಚೆಗೆ ನಾನು ಪ್ರಕಟಿಸಿದ್ದರಿಂದ ಅವರು ಕಂಗಾಲಾಗಿದ್ದಾರೆ. ನಾನು ಅಣುಸ್ಥಾವರದ ಸುರಕ್ಷತೆಗೆ ಸಂಬಂಧಿಸಿದ ಹಲವು ಪ್ರಶ್ನೆಗಳನ್ನು ಪುಸ್ತಕ ರೂಪದಲ್ಲಿ ಹೊರತರಲಿದ್ದೇನೆಂಬ ಸುದ್ದಿಯಿಂದ ಅವರು ಡಿಸ್ಟರ್ಬ್ ಆಗಿದ್ದಾರೆ."


ಅಣುಸ್ಥಾವರದ ಅಧಿಕಾರಿವರ್ಗದೊಂದಿಗೆ ಸಂವಾದ ನಡೆಸಲು ಪುಗಳೇಂದಿ ಈಗಲೂ ಸಿದ್ಧರಾಗಿದ್ದಾರೆ. ಈ ನಿಟ್ಟಿನಲ್ಲಿ ಅವರು ಈ ಹಿಂದೆ ಹಲವು ಬಾರಿ ಅಧಿಕಾರಿಗಳನ್ನು ಭೇಟಿಯಾಗಿದ್ದಾರಲ್ಲದೆ ತಮ್ಮ ಬಳಿ ಇರುವ ಮಾಹಿತಿಗಳನ್ನು ಅವರೊಂದಿಗೆ ಹಂಚಿಕೊಂಡಿದ್ದಾರೆ. ಆದರೆ ಪುಗಳೇಂದಿ ಅವರು ಹೇಳುವಂತೆ "ಕಳೆದ ಹತ್ತು ವರ್ಷಗಳಲ್ಲಿ ನಾನು ಎತ್ತಿದ ಯಾವ ಪ್ರಶ್ನೆಗಳಿಗೂ ಅಣುಸ್ಥಾವರದ ಅಧಿಕಾರಿಗಳು ಸಮರ್ಪಕ ಉತ್ತರ ಕೊಟ್ಟಿಲ್ಲ." ಅಷ್ಟೇ ಅಲ್ಲ, ಈಗ ಸ್ಪಷ್ಟವಾಗಿರುವಂತೆ ಪುಗಳೇಂದಿ ಅವರ ವಿರುದ್ಧ ಸುಳ್ಳು ಕೇಸುಗಳನ್ನು ದಾಖಲಿಸುವ ಮೂಲಕ ಅವರ ಬಾಯಿ ಮುಚ್ಚಿಸುವ ಪ್ರಯತ್ನ ನಡೆದಿದೆ.

ಹೀಗೆ ಮಾಡುವ ಮೂಲಕ ಅಣುಸ್ಥಾವರ ವಿರೋಧಿಗಳಿಗೆ ಪೊಲೀಸರು "ಜೋಕೆ. ನಿಮಗೂ ಇದೇ ಕಾದಿದೆ" ಎಂಬ ಎಚ್ಚರಿಕೆಯನ್ನು ರವಾನಿಸಿದ್ದಾರೆ...

ಮಹಾತ್ಮ ಗಾಂಧಿ, ಮಾನವಂತರು ಮತ್ತು ಇವರು

[illegible]
ಬಿಚ್ಚಿ ತೊಟ್ಟುಕೊಂಡು ಬಿಚ್ಚುತ್ತವೆ.
ಬೆಂಗಳೂರಿನ ಬೀದಿಗಳಲಿ
[illegible]
ಗಾಂಧಿ ಮಾರ್ಗವಲಿಂತು
ತುಂಬು ಮೈ ಮುಚ್ಚಿಕೊಂಡವರು ಸಿಕ್ಕರೆ
ಅದೊಂದು ಪವಾಡ.
ಈ ದೇಶದ ಎಲ್ಲರು ಮಾನ ಮುಚ್ಚುವಷ್ಟು
ಬಟ್ಟೆ ತೊಡುವ ತನಕ
'ನಾನು ತೊಡಬಾರ' ಎಂದವನು
ಬಟ್ಟೆಯ ಜೊತೆಗ,
ಜೀವನವಿಲ್ಲವನು ಕಳೆದ
ಫಕೀರನ ಹಾಗೆ.
ಅವನ ಮಾರ್ಗದಲಿ ನಿತ್ಯವೂ ಅನುಸರಿಸುತ್ತಾರೆ
ಅವನಾದರ್ಶವ
ತಪ್ಪದೇ ಅನುಯಾಯಿಗಳು
ಕರವಸ್ತ್ರಗಳತೆಯ ಬಟ್ಟೆ ತೊಟ್ಟು
ಚಿತ್ತದ ಎತ್ತರದಲಿ ಲೀನವಾದ ಭಿಕ್ಷುಕರು.
ಕೈಮುಗಿದು, ಕರಗೂಡಿ, ಎಂಟಾಣೆ ಬೇಡಿದರೂ ನೀಡಲಿಕ್ಕೆ ವ್ಯವಧಾನವಿದೆ, ಮನಸ್ಸೂ ಇದೆ.
ಬೇಡಿದ ಎಂಟಾಣೆ ಮಾತ್ರ
ಅಕೌಂಟಿನಲಿ ಭದ್ರವಾಗಿಯೇ ಇದೆ.
ಇವರ ಪಾಲಿಗ
ಜೇಬಿನಲ್ಲಿರುವ ಉಜ್ವಲ ಕಾರ್ಡು
ನೀರು ತುಂಬಿದ ಬಕೇಟಿನಲ್ಲಿರುವ ಬುರುಡೆ ಚಂದ್ರನಿಗೆ
ಸಮಾನ.
ಹರಕು ಚಿಂದಿಗೆ ತೇಪೆ ಹಾಕುವ
ಗೋಜಿಗೆ ಹೋಗದೆ
ಬೀದಿಬದಿಯ ಅನಾಥ ಅವಳ ಬೂಟುಗಳ ಸಿಕ್ಕಿಸಿ
ಯಾರದೋ ಕೋಟು ಬೇರೆ.
ತಂಬಿಗೆ, ಹಾಟು
ಮೇಲೊಂದು ಕರುಳುಬಳ್ಳಿಯ ಕಥೆ ಹೇಳುವ
[illegible]
ಬೆಡಗೆ ಬಂದ ದನದ ಹಾಗೆ
ಎಲ್ಲೆಂದರಲ್ಲಿ ತೂರುವ
ಟ್ರಾಫಿಕಿನಿಂದ
ತಪ್ಪಿಸಿಕೊಳ್ಳುವುದೊಂದು ಹರಸಾಹಸ.
ರಾತ್ರಿ ಬರೆದ ಕಪ್ಪು ಕಾವ್ಯವನೊಮ್ಮೆ
ಕಣ್ಣಾಡಿಸುತ್ತ, ಫುಟ್‌ಪಾತ್ ಮೇಲೆ ನಿಂತ
ಅನಾಮಿಕ ಒಡೆಯನ ಒತ್ತು ಬಂದಿ
ಕಾಯುವ ಕಾಯಕ ಮಾಡುವ
ಇವರು–
ಕಳೆದುಕೊಂಡ ಬದುಕನು
ಹುಡುಕಲು ನಗರಕ್ಕೆ ಬಂದವರು
[illegible]
ಸ್ವತಃ ತಾವೇ ಕಳೆದುಹೋದವರು.
ಮತ್ತೆ
ಮಳೆಗಾಳಿ ಬಿಸಿಲುಗಳಿಗೆ ಮೈಯೊಡ್ಡಿದರೂ
ದಣಿಯದ ಈ ಗುಬ್ಬಿ [illegible]
ಜೀವನಪೂರ್ತಿ ತಮ್ಮ [illegible]
ಹುಡುಕುತ್ತಿರುವವರು
ಹಿಮಾಲಯದ
ಅಧ್ಯಾತ್ಮ ದತ್ತರದ, ಸಾತ್ವಿಕ ಸಂತನಂತೆ.

• ಜಿ.ವಿ. ಶಿವಕುಮಾರ ಅಮ್ಮಾಪುರ




ಂಗಳೂರಿನ ಪ್ರವೀಣ್ ಎಸ್. ಶೆಟ್ಟಿಯವರು ಕುರಿತಂತೆ ದೇವರು, ಧರ್ಮ, ಶಾಸ್ತ್ರ ಇತ್ಯಾದಿಗಳ ದಿರುವ 'ಒಂದು ವೈಚಾರಿಕ ಪತ್ರ' (ಜನವರಿ ವನ್ನು ಓದಿದೆ. ನನಗೆ ನೆನಪಾದ ಇನ್ನೂ ಕೆಲವು ನ್ನಲ್ಲಿ ದಾಖಲಿಸ ಬಯಸುತ್ತೇನೆ. ದೇವರು ನ್ನು ಸೃಷ್ಟಿ ಮಾಡಿದ್ದು ನಿಜವೋ ಸುಳ್ಳೋ ಆ ಆದರೆ ದೇವರನ್ನು ಸೃಷ್ಟಿ ಮಾಡಿದವನು, ಮಾಡು ಂ ಮಾತ್ರ ಮನುಷ್ಯ ಎಂಬುದು ಸೂರ್ಯ ಸತ್ಯ. ಸೂರ್ಯ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ತ್ತಾನೆ ಎಂಬುದು ಎಷ್ಟು ಸುಳ್ಳೋ ಹಾಗೆ ದೇವರು ನ್ನು (ಜಗತ್ತನ್ನು) ಸೃಷ್ಟಿ ಮಾಡಿದ ಎಂಬುದೂ ಸಹ.

ಮನುಷ್ಯ ಈ ದೇವರನ್ನು ಯಾಕಾಗಿ ಸೃಷ್ಟಿ ಆದಿಮಾನವ ಪ್ರಾಕೃತಿಕ ವಿಕೋಪಗಳಿಗೆ ಹೆದರಿ ಸತ್ತು ಈ ವಿಕೋಪಗಳು ಯಾವುದೋ ನಿಗೂಢ ವ ಜರುಗುತ್ತದೆ ಎಂದು ಭಾವಿಸಿ ಅದಕ್ಕೆ ಯಿಂದ ನಡೆದುಕೊಳ್ಳಲು ಆರಂಭಿಸಿದ. ಮತ್ತು ಮು ಆಕಾರ ಕೊಟ್ಟು ಆರಾಧನೆಗೆ ತೊಡಗಿದ. ದೆವ್ವ ಹುಟ್ಟಿಕೊಂಡದ್ದು ಹೀಗೆ-ಮನುಷ್ಯ ದ.

ದೇವರು-ದೆವ್ವಗಳನ್ನು ಆರಾಧಿಸುವ ಪೂಜಾರಿ ಟ್ಟಿಕೊಂಡರು. ಕಾಲಕ್ರಮೇಣ ನಮ್ಮ ಕಷ್ಟಗಳನ್ನು ಲು ದೇವರು ಅವತರಿಸುತ್ತಾನೆಂದು ಪುರಾಣದ ಕತೆ ಯಕ ಜನರನ್ನು ನಂಬಿಸಿ ತಮ್ಮ ಉಪಜೀವನಕ್ಕೆ ಮಾಡಿಕೊಂಡರು. ಎಲ್ಲಾ ಜಾತಿ-ಜನಾಂಗ-ಧರ್ಮ ದೇ ಪ್ರಕ್ರಿಯೆ ಜರುಗಿ ಬಂತು. ಕಾಲಕ್ರಮೇಣ ತಮ್ಮ ಧರ್ಮ, ತಮ್ಮ ದೇವರೇ ಶ್ರೇಷ್ಠ ಉಳಿದದ್ದೆಲ್ಲಾ ಕನಿಷ್ಠ ಎಂಬ ಮೇಲರಿಮೆ ಬೆಳೆಯಿತು. ಇದು ಕಾರಣವಾಗಿ ಧಾರ್ಮಿಕ ಯುದ್ಧಗಳು ನಡೆದು ರಕ್ತದ ಕಾಲುವೆ ಹರಿದವು. ಧರ್ಮದ ಅಫೀಮು ನೆತ್ತಿಗೇರಿದ ಜನ ಇಲ್ಲಿರುವುದೆಲ್ಲಾ ನಶ್ವರ, ಅಲ್ಲಿರುವುದು ಶಾಶ್ವತ ಎಂದು ಕತ್ತಿ ಹಿರಿದು ಹೋರಾಡಿದರು. ಅದು ಇಂದಿಗೂ ನಿಂತಿಲ್ಲ, ಕೆಲವು ಧಾರ್ಮಿಕ ಪಂಥದವರು ಪರಲೋಕದಲ್ಲಿರುವ ತಂದೆಯನ್ನು ಮೆಚ್ಚಿಸಲು, ಅವನ ರಾಜ್ಯಕ್ಕೆ ಆದಷ್ಟು ಬೇಗ ತಲುಪಲು ಅನ್ಯಧರ್ಮೀಯರನ್ನು ಕೊಚ್ಚಿ ಹಾಕಿ, ಬಾಂಬ್ ಹಾಕಿ ದಾರಿ ಮಾಡಿಕೊಂಡು ಹೋಗುತ್ತಿದ್ದಾರೆ. ಅವರಿಗೆ ಪ್ರೇರಣೆ ನೀಡುವಲ್ಲಿ ಮಂದಿರ, ಮಸೀದಿ, ಚರ್ಚುಗಳು ಮುಂತಾದವುಗಳ ಕೆಲಸ ಮಾಡುತ್ತವೆ. ಸ್ವರ್ಗ, ಮರ್ತ್ಯ ಪಾತಳದ ಕಲ್ಪನೆಗಳು ಹುಟ್ಟಿಕೊಳ್ಳುತ್ತವೆ. ಒಟ್ಟಾರೆ ದೇವರು, ಧರ್ಮ, ಶಾಸ್ತ್ರಾದಿಗಳನ್ನು ಇಲ್ಲಿಂದ ಮೈನಸ್ ಮಾಡಿದರೆ ಇಲ್ಲಿ ಶೇ. ಹತ್ತರಷ್ಟು ಮಂದಿಗೆ ಜೀವನೋಪಾಯವೇ ಇಲ್ಲ, ಈ ಪರಾವಲಂಬಿಗಳಿಗೆ ದೇವರೇ ಬಂಡವಾಳ. ಅದಕ್ಕಾಗಿ ಮತ-ಮೌಢ್ಯ-ಸಂಪ್ರದಾಯಗಳನ್ನು ಹುಟ್ಟುಹಾಕಿ ಅಮಾಯಕರನ್ನು ತಮ್ಮ ಬಲೆಗೆ ಬೀಳಿಸಿಕೊಂಡು ಹೊಟ್ಟೆ ಹೊರೆಯುತ್ತಾರೆ. ಹಾದಿ-ಬೀದಿಯ ಮಾರಿ ಮಸಣಿ ಪೂಜಾರಿಯಿಂದ ಹಿಡಿದು ತಿರುಪತಿ, ಕಾಶಿ, ರೋಮ್ ಮುಂತಾದ ಕ್ಷೇತ್ರ ಪೂಜಾರಿಗಳು ಮಾಡುವ ನಿತ್ಯ ದಂಧೆ ಇದು.

ಪ್ರಸ್ತುತ ಕುಕ್ಕೆ ಸುಬ್ರಹ್ಮಣ್ಯದ ಮಡೆಸ್ನಾನಕ್ಕೆ ಬಂದರೆ, ಉಂಡೆಲೆ ಮೇಲೆ ಉರುಳಾಡುವ ಈ ಸಂಪ್ರದಾಯ ಅತ್ಯಂತ ಕ್ರೂರ, ಅವಮಾನಕರ, ನಾಗರಿಕ ಜಗತ್ತಿನ ಎದುರು ನಾವು ತಲೆತಗ್ಗಿಸಬೇಕಾದ ಸಂಗತಿ. ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಇಂಥ ಮೌಢ್ಯ ಸಂಪ್ರದಾಯಗಳು ಅತಿಯಾಗುತ್ತಿರುವುದು ಎಲ್ಲರೂ ಬಲ್ಲ ವಿಚಾರವೇ. ಉದಾ: ಮಡೆಸ್ನಾನ ಕುರಿತ ಚರ್ಚೆಯಲ್ಲಿ ಡಾ. ವಿ.ಎಸ್. ಆಚಾರ್ಯರು ಅಪ್ಪಣೆ ಕೊಡಿಸಿರುವಂತೆ, ಪಾದಿ ರಾಜರ ಸ್ಕಂದ ಪುರಾಣದಲ್ಲಿ ಉಲ್ಲೇಖವಿದ್ದು, ಅದಕ್ಕೆ

ಶಾಂತಿಯ ತೋಟದಲ್ಲಿ ಯಾಕೆ ಮೌಢ್ಯ?



ಗುಪ್ತ ಕಾಯಿಲೆಗಳನ್ನು ಗುಣಪಡಿಸುವ ಶಕ್ತಿ ಇತ್ತೆಂಬುದನ್ನು ಪ್ರಸ್ತಾಪಿಸಿ, ತಮ್ಮ ವಿರೋಧಿಗಳ ಬಾಯಿ ಮುಚ್ಚಿಸುತ್ತಾರೆ (ಪ್ರಜಾವಾಣಿ 13.12.2011). ಆದರೆ ಕುವೆಂಪು ಹೇಳುವ ಹಾಗೆ;

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?

ಎಂದು ಕೇಳುವ ಧಾತು-ಧಾಷ್ಟ್ಯ ಯಾವ ಶಾಸಕರಿಗೂ ಸಾಧ್ಯವಾಗಲಿಲ್ಲ, ಬೆರಳೆಣಿಸುವಷ್ಟು ಬೇಲ್ಯಾಕಿ ಶಾಸಕರು ಹೋಗಲಿ, ಉಳಿದ ಬಹುಸಂಖ್ಯಾತ ಹಿಂದುಳಿದ, ಅಲ್ಪಸಂಖ್ಯಾತ, ದಲಿತ ಪ್ರತಿನಿಧಿಗಳೇಕೆ ಬಾಯಿ ಹೊಲಿದುಕೊಂಡು ಕುಳಿತಿದ್ದರು? ನಿಜ ಹೇಳಬೇಕೆಂದರೆ ಇವರೆಲ್ಲ ಒಕ್ಕೊರಲಿನಿಂದ 'ಮಡೆಸ್ನಾನ' ನಿಷೇಧವಾಗಲಿ, ಎಂದು ಹಟ್ಟುಹಿಡಿದಿದ್ದರೆ ಮುಜರಾಯಿ ಮಂತ್ರಿ ಬಾಯಿ ಮುಚ್ಚಿಕೊಳ್ಳಬೇಕಾಗುತ್ತಿತ್ತು, ಆದರೆ ಬ್ರೈನ್‌ವಾಶ್ ಆಗಿರುವ ಈ ಶೂದ್ರ ಶಾಸಕರಿಗೆ ಅಂಥ ವೈಚಾರಿಕ ಮೇಲ್ಮೆಬೇಕಲ್ಲ? ಸಹಗಮನ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿಗಳನ್ನು ನಿಷೇಧಿಸಿದಂತೆ 'ಮಡೆಸ್ನಾನ' ಕೂಡ ನಿಷೇಧಾರ್ಹ. ಆದರೆ ಇದಕ್ಕೆ ನಾನಾ ಕಾರಣಗಳನ್ನು ನೀಡಿ ಮುಂದುವರಿಸುತ್ತಿರುವುದು ಪಾಪಕೃತ್ಯ. ಹಾಗೆಯೇ ದೇಹವೇ ದೇಗುಲ ಎಂದ ಬಸವಣ್ಣನ ಈ ನಾಡಿನಲ್ಲಿ ದೇವಾಲಯಗಳಿಗೆ ಹೋಗಿ ಮಂಡೆ ಬೋಳಿಸಿಕೊಳ್ಳುವುದು ಯಾವ ಪುರುಷಾರ್ಥಕ್ಕೆ? ದೇವಾಲಯವನ್ನೇ ವಿರೂಪಗೊಳಿಸಿದಂತೆ ಈ ಮೂಢನಂಬಿಕೆ. ಹಾಗೇ ಮೊಹರಂನಲ್ಲಿ ಮುಸಲ್ಮಾನ ಯುವಕರು 'ದೇಹದಂಡನೆ' ಮಾಡಿಕೊಂಡು ಮೈರಕ್ತ ಹರಿಸಿಕೊಳ್ಳುವ ಆಚರಣೆ ಕೂಡ. ಇವೆಲ್ಲಾ ನಿಷೇಧಕ್ಕೆ ಒಳಗಾಗಬೇಕು. ಸರ್ವಜನಾಂಗದ ಶಾಂತಿಯ ತೋಟದಲ್ಲಿ ಇಂಥ ಮತ-ಮೌಢ್ಯ ಮೂಢನಂಬಿಕೆಗಳಿಗೆ ಅವಕಾಶ ಕೂಡದು.


• ಪ್ರೊ.ಶಿವರಾಮಯ್ಯ, ಬೆಂಗಳೂರು

ಂದಷ್ಟು ಆಚರಣೆಗಳ ಪೋಸ್ಟ್ ಮಾರ್ಟಮ್!

ಟರೊಬ್ಬರ ಮದುವೆಯಲ್ಲಿ ಊಟಕ್ಕೆ ಕುಳಿತಿದ್ದಾಗ ಲೆ ಬಡಿಸುತ್ತಿದ್ದವನಿಗೆ ನನ್ನ ಪಕ್ಕ ಕುಳಿತಿದ್ದ ಚಿಕ್ಕಪ್ಪ ಂ ತುದಿ ಎಡಕ್ಕೆ ಬರುವಂತೆ ಹಾಕಪ್ಪ" ಎಂದು ದರು. ಅವನು ಅದನ್ನೇ ಪಾಲಿಸಿದ. "ಯಾಕೆ?" ಸೆದು ಚಿಕ್ಕಪ್ಪನೆಡೆಗೆ ನೋಡಿದೆ. "ಎಲ್ಲಾದಕ್ಕೂ ಯಾಕೆ ಕೇಳ್ತಾರಾ? ನಡೆದುಕೊಂಡು ಬಂದಿದೆ. ಸಂಪ್ರ..." ಅವರ ಉತ್ತರ ಸಿದ್ಧವಾಗಿತ್ತು. ಉಪ್ಪು, ಬರಿ, ಬೀನ್ಸ್ ಪಲ್ಯ ಮೊಸರು ಬಜ್ಜಿ ಎಲ್ಲ ಬಡಿಸಿ ಲೆ ನೋಡಿದೆ. ಸಂಪ್ರದಾಯವೂ ಅಲ್ಲ, ಮಣ್ಣೂ ದು ಎಲೆ ನೋಡುತ್ತಿದ್ದಂತೆ ತಿಳಿಯಿತು! ಹೆಚ್ಚಾಗಿ ಬಲಗೈ ಉಪಯೋಗಿಸುವವರು. ಎಲೆಯ ಗ ತುದಿಯ ಭಾಗಕ್ಕಿಂತ ಅಗಲವಾಗಿರುತ್ತೆ ತಿನ್ನಲು ಲವಾಗಲಿಕ್ಕಾಗಿ ತುದಿ ಎಡಭಾಗಕ್ಕಿರಬೇಕು ಮು ಸರಿಯಾದ ವಿವರಣೆ, ಮತ್ತೇನಿಲ್ಲ.

ಹಳಷ್ಟು ಆಚರಣೆಗಳ ಹಿಂದೆ ವೈಚಾರಿಕ ಕಾರಣ ವೆಯಾದರೂ ಆ ಆಚರಣೆಗಳು ಇವತ್ತಿನ ಮಟ್ಟಿಗೆ ಪ್ರಸ್ತುತ ಎಂಬುದರ ಬಗ್ಗೆ ನಾವು ಸ್ವಲ್ಪ ಯೋಚಿಸ.

ಹಳಷ್ಟು ಮದುವೆಗಳಲ್ಲಿ ಗಂಡನ್ನು ದೇವಸ್ಥಾನದ ಯ್ಯಾರು ಮಾಡಿ ಮುಹೂರ್ತದ ಸಮಯಕ್ಕೆ



ಕರೆದುಕೊಂಡು ಬರುತ್ತಾರೆ. ಹಿಂದಿನ ಕಾಲದಲ್ಲಿ ಮದುವೆಗಳು ನಡೆಯುತ್ತಿದ್ದುದೇ ಹಳ್ಳಿಗಳಲ್ಲಿ, ಆಗೇನು ವರ ಉಳಿದುಕೊಳ್ಳುವುದಕ್ಕೆ ಲಾಡ್ಜು ಮತ್ತೊಂದು ಇರಲಿಲ್ಲ, ಗೊತ್ತಿರದ ಅಪರಿಚಿತರ ಮನೆಯಲ್ಲಿ ಉಳಿಯುವ ಕಷ್ಟ ಗಂಡಿಗೆ ಬೇಡ ಎಂದು ಎಲ್ಲರೂ ಬಹುತೇಕ ನಂಬುವ ದೇವಸ್ಥಾನಕ್ಕೆ ಮೊದಲು ಬಂದು ತಯಾರು ಮಾಡಿಸಿ ಮಂಟಪಕ್ಕೆ ಕರೆದೊಯ್ಯುತ್ತಿದ್ದರು. ದೇವಸ್ಥಾನ ಊರಿನ ಹೊರಗಿರುವ ಸಾಧ್ಯತೆಗಳೇ ಹೆಚ್ಚಿರುವುದರಿಂದ ಗಂಡಿನ ತಲೆ ಮೇಲೊಂದು ಕೊಡೆ ಹಿಡಿಯುತ್ತಿದ್ದರು, ಗಂಡಿನ ಮುಖ ಬಾಡದಿರಲಿ ಎಂದು. ಕಲ್ಲು ಮುಳ್ಳಿನ ಹಾದಿಯಲ್ಲಿ ಗಂಡಿನ ಪಾದಕ್ಕೆ ಪೆಟ್ಟಾಗದಿರಲೆಂಬ ಕಾರಣದಿಂದ ಕೆಲವೆಡೆ ಊರ ಅಗಸನ ನೆರವಿನಿಂದ ಹಾದಿಯುದ್ದಕ್ಕೂ ಸೀರೆಯೋ ಮತ್ತೊಂದು ಬಟ್ಟೆಯನ್ನೋ ಹಾಸುತ್ತಿದ್ದರು. ಈಗ ಇವೆಲ್ಲ ಪ್ರಸ್ತುತವಾ? ರಾತ್ರಿ ರಿಸೆಪ್ಷನ್ನಿನಲ್ಲಿ ಫೋಟೋ ಮೇಲೆ ಫೋಟೋ ಹೊಡೆಸಿಕೊಂಡು ಛತ್ರದಲ್ಲೇ ಮಲಗಿದ್ದ ಗಂಡನ್ನು ಮಾರನೇ ಬೆಳಗ್ಗೆ ಮುಹೂರ್ತಕ್ಕೆ ಮೊದಲು ಛತ್ರದಾವರಣದಲ್ಲೇ ಇರುವ ಪುಟ್ಟ ಮಾರ್ಬಲ್ ದೇವಸ್ಥಾನಕ್ಕೆ ಒಯ್ದು ಕರೆತರುತ್ತಾರೆ. ಮೊಸಾಯಿಕ್ ನೆಲದ ಮೇಲೂ ಬಟ್ಟೆ ಹಾಸುತ್ತಾ ಸಾಗುತ್ತಾರೆ!!

ದಕ್ಷಿಣ ಕನ್ನಡದಲ್ಲಿ ನಾಗಪೂಜೆಗೆ ವಿಶೇಷ ಸ್ಥಾನ. ಸುಬ್ರಹ್ಮಣ್ಯದಲ್ಲಂತೂ ನಾಗದೋಷ ನಿವಾರಣೆಯ ಪೂಜೆ ಒಳ್ಳೆ ಬ್ಯುಸಿನೆಸ್ಸು. ದಟ್ಟ ಕಾಡುಗಳ ಮಧ್ಯೆಯೇ ಬದುಕಿದ್ದ ಜನರಿಗೆ ಹಾವಿನ ಬಗ್ಗೆ ಭಯ ಭಕ್ತಿ ಮೂಡಿದ್ದು ಸಹಜ. ಆದರೆ ಹಾವಿರಲಿ ಹೂವೂ ಬದುಕಲು ಏದುಸಿರು ಪಡುವ ಮುಂಬಯಿಯಂಥ ಶಹರುಗಳಿಂದಲೂ ನಮ್ಮ ಕ್ರಿಕೆಟ್, ಸಿನಿಮಾ, ರಾಜಕಾರಣಿಗಳು, ವಿದ್ಯಾವಂತರೂ ಬಂದು ಸರ್ಪ ಸಂಸ್ಕಾರ ಮಾಡಿಸುವುದು ಮೂಢನಂಬಿಕೆಯಲ್ಲದೆ ಮತ್ತೇನು?

ಏಪ್ರಿಲ್ ಮೇ ತಿಂಗಳುಗಳಲ್ಲಿ ಸೂರ್ಯನ ತೆಕ್ಕೆಯಲ್ಲೇ ವಿರಮಿಸುವ ಗುಲ್ಬರ್ಗ ರಾಯಚೂರಿನಂಥ ಊರುಗಳಲ್ಲಿ ಮಹಿಳೆಯರನೇಕರು ಅಡಿಯಿಂದ ಮುಡಿಯವರೆಗೆ ಬಟ್ಟೆ ಸುತ್ತಿಕೊಂಡಿರುತ್ತಾರೆ; ಗಂಡಸರೂ ಇದಕ್ಕೆ ಹೊರತಲ್ಲ. ಬಿಸಿಗಾಳಿಯಿಂದ ರಕ್ಷಣೆ ಪಡೆಯುವುದಷ್ಟೇ ಇದರ ಹಿಂದಿನ ಉದ್ದೇಶ. ಬಿಸಿಲು ಹೆಚ್ಚಿರುವ ಅರಬ್ ರಾಷ್ಟ್ರಗಳಲ್ಲಿ ಇಸ್ಲಾಂ ಬೆಳೆದು ಪ್ರಜ್ವಲಿಸಿದ ಕಾರಣ ಆರೋಗ್ಯ ರಕ್ಷಣೆಗಾಗಿ ಧರಿಸುತ್ತಿದ್ದ ಬುರ್ಖಾ ಕ್ರಮೇಣ ಧರ್ಮದ ಅಂಗವಾಗಿಬಿಟ್ಟಿರಬೇಕು. 'ಮುಸ್ಲಿಂ ಮಹಿಳೆಯರು ಎಸಿ ರೂಮೊಳಗೆ ಕುಂತರೂ ಬುರ್ಖಾ ಧರಿಸಲೇಬೇಕು' ಎಂದಬ್ಬರಿಸುವ ಜನರ ಮನಸ್ಸು ವೈಚಾರಿಕತೆಗೆ ತೆರೆದುಕೊಳ್ಳದೆ ಮೂಢವಾಗಿದೆಯಷ್ಟೇ?


ಎಲ್ಲ ಆಚರಣೆಗಳಿಗೂ ಒಂದು ಹಿನ್ನೆಲೆ-ಕಾರಣ ಇದ್ದೇ ಇರುತ್ತದೆ. ಅವುಗಳಲ್ಲಿ ಬಹಳಷ್ಟು ಹಿಂದಿನ ಕಾಲದ ಜನರ ತಿಳಿವಳಿಕೆಯ ಮಟ್ಟಕ್ಕೆ ಅಂದಿನ ಅವಶ್ಯಕತೆಗಳಿಗೆ, ದಬ್ಬಾಳಿಕೆ, ಶೋಷಣೆಗೆ ಸರಿಯಾಗಿದ್ದವೇನೋ. ವೈಚಾರಿಕ ತರ್ಕಕ್ಕೆ ಒಳಪಡಿಸಿದ ನಂತರವೂ ಒಂದು ಆಚರಣೆ ಇಂದಿಗೂ ಪ್ರಸ್ತುತ ಉಪಯೋಗಕರ ಎಂದು ಖಚಿತವಾದರೆ ಖಂಡಿತ ಪಾಲಿಸೋಣ. ಆದರೆ ಸಂಪ್ರದಾಯದ ಹೆಸರಿನಲ್ಲಿ ಎಲ್ಲವನ್ನೂ ಪಾಲಿಸಿ ಮೂಢರಾಗುವುದು ಬೇಡ.

"ಅಲ್ಲ ಕಣ್ಲಾ, ನಾವೇನೋ ನಮ್ಮ ತಲೆ ಉಪಯೋಗಿಸಿ ಅವತ್ತಿಗೆ ನಮಗೆ ಸರಿ ತೋಚಿದಂಗೆ ಮಾಡ್ತಿದ್ದೋ. ಇವರಿಗೇನ್ಲಾ ಬಂದಿರೋದು ದೊಡ್ ರೋಗ. ನಮ್ ಹಿರೀಕರ ತಲೇನೇ ನಾವು ಉಪಯೋಗಿಸ್ತೀವಿ, ನಮ್ ತಲೇನ ಸೈಡಿಗಿಡ್ತೀವಿ ಅಂತಾವಲ್ಲ ಮುಂಡೇವು!" ಎಂದು ನಮ್ಮ ಹಿರೀಕರು ಇಷ್ಟಗಲ ಬಾಯಿ ತೆರೆದು ನಮ್ಮನ್ನು ನೋಡಿ ನಗಬಾರದಲ್ಲವೇ?

• ಡಾ ಅಶೋಕ್. ಕೆ. ಆರ್, ಸುಳ್ಯ

ಜ್ಯೋತಿಷಿ-ಸಂಖ್ಯಾಶಾಸ್ತ್ರಿ ಆದಿತ್ಯ ನಾರಾಯಣನಿಗೆ ಅವಿವೇಕಿಗಳೇ ಳ ನಿಜ (ಲಂಕೇಶ್-28-12-11). ಹಾಗೆ ನೋಡಿದರೆ ಎಲ್ಲಾ , ಸಂಖ್ಯಾಶಾಸ್ತ್ರಿ ವಾಸ್ತುಪಂಡಿತರಿಗೆಲ್ಲಾ ವಿದ್ಯಾವಂತ ಅವಿವೇಕಿಗಳೇ ಕೆ. ರಾಜ್ಯಮಟ್ಟದ ಟಿ.ವಿ.ಯಲ್ಲಿ ಕೇವಲ ಎರಡು ಸಾರಿ ಮುಖ ರೆ ಸಾಕು, ನಂತರ ಇವರಲ್ಲಿಗೆ ಮುಗಿಬೀಳುವ 'ನವ ಶ್ರೀಮಂತ ಇವರು ಒಂದೇ ವರ್ಷದಲ್ಲಿ ಹತ್ತಿಪ್ಪತ್ತು ಲಕ್ಷ ತೂಗುತ್ತಾರೆ. ಬಂಡ ದೇ ಮಾಡಬಹುದಾದ ಇಷ್ಟೊಂದು ಲಾಭಕರ ಬಿಜಿನೆಸ್ (ದೇವರ ಬೇರಾವುದಿದೆ?

ನಿಜವಾಗಿ ವನು ದೇವರ ತರರನ್ನು ಎಂದಿಗೂ ಡಿಸಲಾರ. ಅದರಂತೆ ದೇವರ ಹೆಸರಲ್ಲಿ ಾಡುವವನು ದೇವರನ್ನು ಇಲ್ಲ ದೇವರ ಲ್ಲದೇ ಆ ದೇವರ



ಜನರನ್ನು ಮೋಸ ಮಾಡುತ್ತಾರೆ. ದೇವರ ಹೆಸರನ್ನು ಬಂಡವಾಳ ಂಡಿರುವ ಜ್ಯೋತಿಷಿ, ಪುರೋಹಿತ, ಧಾರ್ಮಿಕ ನೇತಾರರೆಲ್ಲಾ ಅಂತರಂಗದಲ್ಲಿ ನಾಸ್ತಿಕರು ಎಂದೇ ಪರಿಗಣಿಸಬೇಕಾಗುತ್ತದೆ. ಧರ್ಮವು ಜ್ಯೋತಿಷ್ಯವನ್ನು ನಿಷೇಧಿಸಿದೆ. ಕಾರಣ ಜ್ಯೋತಿಷಿಗಳು ಅಪಮಾಯಿಗಳು ಹಾಗೂ ದೇವರ ವೈರಿಗಳು ಎಂದು ಆ ಧರ್ಮ

•

ತೀಯ ಸಂಖ್ಯಾಶಾಸ್ತ್ರಗಳ ದೃಷ್ಟಿಯಲ್ಲಿ ಭಾರತೀಯ ಅದೃಷ್ಟ ದೇವತೆಗೆ ಪ್ರಾ ಇತರ ಭಾರತೀಯ ಭಾಷೆಗಳನ್ನು ಓದಲು ಬರುವುದೇ ಇಲ್ಲ ಒಂದೂ ಅದೃಷ್ಟ ದೇವತೆಗಳಿಗೆ ಕೇವಲ ಪರಕೀಯ ಇಂಗ್ಲಿಷ್ ನ್ನು ಮಾತ್ರ ಓದಲು ತಿಳಿಯುವುದಂತೆ! ಅದಕ್ಕಾಗೇ ಭಾರತೀಯರ ಹೆಸರಿನ ಇಂಗ್ಲಿಷ್ ಸ್ಪೆಲ್ಲಿಂಗ್ ಬದಲಾಯಿಸಿದ ಕೂಡಲೇ ಖುಷಿಯಾಗಿ ಅದೃಷ್ಟ ದೇವತೆ ಒಲಿದುಬಿಡುತ್ತಾಳಂತೆ, ಆ ಹೆಸರಿನ ವ್ಯಕ್ತಿ ಇಂಗ್ಲಿಷ್‌ನ ಗಂಧಗಾಳಿಯಿಲ್ಲದ ಹೆಬ್ಬೆಟ್ಟು ಒತ್ತುವ ನಿರಕ್ಷರಿ ಆಗಿದ್ದರೂ ಪರವಾಗಿಲ್ಲವಂತೆ! ನಿಜ ಹೇಳಬೇಕೆಂದರೆ, ಸಂಖ್ಯಾಶಾಸ್ತ್ರಿಗಳು ಕೇವಲ ಇಂಗ್ಲಿಷ್ ಅಕ್ಷರಗಳನ್ನು ನೆಚ್ಚಿಕೊಳ್ಳಲು ಇರುವ ಏಕೈಕ ಕಾರಣವೇನೆಂದರೆ ಭಾರತೀಯ ಭಾಷೆಗಳಲ್ಲಿ ನಮ್ಮ ಹೆಸರನ್ನು ಉಚ್ಚಾರಕ್ಕೆ ಅನುಗುಣವಾಗಿ ಕೇವಲ ನಿರ್ದಿಷ್ಟ ಅಕ್ಷರಗಳಲ್ಲಿ ಒಂದೇ ಒಂದು ವಿಧದಲ್ಲಿ ಮಾತ್ರ ಬರೆಯಲು ಸಾಧ್ಯ. ಕಾರಣ ಭಾರತೀಯ ಭಾಷೆಗಳಲ್ಲಿ ಪ್ರತಿ ಅಕ್ಷರಕ್ಕೂ ಒಂದೇ ಒಂದು ನಿರ್ದಿಷ್ಟ ಉಚ್ಚಾರ ಮಾತ್ರ ಇರುವುದರಿಂದಾಗಿ, ಎಷ್ಟೇ ಸರ್ಕಸ್ ಮಾಡಿದರೂ ಒಂದು ಅಕ್ಷರಕ್ಕೆ

ಭಾರತೀಯ ದೇವತೆಗೆ ಇಂಗ್ಲಿಷ್ ವ್ಯಾಮೋಹ

ಎರಡೆರಡು ಉಚ್ಚಾರ ಸಾಧ್ಯವೇ ಇಲ್ಲ (ತಮಿಳು, ಮಲೆಯಾಳಿ ಇದಕ್ಕೆ ಸ್ವಲ್ಪ ಅಪವಾದ). ಹಾಗಾಗಿ ಭಾರತೀಯ ಭಾಷೆಗಳ ಅಕ್ಷರಗಳೊಂದಿಗೆ ಜಗ್ಲರಿ ಸಾಧ್ಯವಿಲ್ಲ, ಆದರೆ ಇಂಗ್ಲಿಷ್ ಅಕ್ಷರಗಳಿಂದ ಎಷ್ಟು ಬೇಕಾದರೂ 'ಬ್ರೇನ್ ಗೇಮ್' ಆಡಬಹುದು. ಇದರಿಂದಾಗಿ ಇಂಗ್ಲಿಷ್ ಅಕ್ಷರಗಳಿಂದ ಜನರನ್ನು ಮೋಸಪಡಿಸಿದಷ್ಟು ಸುಲಭವಾಗಿ ಭಾರತೀಯ ಭಾಷೆಗಳಲ್ಲಿ ಸಾಧ್ಯವಿಲ್ಲ. ಯಾವುದರಿಂದ ಅಮಾಯಕರನ್ನು ಮೋಸಪಡಿಸಲು ಸಾಧ್ಯವೋ ಅದುವೇ ಮೋಸಗಾರರಿಗೆ ಅಚ್ಚುಮೆಚ್ಚಿನ ಸಾಧನ ತಾನೇ! ಹಾಗಾಗಿ ಇಂಗ್ಲಿಷ್ ಅಕ್ಷರ ಮಾತ್ರ ಸಂಖ್ಯಾಶಾಸ್ತ್ರಿಗಳು ಸಾಧನವಾಗಿಸಿಕೊಂಡಿರುವುದು.

'ಶ್ರೀನಿವಾಸ' ಎಂಬ ಹೆಸರನ್ನು ಕನ್ನಡದಲ್ಲಿ ಹೀಗೇ ಒಂದೇ ವಿಧದಲ್ಲಿ ಮಾತ್ರ ಬರೆಯಲು ಸಾಧ್ಯ ಆದರೆ ಇದೇ ಹೆಸರನ್ನು ಇಂಗ್ಲಿಷ್‌ನಲ್ಲಿ 160 ಕ್ಕೂ ಹೆಚ್ಚು ಬೇರೆ ಬೇರೆ ತರಹ ಬರೆಯ ಬಹುದು. ಉದಾಹರಣೆಗೆ:-

1) Srinivas, Sreenivas, Srienivas, Sreinivas, Srynivas.
2) ಇದಕ್ಕೆ 'ಎಸ್' ನಂತರ 'ಎಚ್' ಜೋಡಿಸಿ (Shrinivas) ಮೇಲಿನಂತೆ ಇನ್ನೂ 5 ತರಹ ಬರೆಯಬಹುದು.
3) 'ವಿ' ಬದಲು 'ಡಬ್ಲ್ಯೂ' ಜೋಡಿಸಿ (Sriniwas) ಮೇಲಿನಂತೆ ಇನ್ನೂ 10 ತರಹ ಬರೆಯಬಹುದು.
4) ಎರಡನೇ 'ಐ' ಬದಲು 'ವಾಯ್' ಜೋಡಿಸಿ (Srinivaas), ಇನ್ನೂ 20 ತರಹ ಬರೆಯಬಹುದು.
5) 'ವಾ' ಉಚ್ಚಾರಕ್ಕೆ ಅನುಗುಣವಾಗಿ ಎರಡು 'ಎ' ಜೋಡಿಸಿ (Srinivaas), ಇನ್ನೂ 40 ತರಹ ಬರೆಯಬಹುದು.
6) ಹೆಸರಿನ ಕೊನೆಗೆ ಹೊಸದಾಗಿ 'ಎ' ಜೋಡಿಸಿ (Srinivasa) ಮೇಲಿನಂತೆ ಇನ್ನೂ 80 ತರಹ ಬರೆಯಬಹುದು!

ಇನ್ನು ಆಂಧ್ರ ಪ್ರದೇಶದವರ ಮೈಲುದ್ದದ ಹೆಸರಲ್ಲಿ ಸಂಖ್ಯಾ ಶಾಸ್ತ್ರಿಗಳು ಎಷ್ಟೊಂದು ಆಟ ಆಡಬಹುದು ಊಹಿಸಿ. ಉದಾಹರಣೆಗೆ-ಅಕ್ಕಿನೇನಿ ವೀಣಾಪಾಣಿ ಶ್ರೀನಿವಾಸಬಾಬು ನಾಯಿಡು, ಈ ಹೆಸರನ್ನು ಎಷ್ಟೊಂದು ವಿಧವಾಗಿ ಇಂಗ್ಲಿಷ್‌ನಲ್ಲಿ ಬರೆಯಬಹುದೆಂದು ಲೆಕ್ಕಹಾಕಿ. ಕನ್ನಡ-ತೆಲುಗಲ್ಲಿ ಸಾಧ್ಯವಿಲ್ಲದ 160 ತರಹದ ಮೋಸ ಇಂಗ್ಲಿಷ್‌ನಲ್ಲಿ ಸಾಧ್ಯವೆಂದ ಮೇಲೆ ಸಂಖ್ಯಾಶಾಸ್ತ್ರಿಗಳ ಇಂಗ್ಲಿಷ್ ಗುಲಾಮಗಿರಿ ಹಾಗೂ ಅದೃಷ್ಟ ದೇವತೆಯ ಇಂಗ್ಲಿಷ್ ವ್ಯಾಮೋಹ ಅರ್ಥವಾಗುತ್ತದೆ ತಾನೇ. ನಿರಕ್ಷರಿಗಳನ್ನು ಮೋಸ ಮಾಡಲು ನೂರಾರು ಸಾಧನಗಳಿವೆ. ಆದರೆ ವಿದ್ಯಾವಂತರನ್ನು ಅವರದೇ ಮಾನಸಿಕ ಜಾಲದಲ್ಲಿ ಸಿಕ್ಕಿಸಿ ಮೋಸಮಾಡಲು ಇಂಗ್ಲಿಷ್‌ಗಿಂತ ಉತ್ತಮ ಸಾಧನ ಬೇರಾವುದಿದೆ?

ಜಗತ್ಪಸಿದ್ಧ ಇಂಗ್ಲಿಷ್ ಸಾಹಿತಿ ಜಾರ್ಜ್ ಬರ್ನಾರ್ಡ್ ಶಾ ಅವರೇ ಹೇಳಿರುವಂತೆ 26 ಅಕ್ಷರಗಳುಳ್ಳ ಇಂಗ್ಲಿಷ್ (ಗ್ರೀಕ್-ರೋಮನ್) ಅಕ್ಷರ ಮಾಲೆ ಇದೊಂದು "ಅಪೂರ್ಣ" ಹಾಗೂ "ಅವೈಜ್ಞಾನಿಕ" ಅಕ್ಷರಮಾಲೆ ಏಕೆಂದರೆ ಭಾಷೆಗಳ ಬಹಳಷ್ಟು ಉಚ್ಚಾರಗಳನ್ನು (ಳ,ಣ,ಖ,ಞ) ಇಂಗ್ಲಿಷ್‌ನಲ್ಲಿ ಬರೆಯಲು ಸಾಧ್ಯವೇ ಇಲ್ಲ, ಆದರೆ ಭಾರತ ಮೂಲದ (ಇಂಡೊ-ಅರೇಬಿಕ್) ಸಂಖ್ಯೆಗಳಾದ (0-9) ದಶಮಾನ ಪದ್ಧತಿ ಅತಿ ವೈಜ್ಞಾನಿಕ ಹಾಗೂ ಪರಿಪೂರ್ಣವಾದುದು. ಹಾಗಾದರೆ ಅಪೂರ್ಣ-ಅವೈಜ್ಞಾನಿಕ ಇಂಗ್ಲಿಷ್ ಅಕ್ಷರಗಳೊಂದಿಗೆ ಅತಿ ವೈಜ್ಞಾನಿಕ ಹಾಗೂ ಪರಿಪೂರ್ಣ ಸಂಖ್ಯೆಗಳಾದ 0-9 ಇವನ್ನು ಮೇಳೈಸಲು ಹೇಗೆ ಸಾಧ್ಯ? ಅದೃಷ್ಟ ದೇವತೆ ಕನ್‌ಫ್ಯೂಸ್ ಆಗುವುದಿಲ್ಲವೇ?

• ಪ್ರವೀಣ್. ಎಸ್. ಶೆಟ್ಟಿ, ಮಂಗಳೂರು

ಲಂಕೇಶ್ ಕಟ್ಟಿಸಿದ 'ನವಿಲು' ಮನೆ

ಹಬ್ಬಗಳ ಸಂದರ್ಭದಲ್ಲಿ ಅಂಗಡಿಯಲ್ಲಿ ವ್ಯಾಪಾರ ಹೆಚ್ಚಿದ್ದರಿಂದ ನಾವು ರಜೆ ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಧಸರಾ ಪೂಜೆ ಮುಗಿದ ನಂತರ ಎರಡು ದಿನ ಅಂಗಡಿಗೆ ರಜೆ ಇರುತ್ತಿತ್ತು. ಆಗ ಅಂಗಡಿಯ ಹುಡುಗಿಯರು, ಶಾಂತ, ಇತರ ಸ್ನೇಹಿತೆಯರೊಂದಿಗೆ ಪ್ಲಾನ್ ಮಾಡಿಕೊಂಡು ಟ್ರಿಪ್ ಹೋಗುತ್ತಿದ್ದೆವು. ಕೆಮ್ಮಣ್ಣುಗುಂಡಿ, ಹಂಪೆ ಇತ್ಯಾದಿ ಕಡೆಯೆಲ್ಲಾ ಸುತ್ತಾಡಿದ್ದೇವೆ.


1964ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ತೆಗೆದ ಚಿತ್ರ...

ನನ್ನ ಅಂಗಡಿಯ ಯಶಸ್ಸು ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಾ ಹೋಯಿತು. ನಾನು ಸ್ವಲ್ಪ ಒಳ್ಳೊಳ್ಳೆ ಸೀರೆಗಳನ್ನು ಉಡತೊಡಗಿದೆ. ಸ್ವಲ್ಪ ಹಣವನ್ನೂ ಕೂಡಿಸಲಾರಂಭಿಸಿದೆ.

'ಲಂಕೇಶ್ ಪತ್ರಿಕೆ' ಲಾಭದಾಯಕವಾಗಿ ನಡೆಯುತ್ತಿತ್ತು, ತಮ್ಮ ಜೀವನದಲ್ಲೇ ಮೊದಲ ಬಾರಿಗೆ ಲಂಕೇಶರು ಕೈತುಂಬ ಹಣವನ್ನು ಮತ್ತು ಆರ್ಥಿಕ ನೆಮ್ಮದಿಯನ್ನು ಕಾಣಲಾರಂಭಿಸಿದರು. ಆಗ ಬನಶಂಕರಿ ಏರಿಯಾದಲ್ಲಿ ಖರೀದಿಸಿದ್ದ ಸೈಟ್‌ನಲ್ಲಿ ಮನೆ ಕಟ್ಟಿಸಲು ಲಂಕೇಶರು ಮುಂದಾದರು. ಮನೆಯನ್ನು ರೂಪಿಸಲು ಶ್ರೀನಿವಾಸ್ ಎಂಬ ಆರ್ಕಿಟೆಕ್ಟ್ ಅವರನ್ನು ಕೇಳಲು ನನ್ನನ್ನೂ ಕರೆದುಕೊಂಡು ಹೋದರು. **60X40** ಸೈಟಿನಲ್ಲಿ ನಮ್ಮ ಅಗತ್ಯಕ್ಕೆ ಹೊಂದುವಂತಹ ತುಂಬಾ ಅಂದವಾದ **split level** ಮನೆಯನ್ನು ಶ್ರೀನಿವಾಸ್ ಡಿಸೈನ್ ಮಾಡಿದರು. ಮನೆ ನಿರ್ಮಾಣ ಆರಂಭವಾದ ಮೇಲೆ ಲಂಕೇಶರು, ನಾನು ಮತ್ತು ಆರ್ಕಿಟೆಕ್ಟ್ ಶ್ರೀನಿವಾಸ್ ಆಗಾಗ್ಗೆ ಸೈಟಿಗೆ ಹೋಗುತ್ತಿದ್ದೆವು.

ಲಂಕೇಶರು ನಾಸ್ತಿಕರಾಗಿದ್ದರಿಂದ ಆ ಮನೆಯಲ್ಲಿ ಪೂಜಾ ಕೊಠಡಿಗೆ ಪ್ರತ್ಯೇಕ ಜಾಗವನ್ನು ಇಟ್ಟಿರಲಿಲ್ಲ. ಶ್ರೀನಿವಾಸ್ ಅವರು ಒಮ್ಮೆ "ಐದು ಬೆಡ್‌ರೂಮ್‌ಗಳಿರುವ ಮನೆಯಲ್ಲಿ ನಾನು ಪೂಜಾ ರೂಮ್ ಇಲ್ಲದ ಕಟ್ಟಡವನ್ನು ಇದೇ ಮೊದಲ ಬಾರಿಗೆ ಡಿಸೈನ್ ಮಾಡಿರುವುದು" ಎಂದು ತಮಾಷೆ ಮಾಡಿದ್ದರು. ಪೂಜಾ ರೂಮ್ ಇಲ್ಲದಿದ್ದರೂ ನನಗೆ ಪರವಾಗಿರಲಿಲ್ಲ. ಆದರೆ ಅಡುಗೆಮನೆಗೆ ಅವಶ್ಯಕವಾದ ಕಲ್ಲಿನ ಕಟ್ಟೆ, ಸಾಮಾನುಗಳನ್ನು ಇಟ್ಟುಕೊಳ್ಳಲು ಕಪಾಟುಗಳು,


... ಹುಡುಗಿಯರೊಂದಿಗೆ ...


ಸ್ಟೋರ್‌ರೂಂ ಮೇಲೆ ಒಂದು ಸಜ್ಜೆ ಇವೆಲ್ಲ ಬೇಕೇಬೇಕು. ಅದರ ಬಗ್ಗೆ ಲಂಕೇಶರಿಗೆ ಹೇಳಿದೆ. ಅವರು ಅಡುಗೆಮನೆ ಎಂದರೆ ಬರೀ ಒಂದು ರೂಮು ಎಂದು ಭಾವಿಸಿದ್ದರು. ಆದಕ್ಕೆ ಅವರು "ನೀನು ಒಂದು ಮನೆ ಕಟ್ಟಿಸು, ಅದು ಹೇಗಿರುತ್ತೇ ಅಂತ ನೋಡೋಣ" ಎಂದು ಉತ್ತರಿಸಿದರು. ಕೊನೆಗೆ ನನಗೆ ಬೇಕಾದ ಹಾಗೆ ನಾನು ಅಡುಗೆಮನೆಯನ್ನು ಕಟ್ಟಿಸಿದೆ.

ಲಂಕೇಶರು ಕಟ್ಟಿಸಿದ ಮನೆ ತುಂಬಾ ಚೆನ್ನಾಗಿತ್ತು, ಅದಕ್ಕೆ ಅವರು 'ನವಿಲು' ಎಂದು ಹೆಸರಿಟ್ಟರು. ಮನೆಯಲ್ಲಿದ್ದ ಐವರಿಗೂ ಪ್ರತ್ಯೇಕ ಬೆಡ್‌ರೂಮ್‌ಗಳಿದ್ದವು. ಗಾಂಧಿಬಜಾರಿನಲ್ಲಿದ್ದ ಎರಡು ಬೆಡ್‌ರೂಮಿನ ಆಸ್ಬೆಸ್ಟಾಸ್ ಮನೆಯಲ್ಲಿ ಬೆಳೆದಿದ್ದ ನಮ್ಮ ಮೂವರು ಮಕ್ಕಳಿಗೆ ಹೊಸ ಮನೆ ತುಂಬಾ ಇಷ್ಟವಾಯಿತು.

ಆಗ ನಮ್ಮ ಮಗ ಅಜಿತ್ ತುಂಬಾ ಚೆನ್ನಾಗಿ ಕ್ರಿಕೆಟ್ ಆಡುತ್ತಿದ್ದ. ಆದರೆ ಆ ಆಟದ ಬಗ್ಗೆ ಆತ ಹೆಚ್ಚು ಗಮನ ಕೊಡುತ್ತಿದ್ದರಿಂದ ಓದಿನ ಕಡೆ ಅವನ ಗಮನ ಕಡಿಮೆ ಆಗುತ್ತಿತ್ತು. ನಾನೊಮ್ಮೆ ಲಂಕೇಶರಿಗೆ "ನೀವು ಮಗನನ್ನು ತುಂಬಾ ಮುದ್ದು ಮಾಡುತ್ತಿದ್ದೀರಿ. ಅವನು ಕೇಳಿದ್ದನ್ನೆಲ್ಲ ಕೊಡಿಸುತ್ತೀರಿ. ಹೀಗೆಲ್ಲ ಮಾಡಿ ಅವನನ್ನು ಹಾಳು ಮಾಡಬೇಡಿ" ಎಂದೆ. ಆದರೆ ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳದ ಲಂಕೇಶರು ಅಜಿತು ತಮಗೆ ಮಾತ್ರ ಮಗ, ನಾನು ಅವನಿಗೆ ಏನೂ ಅಲ್ಲ ಎಂಬಂತೆ ನಡೆದುಕೊಂಡರು. ನಾನು ಮತ್ತೆಮತ್ತೆ ಈ ವಿಷಯದ ಬಗ್ಗೆ ಮಾತನಾಡಿದರೆ ಮಗ ಎಲ್ಲಿ ನನ್ನಿಂದ ದೂರವಾಗುತ್ತಾನೋ ಎಂದು ಆ ವಿಷಯದ ಬಗ್ಗೆ ಮಾತಾಡುವುದನ್ನೇ ಬಿಟ್ಟೆ.

ನಮ್ಮ ಬನಶಂಕರಿ ಮನೆಗೆ ಜೂನ್ **10, 1985**ರಂದು ಹೋದೆವು. ನಾನು ಪೂಜೆ ಮಾಡಿ ಹಾಲು ಉಕ್ಕಿಸಿ ಅದನ್ನು ಕುಡಿಯಲು ಲಂಕೇಶರಿಗೆ ಕೊಟ್ಟೆ. ಸಂಜೆ 'ಲಂಕೇಶ್ ಪತ್ರಿಕೆ'ಯ ಸಿಬ್ಬಂದಿಗೆ ಮತ್ತು ಇತರೆ ಸ್ನೇಹಿತರಿಗೆ ಹೊಸ ಮನೆಯಲ್ಲೇ ಲಂಕೇಶರು ಪಾರ್ಟಿ ಏರ್ಪಡಿಸಿದ್ದರು. ನಾನು ನನ್ನ ಕಡೆಯ ಯಾರನ್ನೂ ಆ ಪಾರ್ಟಿಗೆ ಆಹ್ವಾನಿಸಲಿಲ್ಲ. ಯಾಕೆಂದರೆ ನನಗೆ ಪೂಜೆ, ಹೋಮ, ಹವನ ಇತ್ಯಾದಿಗಳಲ್ಲಿ ನಂಬಿಕೆ ಇಲ್ಲದಿದ್ದರೂ ಹೊಸ ಮನೆಯ ಗೃಹಪ್ರವೇಶಕ್ಕೆ ಗುಂಡು ಪಾರ್ಟಿ ಸರಿ ಅಲ್ಲ ಅನ್ನಿಸಿತ್ತು.

ನನ್ನ ತಮ್ಮ ಶಿವಕುಮಾರ್ ಮತ್ತು ಆತನ ಪತ್ನಿ ವಿಮಲಾಳಿಗೆ ಎರಡು ಹೆಣ್ಣು ಮಕ್ಕಳ ನಂತರ ಗಂಡು ಮಗ ಹುಟ್ಟಿದ್ದ. ನನ್ನ ತಮ್ಮನ ಮಗನ ನಾಮಕರಣಕ್ಕೆ ಶಿವಮೊಗ್ಗೆಗೆ ಹೋದೆ. ನಾನು ಯಶಸ್ವಿಯಾಗಿ ಅಂಗಡಿ ನಡೆಸುತ್ತಿದ್ದದ್ದು, ಲಂಕೇಶರ ಪತ್ರಿಕೆ ಜನಪ್ರಿಯವಾಗಿದ್ದದ್ದು, ಹೊಸ ಮನೆ ಕಟ್ಟಿಸಿಕೊಂಡಿದ್ದು, ಇದೆಲ್ಲದರ ಬಗ್ಗೆ ನನ್ನ ಅಪ್ಪಯ್ಯ ತುಂಬಾ ಸಂತೋಷಗೊಂಡಿದ್ದರು. ಯಾವ ಲಂಕೇಶರನ್ನು ನಾನು ಮದುವೆ ಆಗಕೂಡದು ಎಂದು ನನ್ನ ಅಪ್ಪಯ್ಯ **25** ವರ್ಷಗಳ ಹಿಂದೆ ಹೇಳಿದ್ದರೋ ಅದೇ ಲಂಕೇಶರ ಬಗ್ಗೆ ಈಗ ಅಪ್ಪಯ್ಯಗೆ ತುಂಬಾ ಹೆಮ್ಮೆ ಇತ್ತು. ಅವರು ಯಾರಿಗಾದರೂ ನನ್ನನ್ನು ಪರಿಚಯಿಸುವಾಗ "ಲಂಕೇಶ್ ಹೆಂಡತಿ" ಎನ್ನುತ್ತಿದ್ದರು. ನಾನೊಮ್ಮೆ "ಲಂಕೇಶರಿಗೆ ಹೆಂಡತಿ ಆಗುವುದಕ್ಕೂ ಮೊದಲು ನಾನು ನಿಮ್ಮ ಮಗಳಾಗಿದ್ದವಳು. ಆದ್ದರಿಂದ 'ನನ್ನ ಮಗಳು ಇಂದಿರಾ' ಅಂತ ಯಾಕೆ ನೀನು ಪರಿಚಯ ಮಾಡಿಸುವುದಿಲ್ಲ?" ಎಂದು ಅವರನ್ನು ಕೇಳಿದ್ದೆ. ಆದರೆ ನನ್ನ ಪ್ರಶ್ನೆಗೆ ಅವರಲ್ಲಿ ಯಾವ ಉತ್ತರವೂ ಇರಲಿಲ್ಲ. ಇನ್ನು ಕೆಲವರು "ನಿಮ್ಮ ಹೆಸರನ್ನು ಈಗಲೂ ಯಾಕೆ ಕೆ.ಎಸ್. ಇಂದಿರಾ ಲಂಕೇಶ್ ಎಂದು ಬರೆಯುತ್ತೀರಾ? ಬರೀ ಇಂದಿರಾ ಲಂಕೇಶ್ ಸಾಲದೇ?" ಎಂದು ಕೇಳುತ್ತಿದ್ದರು. (ಕೆ.ಎಸ್. ಅಂದರೆ ಕುಸಕೂರು ಸೋಮಸುಂದರ್ ಎಂದು ಅರ್ಥ) ಅದಕ್ಕೆ ನಾನು "ಕೆ.ಎಸ್. ಮೊದಲು, ನಂತರ ಲಂಕೇಶ್" ಎನ್ನುತ್ತಿದ್ದೆ. ಅಪ್ಪ ಸಾಕಿ ಕೊಟ್ಟರೆ ತಾನೇ ಇನ್ನೊಬ್ಬರಿಗೆ ಹೆಂಡತಿ ಆಗುವುದು?



ಲಂಕೇಶರ ಆಫೀಸ್ ಗಾಂಧಿಬಜಾರ್‌ನ ಅದೇ ನಮ್ಮ ಹಳೆ ಮನೆಯಲ್ಲೇ ಇತ್ತು. ಲಂಕೇಶರಿಗೆ ತಮ್ಮ ಎಲ್ಲ ಸಿಬ್ಬಂದಿಗೆ ಆಫೀಸ್‌ನಲ್ಲೇ ಅಡುಗೆ ಮಾಡಿಸಬೇಕೆನ್ನಿಸಿ ಅಡುಗೆಯವರನ್ನು ನೇಮಿಸಿದರು. ಪ್ರತಿ ದಿನ ಅನ್ನ, ಸಾರು, ಪಲ್ಯ ಮುದ್ದೆ ಚಪಾತಿ ಜೊತೆಗೆ ತುಪ್ಪ ಉಪ್ಪಿನಕಾಯಿ ಇತ್ಯಾದಿಗಳೆಲ್ಲವನ್ನು ತಮ್ಮ ಸಿಬ್ಬಂದಿಗೆ ಮಾಡಿಸುತ್ತಿದ್ದರು. ಅದು ಎಲ್ಲರಿಗೂ ಎಷ್ಟು ಇಷ್ಟವಾಯಿತೆಂದರೆ ಪ್ರತಿ ದಿನ **20-22**ರಷ್ಟಿದ್ದ ಸಿಬ್ಬಂದಿ ಅಲ್ಲದೆ ಅವರ ಮಿತ್ರರೂ ಬಂದು **30**ಕ್ಕೂ ಹೆಚ್ಚು ಜನ ಆಫೀಸಿನಲ್ಲೇ ಮಧ್ಯಾಹ್ನದ ಊಟ ಮಾಡುತ್ತಿದ್ದರು.


ಅಪ್ಪಯ್ಯ ... ಶಿವಮೊಗ್ಗ ...

ಇದಾದನಂತರ ತಮ್ಮ ಹಳ್ಳಿ ಜನರಿಗೂ ಏನಾದರೂ ಉಪಯೋಗವಾಗುವುದನ್ನು ಮಾಡಬೇಕೆಂದು ಲಂಕೇಶರಿಗೆ ಅನ್ನಿಸಿ ಅವರು ತಮ್ಮ ಹಳ್ಳಿಯಿಂದ ಕೌದಿಗಳನ್ನು ತರಿಸಿ, ಅದಕ್ಕೆ ಪತ್ರಿಕೆಯಲ್ಲಿ ಪ್ರಚಾರ ಕೊಟ್ಟು, ಕೌದಿಗಳನ್ನು ಆಫೀಸಿನಿಂದಲೇ ಮಾರಾಟ ಮಾಡಲಾರಂಭಿಸಿದರು. ಕೌದಿಗಳನ್ನು ಮಾಡಲು ಹಳ್ಳಿಯ ಹೆಂಗಸರಿಗೆ ಬಟ್ಟೆ ಬೇಕಿತ್ತಲ್ಲ ಆಗ ಲಂಕೇಶರು ನನ್ನ ನೆರವು ಕೇಳಿದರು. ನಾನು ಅಗ್ಗವಾಗಿದ್ದ ಜನತಾ ಸೀರೆಗಳನ್ನು, ಪ್ಯಾಚ್ ವರ್ಕ್‌ಗೆಂದು ತರತರಹದ ಬಣ್ಣದ ಬಟ್ಟೆಗಳನ್ನು ತರಿಸಿಕೊಟ್ಟೆ. ಜೊತೆಗೆ ನನ್ನ ಅಂಗಡಿಯಲ್ಲಿ ಉಳಿದಿರುತ್ತಿದ್ದ ಬ್ಲೌಸ್‌ಪೀಸ್ ಬಟ್ಟೆಗಳನ್ನೂ ಕೊಟ್ಟೆ.

ಮೊದಮೊದಲು ಹಳ್ಳಿಯ ಹೆಂಗಸರು ಕೌದಿಗಳನ್ನು ಚೆನ್ನಾಗಿ ಹೊಲಿದು ಕೊಡುತ್ತಿದ್ದರಿಂದ ಅವುಗಳಿಗೆ ಒಳ್ಳೆ ಬೇಡಿಕೆ ಇತ್ತು. ಇದನ್ನು ನೋಡಿ ಲಂಕೇಶರು ಉದ್ದಿನ ಹಪ್ಪಳವನ್ನೂ ಊರಿನಿಂದ ತರಿಸಿ ಮಾರಲಾರಂಭಿಸಿದರು. ಆದರೆ ಬರುಬರುತ್ತಾ ಆ ಹೆಂಗಸರು ನಾವು ಕಳುಹಿಸಿದ್ದ ಹೊಸದಾದ ಬಣ್ಣಬಣ್ಣದ ಬಟ್ಟೆಗಳನ್ನು ಜಾಕೀಟ್ ಹೊಲಿಸಿಕೊಳ್ಳುವುದಕ್ಕೆ, ಸ್ವಂತಕ್ಕೆ ಉಪಯೋಗಿಸಿಕೊಳ್ಳಲು ಶುರುಮಾಡಿದರು. ಕೌದಿಗಳಿಗೆ ಹಳೇ ಬಟ್ಟೆಗಳನ್ನು ಹಾಕಲಾರಂಭಿಸಿದರು. ಹಾಗೆಯೇ ಹಪ್ಪಳಗಳು ತಳ್ಳೆಗಾಗುತ್ತ, ಚಿಕ್ಕದಾಗುತ್ತಾ ಹೋದವು. ಕೊನೆಗೆ ವಿಧಿಇಲ್ಲದೆ ಇದನ್ನೆಲ್ಲ ಲಂಕೇಶರು ಕೈಬಿಟ್ಟರು.

****



ಇದೆಲ್ಲದರ ನಡುವೆ ನಮ್ಮಿಬ್ಬರ ಸಂಬಂಧ ಇನ್ನೊಂದು ಮಗ್ಗಲನ್ನು ಹಿಡಿದಿತ್ತು, ಇಬ್ಬರಿಗೂ ಪರಸ್ಪರರಲ್ಲಿ ಗೌರವ ಹೆಚ್ಚಾಗಿತ್ತು, ಪ್ರೀತಿಯೂ ಇತ್ತು, ಕಾಳಜಿಗಂತೂ ಯಾವ ಕೊರತೆಯೂ ಇರಲಿಲ್ಲ, ಆದರೆ ಮುಂಚಿನಂತೆ ನಮ್ಮ ನಡುವೆ ಆತ್ಮೀಯತೆ ಇರಲಿಲ್ಲ.


ಸಾಮಾನ್ಯವಾಗಿ ಗಂಡಹೆಂಡಿರ ಸಂಬಂಧ ಹೀಗೇ ಇರುತ್ತದೆಯೋ ಏನೋ, ನನಗೆ ಗೊತ್ತಿಲ್ಲ. ಮದುವೆ ಆದ ಹೊಸದರಲ್ಲಿ ಇಬ್ಬರ ನಡುವೆ ಸಹಜವಾಗಿಯೇ ಆಕರ್ಷಣೆ ಇರುತ್ತದೆ. ಆಗ ಗಂಡ ಏನು ಮಾಡಿದರೂ ಹೆಂಡತಿಗೆ ಚೆಂದವಾಗಿ ಕಾಣುತ್ತದೆ. ಅದೇರೀತಿ, ಹೆಂಡತಿ ಹೇಗಿದ್ದರೂ ಆತನಿಗೆ ಸುಂದರವಾಗಿ ಕಾಣುತ್ತಾಳೆ. ಆನಂತರ ಮಕ್ಕಳಾಗುತ್ತವೆ. ತಾಯಿಯ ಒಲವು ಮತ್ತು ಪ್ರೀತಿ ಮಕ್ಕಳ ಕಡೆ ಹರಿದು ಗಂಡನ ಕಡೆ ಆಕೆಯ ಗಮನ ಕಡಿಮೆಯಾಗುತ್ತದೆ. ಆದರೆ ಗಂಡು ಮಾತ್ರ ಅಪ್ಪನಾದರೂ ಆತನಿಗೆ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಇರುವುದಿಲ್ಲ. ಹಿಂದಿನಂತೆ ಆತ ಬರೀ ಗಂಡನಾಗೇ ಇರುತ್ತಾನೆ.

ನನ್ನ ಅತ್ತೆ "ಹೆಣ್ಣು ಒಂದು ಹೆತ್ತ ಮೇಲೆ ಹಂದಿ ಇದ್ದಂತೆ" ಎಂದು ಹೇಳುತ್ತಿದ್ದರು. ಅವರ ಮಾತು ಇದುವರೆವಿಗೂ ನನಗೆ ಅರ್ಥವಾಗಿಲ್ಲ. ಮಕ್ಕಳಾದ ಮೇಲೆ ಹೆಂಡತಿಯೊಬ್ಬಳು ಹಂದಿಯ ಹಾಗೆ ದಪ್ಪ ಆಗುತ್ತಾಳೆ ಅಂತಾನಾ? ಅಥವಾ ಹಂದಿಗಳಂತೆ ಮಕ್ಕಳನ್ನು ಹಿಂದೆ ಕಟ್ಟಿಕೊಂಡು ಓಡಾಡುತ್ತಾಳೆ ಅಂತಾನಾ? ನನಗೆ ಗೊತ್ತಿಲ್ಲ.

ನನ್ನ ಪರಿಚಿತರೊಬ್ಬರಿಗೆ ಇಬ್ಬರು ಹೆಂಡತಿಯರಿದ್ದರು. ಒಂದು ರಾತ್ರಿ ಆತ ತನ್ನ ಮೊದಲನೆ ಹೆಂಡತಿಯೊಂದಿಗೆ ಇದ್ದಾಗ ಇದ್ದಕ್ಕಿದ್ದಂತೆ "ನಿನ್ನ ಜೊತೆ ಇದ್ದಾಗ ನನಗೆ ಇನ್ನೊಬ್ಬಳ ಬಗ್ಗೆ ನೆನಪಾಗುತ್ತೆ" ಎಂದರಂತೆ. ಅದನ್ನು ಕೇಳಿ ಪಾಪ ಆ ಮಹಿಳೆಗೆ ಹೇಗೆನ್ನಿಸಿರಬೇಡ. ನನ್ನ ಪುಣ್ಯಕ್ಕೆ ನನ್ನ ಗಂಡ ನನ್ನೊಂದಿಗೆ ಎಂದೂ ಹಾಗೆ ನಡೆದುಕೊಂಡವರಲ್ಲ.

ಆದರೆ ಲಂಕೇಶರ ಜೀವನದಲ್ಲಿ - ಅವರೇ ತಮ್ಮ ಆತ್ಮಕಥನದಲ್ಲಿ ಬರೆದುಕೊಂಡಿರುವಂತೆ - ಕೆಲವು ಮಹಿಳೆಯರ ಆಗಮನ ಮತ್ತು ನಿರ್ಗಮನಗಳು ನಡೆಯುತ್ತಿದ್ದವು. ನಾನು ಕಂಡಂತೆ ಅವರ‍್ಯಾರೂ ಸುಂದರಿಯರಾಗಿರಲಿಲ್ಲ. ಹೋಗಲಿ, ಸೌಂದರ್ಯವಿಲ್ಲದಿದ್ದರೂ ಪರವಾಗಿಲ್ಲ ಬುದ್ಧಿಯಾದರೂ ಇದೆಯಾ ಎಂದು ನೋಡಿದರೆ ಅವರ‍್ಯಾರೂ ಹೇಳಿಕೊಳ್ಳುವಂತಹ ಬುದ್ಧಿವಂತೆಯರೂ ಆಗಿರಲಿಲ್ಲ.

ಅವರನ್ನು ನೋಡಿದಾಗ ನನಗೆ "ಆಕೆಯಲ್ಲಿ ಅದೇನನ್ನು ನೋಡಿ ಲಂಕೇಶರು ಆಕೆಯನ್ನು ಮೆಚ್ಚಿಕೊಂಡಿದ್ದಾರೆ?" ಎಂದು ಅನ್ನಿಸುತ್ತಿತ್ತು. ಹಾಗೊಮ್ಮೆ ಅವರೇನಾದರೂ ಸುಂದರಿಯರಾಗಿದ್ದು ತುಂಬಾ ಬುದ್ಧಿವಂತೆಯರಾಗಿದ್ದರೆ ನನಗೆ ನನ್ನ ಬಗ್ಗೆ ಕೀಳರಿಮೆ ಉಂಟಾಗುತ್ತಿತ್ತೇನೋ. ಆದರೆ ನನಗೆ ಹಾಗೆಂದೂ ಅನ್ನಿಸಲಿಲ್ಲ, ಬದಲಾಗಿ ನನ್ನ ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ನಾನು ಸಾಧಿಸಿದ್ದರ ಬಗ್ಗೆ ನನಗೆ ಹೆಮ್ಮೆಯಾಗುತ್ತಿತ್ತು.



ಮನೆ ಕುರಿತು ಡೈರಿಯಲ್ಲಿ ...

ನಾನು ನನ್ನ ಅಂಗಡಿಗೆ ಸೀರೆ ಕೊಳ್ಳಲು ಬೇರೆ ಊರಿಗೆ ಹೋಗುವಾಗ ಲಂಕೇಶರಿಗೆ ತಿಳಿಸುವ ಅಗತ್ಯ ಕಂಡುಬರುತ್ತಿರಲಿಲ್ಲ. ಆದರೆ ನಾನು ಯಾವ ಊರಿಗೆ ಹೋಗುತ್ತಿದ್ದೇನೆ, ಎಷ್ಟು ದಿನಗಳ ನಂತರ ಬರುತ್ತೇನೆ ಎಂದು ನಮ್ಮ ಮಕ್ಕಳಿಗೆ ಹೇಳಿಹೋಗುತ್ತಿದ್ದೆ. ಹಾಗೆಯೇ ನಾನು ಸಾಮಾನ್ಯವಾಗಿ ಉಳಿದುಕೊಳ್ಳುತ್ತಿದ್ದ ಹೋಟೆಲ್‌ನ ಫೋನ್ ನಂಬರ್ ನನ್ನ ಮಕ್ಕಳ ಬಳಿ ಇರುತ್ತಿದ್ದವು. ಆದರೂ ನಾನು ಮನೆಯಲ್ಲಿ ಇದ್ದೇನೆಯೋ ಇಲ್ಲವೋ ಎಂಬುದನ್ನು ಲಂಕೇಶರು ಸೂಕ್ಷ್ಮವಾಗಿ ಅರಿತುಕೊಳ್ಳುತ್ತಿದ್ದರು. ನನ್ನ ಬ... ಲಂಕೇಶರಿಗೆ ಎಲ್ಲಾ ತಿಳಿದಿರುತ್ತಿತ್ತು.

ಲಂಕೇಶರು ಪತ್ರಿಕೆಯಲ್ಲಿ ನೀಲು ಹೆಸರಿ... ಬರೆಯುತ್ತಿದ್ದ ಕವನಗಳು ಮತ್ತು ಸಿ... ಹೆಸರಿನಲ್ಲಿ ಬರೆಯುತ್ತಿದ್ದ ಕಾಲಮ್ ತುಂ... ಜನಪ್ರಿಯವಾಗಿದ್ದವು. ಅವರ ಹಸ್ತಾ... ಬಲ್ಲವರಿಗೆ ನೀಲುವಿನ ಕರ್ತೃ ಲಂಕೇಶ್... ಎಂದು ಗೊತ್ತಿತ್ತು, ಆದರೆ ಪತ್ರಿಕೆಯ ಸಿಬ್ಬ... ಮತ್ತು ಕೆಲವು ಗೆಳೆಯರ ಹೊರತಾ... ಲಂಕೇಶರೇ ನಿಮ್ಮಿ ಎಂಬುದು ಬಹಳ... ಜನಕ್ಕೆ ಗೊತ್ತಿರಲಿಲ್ಲ.

ಈ ಎರಡೂ ಬರಹಗಳು ಲಂಕೇ... ರಲ್ಲಿದ್ದ ಹೆಣ್ಣಿನ ಮನಸ್ಸನ್ನು ತೋರುತ್ತಿದ್ದ... ನೀಲು ಕವನಗಳಂತೂ ಹೆಣ್ಣಿನ ಮನಸ್... ಏನೆಲ್ಲಾ ಯೋಚಿಸುತ್ತದೆ, ಅನುಭವಿಸುತ್... ಎಂಬುದನ್ನು ಸ್ಪಷ್ಟವಾಗಿ ಬಿಂಬಿಸುತ್ತಿದ್ದ... ಮಹಿಳೆಯರ ಮನಸ್ಸನ್ನು ಇಷ್ಟು ಚೆನ್ನಾ... ತಿಳಿದಿದ್ದ ಲಂಕೇಶರು ನನ್ನ ಮನಸ್ಸನ್ನು ಯಾ... ಅರ್ಥಮಾಡಿಕೊಳ್ಳಲಿಲ್ಲ ಎಂದು ನನ... ಅನ್ನಿಸುತ್ತಿತ್ತು.

****

ಒಮ್ಮೆ ನಾನು ನನ್ನ ಗೆಳತಿಯೊ... ಮಗಳನ್ನು ನನ್ನ ಸ್ಕೂಟರ್ ಮೇ... ಕೂರಿಸಿಕೊಂಡು ಹೋಗುತ್ತಿದ್ದಾಗ ಸೌತ್ ಎಂಡ್ ಸರ್ಕ... ಬಳಿ ಒಂದು ಸಣ್ಣ ಅಪಘಾತ ಸಂಭವಿಸಿತು. ಆ ಹುಡುಗಿ... ಏನೂ ಆಗದಿದ್ದರೂ ನನ್ನ ಹಣೆಗೆ ಪೆಟ್ಟು ಬಿದ್ದು ರ... ಸುರಿಯಲಾರಂಭಿಸಿತು. ಯಾರೋ ನನ್ನನ್ನು ಆಟೋದ... ಕೂರಿಸಿದರು. ನಾನು ಗಾಂಧಿಬಜಾರ್‌ನಲ್ಲಿದ್ದ ಪತ್ರಿಕೆ ಆಫೀಸಿ... ಹೋದೆ. ನನ್ನ ಹಣೆಯಿಂದ ಮುಖ, ಕತ್ತು, ಸೀರೆಯ ಮೇಲೆ... ಸುರಿಯುತ್ತಿದ್ದ ರಕ್ತವನ್ನು ನೋಡಿ ಲಂಕೇಶರಿ... ಶಾಕ್ ಆಯಿತು. ಕೂಡಲೇ ತಮ್ಮ ಮಿತ್ರ ಡಾ... ಶ್ರೀನಿವಾಸ್ ಗೌಡರಿಗೆ ಫೋನ್ ಮಾಡಿ... ನನ್ನನ್ನು ತಮ್ಮ ಕಾರಿನಲ್ಲಿ ಕೂಡಿಸಿಕೊಂಡ... ರಿಪಬ್ಲಿಕ್ ನರ್ಸಿಂಗ್ ಹೋಮ್... ಕರೆದುಕೊಂಡು ಹೋದರು.

ನರ್ಸಿಂಗ್ ಹೋಮ್‌ನಲ್ಲಿ ಡಾ. ಸ್ಟೀಫನ್... ಎಂಬ ಖ್ಯಾತ ಪ್ಲಾಸ್ಟಿಕ್ ಸರ್ಜನ್ ಎಲ್ಲ ಸಿದ್ಧ... ಮಾಡಿಕೊಂಡಿದ್ದರು. ನನ್ನನ್ನು ಆಪರೇಶನ್... ರೂಮಿಗೆ ಕರೆದುಕೊಂಡು ಹೋಗಿ ನ... ಹಣೆಗೆ ಬಿದ್ದಿದ್ದ ಗಾಯವನ್ನು ಹೊಲಿದರು. ನಾನು ಆಫೀಸಿ... ಬಂದಾಗಿನಿಂದ ವೈದ್ಯರು ನನಗೆ ಚಿಕಿತ್ಸೆ ಕೊಟ್ಟು ನಾ... ಹೊರಗೆ ಬರುವ ತನಕ ಲಂಕೇಶರು ನನ್ನತ್ತ ಒಮ್ಮೆಯ... ನೋಡಿರಲಿಲ್ಲ. ಅವತ್ತು ಅವರು ಗೌರಿ ಹತ್ತಿರ "ಅಮ್ಮ... ಮುಖದ ಮೇಲೆ ಇದ್ದ ರಕ್ತವನ್ನು ನೋಡುವುದಕ್ಕಾಗಲಿ... ಆಕೆ ನೋವು ಅನುಭವಿಸುತ್ತಿದ್ದದ್ದನ್ನು ನನ್ನಿಂ... ಸಹಿಸಲಾಗಲಿಲ್ಲ" ಎಂದರು.

****

ಬನಶಂಕರಿ ಮನೆಗೆ ಹೋದ ಮೇಲೆ ಲಂಕೇಶರಿ... ಕಾಯುವುದೇ ಒಂದು ದೊಡ್ಡ ಕೆಲಸವಾಗಿತ್ತು. ಹಲವೊಮ್... ರಾತ್ರಿ ಎರಡು ಗಂಟೆಯಾದರೂ ಅವರು ಮನೆಗೆ ಬರುತ್ತಿ... ಲಿಲ್ಲ. ಆಗ ನಾನು ಆಫೀಸ್‌ಗೆ ಫೋನ್ ಮಾಡಿ "ಲೇಟಾಯಿತು ಬನ್ನಿ" ಎನ್ನುತ್ತಿದ್ದೆ. ಆಗ ಅವರು ಹೊರಟುಬರುತ್ತಿದ್ದರು.


ಬೇರೆ ಊರುಗಳಿಗೆ ಹೋದಾಗ ಮಾತ್ರ ಅವರ... ಮನೆಯಿಂದ ಹೊರಗೆ ಉಳಿಯುತ್ತಿದ್ದರು. ಆದರೆ ಬೆಂಗಳೂ... ನಲ್ಲಿ ಅಥವಾ ಹತ್ತಿರದ ಊರಿನಲ್ಲಿ ಇದ್ದರೆ ಅವರು ತಪ್ಪ... ಮನೆಗೆ ಬರುತ್ತಿದ್ದರು. ಅವರು ಎಂದೂ ರಾತ್ರಿ ಬೇರೆ ... ಉಳಿಯುತ್ತಿರಲಿಲ್ಲ, ಎಷ್ಟೇ ಹೊತ್ತಾದರೂ ಮನೆಗೆ ವಾಪ... ಬರುತ್ತಿದ್ದರು.

ಸಿಗರೇಟ್ ಸೇದುವುದು ಮತ್ತು ಕುಡಿಯುವುದ... ಜಾಸ್ತಿ ಆಗಿದ್ದರಿಂದ ಅದರ ಪರಿಣಾಮ ಅವರ ದೇಹದ ಮೇ... ಕಾಣಿಸಿಕೊಳ್ಳಲು ಶುರುವಾಯಿತು. ಶುಗರ್ ಸ್ವಲ್ಪ ಹೆ... ಯಿತು. ಆಗ ಕಾಫಿಯಲ್ಲಿ ಸಕ್ಕರೆ ಹಾಕಿಕೊಳ್ಳುವುದನ್ನು ಬಿಟ್ಟ... ಲ್ಲದೆ, ಇತರ ಪಥ್ಯಗಳನ್ನು ಪ್ರಾರಂಭಿಸಿ ಅದನ್ನು ಹತೋಟಿಯ... ಇಟ್ಟುಕೊಳ್ಳಲಾರಂಭಿಸಿದರು. ಬರವಣಿಗೆಯ ಜೊತೆಜೊತೆ... ಕಾರ್ಡ್ಸ್, ಕುದುರೆ ರೇಸ್, ಡ್ರಿಂಕ್ಸ್, ಫ್ರೆಂಡ್ಸ್ ಮತ್ತು ಪ್ರಿಯತಮೆ... ಯರು.... ಎಲ್ಲಾ ನಡೆಯುತ್ತಿತ್ತು.

(ಮುಂದುವರೆಯುವುದು)

ಮಸಣದಲ್ಲೊಂದು ಹೋಟೆಲ್ ಮಾಡಿ.....

...ಮದಾಬಾದ್‌ನಲ್ಲಿ "ನ್ಯೂ ಲಕ್ಕಿ" ಎಂಬ ವಿಶೇಷ ರೆಸ್ಟೋರೆಂಟಿದೆ. ಇಲ್ಲಿ ನೀವು ...ಬಲ್‌ನ ಹಿಂದೋ, ಮುಂದೋ, ಪಕ್ಕದಲ್ಲೋ ಒಂದು ಸಮಾಧಿ ನಿಮಗೆ ಕಂಪನಿ ...ಂತು ಗ್ಯಾರಂಟಿ. ಅಲ್ಲಿ ಟೇಬಲ್‌ಗಿಂತ ಜಾಸ್ತಿ ಸಮಾಧಿಗಳೇ ಇವೆಯಂತೆ. ಹಾಗಂತ ... ಅಘೋರಿಗಳ ಸ್ಮಶಾನ ಪಾಕಶಾಲೆಯಲ್ಲ, ಗ್ರಾಹಕರಿಂದ ಗಿಜಿಗಿಡುವ ...ಬಾದ್‌ನ ಒನ್ ಆಫ್ ದಿ ಮೋಸ್ಟ್ ಬ್ಯುಸಿ ರೆಸ್ಟೋರೆಂಟ್. ಇದರ ಯಜಮಾನ ...ಟ್ಟಿ ನಾಯರ್ ಹೇಳುವ ಪ್ರಕಾರ ಶತಮಾನಗಳಷ್ಟು ಹಳೆಯದಾದ ಮುಸ್ಲಿಮ್ ...ಒಂದು ಅಲ್ಲಿತ್ತಂತೆ. ಆದರೆ ಈಗ್ಗೆ 40 ವರ್ಷಗಳ ಹಿಂದೆ ಅಲ್ಲಿ ಶವಸಂಸ್ಕಾರ ...ವುದನ್ನು ನಿಷೇಧಿಸಿ ನಗರಪಾಲಿಕೆಯವರು ಅದನ್ನು ನಿವೇಶನವನ್ನಾಗಿ ...ಸಿದ್ದರು. ಅದರ ಮೇಲೆಯೇ ನಾಯರ್ ತನ್ನ ಹೋಟೆಲ್ ಸ್ಥಾಪಿಸಿಕೊಂಡಿದ್ದ. ...ಡಿಪಾಯದಲ್ಲಿದ್ದ ಸಮಾಧಿಗಳ ಮೇಲೆಯೇ ಕೃತಕ ಸಮಾಧಿಗಳನ್ನು ನಿರ್ಮಿಸಿ ...ಹೂ ತನ್ನ ರೆಸ್ಟೋರೆಂಟ್‌ನಲ್ಲಿ ಜಾಗ ಕಲ್ಪಿಸಿದ್ದಾನೆ.



...ಉದ್ದೇಶ ...ತ್ತೋ, ಆದರೆ ಆ ...ಳಿಂದಾಗಿ ವ್ಯಾಪಾರ ...ಕ್ಲಿಕ್ ...ದಂತೂ ಸತ್ಯ. ...ಳ ಮಧ್ಯೆ ಕುಳಿತು ... ಹೀರಲು ಜನ ...ದ್ದು ಬರುತ್ತಿದ್ದಾರಂತೆ. ...ಗಿ ನಾಯರ್ ಪ್ರತಿದಿನ ...ಮಾಧಿಗಳಿಗೂ ಹೂವಿಡುವ ಕಾಯಕವನ್ನು ರೂಢಿಸಿಕೊಂಡು ಬಂದಿದ್ದಾನೆ. ... ಸಮಾಧಿಗಳಿಗೆ ಕೃಷ್ಣನ ಹೂವು! ಇದೇ ಅಲ್ಲವಾ ಜಾತ್ಯತೀತ ಭಾರತ!



ನಾಯಿಗಳ ಸೂಸೈಡ್ ಪಾಯಿಂಟ್!

ನಾಯಿಗಳೂ ಆತ್ಮಹತ್ಯೆ ಮಾಡಿಕೊಳ್ತವೆ ಅಂದ್ರೆ ಅಚ್ಚರಿ ಆಗಬಹುದು, ಆದರೆ ಇಂತಹ ನಿಗೂಢ ಸ್ಥಳವೊಂದು ಸ್ಕಾಟ್‌ಲೆಂಡ್‌ನಲ್ಲಿದೆ. ಅಲ್ಲಿನ ಮಿಲ್ಟನ್ ಬಳಿ 1859ರಲ್ಲಿ ನಿರ್ಮಿಸಿದ ಓವರ್‌ಟೌನ್ ಬ್ರಿಡ್ಜ್ ಎಂಬ ಸೇತುವೆ ನಮ್ಮ ಟಿಪ್ಪು ಡ್ರಾಪ್‌ನಷ್ಟೇ ಪ್ರ(ಕು)ಖ್ಯಾತಿ ಪಡೆದಿದೆ. ಆದರೆ ಇಲ್ಲಿಂದ ಮನುಷ್ಯರಿಗೆ ಬದಲಾಗಿ ನಾಯಿಗಳು ಹಾರಿ ಆತ್ಮಹತ್ಯೆ ಮಾಡಿಕೊಳ್ತವೆ. ಇದೇ ಸ್ಥಳದಲ್ಲಿ ನಿಖರವಾಗಿ ನಾಯಿಗಳು 50 ಅಡಿ ಆಳಕ್ಕೆ ಜಿಗಿದು ಸೂಸೈಡ್ ಮಾಡಿಕೊಳ್ಳುವ ಸಂಗತಿಯು 1950ರ ಸಾಲಿನಲ್ಲಿ ಸ್ಥಳೀಯರ ಗಮನಕ್ಕೆ ಬಂದಿತ್ತು. ಅಲ್ಲಿನ ಉದ್ದ ಮೂಗಿನ ಪ್ರಬೇಧದ ನಾಯಿಗಳು ಇದ್ದಕ್ಕಿದ್ದಂತೆ ಬ್ರಿಡ್ಜ್ ಬಳಿ ಕಾಣಿಸಿಕೊಂಡು ಕೆಳಕ್ಕೆ ಜಿಗಿಯುತ್ತವಂತೆ. ಅದರಲ್ಲೂ ಸೇತುವೆಯ ಬಲಭಾಗದಲ್ಲಿರುವ ಗುಂಬಗಳ ನಡುವಿಂದಲೇ ಈ ರೀತಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತವೆ ಎನ್ನಲಾಗಿದೆ ಮತ್ತೂ ಅಚ್ಚರಿಯೆಂದರೆ ಹೀಗೆ ಹಾರಿದಾಗ ಎಲ್ಲಾದರು ಮರಕ್ಕೆ ತಗುಲಿಕೊಂಡು ನಾಯಿ ಬದುಕಿದರೆ ಮತ್ತೆ ಮೇಲ್ಬಂದು ಅಲ್ಲಿಂದ ಜಿಗಿಯುತ್ತವಂತೆ.

ಅದಕ್ಕಿರುವ ವೈಜ್ಞಾನಿಕ ಹಿನ್ನೆಲೆಯ ಗೋಜಿಗೆ ಹೋಗದ ಜನ ಅದನ್ನು ಪ್ರೇತಾತ್ಮಗಳ ಸೇತುವೆ, ಸತ್ತವರ ಹಾಗೂ ಬದುಕಿರುವವರ ನಡುವಿನ ತೆಳುವಾದ ಪೊರೆ ಎಂಬೆಲ್ಲಾ ಪುಕಾರೆಬ್ಬಿಸಿದ್ದಾರೆ. ಆದರೆ ಇದು ನಾಯಿಗಳ ಸೂಸೈಡ್ ಪಾಯಿಂಟ್ ಎಂದು ಹೆಸರು ಗಳಿಸಿರುವುದು ಮಾತ್ರ ವಿಚಿತ್ರ ಸತ್ಯ.

ಕ್ರೇಜಿ ಲೋಕ

-ಗಿರೀಶ್ ತಾಳಿಕಟ್ಟೆ

ಅಂಥಾ ಕಾನೂನ್

ವಿವಿಧ ದೇಶಗಳ ಸಂವಿಧಾನಗಳನ್ನು ಹೊಕ್ಕರೆ ಚಿತ್ರವಿಚಿತ್ರ ಕಾನೂನುಗಳು ಕಣ್ಣಿಗೆ ಬೀಳುತ್ತವೆ. ಅಂತಹ ಕೆಲ ಸ್ಯಾಂಪಲ್‌ಗಳು ಇಲ್ಲಿವೆ ನೋಡಿ.

ಸ್ವಿಡ್ಜರ್ಲೆಂಡ್‌ನಲ್ಲಿ ಭಾನುವಾರದಂದು ಬಟ್ಟೆ ಒಣ ಹಾಕುವುದು, ಕಾರು ತೊಳೆಯುವುದು ಹಾಗೂ ಗಾರ್ಡನ್ ಸ್ವಚ್ಛ ಮಾಡುವ ಹಾಗಿಲ್ಲ. ಅಷ್ಟೇ ಅಲ್ಲ ರಾತ್ರಿ ಹತ್ತರ ನಂತರ ಟಾಯ್ಲೆಟ್ ಫ್ಲಶ್ ಮಾಡುವುದೂ ಇಲ್ಲಿ ಅಪರಾಧವಂತೆ. ಆ್ಯಬ್ಸಿಂಥ್ ಹೆಸರಿನ ವಿಶೇಷ ಬಗೆಯ ಆಲ್ಕೋಹಾಲನ್ನು ಉತ್ಪತ್ತಿ ಮಾಡುವುದು, ಶೇಖರಿಸಿಡುವುದು, ಮಾರಾಟ ಮಾಡುವುದು ಕಾನೂನು ಬಾಹಿರ-ಆದರೆ ಅದನ್ನು ಸೇವಿಸುವುದು ಕಾನೂನು ಬಾಹಿರ ಅಲ್ಲವಂತೆ. ಕಾರಿನ ಡೋರ್ ತೆರೆದು, ಬೀಗವನ್ನು ಒಳಗೇ ಬಿಟ್ಟು ಹೋಗುವುದು ಕಳ್ಳರನ್ನು ಪ್ರಚೋದಿಸಬಹುದಾದ್ದರಿಂದ ಅಂತಹ ಕಾರು ಮಾಲೀಕರನ್ನು ಇಲ್ಲಿ ಶಿಕ್ಷೆಗೆ ಗುರಿಪಡಿಸಲಾಗುತ್ತದೆ.


ಕ್ಲೀನ್ ಕಂಟ್ರಿ ಸಿಂಗಪುರ್‌ನಲ್ಲೊಂದು ಕಾನೂನಿದೆ. ಒಬ್ಬ ವ್ಯಕ್ತಿ ಒಂದು ವಾರದಲ್ಲಿ ಮೂರು ಬಾರಿ ಬೀದಿಯನ್ನು ಯಾವುದೇ ರೀತಿಯಲ್ಲಿ ಗಲೀಜುಗೊಳಿಸುತ್ತಿರುವಾಗ ಸಿಕ್ಕಿ ಬಿದ್ದರೆ ಆತ ಭಾನುವಾರದ ದಿನ ಇಡೀ ಬೀದಿಯನ್ನು ಸ್ವಚ್ಛಗೊಳಿಸಬೇಕು. ಅದೂ ಸುಮ್ಮನೆ ಅಲ್ಲ, ಸ್ವಚ್ಛತೆ ಮುಗಿಯುವವರೆಗೂ 'ನಾನು ಕೊಳಕ, ನಾನು ಕೊಳಕ' ಎಂದು ಹೇಳಿಕೊಳ್ಳುತ್ತಿರಬೇಕು.

ಇನ್ನು ಥಾಯ್‌ಲೆಂಡ್‌ನ ಲೋಕಲ್ ಕಾನೂನು ಮತ್ತೂ ವಿಚಿತ್ರವಾಗಿದೆ. ಅಲ್ಲಿ ಒಳಉಡುಪು ಯಾನೆ ಅಂಡರ್‌ವೇರ್ ಧರಿಸದೆ ಮನೆಯಿಂದ ಹೊರ ಬರುವುದು ನಿಷಿದ್ಧವಂತೆ. ಈ ಅಪರಾಧವನ್ನು ಹೇಗೆ ಪತ್ತೆಹಚ್ಚುತ್ತಾರೆ? ಎಂಬ ಅನುಮಾನವಿದ್ದರೆ ಒಮ್ಮೆ 'ಫ್ರೀ'ಯಾಗಿ ಥಾಯ್‌ಲೆಂಡ್‌ಗೇ ಹೋಗಿಬನ್ನಿ.

ಕೆನಡಾದಲ್ಲಿ ಮರ ಹತ್ತುವುದು ಅಪರಾಧವಾಗಿದ್ದರೆ, ಇಸ್ರೇಲ್‌ನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿಗಳಿಗೆ ಆಹಾರ ನೀಡುವುದು ಕಾನೂನುಬಾಹಿರ. ಅಮೆರಿಕಾದ ಅರಿಜೋನಾ ಪ್ರಾಂತ್ಯದಲ್ಲಿ ಪಾಪಸು ಕಳ್ಳಿಯನ್ನು ಕತ್ತರಿಸಿದವರನ್ನು ಜೈಲಿಗೆ ಹಾಕುತ್ತಾರೆ, ಈ ಜೈಲುಶಿಕ್ಷೆಯ ಗರಿಷ್ಠ ಅವಧಿಯಾದರೂ ಬರೋಬ್ಬರಿ 25 ವರ್ಷಗಳಂತೆ! ಅದೇ ಅಮೆರಿಕಾದ ಅರ್ಕಾನ್ಸಾಸ್ ಸ್ಟೇಟ್‌ನಲ್ಲಿ ನಾಯಿಗಳು ಸಂಜೆ ಆರರ ನಂತರ ಬೊಗಳುವಂತಿಲ್ಲ ಎಂಬ ಕಾನೂನಿದೆ. ಅಕಸ್ಮಾತ್ ನಾಯಿ ಬೊಗಳಿದರೆ ಅದರ ಯಜಮಾನನಿಗೆ ಶಿಕ್ಷೆ.

ಈಗ ಹೇಳಿ ನಮ್ಮ ಸಂವಿಧಾನ ನಮಗೆ ಅದೆಷ್ಟೆಲ್ಲ ಕಿರಿಕಿರಿಯನ್ನು ತಪ್ಪಿಸಿದೆಯಲ್ಲವೆ?

...ತ್ಮಕ್ಕೂ ತೂಕವಿದೆ ಎಂದವನು



...ಬದುಕಿರುವವರೆಗೂ ಮನುಷ್ಯ, ಸತ್ತ ಮೇಲೆ ಶವ! ಇದು ನಮ್ಮಂತಹ ಸಾಮಾನ್ಯರ ಸಿಂಪಲ್ ...ದರೆ ಹಲವು ವಿಜ್ಞಾನಿಗಳಿಗೆ ಇಂತಹ ಸಿಂಪಲ್ ಸತ್ಯಗಳು ರುಚಿಸದು. ಹಾಗಾಗೇ ಅವರು ಸತ್ಯದ ...ಕ ಮಗದಷ್ಟೂ ಸತ್ಯಗಳನ್ನು ಮೊಗೆದುಹಾಕಲು ಮುಂದಿರುತ್ತಾರೆ. ಅಮೆರಿಕಾದ ಡಂಕನ್ ...ಗಲ್ ಎಂಬಾತನೂ ಅಂತಹುದೇ ಹಪಾಹಪಿಗೆ ಬಿದ್ದಿದ್ದ. ಸತ್ತ ನಂತರ ಏನಾಗುತ್ತೋ ಕಂಡವರಿಲ್ಲ, ...ತ್ಮವೊಂದಿದೆ ಎಂದು ಬಹಳಷ್ಟು ಜನ ನಂಬಿದ್ದಾರೆ. ಡಂಕನ್ 'ಅಂತಹ ಆತ್ಮಕ್ಕೂ ತೂಕವಿರುತ್ತಾ?' ...ನ್ನು ಶೋಧಿಸಲು ಹೊರಟಿದ್ದ.

...ಕ್ಕಂದೇ ಆತ 1907ರಲ್ಲಿ ಇನ್ನೇನು ಸಾಯುವ ಘಳಿಗೆಗೆ ಬಂದು ತಲುಪಿದ್ದ ಆರು ಜನರನ್ನು ...ಯೋಗಶಾಲೆಯ ಹಾಸಿಗೆಯ ಮೇಲೆ ಮಲಗಿಸಿ ಅವರ ಇಂಚಿಂಚು ತೂಕ ದಾಖಲಿಸುವ ವ್ಯವಸ್ಥೆ ...ನ್ನ. ತೂಕಯಂತ್ರವನ್ನು ಜೋಡಿಸುವ ಮೂಲಕ ಆ ಹಾಸಿಗೆಗಳನ್ನು ವಿಶೇಷವಾಗಿ ಡಿಸೈನ್ ...ನಾದ್ದರಿಂದ ಆ ಭಾವಿ ಶವಗಳು ಉಸಿರಾಡಿದ ಪ್ರತಿಬಾರಿಯೂ ಏರುಪೇರಾಗುತ್ತಿದ್ದ ತೂಕ ಆತನ ರೆಕಾರ್ಡ್‌ನಲ್ಲಿ ದಾಖಲಾಗುತ್ತಿತ್ತು. ಹೀಗೆ ದಾಖಲಿಸಿದಾಗ ಆ ಆರೂ ಜನರ ...ಸಿರಿನ ತಕ್ಷಣವೇ ದೇಹಗಳು 3/4 ಔನ್ಸ್‌ನಷ್ಟು ತೂಕ ಕಳೆದುಕೊಂಡಿದ್ದವಂತೆ. ಅಲ್ಲಿಗೆ ಆತ್ಮದ ತೂಕ 3/4 ಔನ್ಸ್, ಅಂದರೆ 21.3 ಗ್ರಾಮ್ ಇರುತ್ತೆ ಎಂಬುದಾಗಿ ಆತ ... ಅಷ್ಟು ಮಾತ್ರವಲ್ಲ, ಇದೇ ರೀತಿ 15 ನಾಯಿಗಳನ್ನೂ ಸಾಯುವ ಘಳಿಗೆಯಲ್ಲಿ ತೂಕ ಹಾಕಿ, ಅವುಗಳ ಸಾವುಬದುಕಿನ ಸೆಕೆಂಡುಗಳ ನಡುವೆ ಯಾವುದೇ ರೀತಿಯ ತೂಕ ...ಗಿರಲಿಲ್ಲ, ಆದ್ದರಿಂದ ಮನುಷ್ಯನ ಆತ್ಮ ಮಾತ್ರ ತೂಕ ಪಡೆದಿರುತ್ತೆ ಎಂಬ ಸಿದ್ಧಾಂತವನ್ನು ಸಿದ್ಧಪಡಿಸಿದ್ದ. ಅದು ಅವತ್ತಿನ ಕಾಲಕ್ಕೆ ಪ್ರಸಿದ್ಧಿ ಪಡೆದಿದ್ದ ಕೆಲ ಮೆಡಿಕಲ್ ...ಗಳಲ್ಲಿಯೂ ಪ್ರಕಟವಾಗಿತ್ತು, ಇದನ್ನೇ ಆಧರಿಸಿ "21 ಗ್ರಾಮ್" ಎಂಬ ಇಂಗ್ಲಿಷ್ ಸಿನಿಮಾ ಕೂಡಾ ಬಂದಿತ್ತು.

...ನ ಈ ಪ್ರತಿಪಾದನೆ ವಾಸ್ತವವೋ? ಕೇವಲ ಪ್ರಾಯೋಗಿಕವೋ? ಎಂಬುದು ಇವತ್ತಿಗೂ ಸ್ಪಷ್ಟವಾಗಿಲ್ಲ, ಆದರೆ ಆತನ ಪ್ರಯೋಗಕ್ಕಾಗಿ ಹದಿನೈದು ನಾಯಿಗಳು ಸ್ವಾಭಾವಿಕವಲ್ಲದ ... ಮರಣಹೊಂದಿದ್ದರಿಂದ, ಆತನೇ ಅವುಗಳಿಗೆ ವಿಷವನ್ನು ಇಂಜೆಕ್ಟ್ ಮಾಡಿ ಸಾಯಿಸಿರಬಹುದೆಂಬ ಪ್ರಾಣಿಪ್ರಿಯರ ಕೇಸು ಡಂಕನ್‌ಗೆ ಖ್ಯಾತಿಗಿಂತ ಹೆಚ್ಚಿನ ಕುಖ್ಯಾತಿ ...ಟ್ಟಿತ್ತು.

...ಲುವಿನ ವಿಚಿತ್ರ ಮುಖ ▶▶▶

...ವನ್ನು ಬರೆಯುವ ವೇಳೆಯಲ್ಲಿ ಪಾಕಿಸ್ತಾನ 'ಸಿಂಗರ್' ಕ್ರಿಕೆಟ್ ಚಾಂಪಿಯನ್‌ಶಿಪ್‌ನಲ್ಲಿ ಶ್ರೀಲಂಕಾವನ್ನು ಸೋಲಿಸಿದೆ. ...ರ್ಯ ಸ್ಫೂರ್ತಿಯಿಂದ ಸ್ಫೋಟಗೊಂಡು ಅತ್ಯಂತ ವೇಗದ ಅರ್ಧ ಸೆಂಚುರಿ ಮಾಡಿಹೋದ ಮೇಲೆ ಶ್ರೀಲಂಕಾ ...ತು. ಸೋಲು, ಗೆಲುವನ್ನು ಕುರಿತು ಚಿಂತಿಸತೊಡಗಿದೆ.




ಜಯದ ದ್ವಂದ್ವ ಕುರಿತು ಯೋಚಿಸುತ್ತಿದ್ದೇನೆ. ಜಯದ ಕ್ಷಣ ಪರಿಶುದ್ಧವಾದದ್ದು. ನಿನ್ನ ತರಬೇತಿ, ಆಶಯ, ಕನಸುಗಳೆಲ್ಲ ಪಕ್ವತೆ ಪಡೆದ ಗಳಿಗೆ, ಸುಂದರಿ ಎಷ್ಟು ಕ್ಷಣದ ಸುಂದರಿ, ಯಾವ ಕ್ಷಣದಲ್ಲಿ ಆಕೆ ತನ್ನ ಮೋಹಕತೆಯ, ದೇಹ, ಮನಸ್ಸು, ಆತ್ಮದ ಪರಮಸ್ಥಿತಿ ತಲುಪಿದ್ದಳು ಎಂದು ಹೇಳಲಾಗುವುದಿಲ್ಲ. ಕ್ರಿಕೆಟ್‌ನಲ್ಲಿ ಅಂಪೈರ್‌ಗಳು ಶ್ರೀಲಂಕಾ ಹುಡುಗರ ಪರಮೋಚ್ಚ ಕ್ಷಣಕ್ಕೆ ಸಾಕ್ಷಿಯಾಗಿದ್ದರು. ಅವರು 'ವಿಶ್ವಕಪ್' ಗೆದ್ದ ಕ್ಷಣದ ಬಗ್ಗೆ ಹೇಳುತ್ತಿದ್ದೇನೆ..... ಅದು ಆ ಹುಡುಗರ ಶುದ್ಧ ಆನಂದದ ಗಳಿಗೆ. ಅಲ್ಲಿಂದ ಚಾಂಪಿಯನ್‌ಗಳೆಂದು ಹೆಸರು ಪಡೆದು ಎಲ್ಲರ ನಡುವೆ ಎದೆಯುಬ್ಬಿಸಿ ಹೊರಟ ಕ್ಷಣವೇ ಅವರ ಕಷ್ಟ ಶುರುವಾಯಿತು; ವೀರಾಗ್ರಣಿಗಳ ತರಹ ನಡೆಯಬೇಕು, ದೇಶದ ಕಣ್ಮಣಿಗಳಂತೆ ಮಾತಾಡಬೇಕು, ತಮ್ಮ ಸಾಧನೆಯ ಬಗ್ಗೆ ಸುಳ್ಳು ನಿಜ ಎಲ್ಲವನ್ನೂ ...ಳ್ಳಬೇಕು, ತಂದೆತಾಯಿಗಳ ಹಂಬಲ, ಜೊತೆಯವರ ಪ್ರೀತಿ, ಊರವರ ಪ್ರೋತ್ಸಾಹ- ಎಲ್ಲದರ ...ರ್ತಿ ನಿಜವಲ್ಲದ, ಪೂರ್ತಿ ಸುಳ್ಳಲ್ಲದ ಮಾತು ಆಡಬೇಕು. ಗೆಲುವಿನ ಪರಿಶುದ್ಧ ಪ್ರಭೆ ...ಸಿಕತೆಯ ಕೆಸರಿನಲ್ಲಿ ಹೂತುಹೋಗತೊಡಗುತ್ತದೆ. ನೀನಿಂಥ ದೇಶಪ್ರೇಮಿ ಎಂದು ಎಂದಾದರೂ ...ಸಿದ್ದೆಯ? ಆಟ ಆಡಿದ ಒಬ್ಬ ಹುಡುಗ ತನ್ನ ಆಟ ದೇಶಪ್ರೇಮದ ಒಂದು ಭಾಗವೆಂದು ಎಂದೂ ...ಲ್ಲ, ಸೊರಬದ ಗುಡಿಗಾರ ಶ್ರೀಕೃಷ್ಣನನ್ನು ಮಾಡಿದ. ಮೂರ್ತಿಯನ್ನು ಕೆತ್ತುವುದೇ ಆತನ ...ಷ. ಅದರಿಂದ ಹಣ ಬರುವುದು ಆನುಷಂಗಿಕ. ಮತ್ತು ಅದರಿಂದ ಕಲಾಸೇವೆ, ಸಮಾಜಸೇವೆ, ...ರಿಯ ಮುಂದುವರಿಕೆ- ಎಲ್ಲವೂ byproducts. ಇದು ಮನುಷ್ಯನ ಎಲ್ಲ ಗೆಲುವಿನ ವಿಷಾದದ ...ನ್ನ ಯಶಸ್ಸಿನ ಸೆಂಟು. ಬರೆದ ಅತ್ಯುತ್ತಮ ಕತೆ ಹರ್ಷದಾಯಕ, ಆದರೆ ಆ ಕ್ಷಣದಿಂದಲೇ ಅದು ...ಸುತ್ತದೆ. ನನ್ನಂತೆ ಅದು ಜೀವಿಯಲ್ಲ, ಆದರೆ ನಿರ್ಜೀವ ವಸ್ತುವಿನಂತೆ ಜಡವಲ್ಲ.... ಶ್ರೀಲಂಕಾ ...ಗರು ಸೂಕ್ಷ್ಮಪ್ರಕೃತಿಯವರಾಗಿದ್ದರೆ ತಮ್ಮ ಕ್ಷೇಮಕ್ಕಾಗಿ ಪರದಾಡಬೇಕಾಗಿ ಬಂದು ...ಗೊಳ್ಳುವುದು. ಅವರ ಗೆಲುವಿನ ದುಃಖಗಳಲ್ಲಿ ಒಂದು. ಯಾಕೆಂದರೆ ಯಾವ ಗೆಲುವನ್ನೂ ಪಡೆಯದ ಚಿಕ್ಕ ...ಅಪರಿಚಿತರಿಗೇ ಹೇಗೆ ಹಕ್ಕಿಯಂತೆ ಬಯಲಿನ ತುಂಬ ಹಾರಾಡಿ ನೆಮ್ಮದಿಯಾಗಿದ್ದಾನೆ! ಅವನಲ್ಲಿರುವ ...ಂತ ಸಂಗೀತ ಮತ್ತು ಹುಮ್ಮಸ್ಸನ್ನು ಎಷ್ಟು ಟ್ರೋಫಿಗಳನ್ನು ಕೊಟ್ಟರೆ ಮತ್ತೆ ಬಂದೀತು?



◀◀◀ ಕುಬಸದ ಕಣದ ಧ್ಯಾನ

ನಾನು ನಮ್ಮ ಸಾಹಿತಿಗಳಿಗೆ ವಿಶ್ವವಿದ್ಯಾನಿಲಯಗಳು, ವಾಣಿಜ್ಯ ತೆರಿಗೆ ಇಲಾಖೆಗಳು ಹೂವುಹಣ್ಣು ಸೀರೆ ಕುಬಸ ಕೊಟ್ಟು ಗೌರವಿಸುವುದನ್ನು ತಮಾಷೆ ಮಾಡಿ ಬರೆದದ್ದನ್ನು ನೀವು ಗಮನಿಸಿರಬಹುದು. ತಾಂಬೂಲ, ಸೀರೆ, ಕುಬಸ, ಬೆಳ್ಳಿಯ ತಬಕುತಟ್ಟೆ ಕೊಡುವುದೆಲ್ಲ ಸರಿಯೆ; ಅದು ನಮ್ಮ ಸಂಪ್ರದಾಯದಲ್ಲಿ ಗೌರವ ತೋರುವ ಬಗೆ. ಈ ಸೀರೆ ಕುಬಸದ ಬಗ್ಗೆ ನನಗೆ ಮತ್ತೆ ಕೇಳಿಸಿದ್ದು ಮಾಯಾಬಜಾರ್‌ನ ಹಾಡುಗಳನ್ನು ಕೇಳುತ್ತಿದ್ದಾಗ. ಅಲ್ಲಿ ಪಿ.ಲೀಲಾ ಮುಂತಾದವರು ಹಾರಗಳು, ಮಣಿ ಹಾರಗಳು ಎಂದು ಹಾಡುತ್ತಾ ಒಳ್ಳೆ ಸೀರೆಗಳು, ಒಳ್ಳೆ ಕು-ಸು-ಬಗಳು ಎಂದು ಹಾಡುತ್ತಾರೆ. ಚಿ. ಸದಾಶಿವಯ್ಯನವರು ಬರೆದು ಕೊಟ್ಟ ಮೇಲೆ ತೆಲುಗು ಹಾಡುಗಾರರು ಕನ್ನಡದಲ್ಲಿ ಹಾಡುವಾಗ ಕುಬಸಕ್ಕೆ ಬದಲು ಕುಸುಬ ಎಂದು ಹಾಡುತ್ತಾರೆ. ಕನ್ನಡದಲ್ಲಿ ಇದು ಕುಪ್ಪುಸ, ಕುಪ್ಪಸವಾಗಿ, ಕುಬಸವಾದ್ದೆಂಬುದು ಸಾಮಾನ್ಯ ಮಾತು; ಆದರೆ ಕುಬಸ ಸೀರೆಯ ಪಾತ್ರ ಹಿರಿದು. ಗ್ರಾಮ ಸಂಸ್ಕೃತಿಯಲ್ಲಿ ಗೌರವ ಪ್ರೀತಿ ತೋರುವ ಕಾಣಿಕೆಗಳಾಗಿದ್ದಾಗ ಚೆನ್ನಾಗಿತ್ತು, ಬೆತ್ತಲೆ ಸೇವೆ, ಸತೀಸಹಗಮನದಂತೆಯೇ ಕುಬಸಾರ್ಪಣೆ. ಆರತಿ ಬೆಳಗುವುದು ಇತ್ಯಾದಿಗಳು ಚೋರರ ಕೈಯಲ್ಲಿ ಸಿಕ್ಕು ಕೇಡಿ ಕೃತ್ಯಗಳಾದವು. ಒಬ್ಬ ಪ್ರಖ್ಯಾತ ಸಾಹಿತಿ ಬ್ಲ್ಯಾಕ್ ಮಾರ್ಕೆಟ್‌ನವರ ಕಾಣಿಕೆ ಸ್ವೀಕರಿಸಿದಾಗ, ಇನ್ನೊಬ್ಬ ಗಾಯಕ ಹೆಂಡದ ತಯಾರಕರ ಮುಖವಾಣಿಯಾದಾಗ, ಮತ್ತೊಬ್ಬ ಖ್ಯಾತ ಬೆತ್ತಲೆ ಸೇವೆಯನ್ನು ವಿದೇಶಗಳಲ್ಲಿನ ಸೆಮಿನಾರಿನಲ್ಲಿ ತನ್ನ ಪಾಂಡಿತ್ಯ ಪ್ರದರ್ಶನಕ್ಕೆ ಬಳಸಿಕೊಂಡಾಗ... ಕೆಟ್ಟ ವಾತಾವರಣ ಸೃಷ್ಟಿಯಾಗುತ್ತದೆ. ಇಲ್ಲಿ ಪ್ರೀತಿ, ಗೌರವ, ವಿಮರ್ಶೆ, ಸಂಸ್ಕೃತಿಗೆ ಸ್ಥಾನವಿಲ್ಲದಂತಾಗುತ್ತದೆ. ಜ್ಞಾನಪೀಠ ಪ್ರಶಸ್ತಿ ಪಡೆದ ಎಂ.ಟಿ.ವಾಸುದೇವನ್ ನಾಯರ್ ಮೊನ್ನೆ ಆರತಿ ಎತ್ತುವ ಹಿರ್ದಿನ ಸೀರೆ ಉಟ್ಟ ಹುಡುಗಿಯರ ನಡುವೆ ಮಂದಸ್ಮಿತರಾಗಿದ್ದು ನೋಡಿದಾಗ 'ದೃಶ್ಯ ಅಂದವಾಗಿದೆ' ಅಂದವರುಂಟು. ನಾನು ಸುಮ್ಮನಿದ್ದೆ, ಆಮೇಲೆ ಗೊತ್ತಾದ್ದರ ಪ್ರಕಾರ ನಮ್ಮ ಕ್ಲಾಸಿಕ್ ಕಂಪ್ಯೂಟರ್ ಖ್ಯಾತಿಯ ಅಲೆಗ್ಸಾಂಡರ್ ಆ ಆರತಿಯವರನ್ನು ಕರೆತಂದಿದ್ದವನು. ನಾನು ಏನನ್ನೂ ಹೇಳದೆ ಕೂತೆ. ನಿಮಗೆ ವಿವರಿಸುವ ಅಗತ್ಯ ಇರಲಾರದು.



ಕುಬಸ ಎಂಬುದು ಕುಸುಬ ಆದಾಗ ನನಗೆ ನಗೆ ಬಂತು; ಸೀರೆ ಕುಬಸ ಉಂಗುರ ಬೆಳ್ಳಿತಟ್ಟೆ ಮುಂತಾದವು ಅಲೆಗ್ಸಾಂಡರ್ ತರಹದವರ ಕೈ ಸೇರಿದಾಗ ವಿಷಾದವಾಯಿತು. ಅದಕ್ಕೇ ಹೇಳಿದೆ.


-ಏಪ್ರಿಲ್ 17, 1996

ಪೇಜಾವರ v/s ನಿಡುಮಾಮಿಡಿ

ಪರಸ್ಪರ ಕಿತ್ತಾಡುವುದು ರಾಜಕಾರಣಿಗಳ ಪೇಟೆಂಟ್ ಅಲ್ಲ, ಕಾವಿಧಾರಿಗಳೂ ತಾವು ಕೀಳದಂಗೆ ಕಚ್ಚಾಡ್ತಾ ಬದ್ದವ್ರು. ಪೇಜಾವರ ಶ್ರೀಗಳು ಈ ಹಿಂದೆ ಮಡೆ ಸ್ನಾನ ನಿಷೇಧದಿಂದ ಲಾಭವ್ವೂ ಇಲ್ಲ, ನಷ್ಟವ್ವೂ ಇಲ್ಲ ಎಂದು ಧಾರ್ಮಿಕ ತೀರ್ಪು ನೀಡಿದ್ದು ಸರಿಯಷ್ಟೆ. ಹಿಂದೆಲ್ಲ ಇಂತಹ ಮಾತುಗಳನ್ನು ಆಡಿದ್ದರೆ ಬ್ರಾಹ್ಮಣರು ಅಂದರೆ ದೊಡ್ಡವರು, ಅವರ ಸ್ವಾಮಿಗಳು ಅಂದಮೇಲೆ ದೊಡ್ಡೋರ್ಗೆ ದೊಡ್ಡೋರು, ಅವರ ಮಾತು ಅಂದ್ಮೇಲೆ ನಮ್ದೇನೂ ಇಲ್ಲ ಅಂತಾವ ಇತರೆ ಸ್ವಾಮಿಗಳು ತೆಪ್ಪಗಿರುತ್ತಿದ್ದರು. ಕಲಿಗಾಲದ ಪ್ರಭಾವ ಅಂತ ಕಾಣಿಸುತ್ತೆ, ನಿಡುಮಾಮಿಡಿ ಸ್ವಾಮಿ ಪೇಜಾವರ ಸ್ವಾಮಿ ಅನ್ನೋನು 'ಧರ್ಮಾಚಾರ್ಯ' ಅಲ್ಲ 'ದ್ವಂದ್ವಾಚಾರ್ಯ' ಅಂದದ್ದೂ ಅಲ್ಲದೆ ಅವರ ನಿಲುವನ್ನು ಹಿಗ್ಗಾಮುಗ್ಗಾ ತೀಡವ್ರೆ. ಕೆಳಜಾತಿಸ್ವಾಮಿ ಅವನು. ಹಿಂಗೆಲ್ಲ ಅಂದವ್ನಲ್ಲ ಅಂತ ಕೋಪ ಅನ್ನೋದು ಪೇಜಾವರರಿಗೆ ಉಕ್ಕಿ ಉಕ್ಕಿ ಬಂದದೆ. ಆದರೂ ಅದನ್ನು ಬಹಿರಂಗಪಡಿಸದೆ 'ಹೀಗೆಲ್ಲ ಆರೋಪಿಸುವುದು ಸೂಕ್ತವಲ್ಲ. ಬೇಕಾದರೆ ಬಹಿರಂಗ ಚರ್ಚೆಗೆ ಬನ್ನಿ' ಅಂದವ್ರೆ. ಹಿಂಗೆ ಹೇಳಿದ ಮೇಲೆ ಆದ್ರೂ 'ಓಹೋ ಈ ಸ್ವಾಮಿ ಬ್ಯಾರೆ ಸ್ವಾಮಿಯೋರಂಗಲ್ಲ. ಮಿದ್ಲ ಒಳಗೆ ಏನೇನೊ ತುಂಬ್ಕಂಡವ್ನೆ. ಇವನ ಸವಾಸ ಕ್ವೋದ್ರೆ ಕೆಟ್ವೋ' ಅನ್ನೋದ ತಿಳ್ಕೊಬಾರ್ದ. ಅದೆಲ್ಲೋ ಪೆದ್ದುಮುಂಡೆದಿರಬೇಕು. ಅದು ಗೊತ್ತಾಗ್ದಿಲ್ಲ, ಪೆದ್ದುಪೆದ್ದಾಗಿ ಜನವರಿ ಏಳನೇ ತಾರೀಖು ಬರ್ರಿ ಬೆಂಗಳೂರಿಗೆ; ಚರ್ಚೆಗೆ ಸಿದ್ದರಾಗಿ ಅಂದುಬುಟ್ಟೋದೆ!

ಹಂಗೆ ಅಂದವ್ರೆ ಅಷ್ಟೇಯ. ಅವರಿಗೇನೂ ಆಹ್ವಾನ ಪತ್ರ ನೀಡಿಲ್ಲವಂತೆ. ಅದ್ಕೆ ಅವ್ರು 'ಅವರೇನು ನನ್ನನ್ನ ಬಾ ಅಂತ ಕರ್ದು ಕಾಗ್ದ ಹಾಕಿದ್ರ, ಇಲ್ವಲ್ಲ, ಮಾಧ್ಯಮಗಳ ಮುಂದೆ ಹೇಳಿಕೆ ಕೊಟ್ಟವ್ರೆ. ನಾವೂ ಹಂಗೇ ಮಾಡ್ತೀವಿ' ಎಂಬ ವಾದ ಇಡಬಹುದು. ಅರೆ ದೊಡ್ಡ ಸ್ವಾಮಿಗಳು ಪೇಪರ್ನೋರ್ಗೆ ಹೇಳಿದ್ರೂವೆ ನಿಮ್ಗೆ ಕಾಗ್ದ ಬರ್ದಂಗೇಯ. ಅದೇ ನಮ್ಗೂ ಅಷ್ಟೇ ಆಗಲಿ ಅಂದ್ರೆ ಮೇಲ್ಜಾತಿ ಕೀಳ್ಜಾತಿ ಅಂತ ಯಾಕಾಯ್ತು? ಹಂಗಾರೆ ಅವರ ಸ್ವಾಮಿಗಳಿಗೂ ಇವರ ಸ್ವಾಮಿಗಳಿಗೂ ವ್ಯತ್ಯಾಸಾನೇ ಇಲ್ಲ ಅಂದಂಗೆ ಆಯ್ತಪಾ.


"ಪೇಜಾವರಶ್ರೀಗಳು ಇಂತೋರ ಸಾವಿರ ಜನ ಕಂಡವ್ರೆ. ನಿಡುಮಾಮಿಡಿ ಸವಾಲಿಗೆ ಇವರಿಗೇನು ಹೆದರಿಕೆಯಾ? ಚರ್ಚೆಗೆ ರೆಡಿಯಾಗೇ ಇರ್ತಾರೆ. ಆದರೆ ಅವರಿಗೆ ಒಂದು ಅನುಮಾನ. 'ನನ್ನ ಸವಾಲಿಗೆ ಸರಿಯಾದ ಜವಾಬು ಕೊಡಲಾಗದೆ ಯಾವುದೋ ನಿಡುಮಾಮಿಡಿ ಸ್ವಾಮಿ ಅನ್ನಿಸಿಕೊಂಡೋನು ರಾಜಕೀಯ ಬೆರೆಸಾನು ಅಂತಾವ. ಅದ್ಕೆ ಅದು ಆಗಬಾರದು' ಅಂದವ್ರೆ. ಅಲ್ದೆ ಇವನೊಬ್ಬನ ಮಾತಿಗೆ ಜವಾಬು ನೀಡಲು ಅಷ್ಟು ದೂರ ಹೋಗಬೇಕಾ ಅನ್ನೋ ಸಂಕಟ ಎದುರಾಗಿದೆ. ಅದ್ಕೆ ಸಾಣೆಹಳ್ಳಿ ಸ್ವಾಮೀನೂ ಬರ್ಲಿ ಅಂದವ್ರೆ. ಅಲ್ಲಿಗೆ ಒಬ್ಬ ಬ್ರಾಹ್ಮಣ ಸ್ವಾಮಿಗೆ ಕನಿಷ್ಠ ಇಬ್ಬರು



ಲಿಂಗಾಯತ ಸ್ವಾಮಿಗಳಾದರೂ ಇದ್ದಹಾಗೆ ಆಗುತ್ತೆ, ಇದ್ರಲ್ಲಿ ಜಾತಿ ಸೂಕ್ಷ್ಮ ಇದ್ದರೂ ಇರಬಹುದು!

ಈ ಹಿಂದೆ ಜಾತಿ ವಿನಾಶ ವೇದಿಕೆಯ ಲಕ್ಷ್ಮಣ ಅನ್ನೋನು ಅಂಬೇಡ್ಕರ್ ತಿಥಿ ದಿನ ಸಹಭೋಜನಕ್ಕೆ ಪೇಜಾವರ ಶ್ರೀಗಳನ್ನು ಕರೆದಿದ್ದರೂ ತಿಥಿ ಊಟವನ್ನು ಯತಿಗಳು ಮಾಡಬಾರದು ಅನ್ನೋ ಧರ್ಮ ಸೂಕ್ಷ್ಮ ತಿಳಿದ ಮುಕ್ಕ ಅದು. ಆದರೂ ಸ್ವಾಮೀಜಿ ಹೋಗಲು ರೆಡಿಯಾಗಿದ್ದರು. ಆದರೇನು ಮಾಡ್ತೀರ, ಲಕ್ಷ್ಮಣ ನೀಡಿದ್ದ ಆಹ್ವಾನ ಪತ್ರಿಕೆಯೇ ಸ್ವಾಮಿಗಳ ಕೈ ಸೇರಿರಲಿಲ್ಲ! ಯಾಕಿಂಗಾಯ್ತು ಅಂತ ಕೊರಿಯರ್‌ನವನ್ನ ಕೇಳಿದ್ರೆ ತಲಪಿಸ್ದೆ ಅಂತಾನೆ. ಸ್ವಾಮಿಗಳು ಬಂದಿಲ್ಲ ಅಂತಾರೆ. ಮತ್ತೆ ಹಂಗಾಗಬಾರ್ದು, ಪೇಜಾವರ ಶ್ರೀಗಳಿಗೆ ಸುಖಾಸುಮ್ಮನೆ ಕೆಟ್ಟ ಹೆಸರು ಬರಬಾರದು. ಸರಿಯಾದ ವಿವರ ತಿಳಿಸುವುದು ನಿಡುಮಾಮಿಡಿ ಜವಾಬ್ದಾರಿ. ಒಂದು ವೇಳೆ ಪೇಜಾವರ ಶ್ರೀಗಳು ಬಾರದೆ ಇದ್ದಲ್ಲಿ ಕಾಗದ ಅವರ ಕೈಸೇರಿಲ್ಲ ಎಂದೇ ತಿಳಿಯಬೇಕು. ಇದಕ್ಕೆ ನಿಡುಮಾಮಿಡಿಯೇ ಹೊಣೆ!

ಅಂದಹಾಗೆ ಪೇಜಾವರ ಶ್ರೀಗಳು ಜನವರಿ 7ರ ನಂತರ ದಿನ ಗೊತ್ತುಪಡಿಸುವಂತೆ ಹೇಳಿದ್ದಾರೆ. ನೀವು ಏಳನೇ ತಾರೀಖು ಎಂದಿದ್ದೀರಿ. ನೀವು ಹೇಳಿದ್ದೇ ನಡೆಯಬೇಕಾ? ಮೇಲ್ಜಾತಿಯವರು ಹೇಳಿದಂಗೆ ಕೆಳಜಾತಿಯವರು ಕೇಳಬೇಕೋ? ಕೆಳಜಾತಿಯವರು ಹೇಳಿದಂಗೆ ಮೇಲ್ಜಾತಿಯವರು ಕೇಳಬೇಕೋ? ಇದು ಸಂಪ್ರದಾಯದ ಪ್ರಶ್ನೆ. ಇದುವರೆವಿಗೂ ನಡೆದಂತೆ ನಡೆದುಕೊಳ್ಳಿ ನಿಡುಮಾಮಿಡಿಯವರೆ. ಪೇಜಾವರ ಶ್ರೀಗಳ ಅಪೇಕ್ಷೆಯಂತೆ ಏಳರ ನಂತರ ದಿನ ನಿಗದಿಪಡಿಸಿ ಅವತ್ತು ಶ್ರೀಗಳಿಗೆ ಇದಕ್ಕಿಂತಲೂ ಬಲವತ್ತರವಾದ ಧಾರ್ಮಿಕ ಕಾರ್ಯ ಬಿದ್ದರೆ... ದಿನಾಂಕ ಮುಂದೂಡಿ!



ಎಚ್.ಎಲ್. ಕೇಶವಮೂರ್ತಿ


ಅಣಕ

ಆತುರದ ಅಳಿಯ ಅತ್ತೆ ಹಿಡ್ಕೊಂಡ

'ಇನ್ನು ಆರು ತಿಂಗಳಿಗೆ ನಾನೇ ಮುಖ್ಯಮಂತ್ರಿ ಆಗ್ತೀನಿ' ಅಂದಿದ್ರು ಯಡ್ಯೂರಪ್ಪನವರು. ನಾಲ್ಕೂವರೆ ತಿಂಗಳ ಹಿಂದೆ ಆದರ ವಾಸನೆ ಏನೂ ಯಾರ ಮೂಗಿಗೂ ಬಡಿಯುತ್ತಿಲ್ಲ. ಎಲಎಲಾ ಇದೇನು ಹಿಂಗಾಯ್ತು ಬಿದ್ದದಲ್ಲ ಅಂತಾವ ಡೆಲ್ಲಿಗೆ ಹಾರಿದ್ರು. ಕಂಡುಕಂಡೋರ ಕೈಕಾಲು ಹಿಡಿದ್ರು. ಅವರು ನೀನೇ ಲಾಯಕ್ಕಾದ ಮನ್ಸಕನಯ್ಯ, ಆದ್ರೇನು ಮಾಡೀಯೇ ಮೈಗೆಲ್ಲ ಗಣಿಧೂಳು ಮೆತ್ಕಂಡದಲ್ಲ, ಅದ ಒದರಿಕೊಂಡು ಬಾ ಅಂದ್ರು. ಎಷ್ಟು ಒದರಿದರೂ ಬೀಳೋ ಧೂಳಲ್ಲ ಇದು ಅನ್ನೋದು ಅವರಿಗೆ ಗೊತ್ತಿತ್ತು. ಇವರನ್ನ ಹಿಡಿದ್ರೆ ಕೆಲ್ಸ ಕೆಡ್ತದೆ ಅಂತ ದೇವರುಗಳ ಹಿಂದೆ ಬಿದ್ರು. ಎಂತೆಂತಹದ್ದೋ ಯಾಗ ಮಾಡಿದ್ರು. ವಾಜಪೇಯ ಸೋಮಯಾಗನೂ ಮಾಡಿದ್ರು. ಇದ ಮಾಡಬೇಕಾದ್ರೆ ಹೆಂಡತಿ ಜೊತೇಲಿ ಇರಬೇಕಂತೆ. ಪಾಪ ಇವರಿಗೆ ಹೆಂಡತಿ ಇರ್ಲಿಲ್ಲ, ಅದ್ಕೆ ಹೆಂಗಾರ ಇರ್ಲಿ ಅಂತ ಶೋಬಕ್ಕಾನ್ನೆ ಕುಂಡಿರಿಸಿಕೊಂಡ್ರು. ಹಂಗೆ ಯಾಗ ಮಾಡಿದ್ರಿಂದ ಯಾಗವಾದ ಯಾಗವೇ ಕುಲಗೆಟ್ಟು ಹೋಯಿತಂತೆ. ಶ್ರೀರಾಮಚಂದ್ರ ಅಗಸನ ಮಾತ ಕೇಳಿ ಸೀತಾಮಾತೆಯನ್ನು ಕಾಡಿಗೆ ಅಟ್ಟಿದನ್ನಲ್ಲ, ಹಿಂಗೆ ಹೆಂಡತಿ ಓಡಿಸಿದ ಮೇಲೆ ಯಾಗ ಮಾಡಬೇಕಾಯಿತಂತೆ. ಆದರೆ ಹೆಂಡತಿ ಇರ್ಲಿಲ್ಲ, ಅವನಿಗೇನು ಹೆಣ್ಣುಗಳ ಬರ ಇದ್ವಾ, ರಾಜನಾಗಿದ್ದೋನು. ಕರೆದ್ರೆ ಸಾಕು ಬೇಜಾನು ಜನ ಬರ್ತಿದ್ರು. ಆದರೆ ಅವನು ಒಬ್ಬಳೇ ಹೆಂಡತಿ, ಒಬ್ಬನೇ ಗಂಡ ಅನ್ನೋ ಏಡ್ಸ್ ನಿರೋಧ ಪಾಲಿಸಿ ಇದ್ದೋನು. ಅದ್ಕೇ ಅವನು ಸೀತಾದೇವಿ ತರಹಾನೇ ಒಂದು ಬಂಗಾರದ ಮತ್ಥಳಿ ಮಾಡ್ಸಿದ್ನಂತೆ. ಅದ ಬಲಕ್ಕೆ ಕೂರಿಸಿಕೊಂಡು ಯಾಗ ಮಾಡಿದ್ನಂತೆ. ಹಿಂಗೆ ಮಾಡಿದ್ಕೆ ಯಾಗದ ಪೂರ್ಣಫಲ

ಬುದ್ಧಿವಂತರ ಜಿಲ್ಲೆಯಲ್ಲಿ ಯಾಕೆ ಬುದ್ಧಿಗೇಡಿ ಆಚರಣೆ?

ಬುದ್ಧಿವಂತರ ಜಿಲ್ಲೆಯ ಜನರು 'ಮಡೆ ಸ್ನಾನ'ದಂತಹ ಆವರಣೆಗಳನ್ನು ಸಾಂಪ್ರದಾಯಿಕ ನೆಲೆಗಿಂತ 'ಮೂಲಭೂತವಾದದ' ನೆಲೆಯಲ್ಲಿ ನೋಡಬೇಕಿದೆ. ಪೇಜಾವರ ಶ್ರೀಗಳು ಈ ಕುರಿತು "ನಾನು ತಟಸ್ಥ", "ಮಡೆಸ್ನಾನ ನಿಷೇಧಿಸಿದರೆ ನನ್ನ ಅಭ್ಯಂತರವಿಲ್ಲ" ಎಂದು ಹೇಳಿರುವುದು ದ್ವಂದ್ವ ನಿಲುವಾಗಿದೆ. ಇನ್ನು ಸದನದಲ್ಲಿ ಮಡೆಸ್ನಾನವನ್ನು ಸಮರ್ಥಿಸಿಕೊಂಡ ಬಿಜೆಪಿಯ ನಾಯಕತ್ವ ಅವಿವೇಕತನದಿಂದ ಕೂಡಿದೆ. ನಮ್ಮನ್ನಾಳುವವರು ಮತಿಭ್ರಷ್ಟರಾದರೆ, ಮೂಲಭೂತವಾದಿಗಳಾದರೆ ಜನಸಾಮಾನ್ಯರ ಗತಿ ಏನು?



ದಕ್ಷಿಣ ಕನ್ನಡ ಜಿಲ್ಲೆಯ ಸ್ವಯಂಘೋಷಿತ ಮೂಲಭೂತವಾದಿ ಬುದ್ಧಿವಂತರಿಗೆ ತಾವು ವಿಜ್ಞಾನ ಯುಗದಲ್ಲಿ ಬದುಕುತ್ತಿದ್ದೇವೆ ಎಂಬುದರ ಅರಿವಿಲ್ಲವೇ? ಅಥವಾ ಅವರು ನಾಗರಿಕ ಸಮಾಜದಲ್ಲಿ ಬದುಕುತ್ತಿಲ್ಲವೇ? ಅಥವಾ ವಿಜ್ಞಾನದ ಬಗ್ಗೆ ಅವರಿಗೆ ನಂಬಿಕೆ ಇಲ್ಲವೇ? ಆದ್ದರಿಂದಲೇ ಆ ಬುದ್ಧಿವಂತರು 'ಬುದ್ಧಿಗೇಡಿ ಮಡೆಸ್ನಾನ' ಪದ್ಧತಿಯನ್ನು ಸಮರ್ಥಿಸುತ್ತಿದ್ದಾರೆಯೇ?

- ಸುಂದರೇಶ್, ಮೂಡಿಗೆರೆ

ಡಿಸೆಂಬರ್ 23ರಂದು ವಿಪಕ್ಷದ ನಾಯಕ ಸಿದ್ದರಾಮಯ್ಯನವರು "ಯಡಿಯೂರಪ್ಪ ಮತ್ತೆ ಮುಖ್ಯಮಂತ್ರಿ ಆಗಲು ನಾಲ್ಕೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಲ್ಲಡ್ಕದಲ್ಲಿ ಯಾಗ ಮಾಡಿಸುತ್ತಿದ್ದಾರೆ" ಎಂದು ಪತ್ರಕರ್ತರ ಮುಂದೆ ಹೇಳುತ್ತಿದ್ದರೆ ಅದೇ ಹೊತ್ತಿನಲ್ಲಿ ಕಾಂಗ್ರೆಸ್‌ನ ಮಾಜಿ ರಾಜ್ಯಾಧ್ಯಕ್ಷ ಆರ್.ವಿ.ದೇಶಪಾಂಡೆ ಅವರು ಅದೇ ಯಾಗದಲ್ಲಿ ಭಾಗವಹಿಸಿದ್ದರು. ಇಂತಹ ವಿಪರ್ಯಾಸಕ್ಕೆ ಏನೆನ್ನಬೇಕು?

ಆ ಯಾಗ ನಡೆದದ್ದು ಯಾವುದೋ ಧಾರ್ಮಿಕ ಕ್ಷೇತ್ರದಲ್ಲಲ್ಲ, ಬದಲಾಗಿ ಇತ್ತೀಚೆಗಷ್ಟೇ ರಾಮಚಂದ್ರಾಪುರ ಮಠದ ನೇತೃತ್ವದಲ್ಲಿ ಆರಂಭವಾದ ಗೋಶಾಲೆಯಲ್ಲಿ, ಅದು ಕೂಡ ಕರಾವಳಿಯ ಸಂಘಪರಿವಾರದ ನಾಯಕರೊಬ್ಬರ ನೇತೃತ್ವದಲ್ಲಿ, ಆ ನಾಯಕನ ಹಿನ್ನೆಲೆಯನ್ನು ನೋಡಿದರೆ ಗಾಬರಿ ಆಗುತ್ತದೆ.

ಇತ್ತೀಚೆಗೆ ಕೋಮು ಹಿಂಸಾಚಾರ ತಡೆ ಮಸೂದೆಯನ್ನು ವಿರೋಧಿಸಿ ಮಂಗಳೂರಿನ ನೆಹರೂ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದ ಆ ಸಂಘಪರಿವಾರದ ನಾಯಕ ಕಾಂಗ್ರೆಸ್ ಪಕ್ಷದ ವರಿಷ್ಠೆ ಸೋನಿಯಾ ಗಾಂಧಿಯವರ ಬಗ್ಗೆ ತುಚ್ಛವಾಗಿ ಮಾತನಾಡಿದ್ದ. ಕೇಂದ್ರ ಸಚಿವ ವೀರಪ್ಪ ಮೊಯ್ಲಿ ಅವರದ್ದು ಕೊಳ್ಳೆಗಾಲದ ವೀರಪ್ಪನ್ ಬುದ್ಧಿ ಎಂದು ಹೀಯಾಳಿಸಿದ್ದ. ಅಂತಹ ಮನುಷ್ಯನ ನೇತೃತ್ವದಲ್ಲಿ ನಡೆದ ಯಾಗದಲ್ಲಿ ಭಾಗವಹಿಸಲು ಕೆಪಿಸಿಸಿಯ ಮಾಜಿ ಅಧ್ಯಕ್ಷ ಉತ್ತರ ಕನ್ನಡದಿಂದ ದಕ್ಷಿಣ ಕನ್ನಡಕ್ಕೆ ಓಡೋಡಿ ಬರುತ್ತಾರೆಂದರೆ ಏನೆನ್ನಬೇಕು?

ಅಷ್ಟಕ್ಕೂ, ಆ ಯಾಗ ನಡೆದಲ್ಲಿ ಯಾವ ಧಾರ್ಮಿಕ ಉದ್ದೇಶದಿಂದಲ್ಲ, ಬದಲಾಗಿ ಅದು ಶುದ್ಧ ವ್ಯವಹಾರಿಕ ಮತ್ತು ರಾಜಕೀಯ ಉದ್ದೇಶದಿಂದ ಕೂಡಿದ್ದ ಯಾಗವಾಗಿತ್ತು. ಇದು ಗೊತ್ತಿದ್ದೂ ಕಾಂಗ್ರೆಸ್ ನಾಯಕರು ಬಹಿರಂಗವಾಗಿ ಅದರಲ್ಲಿ ಭಾಗವಹಿಸುತ್ತಾರೆಂದರೆ ಅವರು ಕದ್ದುಮುಚ್ಚಿ ಕೇಶವಕೃಪಕ್ಕೆ ಎಷ್ಟು ಸಲ ಹೋಗಿರಲಿಕ್ಕಿಲ್ಲ. ಇಂತಹ ನಾಯಕರನ್ನು ನಂಬಿದರೆ ಅವರೆಲ್ಲ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು 'ಕಾಂಗ್ರೆಸ್ ಆರೆಸ್ಸೆಸ್' ಆಗಿ ಪರಿವರ್ತಿಸುವ ದಿನ ದೂರವಿಲ್ಲ.

- ದಿನೇಶ್ ಕುಮಾರ್, ಮಂಗಳೂರು

ಕಳೆದ ಸಂಚಿಕೆಯಲ್ಲಿ 'ಕಂಡಹಾಗೆ' ಓದಿದನಂತರ ಖ್ಯಾತ ಉರ್ದು ಕವಿ ಫೈಜ್ ಅಹಮದ್ ಫೈಜ್ ಅವರ ಕವನಸಂಕಲನಕ್ಕಾಗಿ ಕಾತರದಿಂದ ಕಾಯುವಂತಾಗಿದೆ. ಬಾಗೇಶ್ರೀ ಅವರ ಅನುವಾದ ಅದ್ಭುತವಾಗಿದೆ.

- ರಂಗಣ್ಣ, ಕೊಡಗು

ಸತ್ಯವಾಗಿ ಹೇಳುತ್ತೇನೆ, ನನಗ್ಯಾಕೋ ಇತ್ತೀಚೆಗೆ 'ಲಂಕೇಶ್' ವಾರಪತ್ರಿಕೆ ಏಕತಾನತೆಯಿಂದ ಕೂಡಿದೆ ಎನಿಸುತ್ತದೆ. ಹಾಗೆಯೇ ಲಂಕೇಶರ ಜಪ ಜಾಸ್ತಿ ಆಯಿತು ಅನ್ನಿಸುತ್ತಿದೆ. ದಯವಿಟ್ಟು ಹೊಸ ಅಂಕಣಗಳನ್ನು ಬರೆಯಿಸಿ.

- ಮಹಾದೇವ ಹಡಪದ, ಎಸ್‌ಎಂಎಸ್ ಮೂಲಕ

ತುಮಕೂರು ಕೆಎಸ್‌ಆರ್‌ಟಿಸಿಯ ಮುಖವಾಡವನ್ನು ಬಯಲು ಮಾಡಿದ್ದಕ್ಕೆ ಸಮಸ್ತ ಸಾರಿಗೆ ಸಿಬ್ಬಂದಿಯ ಪರವಾಗಿ ನಿಮ್ಮ ಪತ್ರಿಕೆಯ ತಂಡಕ್ಕೆ ಅಭಿನಂದನೆಗಳು. ಜೊತೆಗೆ ಇಂತಹುದೇ ಶೋಷಿತ ನೌಕರರ ಸಮಸ್ಯೆಗಳ ವಿರುದ್ಧ ಪತ್ರಿಕೆ ಸದಾ ಹೋರಾಟ ಮಾಡಲಿ.

- ಕಂದಕ್ಕರ್ ರಾಜು, ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಸುಬ್ರಹ್ಮಣ್ಯ ಅವರ ಪ್ರತಿಭೆಯನ್ನು ಟಿವಿಯಲ್ಲಿ ಮಾತ್ರ ನೋಡಿದ್ದೆವು. ಈಗ ತಮ್ಮ ಪತ್ರಿಕೆಯ ಮೂಲಕ ಅವರ ರಂಗಭೂಮಿ ಸಾಧನೆ ತಿಳಿದು ತುಂಬಾ ಖುಷಿಯಾಯಿತು.

- ಸುನೀಲ್, ಎಸ್‌ಎಂಎಸ್ ಮೂಲಕ



ಪತ್ರಿಕೆಯ 28.12.2011 ರ ಸಂಚಿಕೆಯಲ್ಲಿ 'ಸದಾ ತಲೆದಂಡಕ್ಕೆ ಯಡ್ಡಿ ಸಿದ್ಧ' ವರದಿಯು ಪ್ರಸ್ತುತವಾಗಿದೆ. ಎತ್ತು ಏರಿಗೆ ಕೋಣ ನೀರಿಗೆ ಎಂಬ ಗಾದೆ ಇವರಿಬ್ಬರಿಗು ಎನಿಸುತ್ತದೆ. ಇತ್ತ ಸದಾನಂದಗೌಡರು ತಮ್ಮ ಕುರ್ಚಿ ಖಾತ್ರಿ ಮಾಡಿಕೊಳ್ಳಲು ಹರಸಾಹಸ ಮಾಡುತ್ತಿದ್ದರೆ, ಅತ್ತ ಯಡ್ಡಿ ಮತ್ತೆ ಸಿಎಂ ಆಗಲು ದೆಹಲಿಗೆ ಯಾತ್ರೆ ಮಾಡುತ್ತಿದ್ದಾರೆ. ಆದರೆ ಬಿಜೆಪಿಯ ಹಿರಿಯ ಅಡ್ವಾಣಿ ಹಾಗೂ ಅವರ ಶಿಷ್ಯ ಅನಂತರ ಚಿತ್ತ ಒಂದು ಕಡೆಯಾದರೆ, ಅಧ್ಯಕ್ಷ ಗಡ್ಕರಿಯದ್ದೇ ಇನ್ನೊಂದು ದಾರಿ. ಗಡ್ಕರಿಗೆ ಯಡ್ಡಿಯೇ ಸಿಎಂ ಆದರೆ ತನಗೆ ಕರ್ನಾಟಕದ ಮೇವು ಸಿಗುತ್ತದೆ ಎಂಬ ಆಶೆ ಇರಬೇಕು.

ಯಡ್ಡಿ ಜೈಲಿಗೆ ಹೋಗಿ ಬಂದಿದ್ದರೂ ಮತ್ತೆ ಸಿಎಂ ಆಗಲು ಕಸರತ್ತು ನಡೆಸುತ್ತಿರುವುದು ನಾಚಿಕೆಗೇಡು. ಬಳ್ಳಾರಿಯ ಗಣಿ ಕಳ್ಳ ಶಾಸಕರ ಕೃಪೆಯಿಂದಲೇ ತಾನು ಅಧಿಕಾರ ಗಿಟ್ಟಿಸಿದ್ದು ಎಂಬುದನ್ನು ಯಡ್ಡಿ ಮರೆಯಬಾರದು. ಅದೇ ಬಳ್ಳಾರಿ ಗ್ಯಾಂಗನ್ನು ನಿರ್ಲಕ್ಷಿಸಿದ್ದಕ್ಕೇ ಶ್ರೀರಾಮುಲು ಪಕ್ಷ ತೊರೆದು, ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಜಯಭೇರಿ ಸಾಧಿಸಿ, ಬಿಜೆಪಿ ಅಭ್ಯರ್ಥಿ ತನ್ನ ಠೇವಣಿ ಕಳೆದುಕೊಳ್ಳುವಂತೆ ಮಾಡಿದರು.

ಇನ್ನೂ ಪಕ್ಷೇತರರು ಹಾಗೂ ಅನರ್ಹಗೊಂಡ ಶಾಸಕರಿಗೆ ನಾಚಿಕೆ, ಮಾನಮರ್ಯಾದೆ ಇದ್ದಂತೆ ಕಾಣುತ್ತಿಲ್ಲ, ತನ್ನ ಅಂಗಿಯನ್ನೇ ವಿಧಾನಸೌಧದಲ್ಲಿ ಹರಿದುಕೊಂಡ ಗೂಳಿಹಟ್ಟಿ ಶೇಖರ್ ಮತ್ತೆ ಬಿಜೆಪಿಯನ್ನು ಬೆಂಬಲಿಸುತ್ತಿರುವುದು ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಅವಮಾನ ಮಾಡುತ್ತಿದ್ದಾರೆ.

- ದಿ.ಎಲ್. ನಾಗರಾಜ್, ಚೆನ್ನಗಿರಿ

ಆಧುನಿಕಗೊಳ್ಳಲಿ ಮನಸ್ಸುಗಳು

ಕೆಲವು ದಿನಗಳಿಂದ ಮನಸ್ಸು ಪ್ರಕ್ಷುಬ್ಧವಾಗಿದೆ. ಯಾವ ಪತ್ರಿಕೆಗಳನ್ನು ಇಣುಕಿ ನೋಡಿದರೂ, ಒಂದಲ್ಲ-ಒಂದು ವಿವಾದಾತ್ಮಕ ಸುದ್ದಿಗಳೇ. ಅದು ಕುಕ್ಕೆ ಸುಬ್ರಹ್ಮಣ್ಯದ ಮಡೆಸ್ನಾನ ನಿಷೇಧದ ವಾಪಸಾತಿಯಲ್ಲಿನ ಧಾರ್ಮಿಕ-ರಾಜಕೀಯ ನಾಟಕಗಳಾಗಿರಬಹುದು, ಎಚ್.ಎಸ್.ನಾಗವೇಣಿಯವರ 'ಗಾಂಧಿ ಬಂದ' ಎಂಬ ಕಾದಂಬರಿಯ ಬಗ್ಗೆ ಕೇಳಿಬರುತ್ತಿರುವ ಅಪಸ್ವರಗಳಾಗಿರಬಹುದು, ಪ್ರಖ್ಯಾತ ಕಲಾವಿದ ಎಫ್.ಎಂ.ಹುಸೇನ್ ಜೀವನವನ್ನು ಆಧರಿಸಿದ ಸಾಕ್ಷ್ಯಚಿತ್ರ ಮತ್ತು 'ಡ್ಯಾಮ್ 999' ಚಿತ್ರಗಳ ಸುತ್ತ ಸುತ್ತುತ್ತಿರುವ ವಿವಾದಗಳಾಗಿರಬಹುದು. ಈ ಎಲ್ಲಾ ವಿವಾದಗಳ ಹಿಂದೆ, ಅವುಗಳನ್ನು ಪ್ರೋತ್ಸಾಹಿಸುವ, ಬೆಂಬಲಿಸುವ ಗೋಚರ- ಅಗೋಚರ ಪಡೆ ಇರುವುದು ಆತಂಕಕಾರಿಯಾದ ಬೆಳವಣಿಗೆ.

ಮಡೆಸ್ನಾನ ಎಂಬ ಅನಿಷ್ಟ ಪದ್ಧತಿಯನ್ನು ಬೆಂಬಲಿಸುವ ಬಿಜೆಪಿಯ ರಾಜಕಾರಣಿಗಳು ಅದೊಂದು ಜನರ ನಂಬಿಕೆ, ಅದರ ಮೇಲೆ ಗದಾಪ್ರಹಾರ ಮಾಡುವುದು ಸರಿಯಲ್ಲ ಎಂಬ ಸಬೂಬುಗಳನ್ನು ನೀಡುತ್ತಿದ್ದಾರೆ. ವಾಸ್ತವವಾಗಿ ಇವರಿಗೆ ನಂಬಿಕೆ ಮತ್ತು ಕಲ್ಪಿತ ಸತ್ಯಗಳ ನಡುವಿನ ಸ್ಪಷ್ಟ ವ್ಯತ್ಯಾಸ ಗೊತ್ತಿಲ್ಲ, ನಾವಿಂದು ವೈಜ್ಞಾನಿಕಯುಗದಲ್ಲಿ ಬದುಕುತ್ತಿದ್ದೇವೆ, ಎಲ್ಲದಕ್ಕೂ ಕಾರಣ ಮತ್ತು ಕಾರಣಿಯತೆ ಇರಲೇಬೇಕು. ಈ ಹಿನ್ನೆಲೆಯಲ್ಲಿ ನಮ್ಮ ನಂಬಿಕೆಗಳು ನಿಜವಾಗಲೂ ಮಾನವೀಯ ನೆಲೆಗಟ್ಟಿನ ಮೇಲೆ ನಿಂತಿವೆಯಾ? ನಮ್ಮ ಒಳಸ್ಪಂದನಗಳು ಅವುಗಳಿಗೆ ಮಿಡಿಯುತ್ತಿವೆಯಾ? ಆರೋಗ್ಯಕರ ಬೆಳವಣಿಗೆಗೆ ಕಾರಣವಾಗಿವೆಯಾ? ಎಂಬ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕಾಗುತ್ತದೆ.

ಕೆಲವೊಮ್ಮೆ ಉನ್ನತ ವರ್ಗದ ಜನರು ಅನಿಷ್ಟ ಆಚರಣೆಗಳಿಗೆ ನಂಬಿಕೆಯ ಮುಖವಾಡ ತೊಡಿಸಿ, ಇತರರನ್ನು ತುಳಿಯುವ ಹುನ್ನಾರುಗಳನ್ನು ಸಹಸ್ರಾರು ವರ್ಷಗಳಿಂದ ನಡೆಸುತ್ತಲೇ ಬಂದಿದ್ದಾರೆ. ಮೇಲ್ವರ್ಗದ ಜನರಿಗೆ ದಲಿತರೆಂದರೆ 'ಅಸ್ಪೃಶ್ಯರು' ಎಂಬ ನಂಬಿಕೆಯಿತ್ತು/ಇದೆ, ಹಲವು ಪುರುಷಪ್ರಧಾನ ಸಮಾಜಕ್ಕೆ

...ಗೆ ಸಿಕ್ತಂತೆ. ತಿಳ್ದಿದ್ರೋರು ಮೊದಲೇ ಹಿಂಗಿಂಗೆ ಅಂದಿದ್ರೆ ಯಡ್ಯೂ ...ನ್ನೋರೂ ಅವರ ಹೆಂಡತಿಯಂತಹದ್ದೇ ಚಿನ್ನದ ಗೊಂಬೆ ಮಾಡಿಸಿ ...ಮಚಂದ್ರನಂಗೇ ಪೂಜೆ ಮಾಡ್ತಿದ್ದರೇನೋ? ಅದೂ ಹೇಳ್ನಿಲ್ಲ. ಎಲ್ಲ ...ಮೋತನಕ ಬಾಯಿ ಬಂದ್ ಮಾಡಿಕೊಂಡಿದ್ದು ಎಲ್ಲಾ ಆದಮೇಲೆ ಬಾಯಿ ...ಚಿಕ್ರೆ. ಹಿಂಗಾಗೋಗದಲ್ಲ ಯಾಗ ಫಲಿಸುತ್ತೋ ಇಲ್ಲವೋ ಅನುಮಾನ ...ಲ್ಲಿ ಬಂದಿರಬೇಕು. ತಲೇನೇ ಕೆಟ್ಟೋಗಿರಬೇಕು. 'ಒಳ್ಳೆ ಕಾಲ ಬಂದದೆ', 'ನಾನೇ ...ಮಂತ್ರಿ ಆಗ್ತೀನಿ' ಅಂತೆಲ್ಲ ಹೇಳ್ಕೊಂಡು ಹುಚ್ಚುಚ್ಚಾಗಿ ಆಡ್ತಾ ಬದ್ದವ್ರೆ.



...ಯಡ್ಯೂರಪ್ಪನೋರು ಹೀಗೆ ಆಡ್ತಿರೋದ ನೋಡಿದಾಗ ಹಿಂದಿನ ಒಂದು ...ನೆನಪಿಗೆ ಬಂತು. ಒಮ್ಮೆ ಗೋಕರ್ಣಕ್ಕೆ ಹೋಗಿದ್ದೆ. ಅಲ್ಲಿನ ಕಲ್ಯಾಣಿ ...ಬತ್ತಾ ಬರುತ್ತಿದ್ದೆ. ಒಂದು ಮನೆಯ ಒಳಗಿನಿಂದ ಮುದುಕಿಯೊಂದು ...ಬೇಗೇ ಬನ್ನಿ', 'ನಮ್ಮ ಮನೇಗೆ ಬನ್ನಿ' ಅಂತ ದೈನ್ಯದಿಂದ ಕರೆಯುತ್ತಿತ್ತು. ...ಅಲ್ಲಿ ಆ ಪದ್ಧತಿ ಇತ್ತಂತೆ. ಯಾತ್ರಿಕರಿಗೆ ಮನೆಯಲ್ಲೇ ಊಟ, ವಸತಿ ಏರ್ಪ ...ದ್ದರಂತೆ. ಅದೇ ಅವರ ಜೀವನ ಆಧಾರ ಆಗಿತ್ತಂತೆ. ಅದು ತಪ್ಪಿರಬೇಕು. ... ಅತಿಯಾಗಿ ಮನಸ್ಸಿಗೆ ಹಚ್ಚಿಕೊಂಡ ಮುದುಕಿ ಹುಚ್ಚಿಯಾಗಿದ್ದಳು.

...ಮು ಹಾಗಿರಲಿ. ಯಡ್ಯೂರಪ್ಪನವರು ಈಗ ಸಂಕ್ರಾಂತಿಗೆ ಮುಹೂರ್ತ ...ಟ್ಟರೆ. ಅಷ್ಟರೊಳಗೆ ಮುಖ್ಯಮಂತ್ರಿ ಮಾಡಿದರೆ ಸರಿ. ಇಲ್ಲ ಅಂದರೆ ನೋಡ್ಕಳ್ಳಿ ...ಅಬ್ಬರಿಸವ್ರೆ. ಏನು ಮಾಡ್ತಾರೋ ತಿಳೀದು. ಮುಂದಿನ ಚುನಾವಣೆ ನನ್ನ ...ತಾಕ್ತನದಲ್ಲೇ ನಡೀಬೇಕು. ಪಕ್ಷ ಅಂದ್ರೆ ನಾನು, ನಾನು ಅಂದ್ರೆ ಪಕ್ಷ ಅಂತೆಲ್ಲ ...ೆ. ಅದ್ಕೆ ಹಾಲಿ ಅಧ್ಯಕ್ಷರು ನಮ್ಮದೇನಿದ್ರೂ ಸಾಮೂಹಿಕ ನಾಯಕತ್ವ. ... ಏನೂ ಕಿಸಿಯೊಕ್ಕಾಗಲ್ಲ. ಇದ ತಿಳ್ದೂ ತಿಳ್ದೂ ಅವ್ರು ಯಾಕಿಂಗಾಡ್ತಿದಾರೋ ...ಬ್ದು ಅಂತ ಗುಮ್ಮನಗುಸಕ ಅವನಿಗೆಲ್ಲೋ ತಲೆ ಕೆಟ್ಟೋಗದೆ ಅನ್ನೋ ಅರ್ಥ ...ಹಂಗೆ ಮಾತ ಆಡವ್ರೆ.

...ವನ್ನೆಲ್ಲ ನೋಡ್ತಾ ಇದ್ರೆ ಆತುರದ ಆಳಿಯ ಅತ್ತೆ ಹಿಡ್ಕಂಡ ಅನ್ನೋ ...ನೇ ಯಡ್ಯೂರಪ್ನೋರ ಕತೆಯೂ ಆಗದ ಅಂತಾವ....

ಬೆಣ್ಣೆ ಸೇವೆ

...ವರು ಹಾಗೂ ಪ್ರಖ್ಯಾತ ವಕೀಲರು ಇಬ್ಬರ ಜಾಯಮಾನವೂ ಒಂದೇ ...ವು ಇರಬೇಕು. ಯಾಕೆಂದರೆ ಅಬಕಾರಿ ಸಚಿವರು ಬೆಣ್ಣೆ ಗಣಪತಿ ...ಯನ್ನು ಅದ್ದೂರಿಯಾಗಿ ಮಾಡಿದರಂತೆ. ಯಾಕೆ ಮಾಡಿದರು ಎಂದರೆ ...ಡ್ಯೂರಪ್ಪನವರು ಬೇಗ ಆರೋಪದಿಂದ ಮುಕ್ತರಾಗಲಿ ಎಂದಂತೆ! ಅವರು ... ಅಪರಾಧವನ್ನೂ ಮಾಡಿಲ್ಲವೆ ಎಂದರೆ ಪ್ರಖ್ಯಾತ ಲಾಯರುಗಳು ತಮ್ಮ ...ವನೇ ಅಪರಾಧಿ ಎಂದು ತಿಳಿದಿದ್ದರೂ 'ಅವನು ಏನೂ ಅರಿಯದ ಸಾಧು ... ಎಂದು ಪ್ರತಿಪಾದಿಸಿ ಗೆಲುವು ಸಾಧಿಸೋಲ್ಲವೆ ಹಾಗೇನೇ ಇಲ್ಲೂ ...ಕು. ಬೆಣ್ಣೆ ಸೇವೆ ಮಾಡಿಸಿಕೊಂಡ ಗಣಪತಿ ತನ್ನ ಕಕ್ಷಿದಾರನ ಪರ ನಿಲ್ಲಬೇಕು. ... ನೇರವಾಗಿ ನ್ಯಾಯ ತೀರ್ಮಾನ ಹೇಳುವುದು ಸಾಧ್ಯವಿಲ್ಲವಾದ್ದರಿಂದ ...ಹೇಳುವವರ ಮಿದುಳಿನಲ್ಲಿ ಕುಳಿತು ಈ ಕೆಲಸ ಮಾಡಿಸಬೇಕು!



ಅಕಾಡೆಮಿ ಅಧ್ಯಕ್ಷಸ್ಥಾನದ ಮೇಲೆ ಕಣ್ಣಿಟ್ಟವರು

ಚಲನಚಿತ್ರ ಅಕಾಡಮಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ನಾಗಾಭರಣರವರ ಅವಧಿ ಮುಗಿಯುವ ಮುನ್ನವೇ ಅವರ ಸ್ಥಾನಕ್ಕೆ ಭಾರೀ ಲಾಬಿ ಆರಂಭವಾಗಿದೆ. ಕಳೆದ ವಾರ ಮಹಿಳಾಮಣಿಯರಾದ ಜಯಮಾಲಾ, ತಾರಾ ಮತ್ತು ಶ್ರುತಿ ಆ ಸ್ಥಾನವನ್ನು ಅಲಂಕರಿಸಲು ಲಾಬಿ ನಡೆಸುತ್ತಿರುವ ಬಗ್ಗೆ ಟಿಪ್ಪಣಿ ಕೊಟ್ಟಿದ್ದೆವು. ಈ ವಾರ ವಿಧಾನಸೌಧ ಕಾರಿಡಾರ್‌ಗಳಲ್ಲಿ ಇನ್ನಷ್ಟು ಸಿನಿಮಾ ಜನರ ಹೆಸರುಗಳು ಸುತ್ತಾಡುತ್ತಿದ್ದವು.

ಮುಖ್ಯವಾಗಿ ನಿರ್ದೇಶಕ ರಾಜೇಂದ್ರಸಿಂಗ್‌ಬಾಬು, ನಿರ್ಮಾಪಕ ಕೆ.ಸಿ.ಎನ್. ಚಂದ್ರು ಮತ್ತು ಹಿಂದಿನ ಕಾಲದ ನಾಯಕ ನಟ ಶ್ರೀನಾಥ್ ಅವರ ಹೆಸರುಗಳು ಕೇಳಿಬರುತ್ತಿವೆ. ರಾಜೇಂದ್ರಸಿಂಗ್‌ಬಾಬು ಈಗಾಗಲೇ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಜೀವನ ಗಾಥೆಯನ್ನಾಧರಿಸಿ ಸಿನಿಮಾವೊಂದನ್ನು ಮಾಡುವುದಾಗಿ ಹೇಳಿರುವುದು ಎಲ್ಲರಿಗೂ ಗೊತ್ತು. ಆ ಚಿತ್ರ ಬಾಬು ಜೀವಮಾನದಲ್ಲಿ ನಿಜವಾಗುತ್ತದೋ ಇಲ್ಲವೋ ಅದು ಬೇರೆ ಮಾತು. ಆದರೆ ಅಂತಹ ಒಂದು ಯೋಜನೆಯನ್ನು ತೇಲಿ ಹಾಕುವ ಮೂಲಕ ಬಾಬು ಯಡ್ಡಿಗೆ ಆಪ್ತರಾಗಿದ್ದಾರಲ್ಲದೆ, ಈಗ ಅದನ್ನೇ ಉಪಯೋಗಿಸಿಕೊಂಡು ಅಕಾಡಮಿಯ ಅಧ್ಯಕ್ಷ ಸ್ಥಾನ ಪಡೆಯಲು ಪ್ರಯತ್ನಿಸುತ್ತಿರುವುದಂತೂ ನಿಜ.

ಈ ಹಿಂದೆ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿದ್ದ ಕೆ.ಸಿ.ಎನ್. ಚಂದ್ರಶೇಖರ್ ಅವರ ಹೆಸರನ್ನು ಮಂಡಳಿಯು ತನ್ನ ಅಧಿಕೃತ ಅಭ್ಯರ್ಥಿಯಾಗಿ ಸರ್ಕಾರಕ್ಕೆ ಹೆಸರು ಶಿಫಾರಸ್ಸು ಮಾಡಿದರೆ ಅವರಿಗೆ ಆ ಸ್ಥಾನ ಸಿಗುವ ಸಾಧ್ಯತೆ ಇದೆ. ಆದರೂ ಚಂದ್ರು ತಮಗೆ ಗೊತ್ತಿರುವ ರಾಜಕಾರಣಿಗಳ ಮುಖಾಂತರ ತೆರೆಮರೆಯಲ್ಲಿ ಕಸರತ್ತು ಪ್ರಾರಂಭಿಸಿದ್ದಾರೆ.

ಶ್ರೀನಾಥ್ ಜೊತೆಗೆ ಈಗಾಗಲೇ ಬಿಜೆಪಿ ನೆರವಿನಿಂದ ಗೂಟದ ಕಾರು ಪಡೆದಿರುವ ನವರಸ ನಾಯಕ ಜಗ್ಗೇಶ್ ಕೂಡ ಅಕಾಡಮಿಯ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಇವರಿಬ್ಬರಿಗೂ ಪಕ್ಷದ ನಾಯಕರೆಲ್ಲರ ಪರಿಚಯವಿರುವುದರಿಂದ ಮತ್ತು ಸಿನಿಮಾ ಕ್ಷೇತ್ರದ ಎಲ್ಲಾ ವರ್ಗದ ಜನರ ವಿಶ್ವಾಸವನ್ನೂ ಗಳಿಸಿರುವುದರಿಂದ ಬಹುಶಃ ಇವರಿಬ್ಬರಲ್ಲಿ ಒಬ್ಬರಿಗೆ ಅಧ್ಯಕ್ಷ ಸ್ಥಾನ ಸಿಗುವುದು ಕಷ್ಟವಾಗಲಾರದು.

ಒಟ್ಟಾರೆಯಾಗಿ ಈ ಅಧ್ಯಕ್ಷ ಸ್ಥಾನ ಮೂರು ವರ್ಷಗಳ ಕಾಲಾವಧಿಯನ್ನು ಹೊಂದಿರುವುದರಿಂದ ಹಾಗೂ ಸುಮಾರು 10 ಕೋಟಿಗೂ ಹೆಚ್ಚು ರೂಪಾಯಿಗಳ ವ್ಯವಹಾರವನ್ನು ಅಕಾಡೆಮಿ ನಡೆಸಲಿರುವುದರಿಂದ ಸಾಕಷ್ಟು ಪೈಪೋಟಿ ನಡೆಯುತ್ತಿದೆ. ಸದ್ಯಕ್ಕೆ ಆರು ಜನರ ಹೆಸರು ಕೇಳಿಬರುತ್ತಿದ್ದರೂ ಮುಂಬರುವ ದಿನಗಳಲ್ಲಿ ಆ ಸಂಖ್ಯೆ ಹೆಚ್ಚಾದರೂ ಆಶ್ಚರ್ಯವಿಲ್ಲ. ಅಷ್ಟೇ ಅಲ್ಲ ಅಕಾಡೆಮಿಯ ಅಧ್ಯಕ್ಷಗಾದಿಗಾಗಿ ಚಿತ್ರೋದ್ಯಮದಲ್ಲಿ ಅನೇಕ ಗುಂಪುಗಳ ನಡುವೆ ಮಾರಾಮಾರಿ ನಡೆಯುವ ಸಾಧ್ಯತೆಯೂ ಇದೆ ಎಂದು ಗಾಂಧಿನಗರದವರು ಭವಿಷ್ಯ ನುಡಿಯುತ್ತಿದ್ದಾರೆ.

ಅಂದರೆ ಒಂದು ಒಳ್ಳೆಯ ಸಿನಿಮಾ ಮಾಡುವ ಬದಲು ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕಾಗಿ ನಮ್ಮ ಚಿತ್ರರಂಗದವರು ಹಲ್ಲು ಗಿಂಜುತ್ತಿರುವುದನ್ನು ನೋಡಿದರೆ ನಿಜಕ್ಕೂ ಬೇಸರವಾಗುತ್ತದೆ.

-ಶೆಣೈ

...ಕೇವಲ 'ಭೋಗದ' ವಸ್ತು ಎಂಬ ನಂಬಿಕೆಯಿದೆ, ...ಸಮುದಾಯಗಳಿಗೆ 'ನರಬಲಿ'ಯಲ್ಲಿ ನಂಬಿಕೆಯಿದೆ. ...ವನ್ನೆಲ್ಲ ನಂಬಿಕೆಯೆಂಬ ಚೌಕಟ್ಟಿನಲ್ಲಿಟ್ಟು ನಿಷೇಧಿಸಿದರೆ ... ವರ್ಗದ ಜನರಿಗೆ ನೋವಾಗುತ್ತದೆ ಎಂದು ...ನಾಗಬೇಕಾ? ವಾಸ್ತವವಾಗಿ 'ಮಡೆಸ್ನಾನ' ಸೇರಿದಂತೆ ...ನ್ನೂ ಕಲ್ಪಿತ ಸತ್ಯಗಳು, ಮೇಲ್ವರ್ಗದ ಜನರ ಅಸ್ತ್ರಗಳು ...ಬಿತ್ತಿದರೆ ಭೂಮಿ ಬೆಳೆಕೊಡುತ್ತದೆ' ಎಂಬ ನಂಬಿಕೆಯ ...ವೈಜ್ಞಾನಿಕ ಸತ್ಯವಿದೆ, ಆದರೆ "ಬ್ರಾಹ್ಮಣರು ಉಂಡ ... ಮೇಲೆ ಉರುಳಾಡಿದರೆ ರೋಗಗಳು ಮತ್ತು ಕಷ್ಟ ...ಪರಿಹಾರ ಆಗುತ್ತವೆ" ಎಂಬುದರ ಹಿಂದೆ ಯಾವ ...ಕತೆಯೂ ಇಲ್ಲ.

...ನ್ನೂ ಕೆಲವರು ತುಮಕೂರಿನ ತುರುವೇಕೇರೆಯ ಬಳಿ ...ಯುವ 'ಮಡೆಸ್ನಾನ'ದಲ್ಲಿ ದಲಿತರು/ಕೆಳವರ್ಗದ ಜನರು ...ಎಲೆಯ ಮೇಲೆ ಬ್ರಾಹ್ಮಣರು ಉರುಳುತ್ತಾರೆ ಎಂಬ ...ಬು ಕೊಡುತ್ತಾ ತೇಪೆ ಹಚ್ಚುವ ಕೆಲಸದಲ್ಲಿ ...ಗಿದ್ದಾರೆ. ಆದರೆ ನಮ್ಮ ಪ್ರಶ್ನೆ ಯಾರು-ಯಾರ ಎಲೆಯ ... ಉರುಳಾಡುತ್ತಾರೆ ಎಂಬುದಲ್ಲಾ, ಉರುಳುವುದು ...ಮಾನವೀಯ ಎಂಬುದು ಅಷ್ಟೇ.

...ಗೆ ಒಂದೆಡೆ ಅನಿಷ್ಟ ಆಚರಣೆಗಳಿಗೆ ಬೆಂಬಲ ...ಸುತ್ತಿದ್ದರೆ, ಇನ್ನೊಂದೆಡೆ ಅಭಿವ್ಯಕ್ತಿ ಸ್ವಾತಂತ್ರ್ಯದ ಕತ್ತು ...ವ ಕೆಲಸಗಳು ನಡೆಯುತ್ತಿವೆ. ಕೆಲ ಜಾತಿ ನಾಯಕರು/ ...ಟನೆಗಳಿಂದ ಹೆಚ್.ಎಸ್. ನಾಗವೇಣಿರವರ 'ಗಾಂಧಿ ... ಎಂಬ ಕೃತಿಯನ್ನು ಮಂಗಳೂರು ವಿಶ್ವವಿದ್ಯಾಲಯದ ...ದಿಂದ ಕೈಬಿಡಬೇಕು ಎಂಬ ಆಗ್ರಹಗಳು ಕೇಳಿ ...ವೆ. ಇದನ್ನು ನಾಡಿನ ಪ್ರಖ್ಯಾತ ಬುದ್ಧಿಜೀವಿಗಳು ಪ್ರಬಲ ...ವಿರೋಧಿಸಿದ್ದಾರೆ.

...ಷ್ಟಕ್ಕೂ ನಾಗವೇಣಿ ಅವರ ಕಾದಂಬರಿಯನ್ನೇ ...ದ ಕೈಬಿಡಬೇಕು ಎಂದು ಶುಷ್ಕ ಮನಸ್ಸುಗಳು ...ತ್ತಿರುವ ಕಾರಣಗಳಾದರೂ ಏನು? ವಿಶ್ವಕರ್ಮ ...ಯನ್ನು 'ಆಚಾರಿ'ಗಳೆಂದ ಮಾತ್ರಕ್ಕೆ ಸೃಜನಶೀಲ ಕಾದಂಬರಿಯನ್ನೇ ಕೈಬಿಡಬೇಕಾ? ನಾವು ನಮ್ಮ ದೈನಂದಿನ ವ್ಯವಹಾರಗಳಲ್ಲಿ ಕೆಲವೊಮ್ಮೆ ವ್ಯಕ್ತಿಯನ್ನು ಜಾತಿಸೂಚಕಗಳಿಂದ ಸಂಬೋಧಿಸುತ್ತೇವೆ: ಉದಾ: ಕುರುಬರಿಗೆ 'ಕುರುಬ' ಎಂದೋ, ಮುಸ್ಲಿಂರಿಗೆ 'ಸಾಬ್ರು' ಎಂದೋ ಬಳಸುತ್ತೇವೆ. ಅಷ್ಟಕ್ಕೂ ಇಂದಿನ ಹಳ್ಳಿಯ ಜನರು 'ಆಚಾರಿ' ಅಥವಾ 'ಬಡಗೆಯವರು' ಎಂಬ ಪದದ ಜೊತೆ ಹೊಂದಿರುವ ಆತ್ಮೀಯತೆಯನ್ನು 'ವಿಶ್ವಕರ್ಮ' ಎಂಬ ಪದದ ಜೊತೆ ಹೊಂದಿಲ್ಲ.

ಒಂದು ಸಮಕಾಲೀನ ಸಮುದಾಯ, ಸಂಸತಿಯ ಅರಿವಿನ ಜೊತೆ ವಾಸ್ತವ ಪ್ರಜ್ಞೆ ಇರುವ ಲೇಖಕ ಇವುಗಳನ್ನೆ ತನ್ನ ಕೃತಿಯಲ್ಲಿ ಯಥಾವತ್ತಾಗಿ ದಾಖಲಿಸುವ ಮೂಲಕ, ವಾಸ್ತವಿಕತೆಯನ್ನು ಅನಾವರಣಗೊಳಿಸುತ್ತಾನೆ. ಯಾವುದೇ ಬರಹಗಾರ ಎಷ್ಟೇ ಪ್ರಯತ್ನಪಟ್ಟರೂ, ವಾಸ್ತವಿಕ ಪ್ರಪಂಚದಿಂದ ಮುಕ್ತನಾಗಿ ಬರೆಯುವುದು ಅಸಾಧ್ಯ. ಹಾಗಾಗಿ ವಾಸ್ತವತೆಯನ್ನು ಚಿತ್ರಿಸುವಾಗ ಕೆಲವೊಮ್ಮೆ ಇಂಥ ಪದಗಳ ಬಳಕೆ ಅನಿವಾರ್ಯ ಮತ್ತು ಅಗತ್ಯ ಕೂಡ.

ಕೆಲ ಕ್ಷುಲ್ಲಕ ಕಾರಣಗಳಿಂದ ಪುಸ್ತಕಗಳನ್ನು ಪಠ್ಯದಿಂದ ಕೈಬಿಡಬೇಕು ಎಂದು ಪಟ್ಟು ಹಿಡಿದರೆ ಬಹುಶಃ ವಿದ್ಯಾರ್ಥಿಗಳಿಗೆ ಓದಲು ಯಾವ ಕೃತಿಯೂ ಉಳಿಯಲಾರದು. ಮುಸ್ಲಿಂರನ್ನು ಪ್ರೀತಿಯಿಂದ 'ಸಾಬಿ' ಎಂದು ತಮ್ಮ ಬರಹಗಳಲ್ಲಿ ಕರೆಯುವ ತೇಜಸ್ವಿಯವರ ಎಲ್ಲಾ ಬರಹಗಳನ್ನು ಮುಟ್ಟುಗೋಲು ಹಾಕಬೇಕೆ? ದಲಿತ ಸ್ತ್ರೀಯನ್ನು 'ಸಂಸ್ಕಾರ'ದಲ್ಲಿ ಅನಂತಮೂರ್ತಿ 'ಸೂಳೆಯನ್ನಾಗಿ' ಚಿತ್ರಿಸಿದ್ದಕ್ಕೆ ನಮಗೆ ಅವಮಾನವಾಯಿತು ಎಂದು ಎಲ್ಲಾ ದಲಿತರು ಪುಸ್ತಕದ ವಿರುದ್ಧ ಬೀದಿಗಿಳಿಯಬೇಕೆ? 'ಅಕ್ಕ' ಕಾದಂಬರಿಯಲ್ಲಿ 'ಕ್ಯಾತಾ' ಎಂಬ ಪದ ಬಳಸಿದ್ದಕ್ಕೆ ಲಂಕೇಶರ ವಿರುದ್ಧ ಪ್ರತಿಭಟಿಸಬೇಕೆ?

ಇವೆಲ್ಲಾ ಬೆಳವಣಿಗೆಗಳನ್ನು ಗಮನಿಸಿದರೆ ಈ ಎಲ್ಲಾ ವಿವಾದಗಳ ಹಿಂದೆ ಕೆಲ ಬೌದ್ಧಿಕ ವಲಯವೂ ಇರುವುದು ಸುಳ್ಳಲ್ಲ. ಒಬ್ಬ ಪ್ರತಿಭಾವಂತ ತಳಸಮುದಾಯದ ಲೇಖಕಿಯನ್ನು ತುಳಿಯುವ ಹುನ್ನಾರ ನಮ್ಮ ಸಾಹಿತ್ಯ ವಲಯದಲ್ಲಿ ನಡೆಯುತ್ತಿದೆ ಎನಿಸುತ್ತಿದೆ. ಏಕೆಂದರೆ ಇಡೀ ಕಾದಂಬರಿಯನ್ನೆ ಪಠ್ಯ ಪುಸ್ತಕದಿಂದ ಕೈಬಿಡಬಾರದೆಂದು ಪ್ರೊ. ಚೆನ್ನಿ ಮತ್ತು ಅನಂತಮೂರ್ತಿ ನೇತೃತ್ವದಲ್ಲಿ ಬುದ್ಧಿಜೀವಿಗಳ ತಂಡ ಪ್ರಯತ್ನಿಸಿತೆ ಹೊರತು ಉಳಿದ ಬುದ್ಧಿಜೀವಿಗಳು ಇದರಿಂದ ದೂರವೇ ಉಳಿದರು. ಆದರೆ ಇಂತಹದ್ದೇ ಆರೋಪವನ್ನು ಮೇಲ್ವರ್ಗದ ಬರಹಗಾರರೊಬ್ಬರ ವಿರುದ್ಧ ಮಾಡಿದ್ದರೆ ಇವರೆಲ್ಲ ಪತ್ರಿಕೆಗಳಲ್ಲಿ ಪುಟಗಟ್ಟಲೆ ಲೇಖನಗಳನ್ನು ಬರೆದು ಅವರನ್ನು ಸಮರ್ಥಿಸುತ್ತಿದ್ದರು. ಪಾಪ ಆ ಭಾಗ್ಯ ತಳಸಮುದಾಯದ ನಾಗವೇಣಿಗೆ ಇಲ್ಲ.

- ಶಿವಕುಮಾರ್, ಶಿವಮೊಗ್ಗ

ನಮ್ಮ ಕಚೇರಿ
ವಿಳಾಸಕೆ ಮತ್ತು ಈ-ಮೇಲ್
ಜೊತೆಗೆ ಇನ್ನು ಮುಂದೆ ನಿಮ್ಮ
ಪ್ರತಿಕ್ರಿಯೆಗಳನ್ನು
9980331427 ನಂಬರ್‌ಗೂ
ಚಿಕ್ಕದಾಗಿ ಮತ್ತು ಚೊಕ್ಕದಾಗಿ
ಕಳುಹಿಸಬಹುದು.

ಭಗವದ್ಗೀತೆಯ ಬಗ್ಗೆ ಎದ್ದಿರುವ ವಿವಾದದ ಕುರಿತು ಎರಡು ಮಾತುಗಳು



ಒಂದು ಪತ್ರ

ರಷ್ಯಾದಲ್ಲಿ ಭಗವದ್ಗೀತೆ ರಷ್ಯನ್ ಭಾಷೆಯಲ್ಲಿ ಅನುವಾದಿಸಿ ಪ್ರಕಟಗೊಂಡಿದ್ದು, ಅದರಲ್ಲಿ ಹೇಳಲ್ಪಟ್ಟ ಕೆಲವು ಅಪ್ರಿಯ ಬೋಧನೆ, ಹಿಂಸೆ ಮತ್ತು ಜಾತೀಯತೆಯ ಪ್ರತಿಪಾದನೆ ಇತ್ಯಾದಿಗಳಿಗಾಗಿ ಅದನ್ನು ನಿಷೇಧಿಸಲು ಅಲ್ಲಿನ ನ್ಯಾಯಾಲಯದಲ್ಲಿ ಕೆಲವು ನಾಗರಿಕರು ದಾವೆಯನ್ನು ಹೂಡಿದ್ದಾರೆ. ನ್ಯಾಯಾಲಯದ ತೀರ್ಮಾನ ನಿರೀಕ್ಷಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಕೆಲವು ಬಲಪಂಥೀಯ ಮತ್ತು ಧರ್ಮಾಂಧ ಸಂಸದರು ಸಂಸತ್ತಿನಲ್ಲಿ ಒಂದು ಸುಳಿಗಾಳಿಯನ್ನೇ ಎಬ್ಬಿಸಿದ್ದಾರೆ. ಪ್ರಮುಖವಾದ ಲೋಕಪಾಲ ಮಸೂದೆ, ಆಹಾರ ಭದ್ರತಾ ಮಸೂದೆ ಮತ್ತಿತರ ಪ್ರಸ್ತುತ ಸಾಮಾಜಿಕ, ಆರ್ಥಿಕ ಪ್ರಮುಖ ವಿಧೇಯಕಗಳು ಚರ್ಚೆಗೆ ಬರುತ್ತಿರುವಾಗ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಹುನ್ನಾರವಿದು ಎಂದು ತಿಳಿಯಬೇಕಾಗಿದೆ. ಎದುರಾಳಿಗಳನ್ನು ದಮನಿಸಲು ತಮ್ಮ ಬತ್ತಳಿಕೆಯಲ್ಲಿರುವ ಆಯುಧಗಳು ಬರಿದಾದಾಗ ಪ್ರತಿಗಾಮಿಶಕ್ತಿಗಳು ತಮ್ಮ ಕೊನೆಯ ಅಸ್ತ್ರವನ್ನಾಗಿ ಭಗವದ್ಗೀತೆಯನ್ನು ಉಪಯೋಗಿಸಿ ದಾರಿ ತಪ್ಪಿಸುವುದು ಸಾಮಾನ್ಯವಾಗಿದೆ. ಅದೇ ತಂತ್ರವನ್ನು ಈಗಲೂ ಉಪಯೋಗಿಸಿದಂತಿದೆ.

ರಷ್ಯಾದ ಹಿಂದುಳಿದ ಸೈಬೀರಿಯ ಪ್ರದೇಶದ ಒಂದು ಸಣ್ಣ ಊರಲ್ಲಿ ಇಸ್ಕಾನ್ ಎಂಬ ಸಂಸ್ಥೆಯೊಂದು ನಡೆಸುತ್ತಿರುವ ಕಾರ್ಯಾಚರಣೆಯ ಅಂಗವಾಗಿ ಅಲ್ಲಿನ ನ್ಯಾಯಾಲಯದಲ್ಲಿ ಹೂಡಲಾಗಿದ್ದ ದಾವೆಯ ಚರ್ಚೆಯಲ್ಲಿ ನಮ್ಮ ಸರಕಾರ ಮತ್ತು ಸಂಸತ್ತು ಮುಳುಗಬೇಕೇ? ಅಲ್ಲಿಯ ಜನರು ಮತ್ತು ನ್ಯಾಯಾಲಯಗಳು ನಮ್ಮ ಗ್ರಂಥಗಳಿಗೆ ನಿಷ್ಠರಾಗಿರಬೇಕೆಂದು ನಾವು ನಿರೀಕ್ಷಿಸಬಹುದೇ?

ಇಷ್ಟಕ್ಕೂ ಭಗವದ್ಗೀತೆಯಲ್ಲಿ ಬೋಧಿಸಲ್ಪಟ್ಟ ಕೆಲವು ಬೋಧನೆಗಳನ್ನು ಗಮನಿಸಿದರೆ ಅದು ಎಷ್ಟು ಹಿಂಸಾತ್ಮಕ, ಅಮಾನವೀಯ ಮತ್ತು ಪ್ರಸ್ತುತ ಜನಜೀವನಕ್ಕೆ ಮಾರಕವೆಂದು ಮನಗಾಣಬಹುದು. ಅರ್ಜುನನು ಯುದ್ಧಕ್ಕೆ ವಿಮುಖನಾದಾಗ ಶ್ರೀಕೃಷ್ಣನು ಅವನನ್ನು ಯುದ್ಧಕ್ಕೆ ಪ್ರಚೋದಿಸುತ್ತಾ "ಯುದ್ಧವನ್ನು ನೀನು ಮಾಡದೇಹೋದರೆ ಸ್ವಧರ್ಮವನ್ನೂ ಕೀರ್ತಿಯನ್ನೂ ಕಳೆದುಕೊಳ್ಳುವಿ. ಚಾತುರ್ವರ್ಣ್ಯವೆಂಬ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಎಂಬ ನಾಲ್ಕು ವರ್ಗಗಳನ್ನು ಸೃಷ್ಟಿಸಿದವನು ನಾನು. ಈ ಯುದ್ಧವನ್ನು ನೀನು ಮಾಡದೇಹೋದರೆ ಸ್ವಧರ್ಮವನ್ನೂ ಕೀರ್ತಿಯನ್ನೂ ಕಳೆದುಕೊಂಡು ಪಾಪವನ್ನು ಗಳಿಸುತ್ತೀ. ಯಾವಾಗಲೆಲ್ಲಾ (ಚಾತುರ್ವರ್ಣ) ಧರ್ಮಕ್ಕೆ ಹಾನಿ ಉಂಟಾಗುವುದೋ ಆವಾಗಲೆಲ್ಲಾ ದುಷ್ಕರ್ಮಿಗಳನ್ನು ನಾಶಗೊಳಿಸಲು ಮತ್ತು ಚಾತುರ್ವರ್ಣ್ಯ ಧರ್ಮವನ್ನು ರಕ್ಷಿಸಲು ನಾನು ಕಾಲಕಾಲಕ್ಕೆ ಹುಟ್ಟಿಬರುತ್ತೇನೆ" ಎನ್ನುವ ಉಕ್ತಿಗಳು ಜಾತ್ಯತೀತ, ಧರ್ಮ ನಿರಪೇಕ್ಷಿತ, ವರ್ಗರಹಿತ ಸಮಾಜ ನಿರ್ಮಾಣದ ನಮ್ಮ ಸಂವಿಧಾನದ ಮೂಲ ಆಶಯಕ್ಕೇ ತದ್ವಿರುದ್ಧವಾಗಿದೆ.

ಚಾತುರ್ವರ್ಣ್ಯವನ್ನು ವಿರೋಧಿಸುವ ಅಹಿಂದುಗಳನ್ನು ದುಷ್ಕರ್ಮಿಗಳೆಂದೂ ಮತ್ತು ಅವರನ್ನು ನಾಶಮಾಡಲು ಶ್ರೀಕೃಷ್ಣನು ಹುಟ್ಟಿಬರುವ ಕಾಲ ಸನ್ನಿಹಿತವಾಗಿದೆ ಎಂದೂ ಅರ್ಥೈಸಬೇಕಲ್ಲವೇ? ಹಾಗಿರುವಾಗ ಬೇರಾವುದೋ ದೇಶದಲ್ಲಿ ಅಲ್ಲಿಯ ಸಂವಿಧಾನಕ್ಕೆ ಅನುಗುಣವಾಗಿ ಹಿಂಸೆ, ಅನೀತಿ, ಅಮಾನವೀಯತೆಯನ್ನು ವೈಭವೀಕರಿಸುತ್ತಿರುವ ಭಗವದ್ಗೀತೆಯನ್ನು ಅಲ್ಲಿಯ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದನ್ನು ನಾವಿಲ್ಲಿ ಪ್ರತಿಭಟಿಸುವುದು ಸಮಂಜ[illegible]?

ನಮ್ಮಲ್ಲಿ ಇಷ್ಟ ಇದ್ದವರು ಅದನ್ನು ಪಠಿಸಲಿ. ಆದರೆ ಅದರಲ್ಲಿರುವ [illegible] ಹಿಂಸೆಯನ್ನು ಮತ್ತು [illegible] ಜಾತಿಪದ್ಧತಿಯನ್ನು ಬೋಧಿಸುವುದು ಮತ್ತು ಆಚರಿಸುವುದು ಸಂವಿಧಾನ[illegible]ದು ಎಂದು ಮನಗಾ[illegible].

-ಬಿ.[illegible] ರಾವ್, ಮಾಜಿ ಶಾಸಕರು, ಮಂಗಳೂರು



'ದಂಡುಪಾಳ್ಯ'ದಲ್ಲಿ ಬೆತ್ತಲೆ ಪೂಜೆ!

ಕಳೆದ ವಾರ ನಿಧಿ ಸುಬ್ಬಯ್ಯ ಮತ್ತು ಐಂದ್ರಿತಾ ರೇ ಎಂಬ ಲಲನೆಯರು ಕ್ಯಾಲೆಂಡರ್ ಒಂದಕ್ಕೆ ಟೂಪೀಸ್ ಬಿಕನಿಯಲ್ಲಿ ಪೋಸು ಕೊಟ್ಟಿದ್ದರ ಬಗ್ಗೆ ವರದಿ ಮಾಡಿದ್ದೆವು. ಈ ವಾರ ಅವರಿಬ್ಬರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿರುವ, ಅರೆ ಬೆತ್ತಲಾಗಿರುವ ಪೂಜಾ ಗಾಂಧಿಯ ವಿಷಯ ಇಲ್ಲಿದೆ. ಆದರೆ ಪೂಜಾ ಅರೆಬೆತ್ತಲಾಗಿರುವುದು ಯಾವುದೋ ಪುಡಿ ಕ್ಯಾಲೆಂಡರ್‌ಗಲ್ಲ, ಬದಲಾಗಿ ಒಂದು ಸಿನಿಮಾಕ್ಕಾಗಿ.

ದಶಕದ ಹಿಂದೆ ಮೇಲಿಂದ ಮೇಲೆ ಭೀಕರ ಸರಣಿ ಹತ್ಯೆಗಳನ್ನು ಮಾಡಿ ಬೆಂಗಳೂರಿನ ಜನರನ್ನು, ಅದರಲ್ಲೂ ಒಂಟಿ ಮಹಿಳೆಯರನ್ನು ಬೆಚ್ಚಿ ಬೀಳಿಸಿದ್ದ ನರಹಂತಕ ತಂಡದ ಬಗ್ಗೆ 'ದಂಡುಪಾಳ್ಯ' ಎಂಬ ಚಿತ್ರವೊಂದು ಸಿದ್ಧಗೊಳ್ಳುತ್ತಿದೆ. ಒಂಟಿ ಮಹಿಳೆಯರಿದ್ದ ಮನೆಯನ್ನು ಗುರುತಿಸಿ, ಪಾಪದ ಹೆಣ್ಣುಮಕ್ಕಳ ಮೇಲೆ ದಾಳಿ ಮಾಡಿ, ಅವರನ್ನು ಚಿತ್ರವಿಚಿತ್ರವಾಗಿ ಕೊಂದು ಬಿಸಾಡಿ, ಮನೆಯಲ್ಲಿದ್ದ ನಗನಾಣ್ಯಗಳನ್ನು ದೋಚುತ್ತಿದ್ದ ಎಂಟು ಮಂದಿ ಗಂಡಸರು ಮತ್ತು ಮೂವರು ಮಹಿಳೆಯರು ಸೇರಿದಂತೆ ಒಟ್ಟು ಹನ್ನೊಂದು ಜನರ ತಂಡದ ಬದುಕನ್ನೇ ನಿರ್ದೇಶಕ ಶ್ರೀನಿವಾಸ ರಾಜು ತೆರೆಯ ಮೇಲೆ ತರುತ್ತಿದ್ದಾರೆ. ಆ ತಂಡ ಹೇಗೆ ಹಾವಳಿಯಿಡುತ್ತಿತ್ತು? ಪೊಲೀಸು ಮತ್ತು ವ್ಯವಸ್ಥೆಗಿಂತ ಬ್ರಿಲಿಯಂಟ್ ಆದಂಥ ಅವರ ತಂತ್ರಗಾರಿಕೆ ಮತ್ತು ಅವರ ಬದುಕಿನ ಶೈಲಿಯ ಸಂಪೂರ್ಣ ವಿವರವನ್ನು 'ದಂಡುಪಾಳ್ಯ' ಚಿತ್ರದಲ್ಲಿ ಅಳವಡಿಸಿದ್ದಾರಂತೆ.



ಕೊಲೆ, ದೈಹಿಕ ದಾಳಿ, ರಕ್ತಪಾತ ಇತ್ಯಾದಿ ದೃಶ್ಯಗಳಿರುವ ಈ ಚಿತ್ರ ಅದೆಷ್ಟು ಹಸಿಹಸಿಯಾಗಿ ಬಂದಿದೆ ಎಂದರೆ ಸ್ವತಃ ನಿರ್ದೇಶಕ ಶ್ರೀನಿವಾಸ ರಾಜು ಈ ಸಿನಿಮಾದ ಪಬ್ಲಿಸಿಟಿ ಪೋಸ್ಟರ್‌ಗಳಲ್ಲಿ 'ಹೆಂಗಸರು-ಮಕ್ಕಳು ನೋಡಬಾರದ ಚಿತ್ರ' ಎಂದು ಬರೆಸಲು ತೀರ್ಮಾನಿಸಿದ್ದಾರೆ.

ದಂಡುಪಾಳ್ಯ ಗ್ಯಾಂಗ್‌ನ ಸದಸ್ಯರಾಗಿ ಕರಿಸುಬ್ಬು, ರವಿಕಾಳೆ, ಯತಿರಾಜ್ ಮುಂತಾದವರು ನಟಿಸುತ್ತಿದ್ದಾರೆ. ಹಾಗೆಯೇ ಆ ಗ್ಯಾಂಗ್‌ನಲ್ಲಿದ್ದ ಮೂವರು ಮಹಿಳೆಯರಲ್ಲಿ ಹೆಚ್ಚು ಪಾತ್ರ ವಹಿಸಿದ್ದ ಲಕ್ಷ್ಮಿಯಾಗಿ ಪೂಜಾ ಗಾಂಧಿ ನಟಿಸಿದ್ದಾರೆ. ರಾಬರಿಗೆಂದು ಮನೆಗಳಿಗೆ ನುಗ್ಗಿದಾಗ ತನ್ನ ಗಂಡ ಅಲ್ಲಿದ್ದ ಗೃಹಿಣಿಯರನ್ನು ಲೈಂಗಿಕವಾಗಿ ಬಳಸಿಕೊಳ್ಳುವಂತೆ ಪ್ರೇರೇಪಿಸುತ್ತಿದ್ದ ಮತ್ತು ಅದನ್ನು ನೋಡಿ ವಿಕೃತ ಖುಷಿ ಪಡುತ್ತಿದ್ದ ವಿಲಕ್ಷಣ ಪಾತ್ರ ಲಕ್ಷ್ಮಿಯದ್ದು.

ನಿಜಜೀವನದಲ್ಲಿ ದಂಡುಪಾಳ್ಯ ತಂಡದ ಕೊಲೆಗಡುಕುತನವನ್ನು ಬೇಧಿಸಿದ್ದು ಇನ್ಸ್‌ಪೆಕ್ಟರ್ ಚಲಪತಿ. ಸಿನಿಮಾದಲ್ಲಿ ಚಲಪತಿ ಪಾತ್ರವನ್ನು ಸಾಯಿಕುಮಾರ್ ಸಹೋದರ ರವಿಶಂಕರ್ ನಿಭಾಯಿಸುತ್ತಿದ್ದಾರೆ.

ದಂಡುಪಾಳ್ಯ ಗ್ಯಾಂಗಿನ ವಿಚಾರಣೆ ಸಂದರ್ಭದಲ್ಲಿ ಇನ್ಸ್‌ಪೆಕ್ಟರ್ ಚಲಪತಿ ಆರೋಪಿಗಳನ್ನು ಬೆತ್ತಲು ಮಾಡಿ, ಅವರಿಗೆ ಶಾಕ್ ಟ್ರೀಟ್‌ಮೆಂಟ್ ಕೊಟ್ಟು ಸತ್ಯವನ್ನು ಹೊರತೆಗಿದಿದ್ದಾರಂತೆ. ಅಂತಹ ದೃಶ್ಯಗಳನ್ನು ಸಿನಿಮಾದಲ್ಲಿ ಮರುಸೃಷ್ಟಿ ಮಾಡಲಾಗಿತ್ತು. ಪೂಜಾ ಗಾಂಧಿ ಮೇಲ್ಭಾಗದಿಂದ ಸೊಂಟದತನಕ ತುಂಡು ಬಟ್ಟೆಯನ್ನೂ ತೊಡದೆ ಕ್ಯಾಮೆರಾ ಮುಂದೆ ಪ್ರತ್ಯಕ್ಷವಾಗಿದ್ದಾಳೆ.

ಇದೇ ಚಿತ್ರದಲ್ಲಿ ಮುನಿಯ ಪಾತ್ರದಲ್ಲಿ ನಟಿಸಿರುವ ನಿರ್ಮಾಪಕ ಕಂ ನಟ ಕರಿಸುಬ್ಬು ಕೂಡಾ ತಮ ಮೈಮೇಲೆ ಒಂದಿಂಚೂ ಬಟ್ಟೆಯಿಲ್ಲದೆ ಸಂಪೂರ್ಣ ಬೆತ್ತಲಾಗಿ ಪಾತ್ರ ನಿರ್ವಹಿಸಿದ್ದಾರೆ.

ಸದ್ಯ ಇವೆಲ್ಲಾ ವಿವರಗಳನ್ನು ನೋಡುತ್ತಿದ್ದರೆ, 'ದಂಡುಪಾಳ್ಯ' ಚಿತ್ರಕ್ಕೆ ಸೆನ್ಸಾರ್ ಸಮಸ್ಯೆ ಎದುರಾಗುವುದಂತೂ ಗ್ಯಾರಂಟಿ. ಆದರೂ ನೈಜ ಘಟನೆಗಳನ್ನು ಆಧರಿಸಿದ ಈ ಚಿತ್ರ ಹಾಗೇ ಮೂಡಿಬರಬೇಕೆಂಬ ಕಾರಣಕ್ಕೆ ನಿರ್ದೇಶಕ ಶ್ರೀನಿವಾಸ್ ರಾಜು ಯಾವುದೇ ಕಾಂಪ್ರೊಮೈಸ್ ಮಾಡಿಕೊಂಡಿಲ್ಲವಂತೆ.

"ಅನ್ಯಾಯಕ್ಕೊಳಗಾದ ಮಹಿಳೆಯರ ಕರುಣಾಜನಕ ಕಥೆಯಾಗಿ, ಪೊಲೀಸ್‌ನವರ ತನಿಖಾ ವರದಿಯಾಗಿ ಮತ್ತು ನಟೋರಿಯಸ್ ಗ್ಯಾಂಗ್‌ವೊಂದರ ರೋಚಕ ಕಥೆಯಾಗಿ ಮೂರು ವಿಭಿನ್ನ ದೃಷ್ಟಿಕೋನಗಳಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರದ ಪಾತ್ರ ಮತ್ತು ಸನ್ನಿವೇಶಕ್ಕೆ ತಕ್ಕಂತೆ ನಟಿಸಿದ್ದೇನೆ ಅಷ್ಟೇ..." ಎಂದು ಪೂಜಾ ಗಾಂಧಿ ಅರೆನಗ್ನವಾಗಿ ಕಾಣಿಸಿಕೊಂಡಿರುವುದಕ್ಕೆ ಸಮಜಾಯಿಷಿ ನೀಡುತ್ತಿದ್ದಾಳೆ...

ಒನ್ ಲೈನ್ ಸ್ಟೋರಿ!



ಈ ಹಿಂದೆ ರವಿ ಶ್ರೀವತ್ಸ ನಿರ್ದೇಶನದ 'ನಾನು ರಾಜೀವ ಗಾಂಧಿ ಅಲ್ಲ' ಚಿತ್ರ ವನ್ನು ನಿರ್ಮಿಸಿ ಕೈಸುಟ್ಟುಕೊಂಡಿದ್ದ ಶೋಭಾ ರಾಜಣ್ಣ ಇತ್ತೀಚೆಗೆ 'ಒಲವೇ ಮಂದಾರ' ಚಿತ್ರದ ನಾಯಕ ಶ್ರೀಕಾಂತ್‌ಗಾಗಿ 'ಮಾವಳ್ಳಿ ವಿಲ್ಲಿ ಹೋಟೆಲ್' ಎಂಬ ಸಿನಿಮಾವನ್ನು ಆರಂಭಿಸಿದ್ದರು. ಆದರೆ ಸದ್ಯಕ್ಕೆ ಶೋಭಾ ರಾಜಣ್ಣ ಅವರ ಜೇಬು ಖಾಲಿಯಾಗಿರುವುದರಿಂದ ಸಿನಿಮಾ ಅರ್ಧಕ್ಕೇ ನಿಂತಿದೆ. ಬಾಕಿ ಪೇಮೆಂಟು ಸಿಗದ ಕಾರಣ ಸಿನಿಮಾದಲ್ಲಿ ದುಡಿದಿದ್ದ ತಂತ್ರಜ್ಞರು ನಿರ್ಮಾಪಕ ರಾಜಣ್ಣನನ್ನು ಹುಡುಕುತ್ತಿದ್ದಾರೆ.



ಸದ್ಯ ತೆಲುಗು ಚಿತ್ರರಂಗದಲ್ಲಿ ನಂ. 1 ಸ್ಥಾನದಲ್ಲಿರುವ ಕನ್ನಡದ ಹುಡುಗಿ ಅನುಷ್ಕಾ ಶೆಟ್ಟಿ ದರ್ಶನ್ ನಟಿಸಲಿರುವ 'ಬುಲ್ ಬುಲ್' ಚಿತ್ರಕ್ಕೆ 'ಬರಾಕ್ಕಿಲ್ಲಾ' ಎಂದಿದ್ದಾಳೆ. ಈಗ ಆಕೆ ಏಳು ತೆಲುಗು ಚಿತ್ರಗಳಲ್ಲಿ ಬ್ಯುಸಿಯಾಗಿರುವುದಷ್ಟೇ ಇದಕ್ಕೆ ಕಾರಣವಂತೆ.

ಮಲಯಾಳಂನಲ್ಲಿ ಸೂಪರ್ ಹಿಟ್ ಆಗಿದ್ದ 'ಹಲೋ' ಚಿತ್ರದ ಕನ್ನಡ ಅವತರಿಣಿಕೆಯಾದ 'ಮಂಜುನಾಥ ಎಲ್‌ಎಲ್‌ಬಿ' ಚಿತ್ರದಲ್ಲಿ ಜಗ್ಗೇಶ್ ನಟಿಸುತ್ತಿದ್ದಾರೆ. ಎ. ಗಣೇಶ್ ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸಲು ನಿಖಿತಾಳನ್ನು ಕೇಳಲಾಗಿತ್ತು. "ಜಗ್ಗೇಶ್ ಜೊತೆ ನಟಿಸಲು ನಾನು ರೆಡಿ. ಆದರೆ 14 ಲಕ್ಷ ಸಂಭಾವನೆ ಕೊಟ್ಟರೆ ಮಾತ್ರ" ಎಂದು ನಿಖಿತಾಳ ಮಾತು ಕೇಳಿ ಗಣೇಶ್ ಎದ್ನೋಬಿದ್ನೋ ಅಂತಾ ಓಡಿಬಂದಿದ್ದಾರೆ!

ಸಿನಿಮಾ ನಿರ್ಮಿಸಿ ಬರ್ಬಾದಾಗಿದ್ದ ಎನ್.ಎಂ. ಸುರೇಶ್‌ಗೆ ಸಹಾಯ ಮಾಡಲು ಹೋದ ನಟ ಅಜಯ್‌ರಾವ್ ಮತ್ತು ನಿರ್ದೇಶಕ ಗಿರಿರಾಜ್ ಅವರ ಪಾಡೇ ಈಗ ಸಂಕಷ್ಟದಲ್ಲಿ ಸಿಲುಕಿದೆ. "ಈ ಸಿನಿಮಾ ನನಗೊಂದು ದೊಡ್ಡ ಪಾಠ. ಆರ್ಟಿಸ್ಟ್‌ಗಳಿಗೆ ಕಾಸ್ಟ್ಯೂಮ್ ತರೋದ್ರಿಂದ ಹಿಡಿದು, ಕೋರ್ಟ್ ಹೊಲಿಯೋವರೆಗಿನ ಕೆಲಸವನ್ನೂ ಮಾಡಿಬಿಟ್ಟೆ. ಸಿನಿಮಾ ಆಚೆ ಬಂದುಬಿಟ್ರೆ ಹೆಗಲ ಮೇಲಿರುವ ದೊಡ್ಡ ಜವಾಬ್ದಾರಿ ಇಳಿದಂಗೇ!" ಎಂದು ಹೇಳುವಷ್ಟರ ಮಟ್ಟಿಗೆ ಗಿರಿರಾಜ್ ತತ್ತರಿಸಿದ್ದಾರೆ. ಸುರೇಶರನ್ನು ನಂಬಿ ಬಂದ ಎಲ್ಲ ನಿರ್ದೇಶಕರೂ ಇದೇ ಮಾತು ಹೇಳುತ್ತಿರುವುದು ಒಂಥರಾ ವಿಚಿತ್ರವಾದರೂ ಸಚಿತ್ರ!

ಸೆಕ್ಸ್ ಬಾಂಬ್ ನಮಿತಾ, ಕನ್ನಡದ ಜೋಗಮ್ಮ ರಿಷಿಕಾ ಸಿಂಗ್ ಸೇರಿದಂತೆ ಹಿಂಡುಹಿಂಡು ಹುಡುಗಿಯರನ್ನು ತುಂಬಿಸಿಕೊಂಡು ನಿರ್ಮಿಸಿರುವ 'ಬೆಂಕಿ ಬಿರುಗಾಳಿ' ಚಿತ್ರದ ಸುತ್ತ ವಿವಾದ ಹುಟ್ಟುಕೊಂಡಿದೆ. ತೆಲುಗಿನಲ್ಲಿ ಮೂರು ಸಿನಿಮಾಗಳನ್ನು ನಿರ್ದೇಶಿಸಿರುವ ಬಷೀರ್ ಎಂಬಾತ ಈ ಚಿತ್ರದಲ್ಲಿ ನಾಯಕನಾಗಿ ನಟಿಸುವುದರೊಂದಿಗೆ ನಿರ್ಮಾಣವನ್ನೂ, ನಿರ್ದೇಶನವನ್ನೂ ಪೂರೈಸಿದ್ದಾನೆ. ಆದರೆ ಈ ಚಿತ್ರ ಸಂಪೂರ್ಣವಾಗಿ ತೆಲುಗಿನಲ್ಲೇ ನಿರ್ಮಾಣಗೊಂಡಿದೆ. ಕನ್ನಡ ಚಿತ್ರರಂಗವನ್ನು ಯಾಮಾರಿಸುವ ಉದ್ದೇಶದಿಂದ ರಾಕ್‌ಲೈನ್ ಸ್ಟುಡಿಯೋದಲ್ಲಿ ಬರೀ ಏಳು ದಿನಗಳ ಕಾಲ ಕೆಲವು ಮಾಂಟೇಜಸ್ ದೃಶ್ಯಗಳ ಚಿತ್ರೀಕರಣ ನಡೆಸಲಾಗಿದೆ.



'ಕೊಲವೆರಿ ಕೊಲವೆರಿ ಡಿ'ಯ ಟ್ಯೂನ್‌ಗೆ ಪ್ರೇಮಕವಿ ಕಲ್ಯಾಣ್ ಬರೆದ ಸಾಹಿತ್ಯವನ್ನು ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಹಾಡುತ್ತಿದ್ದಾರೆ. ತನ್ನ ನೆಚ್ಚಿನ ಮಡದಿ ಮಾಲಾಶ್ರೀಗಾಗಿ ರಾಮೂ ನಿರ್ಮಿಸುತ್ತಿರುವ 'ಶಕ್ತಿ' ಚಿತ್ರಕ್ಕಾಗಿ ಈ ಹಾಡನ್ನು ಬಳಸಲಾಗುತ್ತಿದೆ.

ನಿರ್ದೇಶಕ ರಘುರಾಮ್ ಅವರು ನಿರ್ಮಾಪಕ ಎನ್.ಎಂ. ಸುರೇಶ್ ಮೇಲೆ ಮುರಿದುಕೊಂಡು ಬಿದ್ದಿದ್ದಾರೆ. ಕಳೆದ ಒಂದು ವರ್ಷದಿಂದ ಸುರೇಶ್ ಅವರು ರಘು ವಿರುದ್ಧ ಕಂಡಕಂಡಲ್ಲಿ ಆರೋಪಗಳ ಗುಂಡು ಹಾರಿಸುತ್ತಿದ್ದರು. ""ನಾನು ಇವತ್ತಿಗೂ ನನ್ನ ಸ್ವಂತ ಶ್ರಮದ ಮೇಲೆ ಬದುಕುತ್ತಿದ್ದೇನೆ. ಯಾರಿಗೂ ಒಂದು ರೂಪಾಯಿ ಮೋಸ ಮಾಡಿಲ್ಲ. 'ಚೆಲುವೆ ನಿನ್ನ ನೋಡಲು' ಚಿತ್ರಕ್ಕೆ ಹನ್ನೆರಡು ಕೋಟಿ ರೂಪಾಯಿ ಖರ್ಚಾಗಿದೆ' ಎಂದು ಎದೆ ಬಡಿದುಕೊಳ್ಳುವ ಸುರೇಶ್ ಮೊದಲು ಕ್ಯಾಮೆರಾಮನ್ ಕಬೀರ್‌ಲಾಲ್‌ಗೆ ಕೊಡಬೇಕಿರುವ ಹನ್ನೆರಡು ಲಕ್ಷ, ನಾಯಕಿ ಸುನಿಧಿಗೆ ಕೈ ಎತ್ತಿರುವ ನಾಲ್ಕು ಲಕ್ಷ, ಶಿವಣ್ಣನಿಗೆ ಕೊಡಬೇಕಿರುವ ನಲವತ್ತು ಲಕ್ಷವನ್ನು ಕ್ಲಿಯರ್ ಮಾಡಲಿ. 'ಚೆಲುವೆಯೇ...' ಸಿನಿಮಾಕ್ಕೆ ನಾನು ಕೈಯಿಂದ ನಾಲ್ಕು ಲಕ್ಷ ಹಾಕಿದ್ದೇನೆಯೇ ಹೊರತು ನಿರ್ಮಾಪಕರ ಕಾಸಿಗೆ ಧೋಕಾ ಕೊಟ್ಟಿಲ್ಲ. ಬೇಕಾದರೆ ಗೀತಕ್ಕನ ಮುಂದೆ ನಿಂತು ಪ್ರಮಾಣ ಮಾಡುತ್ತೀನಿ. ಸುರೇಶ್ ಅವರಿಗೆ ಮೀಟರ್ ಇದ್ದರೆ ಅಲ್ಲಿ ಬಂದು ಮಾತನಾಡಲಿ" ಎಂದು ತೊಡೆ ತಟ್ಟುತ್ತಿದ್ದಾರೆ ರಘು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536. E-mail :lankesh70@rediffmail.com